ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ವ್ಯಾಪಾರದಲ್ಲಿ ಸೇಲ್ಸ್ ರೆಪ್‌ಗಳ ಸ್ಥಾನವನ್ನು ಭವಿಷ್ಯದಲ್ಲಿ ಎಐ ತಂತ್ರಜ್ಞಾನ ತುಂಬಬಲ್ಲದೇ ಎಂದು ಕಾದು ನೋಡಬೇಕಾಗಿದೆ



ಆಳ–ಅಗಲ
ಜಾತಿಗಣತಿ ವರದಿ ಜಾರಿಗೆ ಬದ್ಧ: ಸಿದ್ದರಾಮಯ್ಯ 6
ಮೂವರು 'ಚಾಂಪಿಯನ್'ಗಳ ಕೊನೆ ಆಟ?
'ಪ್ರಧಾನಿ, ಗೃಹ ಸಚಿವರ ವಿವೇಚನಾರಹಿತ ನಡೆ' 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,967	22,945	₹89,550 (ಬೆಂಗಳೂರು)	₹1.02 ಲಕ್ಷ (ಬೆಂಗಳೂರು)	86.98

ಇಂದಿನಿಂದಲೇ ಅಭಿಯಾನ • 3 ತಿಂಗಳ ಒಳಗೆ ಪೂರ್ಣ • ಅನಧಿಕೃತ ಬಡಾವಣೆಗಳಿಗೆ ಕಡಿವಾಣ

32 ಲಕ್ಷ ಆಸ್ತಿಗೆ ಬಿ–ಖಾತಾ ಭಾಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಯಮ ಪಾಲಿಸದೆ ಕಂದಾಯ ಭೂಮಿಯಲ್ಲೇ ನಿರ್ಮಿಸಿದ ಅನಧಿಕೃತ ಬಡಾವಣೆಗಳ-ಲ್ಲಿ ನಿವೇಶನಗಳನ್ನು ಖರೀದಿಸಿ, ಮನೆ ಕಟ್ಟಿಕೊಂಡಿದ್ದ ಬಡ, ಮಧ್ಯಮ ವರ್ಗದವರಿಗೆ ಸರ್ಕಾರ ಸಿಹಿ ಸುದ್ದಿ ನೀಡಿದ್ದು, ಇಂತಹ 32 ಲಕ್ಷ ಆಸ್ತಿಗಳಿಗೆ ಬಿ–ಖಾತಾ ದೊರಕಲಿದೆ.

ಎಲ್ಲ ಆಸ್ತಿಗಳಿಗೆ ಮೂರು ತಿಂಗಳೊಳಗೆ ಬಿ–ಖಾತಾ ನೀಡುವ ಗಡುವನ್ನು ಸರ್ಕಾರ ನೀಡಿದ್ದು, ಇದಕ್ಕಾಗಿ ರಾಜ್ಯದ ಪಾಲಿಕೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿಶೇಷ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ.

ಈ ಕುರಿತು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಒಗಳು, ಯೋಜನಾ ನಿರ್ದೇಶಕರು ಹಾಗೂ ನಗರ ಸ್ಥಳೀಯ ಸಂಸ್ಥೆ ಅಧಿಕಾರಿಗಳ ಜತೆ ಮಂಗಳವಾರ ವಿಡಿಯೊ ಸಂವಾದ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಂದಾಯ ಜಾಗವೂ ಸೇರಿದಂತೆ ಅನಧಿಕೃತ ಬಡಾವಣೆಗಳಲ್ಲಿ ನಿರ್ಮಿಸಿದ ನಿವೇಶನ, ಮನೆಗಳಿಗೆ ಬಿ– ಖಾತಾ ನೀಡುವ ಅಭಿಯಾನಕ್ಕೆ ತಕ್ಷಣವೇ ಚಾಲನೆ ನೀಡಬೇಕು (ಫೆ.19ರಿಂದ) ಎಂದು ಸೂಚಿಸಿದರು.

ಅರಣ್ಯ ಸಚಿವರ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯ ವರದಿ ಆಧರಿಸಿ ಕಾನೂನು ರೂಪಿಸಲಾಗಿದೆ. ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ ಮಹಾನಗರ ಪಾಲಿಕೆಗಳು ಹಾಗೂ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಬರುವ ಅನಧಿಕೃತ, ಕಂದಾಯ ಬಡಾವಣೆಗಳು ಹಾಗೂ ಆಸ್ತಿಗಳಿಗೆ ನಾಗರಿಕ ಸೌಲಭ್ಯಗಳನ್ನು ಒದಗಿಸಲಾಗಿದೆ. ಮೂರು ತಿಂಗಳಲ್ಲಿ ಬಿ–ಖಾತಾಗಳನ್ನು ನೀಡಬೇಕು. ನಂತರ ತೆರಿಗೆ ಸಂಗ್ರಹ ಆರಂಭಿಸಬೇಕು ಎಂದರು.

ನಗರ, ಪಟ್ಟಣ, ಪಾಲಿಕೆ ವ್ಯಾಪ್ತಿ ಹಾಗೂ ಹಳ್ಳಿಗಳಲ್ಲೂ ಅನಧಿಕೃತ ಬಡಾವಣೆಗಳು ತಲೆ ಎತ್ತಿವೆ. ಇಂತಹ ಬಡಾವಣೆಗಳಲ್ಲಿ ಬಡವರು, ಮಧ್ಯಮ ವರ್ಗದವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅವರಿಗೆ ಅನುಕೂಲ ಮಾಡಿಕೊಡಲು ಕಾಯ್ದೆಯ ಮೂಲಕ 'ಬಿ' ಖಾತಾ ಅಭಿಯಾನ ಆರಂಭಿಸಲಾಗಿದೆ. ಅಭಿಯಾನ ಪೂರ್ಣಗೊಂಡ ನಂತರ ಅನಧಿಕೃತ ಬಡಾವಣೆಗಳಿಗೆ ಅವಕಾಶ ಇಲ್ಲ ಎಂದು ತಾಕೀತು ಮಾಡಿದರು.

ಸರ್ಕಾರದ ಈ ನಿರ್ಧಾರದಿಂದಾಗಿ ಇದುವರೆಗೂ ಅನಧಿಕೃತ ಬಡಾವಣೆಗಳಲ್ಲಿ ನಿವೇಶನ ಹೊಂದಿದವರಿಗೆ ಸರ್ಕಾರದ ದಾಖಲೆಯೊಂದು ಲಭ್ಯವಾಗಲಿದೆ. ಸಕ್ಷಮ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯದೆ, ಭೂಪರಿವರ್ತನೆ ಮಾಡಿಕೊಳ್ಳದೆ ಕಂದಾಯ (ಕೃಷಿ ಜಮೀನು) ಸ್ವರೂಪದ ಭೂಮಿಯಲ್ಲೇ ನಿವೇಶನಗಳನ್ನು ರಚಿಸಿ, ಮಾರಾಟ ಮಾಡುವ 'ಭೂ ದಂಧೆ'ಗೂ ಇನ್ನು ಮುಂದೆ ಸಂಪೂರ್ಣ ಕಡಿವಾಣ ಬೀಳಲಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ನಗರ, ಪಟ್ಟಣ ಪ್ರದೇಶ, ಗ್ರಾಮೀಣ ಪ್ರದೇಶಗಳಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳು ಆಯಾ ವಿಭಾಗದ ಅಧಿಕಾರಿಗಳನ್ನು ಬಳಸಿಕೊಂಡು, ನಿಯಮಕ್ಕೆ ವಿರುದ್ಧವಾಗಿ ಇಂತಹ ಬಡಾವಣೆಗಳನ್ನು ಅಕ್ರಮವಾಗಿ ನಿರ್ಮಾಣ ಮಾಡುವ ಮೂಲಕ ಸರ್ಕಾರಕ್ಕೆ ಭೂ ಪರಿವರ್ತನಾ ಶುಲ್ಕ, ನೋಂದಣಿ, ಮುದ್ರಾಂಕ ಶುಲ್ಕದಲ್ಲೂ ಮೋಸ ಮಾಡುವ ಜತೆಗೆ, ವಾರ್ಷಿಕ ಮನೆ ಕಂದಾಯ, ನಿವೇಶನ ಕಂದಾಯ ನಷ್ಟವನ್ನೂ ಮಾಡುತ್ತಿದ್ದರು.

ಸ್ವಲ್ಪ ಕಡಿಮೆ ಮೌಲ್ಯದಲ್ಲಿ ಸಿಗುತ್ತಿದ್ದ ಇಂತಹ ನಿವೇಶನಗಳನ್ನು ಬಡ, ಮಧ್ಯಮ ವರ್ಗದವರೇ ಖರೀದಿಸಿ, ಮನೆ ಕಟ್ಟಿಕೊಂಡಿದ್ದಾರೆ. ರಸ್ತೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳಿಂದ ಅವರು ಈವರೆಗೆ ವಂಚಿತರಾಗುತ್ತಿದ್ದರು. ಇಂತಹ ಎಲ್ಲ ಲೋಪಗಳಿಗೂ ತಿಲಾಂಜಲಿ ನೀಡಲು ನಿರ್ಧರಿಸಿರುವ ರಾಜ್ಯ ಸರ್ಕಾರ, ಎಲ್ಲ ಅನಧಿಕೃತ ಬಡಾವಣೆಗಳ ನಿವೇಶನ, ಮನೆಗಳಿಗೆ ಒಂದು ಬಾರಿಗೆ ಸೀಮಿತವಾಗಿ ಬಿ–ಖಾತಾ ನೀಡುವ ಮೂಲಕ ಮೊದಲ ಹಂತದಲ್ಲಿ 'ಅಧಿಕೃತ'ಗೊಳಿಸುವ ಭಾಗ್ಯ ನೀಡುತ್ತಿದೆ.

55 ಲಕ್ಷ	23 ಲಕ್ಷ	32 ಲಕ್ಷ
ಬೆಂಗಳೂರು ಹೊರಗಿನ ನಗರಗಳ ವ್ಯಾಪ್ತಿಯ ಆಸ್ತಿ	ಇ–ಖಾತಾ ಇರುವ ಆಸ್ತಿ	ಬಿ–ಖಾತಾ ನೀಡಬೇಕಿರುವ ಆಸ್ತಿ

ಹೊಸದಾಗಿ ಅನಧಿಕೃತ ಬಡಾವಣೆ ಕಂಡುಬಂದರೆ ಆಯಾ ಜಿಲ್ಲಾಧಿಕಾರಿ, ಹೆಚ್ಚುವರಿ ಜಿಲ್ಲಾಧಿಕಾರಿ, ಯೋಜನಾಧಿಕಾರಿ, ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರನ್ನೇ ಹೊಣೆ ಮಾಡಲಾಗುವುದು
ಸಿದ್ದರಾಮಯ್ಯ, ಮುಖ್ಯಮಂತ್ರಿ

ಅನಧಿಕೃತ ಬಡಾವಣೆಗಳಿಗೆ ಸಹಕಾರ ನೀಡುವ ಅಧಿಕಾರಿಗಳ ವಿರುದ್ಧ ಕಠಿಣಕ್ರಮ ಕೈಗೊಳ್ಳಲಾಗುವುದು. ಮಧ್ಯವರ್ತಿ ಮುಕ್ತ ವ್ಯವಸ್ಥೆ ರೂಪಿಸುವುದು ಅಧಿಕಾರಿಗಳ ಹೊಣೆ
ಕೃಷ್ಣ ಬೈರೇಗೌಡ, ಕಂದಾಯ ಸಚಿವ



ಸಂಸ್ಕೃತಿ ಸಂಭ್ರಮ ಕೇಂದ್ರ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ನೆಹರೂ ಯುವ ಕೇಂದ್ರದ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಮಂಗಳವಾರ ಆಯೋಜಿಸಿದ್ದ 16ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮದಲ್ಲಿ ಮಧ್ಯಪ್ರದೇಶದ ಬಾಲಘಾಟ್‌ನ ಬುಡಕಟ್ಟು ಸಮುದಾಯದ ಯುವತಿಯರು ಸಾಂಪ್ರದಾಯಿಕ ನೃತ್ಯ ಪ್ರಸ್ತುತಪಡಿಸಿದರು ಚಿತ್ರ: ರಂಜು ಪಿ.

ಕೆಪಿಸಿಸಿ: ಡಿಕೆಶಿ ಕೆಳಗಿಳಿಸಲು ದಿಲ್ಲಿಯಲ್ಲಿ ಪರಮೇಶ್ವರ ಒತ್ತಡ

ದಲಿತ ಸಚಿವರ ಪಟ್ಟು ಬಿಗಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಡಿ.ಕೆ. ಶಿವಕುಮಾರ್ ಅವರನ್ನು ಇಳಿಸಲೇಬೇಕು ಎಂಬ ಪಣ ತೊಟ್ಟಿರುವ ದಲಿತ ಸಚಿವರು ತಮ್ಮ ಯತ್ನ ಮುಂದುವರಿಸಿದ್ದಾರೆ. ಶಿವಕುಮಾರ್ ತಮ್ಮ ಡಿ.ಕೆ. ಸುರೇಶ್ ಹಾಗೂ ಷಡ್ಡಕರಾದ ಕುಣಿಗಲ್ ಕ್ಷೇತ್ರದ ಶಾಸಕ ಎಚ್.ಡಿ. ರಂಗನಾಥ್ ಅವರು ಸಚಿವರ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ.

ಇತ್ತೀಚೆಗೆ ನವದೆಹಲಿಗೆ ತೆರಳಿದ್ದ ಸಚಿವರಾದ ಸತೀಶ ಜಾರಕಿಹೊಳಿ, ಕೆ.ಎನ್. ರಾಜಣ್ಣ ಅವರು ವರಿಷ್ಠರ ಎದುರು ತಮ್ಮ ಅಹವಾಲನ್ನು ತೋಡಿಕೊಂಡಿದ್ದರು. ರಾಜಣ್ಣ ಅವರಂತೂ ಶಿವಕುಮಾರ್ ವಿರುದ್ಧ ಬಹಿರಂಗವಾಗಿ ಅಸಮಾಧಾನ ಹೊರಹಾಕಿದ್ದರು.

7ನೇ ಪುಟ ನೋಡಿ

'ವಿವಾದದ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ'



'ಶಿವಕುಮಾರ್ ಮತ್ತು ಕೆ.ಎನ್. ರಾಜಣ್ಣನವರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ವಿವಾದದ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶಿವಕುಮಾರ್ ಎಐಸಿಸಿ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ರಾಜಣ್ಣ ಹೇಳಿದ್ದಾರಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ ಸಿದ್ದರಾಮಯ್ಯ ಮೇಲಿನಂತೆ ಉತ್ತರಿಸಿದರು.

'ಅಧಿಕಾರ ಹಂಚಿಕೆ ಸೂತ್ರ ಆಗಿದೆಯೇ' ಎಂಬ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಎಲ್ಲವೂ ಹೈಕಮಾಂಡ್ ತೀರ್ಮಾನ. ಅದನ್ನು ಎಲ್ಲರೂ ಒಪ್ಪಲೇಬೇಕು' ಎಂದು ಹೇಳಿದರು.

'ಡಿಕೆಶಿ ಬದಲಿಸುವಂತೆ ಪ್ರಾರ್ಥನೆ'



ಮಂಗಳೂರು: 'ಡಿ.ಕೆ.ಶಿವಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಬದಲಿಸುವ ವಿಚಾರದಲ್ಲಿ ನಾವು ಹಟಕ್ಕೆ ಬಿದ್ದಿಲ್ಲ. ಹೈಕಮಾಂಡ್ ನಮಗೆ ದೇವಸ್ಥಾನ ಇದ್ದ ಹಾಗೆ. ಹೈಕಮಾಂಡ್ ಬಳಿ ಪ್ರಾರ್ಥನೆ ಮಾಡಿದ್ದೇವೆ. ನಿರ್ಧಾರ ಕೈಗೊಳ್ಳುವುದು ಅವರಿಗೆ ಬಿಟ್ಟಿದ್ದು' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

7ನೇ ಪುಟ ನೋಡಿ

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಹಳ್ಳಿಯಲ್ಲಿ ಯಶಸ್ವಿ ಉದ್ಯೋಗ ಮೇಳ

• ಸಿದ್ದಯ್ಯ ಹಿರೇಮಠ

ಒಳ್ಳೆ ಸುದ್ದಿ

ದಾವಣಗೆರೆ: ಜಿಲ್ಲೆಯ ಹರಿಹರ ತಾಲ್ಲೂಕಿನ ಭಾನುವಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಈಚೆಗೆ ಬೃಹತ್ ಉದ್ಯೋಗ ಮೇಳವೊಂದು ನಡೆಯಿತು. ಮೇಳದಲ್ಲಿ ಪಾಲ್ಗೊಂಡಿದ್ದ ಸುತ್ತಮುತ್ತಲಿನ 25 ಗ್ರಾಮಗಳ 800ಕ್ಕೂ ಅಧಿಕ ಯುವಕ– ಯುವತಿಯರ ಪೈಕಿ 417 ಜನರಿಗೆ ಐ.ಟಿ, ಬಿ.ಟಿ ಸೇರಿದಂತೆ ಒಟ್ಟು 32 ಕಂಪನಿಗಳು ಸ್ಥಳದಲ್ಲೇ ಉದ್ಯೋಗದ ಆದೇಶ ನೀಡಿದವು.

1995–96ನೇ ಸಾಲಿನಲ್ಲಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿಯ ವಿದ್ಯಾರ್ಥಿಗಳು, ತಾವು ಕಲಿತ ಶಾಲೆಗೆ ಅಥವಾ ಗ್ರಾಮಕ್ಕೆ ಏನಾದರೂ ಕೊಡುಗೆ ನೀಡಲು ನಿರ್ಧರಿಸಿದ್ದ ಪರಿಣಾಮವೇ ಈ ಉದ್ಯೋಗ ಮೇಳ.

'ಹಳೆ ವಿದ್ಯಾರ್ಥಿಗಳೆಲ್ಲ ಗುರು ವಂದನೆ ಕಾರ್ಯಕ್ರಮ ಮಾಡಬೇಕು ಅಂದುಕೊಂಡೆವು. ಶಾಲೆಯ ಕಾಂಪೌಂಡ್‌ಗೆ ಕಬ್ಬಿಣದ ಗೇಟ್ ಮಾಡಿಸಿಕೊಡಲು ನಿರ್ಧರಿಸಿದೆವು. ಸ್ಮರಣೀಯ ಕಾರ್ಯ ಮಾಡಬೇಕು ಅನ್ನಿಸಿದಾಗ ಉದ್ಯೋಗ ಮೇಳ ನೆನಪಾಯಿತು' ಎಂದು ಆ ಬ್ಯಾಚ್‌ನ ವಿದ್ಯಾರ್ಥಿ, ದಾವಣಗೆರೆಯ ಜಿ.ಎಂ. ಯೂನಿವರ್ಸಿಟಿಯ ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ತೇಜಸ್ವಿ ಕಟ್ಟೀಮನಿ 'ಪ್ರಜಾವಾಣಿ'ಗೆ ತಿಳಿಸಿದರು.

7ನೇ ಪುಟ ನೋಡಿ

'ಮನಸಿದ್ದರೆ ಮಾರ್ಗ ಎಂಬುದಕ್ಕೆ ಸಾಕ್ಷಿ'


ತೇಜಸ್ವಿ ಕಟ್ಟೀಮನಿ

'ದೊಡ್ಡ ನಗರಗಳಿಗೆ ಸೀಮಿತವಾಗಿದ್ದ ಉದ್ಯೋಗ ಮೇಳವನ್ನು ಹಳ್ಳಿಯಲ್ಲಿ ನಡೆಸುವುದು ಅಸಾಧ್ಯ ಎಂಬ ಅಭಿಪ್ರಾಯಗಳು ಬಂದವು. ನಾವು ಧೃತಿಗೆಡದೇ ಮುನ್ನಡೆದೆವು. ಉದ್ಯೋಗದಾತ ಕಂಪನಿಗಳ ಸಿಬ್ಬಂದಿಗೆ ಹರಿಹರದಲ್ಲಿ ವಸತಿ, ಊಟದ ವ್ಯವಸ್ಥೆ ಮಾಡಿದೆವು. ಸುತ್ತಮುತ್ತಲಿನ ಗ್ರಾಮಗಳಲ್ಲಿ ಪ್ರಚಾರ ಮಾಡಿದೆವು. ಹಳೆ ವಿದ್ಯಾರ್ಥಿಗಳೆಲ್ಲ ಹಣ ಹಾಕಿದೆವು. ಅರ್ಧದಷ್ಟು ವೆಚ್ಚವನ್ನು ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಚಾರಿಟಿ ಪ್ರತಿಷ್ಠಾನ ಒದಗಿಸಿತು' ಎಂದು ತೇಜಸ್ವಿ ಕಟ್ಟೀಮನಿ ಹೇಳಿದರು.

'ಬ್ಯಾಚ್‌ನ 108 ಸ್ನೇಹಿತರು ಸೇರಿದ್ದೆವು. ಮನಸಿದ್ದರೆ ಮಾರ್ಗ ಎಂಬುದಕ್ಕೆ ಈ ಮೇಳವೇ ಸಾಕ್ಷಿ' ಎಂದು ಹಳೆ ವಿದ್ಯಾರ್ಥಿ ಚಂದ್ರು ಹಲಿಕಟ್ಟಿ ತಿಳಿಸಿದರು.



ಬೇಲಿ ಕತ್ತರಿಸಿ ರಸ್ತೆ ನಿರ್ಮಾಣ • ಕ್ರಮ ಕೈಗೊಳ್ಳದ ಬಿಬಿಎಂಪಿ ಅಧಿಕಾರಿಗಳು • ಸ್ಥಳೀಯರ ಆಕ್ರೋಶ

ಉದ್ಯಾನ, ಆಟದ ಮೈದಾನ ಕಬಳಿಸಲು ಸಂಚು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಉದ್ಯಾನ ಮತ್ತು ಆಟದ ಮೈದಾನದ ಬೇಲಿಯನ್ನು ಕತ್ತರಿಸಿ, ರಸ್ತೆ ನಿರ್ಮಿಸಿ, ಒತ್ತುವರಿ ಮಾಡಿಕೊಳ್ಳಲಾಗಿದೆ. ಸ್ಥಳೀಯರು ದೂರು ನೀಡಿ ತಿಂಗಳಾದರೂ ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ.

ಜ್ಞಾನಭಾರತಿ ಬಡಾವಣೆಯ ಬೈರವನಗರದ ಜ್ಞಾನಬೋಧಿನಿ ಶಾಲೆಯ ಎದುರಿಗಿರುವ ಉದ್ಯಾನ ಮತ್ತು ಆಟದ ಮೈದಾನದ ಬೇಲಿಯನ್ನು ತೆರವುಗೊಳಿಸಿ, ವಾಹನ ನಿಲ್ದಾಣ, ವಾಹನ ರಿಪೇರಿ, ಗುಜರಿ, ತ್ಯಾಜ್ಯ ಸುರಿಯುವ ಸ್ಥಳವನ್ನಾಗಿಸಿಕೊಳ್ಳಲಾಗಿದೆ. ಜಾಗವನ್ನು ಕಬಳಿಸಲು ಭೂಗಳ್ಳರು ಪ್ರಯತ್ನಿಸುತ್ತಿದ್ದಾರೆ.

ಉದ್ಯಾನದ ಮಧ್ಯೆ ರಸ್ತೆ ನಿರ್ಮಾಣ ಮಾಡಿ ಒತ್ತುವರಿ ಮಾಡಿಕೊಂಡು, ಅದನ್ನೂ ಕಬಳಿಸಲು ಹೊಂಚು ಹಾಕುತ್ತಿದ್ದಾರೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ದೂರಿದರು.



ಉದ್ಯಾನದ ಮಧ್ಯೆ ರಸ್ತೆ ನಿರ್ಮಾಣ

'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು (ಬಿಡಿಎ) ಜ್ಞಾನಭಾರತಿ ಬಡಾವಣೆ ನಿರ್ಮಾಣ ಮಾಡುವಾಗಲೇ ಉದ್ಯಾನ, ಆಟದ ಮೈದಾನಕ್ಕಾಗಿ ಮೀಸಲಿಟ್ಟಿರುವ ಜಾಗವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸರಲಿಲ್ಲ. ಬಿಬಿಎಂಪಿಗೆ ಬಡಾವಣೆ ಹಸ್ತಾಂತರವಾದ ಮೇಲೂ ಅದರ ನಿರ್ವಹಣೆ ಆಗಿರಲಿಲ್ಲ. ಆದರೆ, ಬೇಲಿಯನ್ನು ಹಾಕಲಾಗಿತ್ತು. ರಾತ್ರೋರಾತ್ರಿ ಬೇಲಿಯನ್ನೇ ಕತ್ತರಿಸಿ ಒತ್ತುವರಿ ಮಾಡಲಾಗಿದೆ' ಎಂಬುದು ಸ್ಥಳೀಯರ ಆರೋಪ.

'ಉದ್ಯಾನದಲ್ಲಿ ತ್ಯಾಜ್ಯ ಸುರಿಯುವುದಷ್ಟೇ ಅಲ್ಲದೇ, ಆ ರಸ್ತೆಯ ಬದಿ ಬೆಳೆಸಿದ್ದ ಮರ–ಗಿಡಗಳನ್ನು ಕಡಿದು ಹಾಕಲಾಗಿದೆ. ಮರದ ಬೇರು ಮತ್ತು ಕಾಂಡಗಳು ಕಾಣದಂತೆ ನೆಲಸಮ ಮಾಡಿದ್ದರೂ ಬಿಬಿಎಂಪಿಯ ಅರಣ್ಯ ಇಲಾಖೆಯ ಸಿಬ್ಬಂದಿ ಕ್ರಮ ಕೈಗೊಂಡಿಲ್ಲ' ಎಂದು ವಾಯುವಿಹಾರಿಗಳು ದೂರಿದರು.

'ವಲಯ ಆಯುಕ್ತರು ಪತ್ರ ಬರೆದಿದ್ದಷ್ಟೇ'

'ಉದ್ಯಾನದ ಮಧ್ಯಭಾಗದಲ್ಲಿದ್ದ ತಂತಿಬೇಲಿ ಕತ್ತರಿಸಿ ಗೇಟ್ ಅಳವಡಿಸಿಕೊಂಡಿರುವವರ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ಪಶ್ಚಿಮ ವಲಯದ ಬಿಬಿಎಂಪಿ ಪಶ್ಚಿಮ ಉಪವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ತಮಗೆ ಬಂದಿದ್ದ ನಾಗರಿಕರ ದೂರನ್ನು ಬಿಬಿಎಂಪಿ ಅಧಿಕಾರಿಗಳಿಗೆ ಒಂದು ತಿಂಗಳ ಹಿಂದೆ ವರ್ಗಾಯಿಸಿದ್ದರು. ನಂತರ ಬಿಬಿಎಂಪಿಯ ರಾಜರಾಜೇಶ್ವರಿನಗರದ ವಲಯ ಆಯುಕ್ತ ವಿ.ಸಿ. ಸತೀಶ್ ಅವರು, 'ಕಾನೂನು ರೀತಿ ಕ್ರಮ ಕೈಗೊಂಡು, ಉದ್ಯಾನ ಮತ್ತು ಆಟದ ಮೈದಾನ ನಿರ್ಮಿಸಿ' ಎಂದು ಕೆಂಗೇರಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್‌ಗೆ ಪತ್ರ ಬರೆದಿದ್ದಾರೆ.



ಉದ್ಯಾನದ ಜಾಗದಲ್ಲಿ ವಾಹನಗಳ ನಿಲುಗಡೆ

ಇದಾದ ನಂತರ, ಕಾರ್ಯಪಾಲಕ ಎಂಜಿನಿಯರ್ ಕೆ.ಜೆ.ಗಂಗಾಧರಯ್ಯ ಅವರು, 'ಜಾಗ ರಕ್ಷಣೆ ಮಾಡಿ, ಉದ್ಯಾನ, ಆಟದ ಮೈದಾನ ನಿರ್ಮಿಸಿ, ತಂತಿಬೇಲಿಯನ್ನು ಹಾಕಿ' ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗೆ ಸೂಚಿಸಿದ್ದಾರೆ. ಆದರೆ, 'ಇನ್ನೂ ಯಾವುದೇ ಕ್ರಮ ಆಗಿಲ್ಲ.'

'ಉದ್ಯಾನ ಮತ್ತು ಆಟದ ಮೈದಾನದ ಒತ್ತುವರಿ ತೆರವುಗೊಳಿಸುವಂತೆ ಬಿಡಿಎ ಅಧಿಕಾರಿಗಳಿಗೆ ಪತ್ರ ಬರೆಯಲಾಗಿತ್ತು. ಬಡಾವಣೆಯನ್ನು ಬಿಬಿಎಂಪಿಗೆ ಹಸ್ತಾಂತರಿಸಿರುವುದರಿಂದ ಅವರು ಪತ್ರವನ್ನು ಬಿಬಿಎಂಪಿಗೆ ವರ್ಗಾಯಿಸಿದ್ದರು. ವಲಯ ಆಯುಕ್ತರು, ಕಾರ್ಯಪಾಲಕ ಎಂಜಿನಿಯರ್‌ಗಳು ತಮ್ಮ ಕೆಳಸ್ತರದ ಅಧಿಕಾರಿಗಳಿಗೆ ಪತ್ರ ಬರೆದಿರುವುದನ್ನು ಬಿಟ್ಟರೆ ಯಾವ ಕಾರ್ಯವನ್ನೂ ಮಾಡಿಲ್ಲ. ಒತ್ತುವರಿ ಕಣ್ಣಮುಂದೆ ಇದ್ದರೂ ಅದನ್ನು ತೆರವುಗೊಳಿಸಲು ಮುಂದಾಗಿಲ್ಲ. ಪಟ್ಟಭದ್ರ ಹಿತಾಸಕ್ತಿಗಳಿಗೆ ಅಧಿಕಾರಿಗಳು ಮಣೆ ಹಾಕಿದ್ದಾರೆ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

'ಮಾರ್ಚ್ ಮೊದಲ ವಾರದಲ್ಲಿ ಕಾಫಿ ದರ ಏರಿಕೆ'

ಬೆಂಗಳೂರು: 'ಕಾಫಿ ಪುಡಿಯ ದರ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವುದರಿಂದ ಮಾರ್ಚ್ ಮೊದಲ ವಾರದಲ್ಲಿ ಬೆಂಗಳೂರಿನ ಎಲ್ಲ ಹೋಟೆಲ್‌ಗಳಲ್ಲಿ ಕಾಫಿ ದರವನ್ನು ಶೇಕಡ 10ರಿಂದ 15ರವರೆಗೆ ಏರಿಕೆ ಮಾಡಲಾಗುವುದು' ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಗೌರವ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದ್ದಾರೆ.

'ಬೆಂಗಳೂರು ನಗರದಲ್ಲಿ ಉತ್ತಮ ಗುಣಮಟ್ಟದ ಫಿಲ್ಟರ್ ಕಾಫಿ ಗ್ರಾಹಕರ ಕೈಗೆಟುಕುವ ದರದಲ್ಲಿ ಸಿಗುತ್ತಿದೆ. ಇತ್ತೀಚೆಗೆ ಕಾಫಿ ಪುಡಿಯ ದರ ಏರಿಕೆ ಆಗುತ್ತಿದೆ. ಮುಂದಿನ ದಿನಗಳಲ್ಲಿ ಹಾಲಿನ ಬೆಲೆಯೂ ಹೆಚ್ಚಳವಾಗುವ ಸಾಧ್ಯತೆ ಇದೆ. ಆದ್ದರಿಂದ ಬೆಂಗಳೂರು ನಗರದಲ್ಲಿರುವ ಹೋಟೆಲ್‌ಗಳಲ್ಲಿ ಕಾಫಿಯ ಬೆಲೆಯನ್ನು ಹೆಚ್ಚಿಸುವುದು ಅನಿವಾರ್ಯ ಆಗಲಿದೆ' ಎಂದು ತಿಳಿಸಿದ್ದಾರೆ.



ಕೆಲವೆಡೆ ನಾಳೆ ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಮಾರತ್ತಹಳ್ಳಿ, ಜೀವಿಕಾ ಆಸ್ಪತ್ರೆ ವ್ಯಾಪ್ತಿಯಲ್ಲಿ 800 ಮಿ.ಮೀ. ವ್ಯಾಸದ ಹೊಸ ಪೈಪ್‌ಲೈನ್ ಒಳಪಡುವ ಮಾರ್ಗ ಸ್ಥಗಿತಗೊಳಿಸುವ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ, ಫೆಬ್ರುವರಿ 20ರಂದು ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಮಾರತ್ತಹಳ್ಳಿ ವ್ಯಾಪ್ತಿಯ ಕೆಲವು ಪ್ರದೇಶಗಳಲ್ಲಿ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ಕಾವೇರಿ ನಾಲ್ಕನೇ ಹಂತ ಎರಡನೇ ಸ್ಟೇಜ್‌ನ ಪೂರ್ವ–1ರಲ್ಲಿ ಮಾರತ್ತಹಳ್ಳಿ ವ್ಯಾಪ್ತಿಯಲ್ಲಿ ಜಲಮಂಡಳಿ ಈ ಕಾಮಗಾರಿಯನ್ನು ಕೈಗೊಳ್ಳುತ್ತಿದೆ.

ನೀರು ಪೂರೈಕೆ ವ್ಯತ್ಯಯವಾಗುವ ಪ್ರದೇಶಗಳು: ಮಾರತ್ತಹಳ್ಳಿ, ದೊಡ್ಡನೆಕ್ಕುಂದಿ, ಮುನ್ನೆಕೊಳಾಲು, ಒ.ಎಂ.ಬಿ.ಆರ್. ಲೇಔಟ್, ಎಚ್.ಆರ್.ಬಿ.ಆರ್. ಲೇಔಟ್, ಸಿಗೇಹಳ್ಳಿ, ಭಟ್ಟರಹಳ್ಳಿ, ಮೇಡಹಳ್ಳಿ, ಟಿ.ಸಿ.ಪಾಳ್ಯ, ವಿಜಿನಾಪುರ, ಬೆಳ್ಳಂದೂರು, ಯಮಲೂರು, ಮುರುಗೇಶ್ ಪಾಳ್ಯ, ಕೋನೇನ ಅಗ್ರಹಾರ, ಸಿ.ವಿ. ರಾಮನ್ ನಗರ, ಇಂದ್ರನಗರ, ತಿಪ್ಪಸಂದ್ರ, ಜೀವನ್ ಬಿಮಾನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.



ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟವು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಒಂದು ತಲೆ ಚವುರದ ಕಥೆ' ಪುಸ್ತಕ ಬಿಡುಗಡೆ ಮಾಡಲಾಯಿತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯೆ ಬಿ.ಯು. ಸುಮಾ, ಕೇಂದ್ರ ಸಾಹಿತ್ಯ ಅಕಾಡೆಮಿ ಸಂಚಾಲಕ ಬಸವರಾಜ ಸಿ. ಕಲ್ಗುಡಿ, ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ. ತಿಮ್ಮಯ್ಯ ಮತ್ತು ಪುಸ್ತಕದ ಲೇಖಕ ಶಿವರಾಜ ಬ್ಯಾಡರಹಳ್ಳಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಬೇಕಾಬಿಟ್ಟಿ ಪ್ರಯಾಣ ದರ ಏರಿಕೆ ಎಷ್ಟು ಸರಿ?'

ಬೆಂಗಳೂರು: 'ನಮ್ಮ ಮೆಟ್ರೊ ಪ್ರಯಾಣ ದರವನ್ನು ವಿಪರೀತ ಏರಿಸಿರುವ ಬಿಎಂಆರ್‌ಸಿಎಲ್ ಆನಂತರ ಕೆಲವು ಸ್ಟೇಜ್‌ಗಳಿಗೆ ಸ್ವಲ್ಪ ಪ್ರಮಾಣದಲ್ಲಿ ದರ ಇಳಿಸಿ ಮುಂಗೈಗೆ ಬೆಲ್ಲ ಸವರುವ ಕೆಲಸ ಮಾಡಿದೆ. ಆದರೆ ಎಲ್ಲ ಸ್ಟೇಜ್‌ಗಳ ಪ್ರಯಾಣ ದರ ಇಳಿಸಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.







ಮೆಟ್ರೊ ಪ್ರಯಾಣ ದರವನ್ನು ಏಕಾಏಕಿ ಏರಿಕೆ ಮಾಡಿರುವುದು ಸರಿಯಲ್ಲ. ಅತ್ಯಂತ ವೇಗವಾಗಿ ಸಂಚರಿಸಿ ಗುರಿ ಮುಟ್ಟುವ ಮೆಟ್ರೊ ರೈಲು, ದರ ಏರಿಕೆ ಮಾಡುವುದರಲ್ಲಿಯೂ ಅಷ್ಟೇ ಮುಂಚೂಣಿಯಲ್ಲಿದೆ. ಸಾರ್ವಜನಿಕ ಸಾರಿಗೆಗಳಾದ ಬಸ್, ಮೆಟ್ರೊ ಸಾರ್ವಜನಿಕರಿಗೆ ಸೇವೆ ನೀಡಬೇಕು. ಅದನ್ನು ಬಿಟ್ಟು ಬೇಕಾಬಿಟ್ಟಿ ಪ್ರಯಾಣ ದರ ಏರಿಕೆ ಮಾಡುವುದು ಎಷ್ಟು ಸರಿ? ಬಿಎಂಆರ್‌ಸಿಎಲ್ ಕೂಡಲೇ ಮೆಟ್ರೊ ಪ್ರಯಾಣ ದರ ಇಳಿಸಬೇಕು.

ಪೂಜಾ ಭಾರತೀಶ ತಟ್ಟಿ ಜಾಲವಾದಿ, ಜೆ.ಪಿ. ನಗರ

ಬೆಂಗಳೂರು ನಗರದಲ್ಲಿರುವ ಎಲ್ಲ ವರ್ಗದ ಜನರು ಮೆಟ್ರೊ ಪ್ರಯಾಣವನ್ನು ಅವಲಂಬಿಸಿದ್ದಾರೆ. ಆದರೆ ಬಿಎಂಆರ್‌ಸಿಎಲ್ ಏಕಾಏಕಿ ಮೆಟ್ರೊ ಪ್ರಯಾಣ ದರವನ್ನು ಶೇಕಡ 100ರಷ್ಟು ಹೆಚ್ಚಳ ಮಾಡಿರುವುದು ಖಂಡನೀಯ. ಇದರಿಂದ ಮೆಟ್ರೊದಲ್ಲಿ ಪ್ರಯಾಣಿಸುವ ಸಾರ್ವಜನಿಕರ ಸ್ಥಿತಿ ಏನಾಗಬೇಕು? ಬಿಎಂಆರ್‌ಸಿಎಲ್ ಮೊದಲು ತನ್ನ ದುಂದುವೆಚ್ಚಗಳಿಗೆ ಕಡಿವಾಣ ಹಾಕಬೇಕು. ದ್ವಿಚಕ್ರ ವಾಹನ ಹಾಗೂ ಕಾರುಗಳ ನಿಲುಗಡೆ ಮಾಡುವ ಸ್ಥಳಗಳನ್ನು ಹೆಚ್ಚಿಸಬೇಕು. ಖಾಲಿ ಜಾಗಗಳಲ್ಲಿ ವಾಣಿಜ್ಯ ಮಳಿಗೆಗಳನ್ನು ಸ್ಥಾಪಿಸಲು ಅವಕಾಶ ನೀಡಿದರೆ ಮೆಟ್ರೊಗೆ ಹೆಚ್ಚು ಆದಾಯ ಬರುತ್ತದೆ.

ಮೋಹನ್ ಕುಮಾರ್, ವಿಜಯನಗರ



ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿರುವುದು ಎಲ್ಲ ವರ್ಗದವರಿಗೆ ಆಘಾತ ಉಂಟುಮಾಡಿದೆ. ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ, ಬಸ್ ಪ್ರಯಾಣ ದರ ಏರಿಕೆಯಿಂದ ಕಂಗೆಟ್ಟಿರುವ ಜನರಿಗೆ ಮೆಟ್ರೊ ದರ ಏರಿಕೆ ಆಘಾತ ನೀಡಿದೆ. ಬಿಎಂಆರ್‌ಸಿಎಲ್ ಏಕಾಏಕಿ ಅವೈಜ್ಞಾನಿಕವಾಗಿ ದರ ಹೆಚ್ಚಳ ಮಾಡಿರುವುದು ಖಂಡನೀಯ. ಜನರ ಸಂಕಷ್ಟಕ್ಕೆ ಪೂರಕವಾಗಿ ಸ್ಪಂದಿಸಬೇಕಿದ್ದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಕಿತ್ತಾಟದಲ್ಲಿ ನಿರತರಾಗಿರುವುದು ದುರಂತ. ಕೂಡಲೇ ಮೆಟ್ರೊ ಪ್ರಯಾಣ ದರ ಇಳಿಸಿ, ಸಾರ್ವಜನಿಕರ ಹಿತ ಕಾಪಾಡಬೇಕು.

ಶ್ರೀನಿವಾಸ್, ಮೂಡಲಪಾಳ್ಯ



ನಮ್ಮ ಮೆಟ್ರೊ ಎಂಬುದು ಹೆಸರಿಗೆ ಮಾತ್ರ ಸೀಮಿತವಾಗಿದೆ. ಮೆಟ್ರೊ ಪ್ರಯಾಣ ದರ ನೋಡಿದರೆ ಸಾರ್ವಜನಿಕರು ಮೆಟ್ರೊ ಕಡೆ ತಲೆ ಕೂಡ ಹಾಕುವಂತಿಲ್ಲ. ಸಾರ್ವಜನಿಕ ಸಾರಿಗೆಗಳಿಗೆ ಸಂಬಂಧಿಸಿದಂತೆ ಪ್ರಯಾಣ ದರಗಳನ್ನು ಹೆಚ್ಚಿಸುವ ಸಂದರ್ಭದಲ್ಲಿ ಜನಸಾಮಾನ್ಯರ ಬಗ್ಗೆ ಚಿಂತನೆ ಮಾಡಬೇಕು. ಬಡ ಮತ್ತು ಮಧ್ಯಮ ವರ್ಗದವರಿಗೆ ಬರುವ ಸಂಬಳದಲ್ಲಿ ಜೀವನ ನಿರ್ವಹಣೆ ಮಾಡುವುದು ಕಷ್ಟವಾಗುತ್ತದೆ. ಇಂದಿನ ಬೆಲೆ ಏರಿಕೆ ಸಂದರ್ಭದಲ್ಲಿ ಮೆಟ್ರೊ ಪ್ರಯಾಣ ದರ ಹೆಚ್ಚಿಸಿರುವುದರಿಂದ ಸಾರ್ವಜನಿಕರಿಗೆ ಹೊರೆಯಾಗಿದೆ.

ಹೇಮಾವತಿ, ರಾಘವೇಂದ್ರ ಬಡಾವಣೆ





ಬಿಎಂಆರ್‌ಸಿಎಲ್ ಮಾಡುವ ಖರ್ಚು ಮತ್ತು ಆದಾಯ ಎರಡನ್ನೂ ಗಮನದಲ್ಲಿಟ್ಟುಕೊಂಡು ಒಂದೇ ಬಾರಿಗೆ ಶೇ 100ರಷ್ಟು ಪ್ರಯಾಣ ದರ ಏರಿಕೆ ಮಾಡಲಾಗಿದೆ. ಐದು ವರ್ಷಕ್ಕೊಮ್ಮೆ ಅಗತ್ಯಕ್ಕೆ ಅನುಗುಣವಾಗಿ ಪ್ರಯಾಣಿಕರಿಗೆ ಹೊರೆಯಾಗದಂತೆ ಮೆಟ್ರೊ ಪ್ರಯಾಣ ದರವನ್ನು ಹೆಚ್ಚಿಸಬೇಕಿತ್ತು. ಈ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಆರೋಪ ಮಾಡುವುದನ್ನು ಬಿಟ್ಟು ಮೆಟ್ರೊ ಪ್ರಯಾಣ ದರ ಇಳಿಸಬೇಕು.

ಕೆ.ಎಸ್. ನಾಗರಾಜ್, ಹನುಮಂತನಗರ





'ನಮ್ಮ ಮೆಟ್ರೊ' ಪ್ರಯಾಣ ದರ ಏರಿಕೆ ಮಾಡುವುದರ ಮೂಲಕ ಜನಸಾಮಾನ್ಯರ ಮೇಲೆ ಗಾಯದ ಮೇಲೆ ಬರೆ ಎಳೆದಿದೆ. ಸಂಚಾರ ದಟ್ಟಣೆ ನಿಯಂತ್ರಣ ಹಾಗೂ ಪರಿಸರ ಮಾಲಿನ್ಯ ಕಡಿಮೆ ಮಾಡುವ ಉದ್ದೇಶದಿಂದ ನಮ್ಮ ಮೆಟ್ರೊ ಯೋಜನೆಯನ್ನು ಪ್ರಾರಂಭಿಸಲಾಗಿತ್ತು. ಆದರೆ ಈಗ ಪ್ರಯಾಣ ದರ ಹೆಚ್ಚಿಸಿರುವ ಪರಿಣಾಮ ಸಾರ್ವಜನಿಕರು, ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಆರ್ಥಿಕ ಸಂಕಷ್ಟ ಉಂಟಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ಚರ್ಚಿಸಿ ಮೆಟ್ರೊ ಪ್ರಯಾಣ ದರವನ್ನು ಕಡಿತಗೊಳಿಸಬೇಕು.

ಜಯಶ್ರೀ ಬಿ., ಕುಮಾರಸ್ವಾಮಿ ಬಡಾವಣೆ

ಮೆಟ್ರೊ ರೈಲು ಮಾರ್ಗ ನಿರ್ಮಾಣ ಹಾಗೂ ಇತರ ಮೂಲಸೌಕರ್ಯ ಒದಗಿಸಲು ಮಾಡಿರುವ ಸಾಲ ಮತ್ತು ಇತರ ವೆಚ್ಚದ ಒಟ್ಟು ಮೊತ್ತವನ್ನು ಪ್ರಯಾಣಿಕರಿಂದ ವಸೂಲಿ ಮಾಡಬೇಕು ಎಂಬ ಅವೈಜ್ಞಾನಿಕ ನಡೆಯನ್ನು ಬಿಎಂಆರ್‌ಸಿಎಲ್ ಅನುಸರಿಸುತ್ತಿದೆ. ಈ ಮಾನದಂಡದ ಆಧಾರದ ಮೇಲೆ ಮೆಟ್ರೊ ಪ್ರಯಾಣ ದರವನ್ನು ನಿರ್ಧರಿಸಿದರೆ ಮುಂದಿನ ಐದು ವರ್ಷಗಳಲ್ಲಿ 1 ಕಿ. ಮೀ ಮೆಟ್ರೊ ಪ್ರಯಾಣ ದರ ₹15, ಕನಿಷ್ಠ ₹40 ಹಾಗೂ ಗರಿಷ್ಠ ₹300 ಆಗಲಿದೆ. ಪ್ರಯಾಣಿಕರ ಮೇಲಿನ ಹೊರೆ ತಗ್ಗಿಸಲು ಮೆಟ್ರೊ ಪ್ರಯಾಣ ದರವನ್ನು ಕಡಿತಗೊಳಿಸಬೇಕು.

ರಾಜಶೇಖರ್ ವಿ.ಎನ್., ಶೇಷಾದ್ರಿಪುರ

ಅಭಿಪ್ರಾಯ ಕಳುಹಿಸಿ

ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ.

ವಾಟ್ಸ್‌ಆ್ಯಪ್ ಸಂಖ್ಯೆ: 96060 38256

24ರಂದು ಶುಶ್ರೂಷಾಧಿಕಾರಿಗಳ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ಪದ್ಧತಿ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶುಶ್ರೂಷಾಧಿಕಾರಿಗಳ ಸೇವೆಯನ್ನು ಕಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಫೆಬ್ರುವರಿ 24ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಗುತ್ತಿಗೆ ಶುಶ್ರೂಷಾಧಿಕಾರಿಗಳ ನೌಕರರ ಕ್ಷೇಮಾಭಿವೃದ್ಧಿ ಸಂಘ ತಿಳಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ರಾಧಾ ಸುರೇಶ್ ಪಿ.ಎನ್., 'ಸುಪ್ರೀಂ ಕೋರ್ಟ್ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನಿಗದಿಪಡಿಸಬೇಕು. ಈಗ ನಮಗೆ ₹15 ಸಾವಿರ ವೇತನ ನಿಗದಿಪಡಿಸಲಾಗಿದೆ. ಇಂದಿನ ಬೆಲೆ ಏರಿಕೆ ಪರಿಸ್ಥಿತಿಯಲ್ಲಿ ಈ ಹಣದಲ್ಲಿ ಜೀವನ ನಿರ್ವಹಣೆ ಕಷ್ಟವಾಗಿದೆ. ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಶುಶ್ರೂಷಾಧಿಕಾರಿಗಳಿಗೆ ನಿಗದಿಪಡಿಸಿರುವ ವೇತನವನ್ನು ನಮಗೂ ನೀಡಬೇಕು' ಎಂದು ಆಗ್ರಹಿಸಿದರು.

'ನೇರ ನೇಮಕಾತಿಯ ಸಂದರ್ಭದಲ್ಲಿ ಜ್ಯೇಷ್ಠತೆಯ ಆಧಾರದ ಮೇಲೆ ಕೃಪಾಂಕ ಮತ್ತು ವಯೋಮಿತಿ ಸಡಿಲಿಕೆ ನೀಡಬೇಕು. ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗಾವಣೆ ಸೌಲಭ್ಯ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

ಸಂಘದ ಉಪಾಧ್ಯಕ್ಷ ಸಂಗನ ಬಸವ, ಪ್ರಧಾನ ಕಾರ್ಯದರ್ಶಿ ಸೌಮ್ಯಶ್ರೀ ಕೆ. ಸುದ್ದಿಗೋಷ್ಠಿಯಲ್ಲಿದ್ದರು.

ಸಿಂಗನಾಯಕನಹಳ್ಳಿ: ಧರ್ಮ, ದೇಶದ ಕುರಿತು ಜಾಗೃತಿ ಮೂಡಿಸಲು ಕರೆ

ಮಡಿವಾಳ ಮಾಚಿದೇವರ ಭವನ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: 'ಭಾರತದಲ್ಲಿ ಸಾವಿರಾರು ಜಾತಿ-ಧರ್ಮ, ಆಚಾರ, ವಿಚಾರಗಳ ವೈವಿಧ್ಯವಿದ್ದರೂ, ಎಲ್ಲದಕ್ಕೂ ಹಿಂದೂ ಧರ್ಮವೇ ಮೂಲವಾಗಿದೆ' ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಅಭಿಪ್ರಾಯಪಟ್ಟರು.

ಮಡಿವಾಳ ಮಾಚಿದೇವ ಚಾರಿಟಬಲ್ ಟ್ರಸ್ಟ್ ಹಾಗೂ ಸಮುದಾಯದ ಕುಲಬಾಂಧವರ ವತಿಯಿಂದ ಸಿಂಗನಾಯಕನಹಳ್ಳಿಯಲ್ಲಿ ಆಯೋಜಿಸಿದ್ದ ಮಡಿವಾಳ ಮಾಚಿದೇವ ಜಯಂತಿ ಹಾಗೂ ಮಾಚಿದೇವರ ಭವನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

'ಸಂತರು, ದಾಸರು, ಶರಣರು ಹಾಗೂ ಹೋರಾಟಗಾರರ ಶ್ರಮದಿಂದ ಇನ್ನೂ ನಮ್ಮ ದೇಶ ಉಳಿದುಕೊಂಡಿದೆ. ಜಾತಿಗಳ ಒಳಜಗಳದಲ್ಲಿ ಮುಳುಗಿ ಮೈಮರೆತರೆ, ಹಿಂದೂ ಧರ್ಮದ ಅಧಃಪತನವಾಗುತ್ತದೆ. ಧರ್ಮ ಮತ್ತು ದೇಶದ ಬಗ್ಗೆ ಜಾಗೃತಿ ಮೂಡಿಸಿಕೊಂಡು ಉಳಿಸಿ, ಬೆಳೆಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯವಾಗಿದೆ' ಎಂದರು.



ಯಲಹಂಕದ ಸಿಂಗನಾಯಕನಹಳ್ಳಿಯಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಡಿಯಲ್ಲಿ ₹50 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಮಡಿವಾಳ ಮಾಚಿದೇವರ ಭವನವನ್ನು ಶಾಸಕ ಎಸ್‌.ಆರ್‌. ವಿಶ್ವನಾಥ್ ಉದ್ಘಾಟಿಸಿದರು

ಅಥಣಿಯ ಬಸವ ರಾಜೇಂದ್ರ ಸ್ವಾಮೀಜಿ ಮಾತನಾಡಿ, 'ಶರಣ ಸಾಹಿತ್ಯದ ಉಳಿವು ಮತ್ತು ಸಂರಕ್ಷಣೆಗಾಗಿ ಮಡಿವಾಳ ಮಾಚಿದೇವರು ಮಾಡಿದ ತ್ಯಾಗ, ಹೋರಾಟ ಹಾಗೂ ಕೊಡುಗೆ ಸ್ಮರಣೀಯವಾದುದು' ಎಂದು ಬಣ್ಣಿಸಿದರು.

ಮಡಿವಾಳರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ನಂಜಪ್ಪ, ಮಾಚಿದೇವ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ತಿಮ್ಮಪ್ಪ, ಗೌರವಾಧ್ಯಕ್ಷ ಸಿದ್ದಗಂಗಪ್ಪ, ಉಪಾಧ್ಯಕ್ಷ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಕೆ.ಬಾಬು, ಬಿಜೆಪಿ ಮುಖಂಡರಾದ ಎಸ್.ಎನ್.ರಾಜಣ್ಣ, ರಾಮಮೂರ್ತಿ. ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಅಮರಾವತಮ್ಮ, ಪುಷ್ಪಾ ಮಂಜುನಾಥ್, ಲಲಿತಾ ರಾಮು, ಮಾಜಿ ಅಧ್ಯಕ್ಷ ಟಿ.ಮುನಿರೆಡ್ಡಿ, ಮಾಜಿ ಉಪಾಧ್ಯಕ್ಷ ಪ್ರಶಾಂತ್‌ರೆಡ್ಡಿ, ಆರ್‌ಎಸ್‌ಎಸ್‌ಎನ್ ನಿರ್ದೇಶಕರಾದ ಮಂಜುನಾಥ.ಎಂ, ರಾಮಚಂದ್ರರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಮಾಹಿತಿ ಆಯೋಗದ ಆಯುಕ್ತರಿಗೆ ಅಭಿನಂದನಾ ಸಮಾರಂಭ: ಅಭಿನಂದಿಸುವವರು: ಕೆ.ವಿ. ಪ್ರಭಾಕರ್, ಅತಿಥಿ: ಎಚ್.ಬಿ. ದಿನೇಶ್, ಅಧ್ಯಕ್ಷತೆ: ಶಿವಾನಂದ ತಗಡೂರು, ಅಭಿನಂದನೆ ಸ್ವೀಕರಿಸುವವರು: ರುದ್ರಣ್ಣ ಹರ್ತಿಕೋಟೆ, ರಾಜಶೇಖರ್ ಎಸ್., ಬದ್ರುದ್ದೀನ್ ಕೆ., ಬಿ.ಆರ್. ಮಮತಾ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣ, ಕಂದಾಯ ಭವನ, ಬೆಳಿಗ್ಗೆ 11

ನೃತ್ಯ ಸಂಭ್ರಮ: ಅತಿಥಿಗಳು: ಲತಾ ಕೆ. ಶಂಕರ್, ಎಂ.ವಿ. ಅರುಂಧತಿ, ಎಂ.ವಿ. ರಂಗಸ್ವಾಮಿ, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಮಧ್ಯಾಹ್ನ 2

'ಭಾರತ್ ಗಂಧರ್ವ ಯಾತ್ರಾ' 16ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವದ ಉದ್ಘಾಟನೆ: ತ್ಯಾಗರಾಜ ಆರಾಧನೆ: ಗಂಗಾ ಶಶಿಧರನ್, ಮೃದಂಗ: ಶ್ರೀರಾಗ್, ತವಿಲ್: ಟಿ. ಶ್ರೀಕುಮಾರ್, ಘಟ: ಮಂಜೂರ ಉನ್ನಿಕೃಷ್ಣನ್, ಬೆಂಗಳೂರು ರಾಮೋತ್ಸವ: ಲಕ್ಷ್ಮೀ ನಾಗರಾಜ್, ಇಂದು ನಾಗರಾಜ್, ಪಿಟೀಲು: ಅದಿತಿ ಕೃಷ್ಣಪ್ರಕಾಶ್, ಕೊಳಲು: ರಘು ಸಿಂಹ, ಮೃದಂಗ: ಸುನಿಲ್ ಸುಬ್ರಹ್ಮಣ್ಯ, ಖಂಜೀರಾ: ಸುನಾದ್ ಆನೂರ್, ಹಂಪಿ ಉತ್ಸವ: ಸಮಕಾಲೀನ ಭಾರತೀಯ ಶಾಸ್ತ್ರೀಯ ಸಂಗೀತ ಗಾಯನ: ಸಾಯಿ ವಿಘ್ನೇಶ್, ಪಿಟೀಲು: ಕೆ. ವೆಂಕಟಸುಬ್ರಹ್ಮಣ್ಯಂ, ಕೀ–ಬೋರ್ಡ್: ವಿ.ಜಿ. ವಿಘ್ನೇಶ್ವರ, ಮೃದಂಗ: ಸುರೇಶ್ ಕಾರ್ತಿಕ್, ಡ್ರಮ್ಸ್: ಅಮೋಘವರ್ಷ, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಸಂಜೆ 4.30



ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಮಂಜುನಾಥ ಭಾರತಿ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನಿಧನ ವಾರ್ತೆ

ಕೆ.ಕೆ.ಎಸ್. ಮೂರ್ತಿ

ಬೆಂಗಳೂರು: ನಗರದ ಹೆಗ್ಗುರುತುಗಳಲ್ಲಿ ಒಂದಾಗಿರುವ 'ಸೆಲೆಕ್ಟ್ ಬುಕ್ ಶಾಪ್' ಮಾಲೀಕ ಕೆ.ಕೆ.ಎಸ್. ಮೂರ್ತಿ (94) ಅವರು ಸೋಮವಾರ ನಿಧನರಾಗಿದ್ದಾರೆ.



ಕೆಕೆಎಸ್ ಮೂರ್ತಿ

ಅವರು ಕೆಲ ದಿನಗಳಿಂದ ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಅವರಿಗೆ, ಮಳಿಗೆಯ ಸಹ ಮಾಲೀಕರೂ ಆಗಿರುವ ಪುತ್ರ ಕೆ. ಸಂಜಯ್ ಇದ್ದಾರೆ. ಅಂತ್ಯಸಂಸ್ಕಾರ ಮಂಗಳವಾರ ನಡೆಯಿತು.

1945ರಲ್ಲಿ ಮೂರ್ತಿ ಅವರ ತಂದೆ ಕೆಬಿಕೆ ರಾವ್ ಸೆಲೆಕ್ಟ್ ಬುಕ್ ಶಾಪ್ ಅನ್ನು ಪ್ರಾರಂಭಿಸಿದ್ದರು. ಮ್ಯೂಸಿಯಂ ರಸ್ತೆಯ ಶೆಡ್ ಒಂದರಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಮಳಿಗೆ, 1984ರಲ್ಲಿ ಬ್ರಿಗೇಡ್ ರಸ್ತೆಗೆ ಸ್ಥಳಾಂತರವಾಗಿತ್ತು. ವೃತ್ತಿಯಲ್ಲಿ ಏರೋನಾಟಿಕಲ್ ಎಂಜಿನಿಯರ್ ಆಗಿದ್ದ ಮೂರ್ತಿ ಅವರು, ಮಳಿಗೆ ಸ್ಥಳಾಂತರವಾದ ಬಳಿಕ ವೃತ್ತಿ ತೊರೆದು ಅಂಗಡಿ ಜವಾಬ್ದಾರಿ ವಹಿಸಿಕೊಂಡಿದ್ದರು.

ಮಳಿಗೆಯು ಹಳೆಯ, ಅಪರೂಪದ ಪುಸ್ತಕಗಳಿಗೆ ಹೆಸರುವಾಸಿಯಾಗಿದೆ. ಇದನ್ನು ನಿರ್ವಹಿಸುತ್ತಿದ್ದ ಕೆಕೆಎಸ್ ಮೂರ್ತಿ ಅವರು ನಗರದ ಸಾಂಸ್ಕೃತಿಕ ರಂಗದ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು.

ಸಿಇಟಿ: 3.49 ಲಕ್ಷ ಅರ್ಜಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಸಂಖ್ಯೆ ಈ ಬಾರಿ ನಾಲ್ಕು ಲಕ್ಷ ದಾಟಲಿದೆ.

ಇದುವರೆಗೆ 3.49 ಲಕ್ಷ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಸಲ್ಲಿಕೆಯ ದಿನಾಂಕವನ್ನು ಫೆ. 25ರವರೆಗೆ ವಿಸ್ತರಿಸಲಾಗಿದೆ. ಪರೀಕ್ಷೆ ಏ. 16 ಮತ್ತು 17ರಂದು ನಿಗದಿಯಾಗಿದೆ. ಅಂದು 'ಗುಡ್ ಫ್ರೈಡೇ' ಇರುವ ಕಾರಣ ದಿನಾಂಕ ಮುಂದೂಡುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲು ಕೋರಿ ಕೇರಳದ ವಿದ್ಯಾರ್ಥಿಗಳು ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

'ನೀಟ್ ಪರೀಕ್ಷೆ ಮೇ 4ರಂದು ನಿಗದಿಯಾಗಿದೆ. ಹಾಗಾಗಿ, ಸಿಇಟಿ ಪರೀಕ್ಷಾ ದಿನಾಂಕ ಬದಲಾವಣೆ ಸಾಧ್ಯತೆ ಕಡಿಮೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಕರ್ನಾಟಕ ರಕ್ಷಣಾ ವೇದಿಕೆ ಆಗ್ರಹ, ಕಾರ್ಯಕರ್ತರಿಂದ ಪ್ರತಿಭಟನೆ

ಕೆಪಿಎಸ್‌ಸಿ: ವಿಚಾರಣೆಗೆ ಆಯೋಗ ರಚಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ್ದ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಆಗ್ರಹಿಸಿ, ಕರ್ನಾಟಕ ರಕ್ಷಣಾ ವೇದಿಕೆ ಸದಸ್ಯರು ಸಂಘಟನೆಯ ಅಧ್ಯಕ್ಷ ಟಿ.ಎ.ನಾರಾಯಣಗೌಡ ಅವರ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

'ಕಳೆದ ವರ್ಷ ಆ. 27ರಂದು ನಡೆದಿದ್ದ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯ



ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡ ಬಣ) ಕಾರ್ಯಕರ್ತರು ನಾರಾಯಣಗೌಡರ ನೇತೃತ್ವದಲ್ಲಿ ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

ಆಗಿತ್ತು. ಡಿ.29 ರಂದು ನಡೆದ ಮರು ಪರೀಕ್ಷೆಯಲ್ಲೂ ಪುನರಾವರ್ತನೆ ಆಗಿದೆ' ಎಂದು ಆಕ್ರೋಶ ಹೊರಹಾಕಿದರು.

ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ವಿಚಾರಣಾ ಆಯೋಗ ರಚಿಸಿ ಕೆಪಿಎಸ್‌ಸಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಆಗಿರುವ ಎಲ್ಲ ಬಗೆಯ ಭ್ರಷ್ಟಾಚಾರದ ಕುರಿತು ತನಿಖೆಗೆ ಆದೇಶಿಸಬೇಕು ಎಂದು ಆಗ್ರಹಿಸಿದರು.

ಕೆಪಿಎಸ್‌ಸಿ ಪರೀಕ್ಷೆ ಫಲಿತಾಂಶ ತಡೆಹಿಡಿದು, ಪರೀಕ್ಷೆ ರದ್ದುಪಡಿಸಬೇಕು. ಹೊಸದಾಗಿ ಅಧಿಸೂಚನೆ ಹೊರಡಿಸಿ, ಮತ್ತೊಮ್ಮೆ ಮರು ಪರೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿದರು.

ಪರೀಕ್ಷಾ ನಿಯಂತ್ರಕ ಗ್ಯಾನೇಂದ್ರ ಕುಮಾರ್ ಗಂಗ್ವಾರ್ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ, ಅವರ ರಾಜ್ಯಕ್ಕೆ ವಾಪಸ್ ಕಳುಹಿಸಬೇಕು. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಪರೀಕ್ಷೆಯನ್ನು ಸಮರ್ಥವಾಗಿ ನಡೆಸಲು ವಿಫಲರಾಗಿರುವಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅವರ ರಾಜೀನಾಮೆ ಪಡೆದು, ಆ ಸ್ಥಾನಕ್ಕೆ ಕನ್ನಡಿಗರ ಕುರಿತು ಕಾಳಜಿಯುಳ್ಳವರ ನೇಮಿಸಬೇಕು ಎಂದು ಒತ್ತಾಯಿಸಿದರು.

ಸಿ.ಎಂ , ಗೃಹ ಸಚಿವರ ನಿಂದನೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ನಿಂದಿಸಿದ್ದ ಆರೋಪದ ಅಡಿ ಸುಂಕದಕಟ್ಟೆಯ ಪದ್ಮನಾಭ್ ಎಂಬಾತನನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆಯ ಮದ್ದೂರು ಮೂಲದ ಆರೋಪಿ, ಸುಂಕದಕಟ್ಟೆಯ ಬಾಡಿಗೆ ಮನೆಯಲ್ಲಿ ನೆಲಸಿದ್ದ.

ಮುಖ್ಯಮಂತ್ರಿ ಹಾಗೂ ಗೃಹ ಸಚಿವರನ್ನು ನಿಂದಿಸಿ ವಿಡಿಯೊ ಮಾಡಿ ಅದನ್ನು ಸಾಮಾಜಿಕ ಜಾಲತಾಣದಲ್ಲಿ



ಪದ್ಮನಾಭ್

ಹಾಕಿದ್ದ. ಆರೋಪಿ ಬಂಧಿಸಿ ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ. ಆರೋಪಿಯನ್ನು ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸುಂಕದಕಟ್ಟೆ ವಾರ್ಡ್‌ನ ಕಾಂಗ್ರೆಸ್ ಅಧ್ಯಕ್ಷ ನವೀನ್ ಕುಮಾರ್ ಎಂಬುವವರು ನೀಡಿದ್ದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.


ಎಎಬಿಗೆ ಪದಾಧಿಕಾರಿಗಳ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ವಕೀಲರ ಸಂಘ'ಕ್ಕೆ (ಎಎಬಿ) 2025ರಿಂದ 2028ರ ಅವಧಿಗೆ ಅಧ್ಯಕ್ಷರಾಗಿ ಹೈಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ವಿವೇಕ್ ಸುಬ್ಬಾರೆಡ್ಡಿ, ಉಪಾಧ್ಯಕ್ಷರಾಗಿ ಸಿ.ಎಸ್.ಗಿರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ಎಚ್.ವಿ.ಪ್ರವೀಣ್ ಗೌಡ ಮತ್ತು ಖಜಾಂಚಿಯಾಗಿ ಶ್ವೇತಾ ರವಿಶಂಕರ್ ಆಯ್ಕೆಯಾಗಿದ್ದಾರೆ. 4 ಘಟಕಗಳ ಸದಸ್ಯರ ವಿವರ ಹೀಗಿದೆ.

ಹೈಕೋರ್ಟ್: ಕೆ.ಚಂದ್ರಕಾಂತ ಪಾಟೀಲ, ಆತ್ಮ ವಿ.ಹಿರೇಮಠ, ಪಿ. ಅರವಿಂದ ಕಾಮತ್, ಬಿ.ಬಾಲಕೃಷ್ಣ, ಎಂ. ಚಾಮರಾಜ, ಎಸ್.ರಾಜು ಮತ್ತು ಮಹಿಳಾ ವಿಭಾಗದಲ್ಲಿ ಸಂಧ್ಯಾ ಯು. ಪ್ರಭು, ದೀಕ್ಷಾ ಎನ್.ಅಮೃತೇಶ್ ಹಾಗೂ ಬಿ.ಆರ್.ಹರಿಣಿ.

ಸಿಟಿ ಸಿವಿಲ್ ಕೋರ್ಟ್: ಎಚ್.ಎಂ. ತೇಜಸ್ವಿ ಗೌಡ, ಶಶಿಕುಮಾರ್ ಆರ್. ಗೌಡ, ಕೆ.ಎನ್.ಅಂಬರೀಷ್, ಸಿ.ಎಸ್. ಕಾಂತರಾಜು, ಕೆ.ಮುನಿರಾಜು, ಎಚ್.



ಬಿ.ಪುಟ್ಟರಾಜು, ಕುಮಾರ ಆರ್.ಎಸ್.ಗೌಡ, ಕೆ.ಎನ್. ಚನ್ನಪ್ಪಗೌಡ, ಎಸ್.ಎನ್. ರಾಕೇಶ್, ಟಿ.ಅಂಜನ್ ಕುಮಾರ್ ಗೌಡ, ಜಿ.ನಾಗರಾಜ, ಮಹಿಳಾ ವಿಭಾಗದಲ್ಲಿ ಎಂ.ಆಶಾ, ವೀಣಾ ರಾವ್, ಜೆ.ಮಮತಾ ಹಾಗೂ ಸಿ.ಶಾರದಾ.

ಮೇಯೊ ಹಾಲ್: ಎ.ಪಿ.ನಟೇಶ್, ಕೆ. ಮೋಹನ್, ಡಿ.ಗುಣಶೇಖರ, ಎಂ. ಹಿತೇಶ್ ಕುಮಾರ್ ಜೈನ್, ಭಕ್ತವಚ್ಛಲ ಮತ್ತು ಮಹಿಳಾ ವಿಭಾಗದಲ್ಲಿ ಕೆ.ವಿ. ರವಿಲಾ ಹಾಗೂ ಉದಿತಾ ರಮೇಶ್.

ಮ್ಯಾಜಿಸ್ಟ್ರೇಟ್ ಕೋರ್ಟ್: ಪ್ರಸನ್ನ ಕೆಂಪೇಗೌಡ, ಸತೀಶ್, ಕೆ.ಎಚ್.ಪ್ರಭು, ಶಿವಶಂಕರ, ಕೆ.ಆರ್.ಅನಿಲ್ ಕುಮಾರ್ ಮತ್ತು ಮಹಿಳಾ ವಿಭಾಗದಲ್ಲಿ ಅಂದಲಿ ಹಾಗೂ ಜಿ.ಸುಜಾತಾ (ಸುಜಿ ಗೌಡ).

ಚುನಾವಣಾಧಿಕಾರಿಯಾಗಿ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕೆಂಪಣ್ಣ, ಮುಖ್ಯ ಚುನಾವಣಾ ಅಧಿಕಾರಿಯಾಗಿ ಹಿರಿಯ ವಕೀಲ ಕೆ.ಎನ್. ಫಣೀಂದ್ರ ಕಾರ್ಯ ನಿರ್ವಹಿಸಿದರು. ಇದೇ 16ರಂದು ಚುನಾವಣೆ ನಡೆದಿತ್ತು.

ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, (1) **ಶ್ರೀ ಚೆರಿಯನ್ ಸೆಬಾಸ್ಟಿಯನ್** ಬಿನ್ ಲೇಟ್ ಶ್ರೀ ಇ.ಐ. ಸೆಬಾಸ್ಟಿಯನ್, ವಾಸ: ಪ್ರೀಮಿಯರ್ ಬಾಸಮ್, ನಂ. 38, ತ್ಯಾಗರಾಜು ಬಡಾವಣೆ, ಜೈ ಭಾರತ್ ನಗರ ಐಟಿಸಿ, ಬಾಣಸವಾಡಿ, ಬೆಂಗಳೂರು – 560 033; ಮತ್ತು (2) **ಶ್ರೀ ಟಿ. ಪಿತಾಂಬರ್** ಬಿನ್ ಲೇಟ್ ಶ್ರೀ ಟಿ. ಕೃಷ್ಣಪ್ಪ, ವಾಸ: ನಂ. 1301–ಎ, ಸಂಜೀವ್ ಎನ್ಕ್ಲೋವ್, ಸೆವೆನ್ ಬಂಗಲೋಸ್, ಜೆ.ಪಿ. ರಸ್ತೆ, ಅಂಧೇರಿ ಪಶ್ಚಿಮ, ಮುಂಬೈ – 400 064 ("**ಮಾಲೀಕರು**" ಎಂದು ಕರೆಯಲ್ಪಡುವ) ಮತ್ತು ಈ ಕೆಳಗೆ 'ಷೆಡ್ಯೂಲ್' ನಲ್ಲಿ ಸವಿವರವಾಗಿ ವಿವರಿಸಿರುವ ಮತ್ತು ಇನ್ನುಮುಂದೆ ಇದನ್ನು "**ಷೆಡ್ಯೂಲ್ ಸ್ವತ್ತು**' ಎಂದು ಕರೆಯಲ್ಪಡುವ, ಈ ಸ್ಥಿರಾಸ್ತಿ ಸ್ವತ್ತಿನ ಮಾಲೀಕತ್ವವನ್ನು ನಾವು ನಮ್ಮ ಕಕ್ಷಿದಾರರ ಪರವಾಗಿ ತನಿಖೆ ನಡೆಸುತ್ತಿದ್ದೇವೆ. ಸದರಿ ಮಾಲೀಕರು ಈ ಕೆಳಗೆ ತಿಳಿಸಿರುವ ಷೆಡ್ಯೂಲ್ ಸ್ವತ್ತಿಗೆ ಜಂಟಿ ಮಾಲೀಕರಾಗಿರುತ್ತೇವೆ ಹಾಗೂ ಷೆಡ್ಯೂಲ್ ಸ್ವತ್ತುನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ. ಹಾಗೂ ಸದರಿ ಪೆಡ್ಯೂಲ್ ಸ್ವತ್ತು ಎಲ್ಲಾ ರೀತಿಯ ಋಣಭಾರ, ಅಡಮಾನ, ಭಾಗಾಂಶ, ಬಾಕಿ ದಾವೆಗಳು ಮತ್ತು ಇತರೆ ಯಾವುದೇ ಮೂರನೇ ವ್ಯಕ್ತಿಗಳ ಹಕ್ಕು/ ಆಕ್ಷೇಪಣೆಗಳಿಂದ ಮುಕ್ತವಾಗಿದೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಯಾವುದೇ ವ್ಯಕ್ತಿಗಳು, ಕಂಪನಿ ಅಥವಾ ಸಂಸ್ಥೆ ಷೆಡ್ಯೂಲ್ ಸ್ವತ್ತಿನ ಅಥವಾ ಅದರ ಭಾಗದ ಸಂಬಂಧದಲ್ಲಿ ಮಾರಾಟ, ಗುತ್ತಿಗೆ, ಪರವಾನಗಿ, ಈಡು, ಅಡಮಾನ, ಪ್ರಭಾರ, ಜಪ್ತಿ, ನಿವಾರಣೆ, ಬಾಕಿ ಇರುವ ದಾವೆ, ಕ್ಲೇಮು, ಡಿಮ್ಯಾಂಡ್ ಅಥವಾ ಇತರೆ ಆಸಕ್ತಿಯನ್ನು ಹೊಂದಿದ್ದರೆ, ಮೂಲ ದಾಖಲೆ ಪತ್ರಗಳ ಬೆಂಬಲದೊಡನೆ ಈ ನೋಟೀಸ್ ಪಕಟವಾದ **15 (ಹದಿನೈದು) ದಿನಗಳ** ಕಾಲಾವಧಿಯ ಒಳಗೆ ಕೆಳಗೆ ತಿಳಿಸಿರುವ ವಿಳಾಸಕ್ಕೆ ಅಂತಹ ಆಕ್ಷೇಪಣೆಗಳನ್ನು ಅಥವಾ ಕೇಮ್‌ಗಳನ್ನು ಸಲ್ಲಿಸಬೇಕಾಗಿ ಈ ಮೂಲಕ ಕರೆ ನೀಡಲಾಗಿದೆ. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು/ ಅಥವಾ ಕ್ಲೇಮ್ ಗಳು ಸದರಿ ನಿಗದಿತ ಕಾಲಾವಧಿಯ ಒಳಗೆ ಬಾರದಿದ್ದರೆ, ಮೇಲೆ ತಿಳಿಸಿರುವ ಮಾಲೀಕರ ಹೊರತಾಗಿ ಬೇರೆ ಯಾರೂ ಪೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಕ್ಕು ಬಾಧ್ಯತೆ, ಹಿತಾಸಕ್ತಿ ಅಥವಾ ಯಾವುದೇ ಆಕ್ಷೇಪಣೆಗಳನ್ನು/ ಅಥವಾ ಕ್ಲೇಮ್‌ಗಳನ್ನು ಹೊಂದಿರುವುದಿಲ್ಲವೆಂದು ಭಾವಿಸಲಾಗುವುದು ಮತ್ತು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರರು ಸದರಿ ಮಾಲೀಕರೊಂದಿಗೆ ಉದ್ದೇಶಿತ ವ್ಯವಹಾರ ನಡೆಸಲು ಸ್ವತಂತ್ರರಾಗಿರುವರೆಂದು ತಿಳಿಯಲಾಗುವುದು, ಸದರಿ ನಿಗದಿತ ಕಾಲಾವಧಿ ಮುಗಿದ ನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳು ಮತ್ತು ಕ್ಲೇಮ್‌ಗಳನ್ನು ನಾವು ಸ್ವೀಕರಿಸುವುದಿಲ್ಲ ಮತ್ತು ಅಂತಹ ಆಕ್ಷೇಪಣೆಗಳು ಅಥವಾ ಕ್ಲೇಮ್‌ಗಳು ನಮ್ಮ ಕಕ್ಷಿದಾರರ ಮೇಲೆ ಬಂಧನೆಯಾಗುವುದಿಲ್ಲ ಪರಿಗಣಿಸುವುದಿಲ್ಲ.

ಪೆಡ್ಯೂಲ್ ಸ್ವತ್ತು

ಪ್ರಸ್ತುತ **ಬಿಬಿಎಂಪಿ ಖಾತೆ ನಂ. 39/1,** ಪರಿವರ್ತಿತ ಭೂಮಿಯ ವಿಸ್ತೀರ್ಣ 1,460 ಚದರ ಅಡಿ (5 ಎಕರೆ ಸ್ವತ್ತಿನ ಒಂದು ಭಾಗವಾದ), ಕೊತ್ತನೂರು ಗ್ರಾಮದ ಸರ್ವೆ ನಂ. 58 (ಹಿಂದಿನ ಸರ್ವೆ ನಂ. 48/1) (ಹಳೆಯ ಸರ್ವೆ ನಂ. 48), ವಾರ್ಡ್ ನಂ. 25 ಹೊರಮಾವು, ಹೆಣ್ಣೂರು–ಬಾಗಲೂರು ರಸ್ತೆ, **ಕೊತ್ತನೂರು ಗ್ರಾಮ,** ಕೃಷ್ಣರಾಜಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಮತ್ತು ಇದರ ಚಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವದ ಕಡೆಗೆ: ಹೆಣ್ಣೂರು – ಬಾಗಲೂರು ರಸ್ತೆ ಅಗಲೀಕರಣಕ್ಕಾಗಿ ಬಿಬಿಎಂಪಿಗೆ ನೀಡಿರುವ ಜಮೀನು;
ಪಶ್ಚಿಮದ ಕಡೆಗೆ: ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್‌ಗೆ ಸೇರಿದ ಸ್ವತ್ತು;
ಉತ್ತರದ ಕಡೆಗೆ : ರಸ್ತೆ; ಮತ್ತು
ದಕ್ಷಿಣದ ಕಡೆಗೆ : ಸರ್ವೆ ನಂ. 58ರ ಉಳಿಕೆ ಸ್ವತ್ತು.

ಸಿ. ಆರ್. ಮುರಳಿಧರನ್, ಪಾಲುದಾರರು
ದುಆ ಅಸೋಸಿಯೇಟ್ಸ್
ಅಡ್ವಕೇಟ್ಸ್ ಮತ್ತು ಸಾಲಿಸಿಟರ್ಸ್,
ನಂ. 130/1, 2ನೇ ಅಂತಸ್ತು, ಹಲಸೂರು ರಸ್ತೆ,
ಬೆಂಗಳೂರು–560042.
ಫೋನ್: 91–80–25588799/25589909
ಇ–ಮೇಲ್: murali@duaassociates.com

ಸ್ಥಳ: ಬೆಂಗಳೂರು
ದಿನಾಂಕ: ಫೆಬ್ರವರಿ 19, 2025

ರಾಜ್ಯ ಹೈಕೋರ್ಟ್ ತೀರ್ಪು • ಬೊಕ್ಕಸಕ್ಕೆ ₹7.5 ಸಾವಿರ ಕೋಟಿಗೂ ಹೆಚ್ಚಿನ ತೆರಿಗೆ ನಿರೀಕ್ಷೆ

‘ಎಸ್‌ಟಿಬಿ’ಗಳ ಮೇಲಿನ ತೆರಿಗೆ ನ್ಯಾಯಸಮ್ಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸೆಟ್ ಟಾಪ್ ಬಾಕ್ಸ್‌ಗಳ (ಎಸ್‌ಟಿಬಿ) ಮೇಲೆ ರಾಜ್ಯ ಸರ್ಕಾರ ಮೌಲ್ಯವರ್ಧಿತ ತೆರಿಗೆ ವಿಧಿಸುವುದು ಸಂವಿಧಾನಕ್ಕೆ ವಿರೋಧವಾದ ನಡೆ’ ಎಂಬ ಕೇಬಲ್ ಆಪರೇಟರ್‌ಗಳ ವಾದವನ್ನು ಸಾರಾಸಗಟಾಗಿ ತಳ್ಳಿ ಹಾಕಿರುವ ಹೈಕೋರ್ಟ್, ‘ಎಸ್‌ಟಿಬಿಗಳ ಮೇಲೆ ರಾಜ್ಯ ಸರ್ಕಾರ ವಿಧಿಸುವ ಮೌಲ್ಯವರ್ಧಿತ ತೆರಿಗೆ ನ್ಯಾಯಸಮ್ಮತ’ ಎಂಬ ಮಹತ್ವದ ತೀರ್ಪು ನೀಡಿದೆ.

ಇದರಿಂದಾಗಿ ಮೌಲ್ಯ ವರ್ಧಿತ ತೆರಿಗೆ ಕಾಯ್ದೆ–2003ರ (ವ್ಯಾಟ್) ಅನ್ವಯ 2005ರಿಂದ ಎಸ್‌ಟಿಬಿಗಳ ಮೇಲೆ ವಿಧಿಸಲಾದ ತೆರಿಗೆಯಲ್ಲಿ ಅಂದಾಜು ₹7.5 ಸಾವಿರ ಕೋಟಿಗೂ ಹೆಚ್ಚಿನ ಬೃಹತ್ ಮೊತ್ತ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಜಮೆಯಾಗಲಿದೆ.



ಎಸ್‌ಟಿಬಿಗಳ ಮೇಲೆ ತೆರಿಗೆ ವಿಧಿಸಿದ್ದನ್ನು ಪ್ರಶ್ನಿಸಿ, ‘ಮೆಸರ್ಸ್ ಏಟ್ರಿಯಾ ಕನ್ವರ್ಜೆನ್ಸ್ ಟೆಕ್ನಾಲಜೀಸ್ ಲಿಮಿಟೆಡ್’ ಕಂಪನಿ ಸೇರಿದಂತೆ ಒಟ್ಟು ಐದು ಖಾಸಗಿ ಕಂಪನಿಗಳು ಸಲ್ಲಿಸಿದ್ದ ಎಸ್‌ಟಿಆರ್‌ಪಿ (ಮಾರಾಟ ತೆರಿಗೆ ಪುನರಾವಲೋಕನ ಅರ್ಜಿ) ಅರ್ಜಿಗಳನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

‘ಎಸ್‌ಟಿಬಿಯನ್ನು ಒಂದು ವಸ್ತು ಎಂಬುದಾಗಿ ಪರಿಗಣಿಸಲು ಬರುವುದಿಲ್ಲ. ಕೇಬಲ್ ಟಿ.ವಿ. ಸಂಪರ್ಕಕ್ಕೆ ಎಸ್‌ಟಿಬಿಯನ್ನು ತೆಗೆದುಕೊಳ್ಳಬೇಕು. ನಾವು ಅದನ್ನು ಗ್ರಾಹಕರಿಗೆ ಮಾರಾಟ ಮಾಡುವುದಿಲ್ಲ. ಬರೀ ಸೇವೆ ಒದಗಿಸುತ್ತೇವೆ. ಹಾಗಾಗಿ, ಇದಕ್ಕೆ ತೆರಿಗೆ ವಿಧಿಸಲು ಸಂವಿಧಾನದಲ್ಲಿ ಅವಕಾಶವಿಲ್ಲ’ ಎಂದು ಅರ್ಜಿದಾರರು ಹೇಳಿದ್ದರು.

ಇದನ್ನು ತಳ್ಳಿಹಾಕಿರುವ ನ್ಯಾಯಪೀಠ, ‘ನೀವು ಈ ಪ್ರಕ್ರಿಯೆಯನ್ನು ಏನಾದರೂ ಕರೆಯಬಹುದು. ಎಸ್‌ಟಿಬಿ ಕೊಡುವಾಗ ದುಡ್ಡು ಪಡೆಯುತ್ತೀರಿ. ಹಾಗಾಗಿ, ಅದು ಮಾರಾಟವೇ ಆಯ್ತು. ಅಂದಮೇಲೆ, ರಾಜ್ಯ ಸರ್ಕಾರಕ್ಕೆ ಇದರ ಮೇಲೆ ತೆರಿಗೆ ವಿಧಿಸಲು ಮುಕ್ತ ಅವಕಾಶವಿದೆ’ ಎಂದು ಹೇಳಿದೆ.

‘ನಮ್ಮ ಸಂವಿಧಾನಕ್ಕೆ ತರಲಾದ 46ನೇ ತಿದ್ದುಪಡಿಯ ಹಿನ್ನೆಲೆಯಲ್ಲಿ 363ನೇ (29)(ಎ) ವಿಧಿಯ ಅಡಿ ಮಾರಾಟ ತೆರಿಗೆ ಹಾಕಬೇಕಾದರೆ ಮಾರಾಟ ಮಾಡಿರಲೇಬೇಕೆಂಬುದು ಅಗತ್ಯ ಎನಿಸುವುದಿಲ್ಲ. ಆದರೆ, ವಸ್ತುವನ್ನು ಉಪಯೋಗಿಸುವಂತಹ ಹಕ್ಕನ್ನು ಗ್ರಾಹಕನಿಗೆ ಕೊಟ್ಟಿರಬೇಕು. ಕೊಟ್ಟಿದ್ದಕ್ಕೆ ಬೆಲೆ ನಿಗದಿಪಡಿಸಿರಬೇಕು. ಅಷ್ಟಾದರೆ, ಮಾರಾಟ ತೆರಿಗೆ ಹಾಕಲು ಬರುತ್ತದೆ’ ಎಂದು ಸ್ಪಷ್ಟಪಡಿಸಿದೆ.

‘ಒಂದೇ ವ್ಯವಹಾರಕ್ಕೆ ಹಲವು ಮುಖಗಳಿರುತ್ತವೆ. ಒಂದೊಂದು ಮುಖವೂ ಇನ್ನೊಂದಕ್ಕಿಂತ ಭಿನ್ನವಾಗಿರುತ್ತದೆ. ಹಾಗಾಗಿ, ಭಿನ್ನ–ಭಿನ್ನ ತೆರಿಗೆಗಳನ್ನು ಕೇಂದ್ರ–ರಾಜ್ಯ ಮಾರಾಟದ ಅಡಿಯಲ್ಲಿ ವಿಧಿಸಲಾಗಿರುತ್ತದೆ. ಒಂದೇ ವ್ಯವಹಾರದಲ್ಲಿ ಇವೆರಡೂ ಒಳಗೊಂಡಿರಲು ಸಾಧ್ಯ’ ಎಂದು ನ್ಯಾಯಪೀಠ ಒತ್ತಿಹೇಳಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ವೈ.ಸಿ. ಶಿವಕುಮಾರ್ ಹಾಗೂ ರಾಜ್ಯ ಸರ್ಕಾರದ ಪರ ಆದಿತ್ಯ ವಿಕ್ರಮ ಭಟ್ ವಾದ ಮಂಡಿಸಿದ್ದರು.

ಕೇಬಲ್ ನೆಟ್‌ವರ್ಕ್‌ನವರು ಹೇಳಿದ್ದೇನು?

‘ನಾವು ಸೆಟ್ ಟಾಪ್ ಬಾಕ್ಸ್ (ಎಸ್‌ಟಿಬಿ) ಅನ್ನು ಗ್ರಾಹಕರ ಮನೆಯಲ್ಲಿ ಇರಿಸುತ್ತೇವೆ. ಇದಕ್ಕೆ ಪ್ರತಿ ತಿಂಗಳೂ ಶುಲ್ಕ ವಿಧಿಸುತ್ತೇವೆ. ಆದರೆ, ಈ ಬಾಕ್ಸ್‌ಗೆ ಶುಲ್ಕ ವಿಧಿಸುವುದಿಲ್ಲ. ನಮ್ಮ ಮತ್ತು ಗ್ರಾಹಕರ ಒಪ್ಪಂದ ಮುಗಿದರೆ ಬಾಕ್ಸ್ ಅನ್ನು ವಾಪಸು ತೆಗೆದುಕೊಂಡು ಹೋಗುತ್ತೇವೆ. ನಾವು ಅದನ್ನು ಮಾರಾಟ ಮಾಡಿರುವುದಿಲ್ಲ. ಆದ್ದರಿಂದ, ಮಾರಾಟ ಮಾಡದೆಯೇ ತೆರಿಗೆ ವಿಧಿಸಲು ಆಗುವುದಿಲ್ಲ’ ಎಂದು ಕೇಬಲ್ ನೆಟ್ ವರ್ಕ್ ಆಪರೇಟರ್ ಕಂಪನಿಗಳು ಹೇಳಿದ್ದವು.

ರಾಜ್ಯದಲ್ಲಿ 2005ರಿಂದ 2017ರವರೆಗೆ ವ್ಯಾಟ್ (ಮೌಲ್ಯ ವರ್ಧಿತ ತೆರಿಗೆ) ಜಾರಿಯಲ್ಲಿತ್ತು. ಅದಕ್ಕೂ ಮೊದಲು ಕೆಎಸ್‌ಟಿ (ಕರ್ನಾಟಕ ಮಾರಾಟ ತೆರಿಗೆ) ಅನುಷ್ಠಾನದಲ್ಲಿತ್ತು.

ಮಾಹಿತಿ ಆಯುಕ್ತರ ನೇಮಕ: ಆದೇಶ ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಮುಖ್ಯ ಮಾಹಿತಿ ಆಯುಕ್ತ ಮತ್ತು ಮಾಹಿತಿ ಆಯುಕ್ತರನ್ನು ನೇಮಕ ಮಾಡುವ ಮುನ್ನ ರಾಜ್ಯ ಸರ್ಕಾರ ಶೋಧನಾ ಸಮಿತಿ ರಚನೆ ಮಾಡಿಲ್ಲ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ. ಏತನ್ಮಧ್ಯೆ, ನೇಮಕಾತಿಗೆ ತಡೆ ಕೋರಿರುವ ಅರ್ಜಿದಾರರ ಮಧ್ಯಂತರ ಕೋರಿಕೆಗೆ ಸಂಬಂಧಿಸಿದಂತೆ ತನ್ನ ಆದೇಶವನ್ನು ಕಾಯ್ದಿರಿಸಿದೆ.

ಮಾಹಿತಿ ಆಯುಕ್ತ ಹುದ್ದೆಯ ಆಕಾಂಕ್ಷಿಯಾಗಿದ್ದ ಜೆ.ಪಿ.ನಗರ 7ನೇ ಹಂತದ ನಿವಾಸಿಯಾದ ಸಾಮಾಜಿಕ ಕಾರ್ಯಕರ್ತ ಕೆ.ಮಲ್ಲಿಕಾರ್ಜುನ ರಾಜು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, ‘ಶೋಧನಾ ಸಮಿತಿಯನ್ನು ಕಡ್ಡಾಯವಾಗಿ ರಚಿಸುವಂತೆ ಸುಪ್ರೀಂ ಕೋರ್ಟ್ ಹೇಳಿಲ್ಲ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರಕ್ಕೆ ನಿರ್ದಿಷ್ಟ ನಿರ್ದೇಶನವನ್ನೂ ನೀಡಿಲ್ಲ. ಶೋಧನಾ ಸಮಿತಿ ರಚಿಸುವುದು ಸೂಕ್ತ ಎಂದು ಹೇಳಿದೆಯಷ್ಟೆ’ ಎಂದರು.

‘ನೇಮಕಾತಿಯಲ್ಲಿ ಯಾವ ಪ್ರಕ್ರಿಯೆ ಅನುಸರಿಸಲಾಗಿದೆ ಎಂಬ ಬಗ್ಗೆ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕಿದೆ. ಅದನ್ನು ಸಲ್ಲಿಸಿ ಒಪ್ಪಿಗೆ ಪಡೆಯಲಾಗುವುದು. ಅರ್ಜಿಯು ಸುಪ್ರೀಂ ಕೋರ್ಟ್ ಪರಿಗಣನೆಗೆ ಒಳಪಟ್ಟಿರುವಾಗ ಇಲ್ಲಿ ಈ ಅರ್ಜಿಯನ್ನು ಪುರಸ್ಕರಿಸುವುದು ಸೂಕ್ತವಲ್ಲ’ ಎಂದರು.

ಅಂತೆಯೇ, ಸಿಐಸಿ ಮತ್ತು ಕೆಲ ಮಾಹಿತಿ ಆಯುಕ್ತರ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್, ‘ಈ ಪ್ರಕರಣದ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವುದರಿಂದ ಈ ಅರ್ಜಿ ಊರ್ಜಿತವಾಗುವುದಿಲ್ಲ. ನೇಮಕಾತಿಗೆ ಮಧ್ಯಂತರ ತಡೆ ನೀಡಿದರೆ ಅರ್ಜಿದಾರರು ಸಿಐಸಿ ಆಗುವುದಿಲ್ಲ. ಇದು ರಾಜ್ಯ ಸರ್ಕಾರಕ್ಕೆ ಮಾಡುವ ಮಧ್ಯಂತರ ಹಾನಿ ಎನಿಸುವುದೇ ವಿನಾ ಪರಿಹಾರ ಎನಿಸುವುದಿಲ್ಲ’ ಎಂದರು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಅಶೋಕ್ ಬಿ.ಪಾಟೀಲ ವಾದ ಮಂಡಿಸಿದರು.

ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಮುಖ್ಯ ಆಯುಕ್ತರಾಗಿ ಎ.ಎಂ.ಪ್ರಸಾದ್, ಆಯುಕ್ತರಾಗಿ ಕೆ.ರಾಮನ್, ಡಾ.ಹರೀಶ್ ಕುಮಾರ್, ರುದ್ರಣ್ಣ ಹರ್ತಿಕೋಟೆ, ನಾರಾಯಣ ಜಿ.ಚನ್ನಾಳ, ಎಸ್.ರಾಜಶೇಖರ, ಕೆ.ಬದ್ರುದ್ದೀನ್ ಮತ್ತು ಬಿ.ಆರ್. ಮಮತಾ ಅವರ ನೇಮಕ ಆದೇಶವನ್ನು ರದ್ದುಪಡಿಸುವಂತೆ ಅರ್ಜಿದಾರರು ಕೋರಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಕೊಡಿಗೇಹಳ್ಳಿಯ ಸೊಣ್ಣೇಗೌಡ ಬಡಾವಣೆ ಹಾಗೂ ಹೊಸಟ್ಟಿ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಗೆ ಶಾಸಕ ಕೃಷ್ಣ ಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಈ ಬಡಾವಣೆಗಳಲ್ಲಿ ಹಿಂದೆ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿತ್ತು. ಆದರೆ, ಒಳಚರಂಡಿ ಮತ್ತು ಕಾವೇರಿ ನೀರು ಕೊಳವೆ ಮಾರ್ಗದ ಅಳವಡಿಕೆ ಕಾಮಗಾರಿ ಕೈಗೊಂಡಿದ್ದರಿಂದ ರಸ್ತೆಗಳು ಹಾಳಾಗಿ, ಸಂಚಾರಕ್ಕೆ ತೊಂದರೆಯಾಗಿತ್ತು. ಸ್ಥಳೀಯರ ಮನವಿಯ ಮೇರೆಗೆ ರಸ್ತೆಗಳ ಮರು ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಲಾಗಿದೆ’ ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ಎನ್. ಎನ್.ಶ್ರೀನಿವಾಸಯ್ಯ, ವೆಂಕಟಸ್ವಾಮಿ, ಹನುಮಂತಿ, ಶಾಂತಮ್ಮ, ಮಹೇಶ್, ಲೋಕೇಶ್, ರವಿಶಂಕರ್‌ಗೌಡ, ಬಿಬಿಎಂಪಿ ಸಹಾಯಕ ಎಂಜಿನಿಯರ್ ಪ್ರದೀಪ್, ಗುತ್ತಿಗೆದಾರ ಆರ್. ಚಿದಾನಂದಮೂರ್ತಿ ಮತ್ತಿತರರು ಇದ್ದರು.

ಹವಾಮಾನ ಬದಲಾವಣೆ: ತಜ್ಞರ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನ ಬದಲಾವಣೆಯಿಂದ ಅಕಾಲಿಕ ಮಳೆ, ತಾಪಮಾನ ಹೆಚ್ಚಳ, ಚಂಡಮಾರುತ, ಕಾಳ್ಗಿಚ್ಚು, ಬರಗಾಲ, ಪ್ರವಾಹ, ಸೇರಿ ನೈಸರ್ಗಿಕ ವಿಕೋಪಗಳು ಸಂಭವಿಸುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ವಿಷಯ ತಜ್ಞರು, ಪರಿಹಾರೋಪಾಯದ ಬಗ್ಗೆ ಸಮಾಲೋಚನೆ ನಡೆಸಿದರು.

ಚಾಣಕ್ಯ ವಿಶ್ವವಿದ್ಯಾಲಯವು ಹವಾಮಾನ ಬದಲಾವಣೆ ಕುರಿತು ನಗರದಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ವಿಚಾರಸಂಕಿರಣದಲ್ಲಿ ನೀತಿ ನಿರೂಪಕರು, ವಿಜ್ಞಾನಿಗಳು, ಪರಿಸರವಾದಿಗಳು, ಎಂಜಿನಿಯರ್‌ಗಳು, ಶಿಕ್ಷಣ ತಜ್ಞರು ಪಾಲ್ಗೊಂಡಿದ್ದರು.

ರಷ್ಯನ್ ಅಕಾಡೆಮಿ ಆಫ್ ಸೈನ್ಸ್‌ನ ನಿಕೊಲಾಯ್ ಫಿಲಾಟೋವ್, ಕೆನಡದ ರಾಜ್ಯದ ಜಲ ಶಂಶೋಧನಾ ಸಂಸ್ಥೆಯ ರಾಜಶೇಖರ ಮೂರ್ತಿ, ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಟಿ.ವಿ. ರಾಮಚಂದ್ರ, ಸೆಂಟರ್ ಫಾರ್ ಅನಲಿಟಿಕಲ್ ರಿಸರ್ಚ್ ಸ್ಟಡೀಸ್ ಸಂಸ್ಥೆಯ ದೀಪಕ್ ಬೊರ್ನಾರೆ ಸೇರಿದಂತೆ ಪಾಲ್ಗೊಂಡಿದ್ದ ವಿಷಯ ತಜ್ಞರು, ‘ಈಗಲೇ ಎಚ್ಚೆತ್ತುಕೊಂಡು, ತುರ್ತು ಕ್ರಮಗಳನ್ನು ಕೈಗೊಳ್ಳಬೇಕು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಕೃಷಿ ಸೇರಿ ವಿವಿಧ ಕ್ಷೇತ್ರಗಳ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳ ಬಗ್ಗೆಯೂ ಚರ್ಚಿಸಲಾಯಿತು. ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನದ ನೆರವಿನಿಂದ ಪರಿಹಾರ ಕಂಡುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜತೆಗೂ ಸಮಾಲೋಚನೆ ನಡೆಸಿದರು.

ವಿಜ್ಞಾನ ಪರಿಷತ್ ಚುನಾವಣೆ: ನೋಟಿಸ್

ಬೆಂಗಳೂರು: ‘ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಆಡಳಿತ ಮಂಡಳಿ ಆಯ್ಕೆಗೆ ಚುನಾವಣೆ ನಡೆಸಲು ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಮಾಜಿ ಅಧ್ಯಕ್ಷ ಗಿರೀಶ್ ಕಡ್ಲೆವಾಡ ಹಾಗೂ ಮಾಜಿ ಜಂಟಿ ಕಾರ್ಯದರ್ಶಿ ಬಿ.ಎನ್. ಶ್ರೀನಾಥ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.



ಕೊಕ್ಕೊ ವಿಶ್ವಕಪ್ ವಿಜೇತ ಭಾರತ ತಂಡದಲ್ಲಿದ್ದ ರಾಜ್ಯದ ಆಟಗಾರರಿಗೆ ಕರ್ನಾಟಕ ಸರ್ಕಾರವು ಕಡಿಮೆ ಮೊತ್ತದ ಪ್ರೋತ್ಸಾಹಧನ ನೀಡಿದೆ ಎಂದು ಆರೋಪಿಸಿ ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್ ವಿರುದ್ಧ ಕೊಕ್ಕೊ ಆಟಗಾರರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಕಾನೂನು ಪದವಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ: ಮೂವರ ಸೆರೆ

ಉಪ ಪ್ರಾಂಶುಪಾಲ ಬಂಧನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕೋಲಾರದ ಮನೆಯಿಂದ ಆರೋಪಿಗಳ ವಶಕ್ಕೆ ಪಡೆದು ಬಂಧನ
- ಆರೋಪಿಗಳು 10 ದಿನ ಪೊಲೀಸ್ ಕಸ್ಟಡಿಗೆ
- ಇನ್ನೂ ಕೆಲವರ ಕೈವಾಡವಿರುವ ಶಂಕೆ

ಬೆಂಗಳೂರು: ರಾಜ್ಯ ಕಾನೂನು ವಿಶ್ವ-ವಿದ್ಯಾಲಯದ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ಸಾಮಾಜಿಕ ಜಾಲತಾಣದಲ್ಲಿ ಸೋರಿಕೆ ಮಾಡಿದ್ದ ಆರೋಪದಡಿ ಉಪ ಪ್ರಾಂಶುಪಾಲ ಸೇರಿದಂತೆ ಮೂವರು ಆರೋಪಿಗಳನ್ನು ಸೈಬರ್ ಅಪರಾಧ ಠಾಣೆಯ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಕೋಲಾರ ಜಿಲ್ಲೆಯ ಬಸವಶ್ರೀ ಕಾನೂನು ಕಾಲೇಜಿನ ಉಪ ಪ್ರಾಂಶುಪಾಲ ನಾಗರಾಜ್, ಅವರ ಕಾರು ಚಾಲಕ ವಿ. ಜಗದೀಶ್ ಹಾಗೂ ಬಂಗಾರಪೇಟೆಯ ಕಾನೂನು ಕಾಲೇಜಿನ ವಿದ್ಯಾರ್ಥಿ ವರುಣ್ ಕುಮಾರ್ ಬಂಧಿತರು.

ಕಾನೂನು ವಿಶ್ವವಿದ್ಯಾಲಯದ ಪರೀಕ್ಷಾ ಜಾಗೃತ ದಳ-2ರ ಮುಖ್ಯಸ್ಥ ಕೆ.ಎನ್.ವಿಶ್ವನಾಥ್ ನೀಡಿದ ದೂರಿನ ಮೇರೆಗೆ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ತಾಂತ್ರಿಕ ಪುರಾವೆ ಆಧರಿಸಿ ಕಾರ್ಯಾಚರಣೆ ನಡೆಸಲಾಗಿತ್ತು. ಮೂವರು ಆರೋಪಿಗಳನ್ನು ಕೋಲಾರದ ಮನೆಯಲ್ಲಿ ವಶಕ್ಕೆ ಪಡೆದು ಬಂಧಿಸಲಾಯಿತು. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಇನ್ನೂ ಕೆಲವರ ಕೈವಾಡವಿರುವ ಶಂಕೆಯಿದ್ದು, ಹೆಚ್ಚಿನ ವಿಚಾರಣೆಗೆ ಮೂವರನ್ನೂ 10 ದಿನ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾ-ಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಕಾನೂನು ವಿಶ್ವವಿದ್ಯಾಲಯದ ಅಧೀನದ ಕಾನೂನು ಕಾಲೇಜುಗಳಲ್ಲಿ ಜನವರಿ 20ರಿಂದ ವಿವಿಧ ವಿಷಯಗಳ ಪರೀಕ್ಷೆಗಳು ಆರಂಭವಾಗಿದ್ದು, ಫೆಬ್ರುವರಿ 20ರವರೆಗೆ ನಡೆಯಲಿವೆ. ಕೆ.ಎನ್.ವಿಶ್ವನಾಥ್ ಅವರನ್ನು ವಿವಿಧ ಕಾನೂನು ಕಾಲೇಜುಗಳಲ್ಲಿ ಪರೀಕ್ಷಾ ಪ್ರಕ್ರಿಯೆಯ ತಪಾಸಣೆ ನಡೆಸುವ ಜಾಗೃತ ದಳ-2ರ ಮುಖ್ಯಸ್ಥರಾಗಿ ಹಾಗೂ ಸಹಾಯಕ ಪ್ರಾಧ್ಯಾಪಕ ಡಾ.ರವೀಂದ್ರ ರಜಪೂತ್ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿತ್ತು. ಜ.23ರಂದು ಸಹಾಯಕ ಪರಿವೀಕ್ಷಕ ರಾಜೂರ್ ಅವರು ವಿಶ್ವನಾಥ್ ಅವರಿಗೆ ವಾಟ್ಸ್‌ಆ್ಯಪ್ ಮೂಲಕ ಕೆಲವು ಪ್ರಶ್ನೆಗಳನ್ನು ಕಳುಹಿಸಿದ್ದರು. ಅಂದು ನಡೆಯುತ್ತಿದ್ದ ಕಾಂಟ್ರಾಕ್ಟ್ ಲಾ-1 ವಿಷಯದ ಪರೀಕ್ಷೆಯ ಪ್ರಶ್ನೆಪತ್ರಿಕೆಗೆ ಹೋಲಿಕೆ ಮಾಡಿದಾಗ ಪ್ರಶ್ನೆಗಳು ಹೊಂದಾಣಿಕೆ ಆಗಿರುವುದು ಪತ್ತೆಯಾಗಿತ್ತು. ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದು ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದರು. ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು ಎಂದು ಪೊಲೀಸರು ಹೇಳಿದರು.

‘ಆರೋಪಿ, ಉಪ ಪ್ರಾಂಶುಪಾಲ ನಾಗರಾಜ್ ಅವರಿಗೆ ಅದೇ ಕಾಲೇಜಿನಲ್ಲಿ ಕಾನೂನು ಪದವಿ ವ್ಯಾಸಂಗ ಮಾಡುತ್ತಿದ್ದ ವಿ.ಜಗದೀಶ್ ಕಾರು ಚಾಲಕನಾಗಿಯೂ ಕೆಲಸ ಮಾಡುತ್ತಿದ್ದ. ನಾಗರಾಜ್ ಅವರ ಮೊಬೈಲ್‌ನಲ್ಲಿದ್ದ ಕಾಂಟ್ರಾಕ್ಟ್ ಲಾ-1 ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ಆತ ತನ್ನ ಮೊಬೈಲ್‌ಗೆ ವರ್ಗಾವಣೆ ಮಾಡಿಕೊಂಡಿದ್ದ. ಬಳಿಕ ಪ್ರಶ್ನೆಗಳನ್ನು ಟೆಲಿಗ್ರಾಂ ಗ್ರೂಪ್‌ಗಳ ಮೂಲಕ ಪರೀಕ್ಷಾರ್ಥಿಗಳಿಗೆ ಕಳುಹಿಸಿದ್ದ. ವಿದ್ಯಾರ್ಥಿಗಳಿಂದ ಹಣ ಪಡೆದುಕೊಂಡಿದ್ದ’ ಎಂದು ಮೂಲಗಳು ತಿಳಿಸಿವೆ.

‘ಬಂಗಾರಪೇಟೆಯ ಕಾನೂನು ಕಾಲೇಜಿನ ವಿದ್ಯಾರ್ಥಿ ವರುಣ್ ಕುಮಾರ್ ಎಂಬಾತ ಪರೀಕ್ಷೆಯ ಹಿಂದಿನ ದಿನ ಕಾಲೇಜಿಗೆ ಬಂದು ಪ್ರಶ್ನೆಪತ್ರಿಕೆಗಳ ಕಟ್ಟನ್ನು ಯಾರಿಗೂ ತಿಳಿಯದಂತೆ ತೆರೆದಿದ್ದ. ಪ್ರಶ್ನೆ ಪತ್ರಿಕೆಯ ಫೋಟೊವನ್ನು ತನ್ನ ಮೊಬೈಲ್ ಫೋನ್‌ನಲ್ಲಿ ಸೆರೆ ಹಿಡಿದು, ಕಾಲೇಜಿನ ವಿದ್ಯಾರ್ಥಿಗಳಿಗೆ ಟೆಲಿಗ್ರಾಂ ಆ್ಯಪ್ ಮೂಲಕ ಕಳುಹಿಸಿದ್ದ. ಅವರಿಂದ ಹಣ ಪಡೆದುಕೊಂಡಿದ್ದ’ ಎಂದು ಮೂಲಗಳು ಹೇಳಿವೆ.

ಹನಿಟ್ರ್ಯಾಪ್: ಹಣ, ಒಡವೆ ಸುಲಿಗೆ

ಆರು ಮಂದಿ ದರೋಡೆಕೋರರ ಬಂಧನ – ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ



ಇರ್ಫಾನ್ ರೇಖಾ ವಹೀದ್ ಖಾನ್ ಸಲ್ಮಾನ್ ಸೈಯದ್

ಅಪರಾಧ ಸುದ್ದಿ

ಬೆಂಗಳೂರು: ಯುವಕರನ್ನು ಹನಿಟ್ರ್ಯಾಪ್‌ಗೆ ಸಿಲುಕಿಸಿ ಹಣ ಹಾಗೂ ಚಿನ್ನಾಭರಣ ಸುಲಿಗೆ ಮಾಡುತ್ತಿದ್ದ ಯುವತಿ ಸೇರಿ ಆರು ಮಂದಿಯನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಸೈಯದ್ ಶಮಾಲ್ ಉದ್ದೀನ್(29), ಈತನ ಪ್ರೇಯಸಿ ಬಾಣಸವಾಡಿಯ ನಿವಾಸಿ ರೇಖಾ(29), ಮೈಸೂರಿನ ಮೊಹಮ್ಮದ್ ಇರ್ಫಾನ್(29), ಬೆಂಗಳೂರಿನ ರೂಪೇನ ಅಗ್ರಹಾರದ ಸುಹೈನ್ ಖಾನ್(42), ಕೋಡಿಚಿಕ್ಕನಹಳ್ಳಿಯ ನಿವಾಸಿ ವಹೀದ್ ಖಾನ್(27) ಹಾಗೂ ರಾಜೀವ್‌ನಗರದ ನಿವಾಸಿ ಸಲ್ಮಾನ್ ಖಾನ್(26) ಬಂಧಿತರು.

ಮೈಸೂರಿನಲ್ಲಿ ಮಾಜಿ ಸಚಿವರೊಬ್ಬರ ಮೇಲೆ ನಡೆದಿದ್ದ ಹಲ್ಲೆ ಪ್ರಕರಣದಲ್ಲಿಯೂ ಈ ಹಿಂದೆ ಮೊಹಮ್ಮದ್ ಇರ್ಫಾನ್‌ನನ್ನು ನಜರ್‌ಬಾದ್ ಠಾಣೆಯ ಪೊಲೀಸರು ಬಂಧಿಸಿದ್ದರು. ಈತನ ವಿರುದ್ಧ ರೌಡಿಪಟ್ಟಿ ಸಹ ತೆರೆಯಲಾಗಿದೆ.

ಬಂಧಿತರಿಂದ ₹2.30 ಲಕ್ಷ ಮೌಲ್ಯದ 30 ಗ್ರಾಂ ತೂಕದ ಚಿನ್ನದ ಸರ ಮತ್ತು ಆಟೊ, ಮೂರು ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

‘ಆರೋಪಿ ರೇಖಾ ಕೆಲವು ವರ್ಷ ತಮಿಳುನಾಡಿನಲ್ಲಿ ಬ್ಯೂಟಿಷಿಯನ್ ಆಗಿ ಕೆಲಸ ಮಾಡಿದ್ದಳು. ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದಳು. ಆಗ ಆರೋಪಿ ಸೈಯದ್ ಶಮಾಲ್ ಉದ್ದೀನ್ ಪರಿಚಯವಾಗಿದ್ದ. ಇಬ್ಬರ ಮಧ್ಯೆಯಿದ್ದ ಸ್ನೇಹವು ಪ್ರೇಮಕ್ಕೆ ತಿರುಗಿತ್ತು. ಬಾಣಸವಾಡಿಯ ಮನೆಯೊಂದರಲ್ಲಿ ಸಹಜೀವನ ನಡೆಸುತ್ತಿದ್ದರು. ಈ ಮಧ್ಯೆ ಸಾಮಾಜಿಕ ಜಾಲತಾಣದ ಮೂಲಕ ತಮಿಳುನಾಡಿನ ಶಿವನ್ ಜತೆ ಸ್ನೇಹ ಬೆಳೆಸಿ ಆತನೊಂದಿಗೆ ಚಾಟಿಂಗ್ ಮಾಡಿದ್ದ ರೇಖಾ, ಬೆಂಗಳೂರಿಗೆ ಬರುವಂತೆ ಆಹ್ವಾನ ನೀಡಿದ್ದಳು. ನಂತರ ಸೈಯದ್, ವಹೀದ್ ಖಾನ್, ಸುಹೈಲ್ ಮತ್ತು ಸಲ್ಮಾನ್ ಜತೆಗೂಡಿ ದರೋಡೆಗೆ ಸಂಚು ರೂಪಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ರೇಖಾ ನೀಡಿದ್ದ ಆಹ್ವಾನದ ಮೇರೆಗೆ ಜನವರಿ 25ರಂದು ರಾತ್ರಿ 10 ಗಂಟೆ ಸುಮಾರಿಗೆ ತಮಿಳುನಾಡಿನಿಂದ ನಗರದ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ ದೂರುದಾರ ಶಿವನ್ ಬಂದಿದ್ದರು. ಅವರು ಬರುವಷ್ಟರಲ್ಲಿ ಸುಹೈಲ್ ಖಾನ್‌ನ ಆಟೊದಲ್ಲಿ ರೇಖಾ ಕೂತಿದ್ದಳು. ಆಟೊ ಹತ್ತಿದ್ದ ವ್ಯಕ್ತಿ, ಯಾವುದಾದರೂ ಲಾಡ್ಜ್‌ಗೆ ಕರೆದೊಯ್ಯುವಂತೆ ಸೂಚಿಸಿದ್ದ. ಶಿವನ್ ಅವರನ್ನು ಆಟೊದಲ್ಲಿ ಕೂರಿಸಿಕೊಂಡು ಮಧ್ಯ ರಾತ್ರಿವರೆಗೆ ಸುತ್ತಾಟ ನಡೆಸಲಾಗಿತ್ತು. ಬನ್ನೇರುಘಟ್ಟದ ಜಯದೇವ ಬಸ್ ನಿಲ್ದಾಣ ಬಳಿ ಆಟೊ ನಿಲುಗಡೆ ಮಾಡಿದ್ದ ಸುಹೈಲ್, ‘ಸಮೀಪದಲ್ಲೇ ರೂಮ್ ಇದೆ. ಅಲ್ಲಿಗೆ ಹೋಗಿ’ ಎಂದು ಹೇಳಿದ್ದ. ಫೋನ್ ಪೇ ಮೂಲಕ ₹900 ಬಾಡಿಗೆ ಪಡೆದುಕೊಂಡು ತೆರಳಿದ್ದ’ ಎಂದು ತಿಳಿಸಿದರು.

‘ಇತರೆ ಆರೋಪಿಗಳು ಬೈಕ್‌ನಲ್ಲಿ ಆಟೊವನ್ನು ಹಿಂಬಾಲಿಸಿಕೊಂಡು ಬಂದಿದ್ದರು. ರೇಖಾ ಹಾಗೂ ಶಿವನ್ ಅವರು ನಡೆದು ತೆರಳುತ್ತಿದ್ದರು. ಆ ವೇಳೆ ಶಿವನ್ ಬಳಿಯಿದ್ದ ಎರಡು ಮೊಬೈಲ್, ಚಿನ್ನದ ಬಳೆ, ಸರ ಕಸಿದುಕೊಂಡಿದ್ದರು. ಅಲ್ಲದೇ ಅನುಮಾನ ಬಾರದಿರಲಿ ಎಂದು ರೇಖಾಳ ಮೊಬೈಲ್ ಕೂಡ ಕಸಿದುಕೊಂಡು ಪರಾರಿ ಆಗಿದ್ದರು. ನಂತರ, ರೇಖಾ ಗಾಬರಿಗೊಂಡಂತೆ ನಟಿಸಿ ಅಲ್ಲಿಂದ ತೆರಳಿದ್ದಳು. ಶಿವನ್ ನೀಡಿದ ದೂರು ಆಧರಿಸಿ ತನಿಖೆ ನಡೆಸಿದಾಗ ಹನಿಟ್ರ್ಯಾಪ್ ವಿಚಾರ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

ಅಕ್ರಮ ಬಂಧನ: ಮಾನವ ಹಕ್ಕುಗಳ ಆಯೋಗಕ್ಕೆ ದೂರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕಳ್ಳತನದ ಆರೋಪದ ಮೇಲೆ ಕೆ.ಆರ್. ಪುರ ಠಾಣೆ ಪೊಲೀಸರು ಗರ್ಭಿಣಿಯನ್ನು ಅಕ್ರಮವಾಗಿ ಬಂಧಿಸಿ, ಆಕೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಿ ಪತಿ ಎಸ್. ಭರತ್ ಅವರು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿದ್ದಾರೆ.

‘ಸೋಮವಾರ ಬೆಳಿಗ್ಗೆ ಕೆ.ಆರ್. ಪುರ ಠಾಣೆ ಪೊಲೀಸರು ನನ್ನ ಪತ್ನಿಯನ್ನು ಮತ್ತು 15 ತಿಂಗಳ ಮಗುವನ್ನು ತನಿಖೆಯ ಹೆಸರಿನಲ್ಲಿ ಸಂಜೆ 4 ಗಂಟೆಯವರೆಗೆ ಠಾಣೆಯಲ್ಲಿ ಕೂಡಿಹಾಕಿದ್ದರು. ನಂತರ ಮನೆಗೆ ತೆರಳುವಂತೆ ಸೂಚಿಸಿದ್ದರು. ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಠಾಣೆಗೆ ತೆರಳಿ ಪತ್ನಿ ಭೇಟಿ ಮಾಡಲು ಪ್ರಯತ್ನಿಸಿದ್ದೆ. ಆದರೆ ಪೊಲೀಸರು ಭೇಟಿಗೆ ಅವಕಾಶ ನೀಡಲಿಲ್ಲ’ ಎಂದು ಭರತ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ದೂರುದಾರರ ವಕೀಲರು ಈ ಬಗ್ಗೆ ಪೊಲೀಸರನ್ನು ಪ್ರಶ್ನಿಸಿದಾಗ ಯಾವುದೇ ಎಫ್‌ಐಆರ್ ದಾಖಲಿಸದೇ ಅಕ್ರಮವಾಗಿ ಬಂಧಿಸಿದ್ದಾರೆ’ ಎಂದು ತಿಳಿಸಿದ್ದಾರೆ.

ಆಯೋಗದ ಸದಸ್ಯರು ಮಂಗಳವಾರ ಠಾಣೆಗೆ ಭೇಟಿ ನೀಡಿ ಪ್ರಕರಣದ ಮಾಹಿತಿ ಪಡೆದುಕೊಂಡರು.

ಪೊಲೀಸ್ ಬಲೆಗೆ ಹಸು ಕಳ್ಳರು

ಪ್ರಜಾವಾಣಿ ವಾರ್ತೆ



ಫೈರೋಜ್ ಬೇಗ್



ಸೈಯದ್ ರಿಜ್ವಾನ್

ಬೆಂಗಳೂರು: ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಹಸು ಹಾಗೂ ಕುರಿಗಳನ್ನು ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ತಲಘಟ್ಟಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಫೈರೋಜ್ ಬೇಗ್ (38) ಹಾಗೂ ಸೈಯದ್ ರಿಜ್ವಾನ್(33) ಬಂಧಿತರು. ಸಾಗಣೆಗೆ ಬಳಸುತ್ತಿದ್ದ ಎರಡು ವಾಹನ ಹಾಗೂ ₹1 ಲಕ್ಷ ನಗದನ್ನು ಬಂಧಿತರಿಂದ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ಹೊಸಹಳ್ಳಿಯ ನಿವಾಸಿಯೊಬ್ಬರು ನೀಡಿದ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಗಳನ್ನು ಚಿಕ್ಕಮಗಳೂರು ಹಾಗೂ ನಗರದ ಸರ್ಜಾಪುರ ರಸ್ತೆಯಲ್ಲಿ ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದರು.

‘ಹೊಸಹಳ್ಳಿಯ ದೂರುದಾರರ ಕೊಟ್ಟಿಗೆಯಿಂದ ನಾಲ್ಕು ಹಸುಗಳನ್ನು ಕಳ್ಳತನ ಮಾಡಿದ್ದರು. ಕದ್ದ ಹಸುಗಳನ್ನು ಚಿಕ್ಕಮಗಳೂರಿಗೆ ಕೊಂಡೊಯ್ದು ಮಾರಾಟ ಮಾಡಿದ್ದರು. ಹಸುಗಳನ್ನು ಸಾಗಣೆ ಮಾಡಲು ಬಳಸಿದ್ದ ವಾಹನಗಳನ್ನು ಕೆಂಗೇರಿಯ ದರ್ಗಾದ ಬಳಿ ನಿಲ್ಲಿಸಿದ್ದರು. ಅಲ್ಲಿಂದ ಕಾರುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಹಸು ಹಾಗೂ ಕುರಿಗಳನ್ನು ಖರೀದಿಸಿದ್ದವರನ್ನು ಠಾಣೆಗೆ ಕರೆ ತಂದು, ವಿಚಾರಣೆ ನಡೆಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳ ಬಂಧನದಿಂದ ಹಸು ಹಾಗೂ ಕುರಿಗಳ ಕಳ್ಳತನಕ್ಕೆ ಸಂಬಂಧಿಸಿದಂತೆ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಮೂರು ಹಾಗೂ ಸುಬ್ರಮಣ್ಯಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎರಡು ಪ್ರಕರಣಗಳು ಪತ್ತೆ ಆಗಿವೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿನ್ನದ ಸರ ಕಸಿದು ಪರಾರಿ: ಸೆರೆ

ಬೆಂಗಳೂರು: ರಸ್ತೆಯಲ್ಲಿ ನಡೆದು ತೆರಳುತ್ತಿದ್ದ ಯುವತಿಯ ಚಿನ್ನದ ಸರ ಕಸಿದು ಪರಾರಿಯಾಗಿದ್ದ ಆರೋಪಿ, ಆರ್.ಟಿ.ನಗರ ನಿವಾಸಿ ಮೊಹಮ್ಮದ್ ಮೆಹ್ರಾಜ್(23) ಎಂಬಾತನನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹2.25 ಲಕ್ಷ ಮೌಲ್ಯದ 10 ಗ್ರಾಂ ತೂಕದ ಚಿನ್ನದ ಸರ ಮತ್ತು ಎರಡು ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

ದೂರುದಾರೆ ಕವಿತಾ ಅವರು ಜನವರಿ 1ರಂದು ಬಿಟಿಎಂ ಲೇಔಟ್‌ನ ಮುಖ್ಯ ರಸ್ತೆಯಲ್ಲಿ ನಡೆದು ತೆರಳುತ್ತಿದ್ದರು. ಆಗ ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಬಂದಿದ್ದ ಆರೋಪಿ, ಕವಿತಾ ಅವರ ಬಳಿಯಿದ್ದ 13 ಗ್ರಾಂ ತೂಕದ ಚಿನ್ನದ ಸರ ಕಸಿದುಕೊಂಡು ಪರಾರಿಯಾಗಿದ್ದ. ಕವಿತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ‘ಮೊಹಮ್ಮದ್ ಮೆಹ್ರಾಜ್ ರಸ್ತೆ ಬದಿಯಲ್ಲಿ ನಿಲುಗಡೆ ಮಾಡುತ್ತಿದ್ದ ಬೈಕ್‌ಗಳನ್ನು ಕಳ್ಳತನ ಮಾಡುತ್ತಿದ್ದ. ಕದ್ದ ಬೈಕ್‌ನಲ್ಲೇ ಸುತ್ತಾಟ ನಡೆಸಿ, ಕಳ್ಳತನ ಮಾಡುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಸುಳ್ಳು ದೂರು ನೀಡಿದರೆ ಕ್ರಮ’

ಪ್ರಜಾವಾಣಿ ವಾರ್ತೆ



ಬಿ.ದಯಾನಂದ

ಬೆಂಗಳೂರು: ‘ಸುಳ್ಳು ದೂರು ನೀಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗು-ವುದು’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಎಚ್ಚರಿಸಿದರು.

‘ನಗರ ವ್ಯಾಪ್ತಿಯಲ್ಲಿ ಕಳೆದ ಐದು ವರ್ಷಗಳಲ್ಲಿ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ ದೂರುಗಳ ಪೈಕಿ, ಆರು ಸುಳ್ಳು ದೂರುಗಳು ಎಂಬುದು ತನಿಖೆಯಿಂದ ಗೊತ್ತಾಗಿದೆ. ಆ ರೀತಿಯ ಸುಳ್ಳು ನೀಡಿದ್ದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಕ್ರಮ ತೆಗೆದುಕೊ-ಳ್ಳಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಈ ಆರರಲ್ಲಿ ಪೈಕಿ ನಾಲ್ಕು ಪ್ರಕರಣಗಳಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿದೆ. ಎರಡು ಪ್ರಕರಣಗಳಲ್ಲಿ ಶಿಕ್ಷೆ ಘೋಷಿಸಲಾಗಿದೆ. ಉಳಿದೆರಡು ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲು ಕೋರ್ಟ್‌ಗೆ ಮನವಿ ಸಲ್ಲಿಸಲಾಗಿದೆ ಎಂದು ಹೇಳಿದರು.

ಮೃತದೇಹ ಪತ್ತೆ: ಕೊಲೆ ಶಂಕೆ

ಬೆಂಗಳೂರು: ಆರ್.ಆರ್. ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕೃಷ್ಣ ಗಾರ್ಡನ್ ರಸ್ತೆಯಲ್ಲಿರುವ ಖಾಲಿ ಪ್ರದೇಶದಲ್ಲಿ 25ರಿಂದ 30 ವರ್ಷ ಅಂದಾಜು ವಯಸ್ಸಿನ ವ್ಯಕ್ತಿಯ ಮೃತದೇಹ ಪತ್ತೆಯಾಗಿದ್ದು, ಕೊಲೆಯ ಶಂಕೆ ವ್ಯಕ್ತವಾಗಿದೆ.

ಮುಖದ ಭಾಗದಲ್ಲಿ ಗಾಯವಾಗಿದೆ. ಮೃತದೇಹವನ್ನು ಶವಾಗಾರದಲ್ಲಿ ಇಡಲಾಗಿದೆ. ಮೃತ ವ್ಯಕ್ತಿಯ ಕುಟುಂಬಸ್ಥರು ಪತ್ತೆಯಾಗಿಲ್ಲ. ಪ್ರಕರಣದ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಗ್ರಾ.ಪಂ ಅಧ್ಯಕ್ಷೆ ಆತ್ಮಹತ್ಯೆ: ಪತಿ ಸೆರೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರುತಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತ ಮಹಿಳೆಯ ಪತಿ ಗೋಪಾಲಕೃಷ್ಣ ಅವರನ್ನು ಬಾಗಲಗುಂಟೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ನ್ಯಾಯಾಧೀಶರ ಎದುರು ಆರೋಪಿಯನ್ನು ಹಾಜರುಪಡಿಸಿದ ಪೊಲೀಸರು, ಹೆಚ್ಚಿನ ವಿಚಾರಣೆಗಾಗಿ ನಾಲ್ಕು ದಿನ ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ.

ಎಂ.ಎಸ್.ರಾಮಯ್ಯ ಬಡಾವಣೆಯ ಮನೆಯಲ್ಲಿ ಸೋಮವಾರ ಸಂಜೆ ಶ್ರುತಿ ಅವರು ಮಗಳನ್ನು ಕೊಂದು ನಂತರ ತಾವೂ ಆತ್ಮಹತ್ಯೆ ಮಾಡಿಕೊಂಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಶ್ರುತಿ ಬರೆದಿದ್ದ ಮರಣಪತ್ರ ಆಧರಿಸಿ ಗೋಪಾಲಕೃಷ್ಣ ಅವರನ್ನು ಬಂಧಿಸಿದ್ದಾರೆ. ಆರೋಪಿಯ ತಾಯಿ ಸುಮಾ ಅವರು ತಲೆಮರೆಸಿಕೊಂಡಿದ್ದಾರೆ.

ಶ್ರುತಿ ಅವರು ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ಬ್ಯಾಡನೂರು ಗ್ರಾಮ ಪಂಚಾಯಿತಿಯ ಹಾಲಿ ಅಧ್ಯಕ್ಷೆಯಾಗಿದ್ದರು. ಪಾವಗಡ ತಾಲ್ಲೂಕಿನ ಗುಂಡಾರಲಹಳ್ಳಿಯ ಜಿ.ಗೋಪಾಲಕೃಷ್ಣ ಎಂಬುವವರನ್ನು ಪ್ರೀತಿಸಿ 10 ವರ್ಷಗಳ ಹಿಂದೆ ವಿವಾಹವಾಗಿದ್ದರು.

‘ಪತಿಗೆ ಬೇರೊಬ್ಬ ಮಹಿಳೆಯ ಜತೆಗೆ ಸಲಿಗೆ ಇತ್ತು. ಇದರಿಂದ ಬೇಸರಗೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ’ ಎಂದು ಶ್ರುತಿ ಮರಣ ಪತ್ರ ಬರೆದಿಟ್ಟಿದ್ದರು ಎಂದು ಮೂಲಗಳು ತಿಳಿಸಿವೆ.

ಪಿಂಚಣಿ ಹೊರೆ: ಗ್ರಾಹಕರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಸರಬರಾಜು ಕಂಪನಿಗಳ (ಎಸ್ಕಾಂ) ನೌಕರರ ಪಿಂಚಣಿ ಹೊರೆಯನ್ನು ಇಷ್ಟು ವರ್ಷ ಸರ್ಕಾರವೇ ಭರಿಸುತ್ತಿತ್ತು. 2021ರಿಂದ ಪೂರ್ವಾನ್ವಯ ಆಗುವಂತೆ ಗ್ರಾಹಕರ ಮೇಲೆ ವರ್ಗಾಯಿಸುವುದು ಕಾನೂನುಬಾಹಿರ ಎಂದು ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳು ವಾದಿಸಿವೆ.

ಮುಂದಿನ ಮೂರು ವರ್ಷಗಳಿಗೆ ವಿದ್ಯುತ್ ದರ ಪರಿಷ್ಕರಣೆಗಾಗಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಸಲ್ಲಿಕೆಯಾಗಿರುವ ಪ್ರಸ್ತಾವಗಳ ಕುರಿತು ಸಾರ್ವಜನಿಕ ಅಹವಾಲುಗಳ ವಿಚಾರಣೆ ಸೋಮವಾರ ನಡೆಯಿತು. ಈ ವೇಳೆ ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯ ಮಹಾಸಂಸ್ಥೆ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ ತಮ್ಮ ಆಕ್ಷೇಪಣೆಗಳನ್ನು ಮಂಡಿಸಿದವು.

‘1999ರಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವನ್ನು (ಕೆಪಿಟಿಸಿಎಲ್) ವಿಭಜಿಸಿದ ನಂತರದ ಬದಲಾವಣೆಗಳಿಂದಾಗಿ ಈಗ ಒಮ್ಮೆಲೆ ₹10 ಸಾವಿರ ಕೋಟಿಯಷ್ಟು ಮೊತ್ತದ ಹೊರೆಯನ್ನು ಗ್ರಾಹಕರ ಮೇಲೆ ವರ್ಗಾಯಿಸಲು ತೀರ್ಮಾನಿಸಿದೆ. ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ’ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಂಘಟನೆಗಳು ಕೆಇಆರ್‌ಸಿ ಮುಂದೆ ಆಕ್ಷೇಪಣೆ ಸಲ್ಲಿಸಿದವು.



ನೀರಡಿಕೆಗೆ ಕಲ್ಲಂಗಡಿ

ನಗರದಲ್ಲಿ ತಾಪಮಾನ ಹೆಚ್ಚಳವಾಗುತ್ತಿರುವುದರಿಂದ ಬಿಸಿಲಿನ ಬೇಗೆ ನೀಗಿಸಿಕೊಳ್ಳಲು ಜನರು ಕಲ್ಲಂಗಡಿ ಹಣ್ಣಿನ ಮೊರೆಹೋಗುತ್ತಿದ್ದಾರೆ. ಮಲ್ಲೇಶ್ವರದ ರೈಲು ನಿಲ್ದಾಣದ ಬಳಿ ಇರಿಸಲಾಗಿದ್ದ ಹಳದಿ ಕಲ್ಲಂಗಡಿ ಹಣ್ಣುಗಳನ್ನು ಜನರು ಮಂಗಳವಾರ ಖರೀದಿಸಿದರು

ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಸೇಫಥಾನ್ ಮಾರ್ಚ್ 1ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಇಲಾಖೆಯ ವತಿಯಿಂದ ರಸ್ತೆ ಸುರಕ್ಷತೆ ಕುರಿತು ಸಾರ್ವ-ಜನಿಕರಲ್ಲಿ ಅರಿವು ಮೂಡಿಸುವುದು ಮತ್ತು ರಸ್ತೆಗಳನ್ನು ಸುರಕ್ಷಿತಗೊಳಿಸುವ ಉದ್ದೇಶದಿಂದ ಮಾರ್ಚ್ 1ರಂದು ಬೆಳಿಗ್ಗೆ 5ಕ್ಕೆ ಕಂಠೀರವ ಕ್ರೀಡಾಂಗಣದಲ್ಲಿ 5 ಕಿ.ಮೀವರೆಗಿನ ಸೇಫಥಾನ್ ಕಾರ್ಯ-ಕ್ರಮಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಲಿದ್ದಾರೆ.

ಸೇಫಥಾನ್‌ನ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ರಾಮಲಿಂಗಾರೆಡ್ಡಿ, ‘ರಸ್ತೆ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸಬೇಕು, ಅಕ್ಕಪಕ್ಕ ಸಂಚರಿಸುವ ವಾಹನಗಳ ಕುರಿತು ನಿಗಾ ವಹಿಸಬೇಕು, ಸಂಚಾರ ದಟ್ಟಣೆ, ಸಿಗ್ನಲ್ ದಾಟುವಾಗ ಸಾರ್ವಜನಿಕರು ಜಾಗ್ರತೆ ವಹಿಸಬೇಕು ಎಂಬ ಸಂದೇಶ ರವಾನೆಗಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದರು.

ಈ ಸೇಫಥಾನ್‌ನಲ್ಲಿ ನಡಿಗೆ, ಓಟ ಮತ್ತು ಸೈಕ್ಲಥಾನ್ ಕೂಡ ಇರಲಿವೆ. ಸಾರ್ವಜನಿಕರು, ವಿದ್ಯಾರ್ಥಿಗಳು ಸೇರಿದಂತೆ ಎಲ್ಲರೂ ಭಾಗವ-ಹಿಸಬಹುದು. ಆಸಕ್ತರು www.saferoadskarnataka.com ವೆಬ್‌ಸೈಟ್‌ಗೆ ಭೇಟಿ ನೀಡಿ ಹೆಸರು ನೋಂದಣಿ ಮಾಡಿಕೊಳ್ಳಬಹುದು.

ಬೇಡಿಕೆ ಈಡೇರಿಸಲು ಅತಿಥಿ ಶಿಕ್ಷಕರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘದ ನೇತೃತ್ವದಲ್ಲಿ ಅತಿಥಿ ಶಿಕ್ಷಕರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಅತಿಥಿ ಶಿಕ್ಷಕರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ಹೊರಹಾಕಿದರು.

ಪ್ರತಿಭಟನಾ ಸ್ಥಳಕ್ಕೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಭೇಟಿ ಮಾಡಿ ಅಹವಾಲು ಆಲಿಸಿದರು. ನಂತರ ಮಾತನಾಡಿದ ಅವರು, ‘ರಾಜ್ಯ ಸರ್ಕಾರವು ಮಕ್ಕಳ ಭವಿಷ್ಯ ರೂಪಿಸುವ ಶಿಕ್ಷಕರ ಜೀವನದ ಜೊತೆ ಚೆಲ್ಲಾಟ ಆಡುತ್ತಿದೆ. ಇದು ಅಕ್ಷಮ್ಯ ಅಪರಾಧ’ ಎಂದು ಹೇಳಿದರು. ‘ವಿಶ್ವವಿದ್ಯಾಲಯಗಳಿಗೆ ₹400 ಕೋಟಿ ಅನುದಾನ ಬಿಡುಗಡೆ ಮಾಡಬೇಕಿದೆ. ಆ ಅನುದಾನ ಕೊಡಲು ಸಾಧ್ಯವಾಗುತ್ತಿಲ್ಲ ಎನ್ನುವ ಕಾರಣಕ್ಕಾಗಿ ಹಿಂದಿನ ಸರ್ಕಾರದ ಮೇಲೆ ಗೂಬೆ ಕೂರಿಸಿ ಹೊಸ ವಿ.ವಿಗಳನ್ನೇ ಮುಚ್ಚಿಸಲು ಕಾಂಗ್ರೆಸ್ ನೇತೃತ್ವದ ಸರ್ಕಾರ ಮುಂದಾಗಿದೆ’ ಎಂದು ಹೇಳಿದರು.


‘ರಾಜ್ಯ ಸರ್ಕಾರವು ಅತಿಥಿ ಶಿಕ್ಷಕರ ವಿಚಾರದಲ್ಲಿ ಮಾನವೀಯತೆಯಿಂದ ನಡೆದುಕೊಳ್ಳಬೇಕಿತ್ತು’ ಎಂದು ಹೇಳಿದರು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ‘ಮಕ್ಕಳ ಭವಿಷ್ಯ ರೂಪಿಸುವ ಕೆಲಸ ಮಾಡುವ ನಿಮ್ಮ ವೇತನ ಹೆಚ್ಚಳದ ಬೇಡಿಕೆ ಸರಿ ಇದೆ. ನಿಮ್ಮ ಬೇಡಿಕೆಗಳಿಗೆ ಸಹಮತ ಇದೆ’ ಎಂದು ತಿಳಿಸಿದರು. ‘ಬೇಡಿಕೆ ಈಡೇರಿಸುವಂತೆ ಕೋರಿ ಮುಖ್ಯಮಂತ್ರಿ, ಶಿಕ್ಷಣ ಸಚಿವರು ಮತ್ತು ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯುತ್ತೇನೆ. ಸದನದಲ್ಲೂ ಪ್ರಸ್ತಾಪಿಸಿ ಹೋರಾಟ ಮಾಡುತ್ತೇವೆ’ ಎಂದು ಭರವಸೆ ನೀಡಿದರು.



ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘದ ನೇತೃತ್ವದಲ್ಲಿ ಅತಿಥಿ ಶಿಕ್ಷಕರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು


ರಸ್ತೆ ಗುಂಡಿ ಮುಚ್ಚಲು ಸೂಚನೆ

ಬೆಂಗಳೂರು: ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ಪ್ರಮುಖ ರಸ್ತೆ, ವಾರ್ಡ್ ರಸ್ತೆಗಳಲ್ಲಿನ ಗುಂಡಿಗಳನ್ನು ತ್ವರಿತವಾಗಿ ಮುಚ್ಚುವಂತೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು. ಮಂಗಳವಾರ ನಡೆದ ‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಈ ಬಗ್ಗೆ ದೂರಿದರು.



ರೋಬೊಗಳ ನಿರ್ಮಾಣಕ್ಕೆ ಸಿಕ್ಕಿತು ಹೊಸವಸ್ತು

ಅಮೃತೇಶ್ವರಿ ಬಿ.



ಮನುಷ್ಯನಿಗೆ ಮೀರಿದ ಸಾಮರ್ಥ್ಯವಿದ್ದರೂ ರೋಬೊಗಳು ಯಂತ್ರಗಳಷ್ಟೇ. ಜೀವಿಗಳು ಸತ್ತರೆ ಮಣ್ಣಲ್ಲಿ ಕರಗಿ ಹೋಗುತ್ತವೆ. ಆದರೆ ರೋಬೊಗಳು? ಅರ್ಥಾತ್, ಅವು ತಮ್ಮ ಜೀವನದುದ್ದಕ್ಕೂ ಸಾಕಷ್ಟು ತ್ಯಾಜ್ಯಗಳನ್ನು ಉತ್ಪಾದಿಸುವುದಲ್ಲದೆ ಮಣ್ಣಿನಲ್ಲಿ ಕರಗುವುದೂ ಇಲ್ಲ. ಒಮ್ಮೆ ರೋಬೊವಿನ ಆಯುಸ್ಸು ಮುಗಿದರೆ ಇತರೆ ಎಲೆಕ್ಟ್ರಾನಿಕ್ ಸಾಧನಗಳಂತೆ ಕೆಲಸಕ್ಕೆ ಬಾರದ ತ್ಯಾಜ್ಯವಾಗಿಬಿಡುತ್ತವೆ. ಜೈವಿಕವಾಗಿಯೂ ವಿಘಟನೆಯಾಗದು. ಇ-ತ್ಯಾಜ್ಯಗಳ ಗುಂಪಿಗೆ ಹೊಸ ಸದಸ್ಯನ ಸೇರ್ಪಡೆಯಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ತ್ಯಾಜ್ಯ ನಿರ್ವಹಣೆಯೇ ದೊಡ್ಡ ಕಂಟಕವಾಗಿ ಪರಿಣಮಿಸಿದೆ.

ಇಂಥ ಗಂಭೀರ ಸಮಸ್ಯೆಗೆ ಚೀನಾದ ವಿಜ್ಞಾನಿಗಳು ಪರಿಹಾರವನ್ನು ಪತ್ತೆ ಮಾಡಿದ್ದಾರಂತೆ. ಅದುವೇ ರೋಬೊ ತಯಾರಿಕೆಗಾಗಿ ಜೈವಿಕ ವಿಘಟನೆಯಾಗಬಲ್ಲಂತಹ ನವೀನ ಮಾದರಿಯ ವಸ್ತು. ಈ ವಸ್ತುವಿನಿಂದ ರೋಬೊವನ್ನು ಅಭಿವೃದ್ದಿಪಡಿಸಿದರೆ ಆಗ ರೋಬೊ-ತ್ಯಾಜ್ಯ ಶೂನ್ಯವಾಗುತ್ತದೆಯಂತೆ.

ಇದನ್ನು ಸೆಲ್ಯುಲೋಸ್, ಸೋಡಿಯಂ ಕ್ಲೋರೈಡ್ ಮತ್ತು ಜೆಲಾಟಿನ್‌ಗಳನ್ನು ಬಳಸಿಕೊಂಡು ಸಿದ್ಧಪಡಿಸಿದ್ದಾರೆ. ಈ ಆರ್ಗಾನಿಕ್ ವಸ್ತುಗಳಿಂದ ತಯಾರಾದ ಆರ್ಗನೋಜೆಲ್‌ಗಳನ್ನು ಬಳಸಿಕೊಂಡು ವಿಶೇಷ ವಸ್ತುವೊಂದನ್ನು ಚೀನೀಯರು ತಯಾರಿಸಿದ್ದಾರೆ. ಇದು ಪ್ಲಾಸ್ಟಿಕ್, ಉಕ್ಕು, ಕಬ್ಬಿಣ ಇವುಗಳಂತೆ ರೋಬೊಗಳನ್ನು ತಯಾರಿಸಲೆಂದೇ ರೂಪಿಸಿರುವ ವಿಶೇಷ ವಸ್ತು. ಇದು ಮುಟ್ಟಲು ನಮ್ಯವಾಗಿರುತ್ತವೆ. ಜೊತೆಗೆ ಸದೃಢವಾಗಿಯೂ ಇರುತ್ತವೆ.

ಇವುಗಳಿಗಿರುವ ನಮ್ಯತೆ (Flexibility) ಯಿಂದಾಗಿ ಸಾಫ್ಟ್ ರೋಬೊಟಿಕ್ ವ್ಯವಸ್ಥೆಯಲ್ಲಿ ಬಳಸಿಕೊಳ್ಳಬಹುದು. ಮುಖ್ಯವಾಗಿ ವೈದ್ಯಕೀಯ ಕ್ಷೇತ್ರದಲ್ಲಿ ಇವುಗಳ ಉಪಯೋಗವನ್ನು ಹೆಚ್ಚಾಗಿ ನಿರೀಕ್ಷಿಸಬಹುದು. ಕೊನೆಯಲ್ಲಿ ಅವುಗಳ ಕೆಲಸದ ಕ್ಷಮತೆ ಮುಗಿದ ಮೇಲೆ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ವಿಸರ್ಜನೆಯನ್ನು ಮಾಡಬಹುದು. ಅಥವಾ ಅವನ್ನೆಲ್ಲಾ ಸಂಗ್ರಹಿಸಿ, ಸಂಸ್ಕರಿಸಿ, ರೋಬೊಗಳ ಮರುಉತ್ಪಾದನೆ ಮಾಡಬಹುದು. ಇದನ್ನು 'ಕ್ಲೋಸ್ಡ್ ಲೂಪ್ ಸಸ್ಟೈನಬಲ್ ರೋಬಾಟಿಕ್' ಎನ್ನುತ್ತಾರೆ.

ಈ ಮಾದರಿಯನ್ನು ಸಿದ್ಧಪಡಿಸಲು ಸೆಲ್ಯುಲೋಸನ್ನು ಸೋಡಿಯಂ ಹೈಡ್ರಾಕ್ಸೈಡಿನ ಜಲೀಯ ದ್ರಾವಕ ಅಥವಾ ಯೂರಿಯಾ ದ್ರಾವಕದಲ್ಲಿ ಕರಗಿಸಿ ಪಾರದರ್ಶಕ ದ್ರಾವಣವನ್ನು ತಯಾರಿಸಿಕೊಂಡಿದ್ದಾರೆ. ನಂತರ ಅದನ್ನು 'ನಿರಯಾನೀಕರಿಸಿದ' (De-ionised) ನೀರಿನಲ್ಲಿ ಮುಳುಗಿಸಲಾಗಿದೆ. ಈ ಹಂತದಲ್ಲಿ ಒಂದಿಷ್ಟು ಸೆಲ್ಯುಲೋಸ್‌ಕಣಗಳು ಕೂಡಿಕೊಂಡು ನ್ಯಾನೋಫೈಬರುಗಳಾಗಿ ಮಾರ್ಪಾಡಾಗುತ್ತವೆ; ಒಂದಿಷ್ಟು ಸೆಲ್ಯುಲೋಸ್ ಕ್ರಿಸ್ಟಲೈಟ್ ಹೈಡ್ರೇಟ್‌ಗಳಾಗಿ ರೂಪುಗೊಳ್ಳುತ್ತವೆ. 'ರೀಜನರೇಷನ್ ಪ್ರೊಸೆಸ್' ಎನ್ನುವ ಈ ಹಂತದಲ್ಲಿ ಹೈಡ್ರೋಜನ್ ಬಾಂಡುಗಳ ರಚನೆಯಿಂದಾಗಿ ಸೆಲ್ಯುಲೋಸ್‌ಗಳ ಅಡ್ಡಸಂಯೋಜನೆಯಾಗಿ ಹೈಡ್ರೋಜೆಲ್ ಉತ್ಪಾದನೆಯಾಗುತ್ತದೆ. ಸೆಲ್ಯುಲೋಸು ಸರಪಳಿಗಳ 'ಅರೆ-ಅನಮ್ಯ ಗುಣ (Semi Rigid) ಮತ್ತು ಹೈಡ್ರೋಜನ್ ಬಂಧಗಳಿಂದಾಗಿ ಸದೃಢ ಸೆಲ್ಯುಲೋಸ್‌ಹಾಳೆಗಳು ತಯಾರಾಗುತ್ತವೆ. ಆದರೆ ಹೈಡ್ರೋಜನ್ ಬಂಧಗಳ ನಡುವಿನ ಪರಸ್ಪರ ರಾಸಾಯನಿಕ ಸಂಬಂಧದಿಂದಾಗಿ ಇವುಗಳ ಸರಪಳಿ ವಿಸ್ತರಣೆಯಲ್ಲಿ ತೊಡಕುಂಟಾಗುತ್ತದೆ. ಇದನ್ನು ತಪ್ಪಿಸಲು ಗ್ಲಿಸರಾಲನ್ನು ಸೇರಿಸುತ್ತಾರೆ. ಆಗ ದೊರೆತ ಪಾರದರ್ಶಕವಾದ ಸೆಲ್ಯುಲೋಸ್ ಹಾಳೆಯನ್ನು ಒಣಗಿಸಿ, ನಂತರ ಉಪ್ಪಿನ (Sodium Chloride) ಅಣುಗಳನ್ನು ಸೇರಿಸಿದ ಜೆಲಾಟಿನ್ ಬಳಸಿ ಆರ್ಗನೋಜೆಲ್ ತಯಾರಿಸಿಕೊಂಡು ಸೆಲ್ಯುಲೋಸ್ ಹಾಳೆಗಳ ಮೇಲೆ ಸಂವೇದನಾ ಪದರವಾಗಿ ಲೇಪಿಸಲಾಗುತ್ತದೆ. ಆಗ ಗಟ್ಟಿಯಾದ ಸೆಲ್ಯುಲೋಸ್‌ಹಾಳೆಗಳು ಸಿದ್ಧ! ಸೆಲ್ಯುಲೋಸ್, ರೋಬೊಗಳಿಗೆ ಅವಶ್ಯವಾಗಿರಬೇಕಾದ ಸದೃಢ ರಚನೆಯನ್ನು ಒದಗಿಸಿದರೆ, ಸ್ಥಿತಿಸ್ಥಾಪಕ ಗುಣವುಳ್ಳ (Elasticity) ಜೆಲಾಟಿನ್ ಆಧಾರಿತ ಆರ್ಗನೋಜೆಲ್ ನಮ್ಯ ಲಕ್ಷಣಗಳನ್ನು ಹೊಂದಿದ್ದು ಇವೆರಡರ ಸಂಯೋಜನೆ ಸಾಫ್ಟ್ ರೋಬೋಟಿಕ್ಸ್ ಕ್ಷೇತ್ರಕ್ಕೆ ಅದ್ಭುತ ಕೊಡುಗೆಯಾಗಿದೆ.

ಜೊತೆಗೆ ಇವುಗಳ ಸದೃಢತೆಯನ್ನು ಪರೀಕ್ಷಿಸಿದಾಗ ಗಮನಾರ್ಹ ಫಲಿತಾಂಶವೂ ಸಿಕ್ಕಿದೆಯಂತೆ. ಮುಂದೆ ಸೆಲ್ಯುಲೋಸ್ ಹಾಳೆಗಳು ಮಣ್ಣಿನಲ್ಲಿ ಹೇಗೆ ಕರಗುತ್ತದೆ ಎಂದು ಪರೀಕ್ಷಿಸಿದ್ದಾರೆ. ಇದನ್ನು ಖಚಿತಪಡಿಸಿಕೊಳ್ಳಲು ಕಾಗದ ಮತ್ತು ಒರಿಗಾಮಿ ಮಾದರಿಗಳಲ್ಲಿ ಸಾಮಾನ್ಯವಾಗಿ ಬಳಸುವ ಪಾಲಿಇಥಿಲೀನ್ ಟೆರೆಪ್ತಲೇಟ್(ಪಿಇಟಿ)ಗಳ ವಿಘಟನೆಯೊಂದಿಗೆ ಹೋಲಿಸಿ ನೋಡಿದ್ದಾರೆ. ಸೆಲ್ಯುಲೋಸ್ ಹಾಗೂ ಕಾಗದ ಮಣ್ಣಿನಲ್ಲಿ ಕರಗಿ, 'ಪಿಇಟಿ'ಯು ಹಾಗೇ ಉಳಿದುಕೊಂಡಿತಂತೆ.

ಈಗಾಗಲೇ ಒರಿಗಾಮಿ ರೋಬೊಗಳನ್ನು ತಯಾರಿಸಿಯೂ ನೋಡಿದ್ದಾರೆ, ಚೀನೀ ವಿಜ್ಞಾನಿಗಳು. ಇವು ಹಿಗ್ಗುವ, ಕುಗ್ಗುವ ಮತ್ತು ಎಲ್ಲಾ ದಿಕ್ಕುಗಳಲ್ಲಿಯೂ ಬಾಗಬಲ್ಲಂತಹ ಸಾಮರ್ಥ್ಯವುಳ್ಳವಂತೆ. ಅಂತೂ ತ್ಯಾಜ್ಯವನ್ನು ತಗ್ಗಿಸುವ ಪರಿಸರಸ್ನೇಹಿ ರೋಬೊಗಳನ್ನು ತಯಾರಿಸಲು ಪರ್ಯಾಯವೊಂದು ರೂಪುಗೊಂಡಿದೆ.

ಆದರೆ ಇವುಗಳ ಹೆಚ್ಚಿನ ಪ್ರಮಾಣದ ಉತ್ಪಾನೆಯಾಗಬೇಕಿರುವುದು ಬಾಕಿಯಿದೆ. ಮುಂದೆ ಈ ವಸ್ತುವನ್ನು ಬಳಸಿಕೊಂಡು ಕಠಿಣವಾದ ಕೆಲಸಗಳನ್ನು ಮಾಡಬಲ್ಲಂಥ ಬಿರುಸಾದ, ವಿದ್ಯುತ್ವಾಹಕವಾದ, ಸುಸ್ಥಿರ ಹಾಗೂ ಸ್ವಯಂ ಸಂವೇದಿ ರೋಬೊಗಳನ್ನು ಅಭಿವೃದ್ದಿಪಡಿಸಬೇಕಿದೆ. ಇಂಥ ರೋಬೊಗಳ ಕಾರ್ಯಕ್ಷಮತೆಯನ್ನೂ ಪರೀಕ್ಷಿಸಬೇಕಿದೆ ಎನ್ನುತ್ತಾರೆ, ವಿಜ್ಞಾನಿಗಳು.

ದೃಢವಾದ ಸೆಲ್ಯುಲೋಸ್‌ಹಾಳೆಗಳು ಮತ್ತು ಜೆಲಾಟಿನ್-ಉಪ್ಪಿನ ಆರ್ಗನೋಜೆಲ್ ಇವುಗಳಿಂದ ಮಾಡಿದ ಈ ವಿಶೇಷ ವಸ್ತುವು, ಜೈವಿಕವಾದರೂ ಬಹಳ ಸದೃಢವಾಗಿದ್ದು ರೋಬೊನಂತೆ ಕೆಲಸ ಮಾಡುವ ಬಾಹುಬಲವನ್ನೂ ಹೊಂದಿದೆ. ಅಷ್ಟೇ ಅಲ್ಲದೆ, ರೋಬೊ ಹಾಗೂ ಕಂಪ್ಯೂಟರುಗಳ ನಡುವಿನ ಸಂಪರ್ಕವೂ ಸುಲಭಸಾಧ್ಯವಿದೆಯಂತೆ. ಇವು ಸ್ವಯಂ ಸಂವೇದಿಗಳಾಗಿದ್ದು ತಮ್ಮ ಒತ್ತಡ ಹಾಗೂ ಕುಂದುಕೊರತೆಗಳನ್ನು ಯಾವುದೇ ಹೆಚ್ಚುವರಿ ಸೆನ್ಸಾರ್‌ಗಳ ಸಹಾಯವಿಲ್ಲದೆ ತಾವೇ ಗುರುತಿಸಿಕೊಂಡು ನಿರ್ವಹಿಸಿಕೊಳ್ಳಬಲ್ಲವಂತೆ. ಈ ಒರಿಗಾಮಿ (ಸೆಲ್ಯುಲೋಸ್ ಆಧಾರಿತ) ಮಾದರಿಯು, ಸಾಫ್ಟ್ ರೋಬೋಟಿಕ್ಸ್‌ನಲ್ಲಿ ಬಳಸುತ್ತಿರುವ ಪ್ಲಾಸ್ಟಿಕ್ ಮತ್ತು ಸೆನ್ಸಾರ್‌ಗಳಿಗೆ ಉತ್ತಮ ಪರ್ಯಾಯವಾಗಬಲ್ಲದೆ ಎಂದು ಎದುರು ನೋಡೋಣ!



ಸ್ಟಾರ್ಟಪ್ ಕಂಪೆನಿಗಳು ಸೇಲ್ಸ್ ಡೆವಲಪ್‌ಮೆಂಟ್ ಪ್ರತಿನಿಧಿಗಳಿಗೆ ಬದಲಿಯಾಗಿ 'ಎಐ ಚಾಟ್‌ಬಾಟ್'ಗಳನ್ನು ಅಭಿವೃದ್ಧಿಪಡಿಸಿವೆ. ಆದರೆ, ಎಐಗೆ ಮನುಷ್ಯನ ಮಟ್ಟಕ್ಕೆ 'ಮಾನವೀಯತೆ' ಇನ್ನೂ ಬಂದಿಲ್ಲವಷ್ಟೆ!

ಎ.ಐ. 'ಸೇಲ್ಸ್ ರೆಪ್'

ಕೃಷ್ಣ ಭಟ್

ಕಳೆದ ಒಂದೂವರೆ ವರ್ಷದಿಂದ ಜನರೇಟಿವ್ ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ನಲ್ಲಿ ಅಪಾರ ಬೆಳವಣಿಗೆಗಳು ಉಂಟಾಗಿವೆ. ಹೊಸ ಹೊಸ ಕಂಪೆನಿಗಳು ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಅನ್ನು ಅಭಿವೃದ್ಧಿಪಡಿಸುವ ಹಲವು ಹಂತಗಳಲ್ಲಿ ತೊಡಗಿಸಿಕೊಂಡಿವೆ. ಓಪನ್ ಎ.ಐ. ತನ್ನ ಮೊದಲ ಮಾದರಿಯನ್ನು 2023ರ ನವೆಂಬರ್‌ನಲ್ಲಿ ಬಿಡುಗಡೆ ಮಾಡಿದ ನಂತರ ಬಹಳ ಬೆಳವಣಿಗೆಗಳು ಘಟಿಸಿದವು. ಗೂಗಲ್ ತನ್ನ 'ಜೆನ್‌ಎಐ' ಅನ್ನು ಬಿಡುಗಡೆ ಮಾಡಿ, 'ಓಪನ್‌ಎಐ'ಗೆ ಸ್ಪರ್ಧೆ ಒಡ್ಡಿತು. ಅದರ ನಂತರ ಕೆಲವು ತಿಂಗಳುಗಳ ಹಿಂದೆ ಚೀನಾದ ಹೈ ಫ್ಲೈಯರ್ ಕಂಪೆನಿಯ ಮಾಲೀಕತ್ವದಲ್ಲಿ ಡೀಪ್‌ಸೀಕ್ ಅತಿ ಕಡಿಮೆ ವೆಚ್ಚದಲ್ಲಿ ತನ್ನದೇ ಮಾದರಿಯ ಜೆನ್‌ಎಐ ಅನ್ನು ಬಿಡುಗಡೆ ಮಾಡುವ ಮೂಲಕ ಹೊಸ ಕ್ರಾಂತಿಯನ್ನೇ ಉಂಟುಮಾಡಿತು.

ಆದರೆ, ಈ ಎಲ್ಲ ಬೆಳವಣಿಗೆಗಳಾಚೆಗೆ ಇದರ ನೈಜ ಮತ್ತು ವಾಣಿಜ್ಯ ಬಳಕೆಯಲ್ಲಿ ನಿರೀಕ್ಷಿಸಿದಷ್ಟು ಯಶಸ್ಸು ಕಾಣಿಸುತ್ತಿಲ್ಲ. ಅಂದರೆ, ಒಂದು ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್ ಬಿಡುಗಡೆಯಾದಾಗ ಅಥವಾ ನಂತರದಲ್ಲಿ ಅದನ್ನು ವಿವಿಧ ರೀತಿಯಲ್ಲಿ ಉಚಿತವಾಗಿ, ಸಣ್ಣ ಮಟ್ಟದಲ್ಲಿ ಬಳಕೆ ಮಾಡುತ್ತಿದ್ದಾರೆಯೇ ಹೊರತು ಅದು ವಾಸ್ತವಿಕ ಬಳಕೆಗೆ ಬಂದಿದ್ದು ಕಡಿಮೆ.

ಅಲ್ಲದೆ, ಇನ್ನೊಂದು ಸ್ತರದಲ್ಲಿ ಇದರ ಅತಿಯಾದ ಬಳಕೆಯೂ ನಡೆಯುತ್ತಿದೆ! ಕಳೆದ ಆರೆಂಟು ತಿಂಗಳಲ್ಲಿ ಹತ್ತಾರು ಸ್ಟಾರ್ಟಪ್ ಕಂಪೆನಿಗಳು ಸೇಲ್ಸ್ ಡೆವಲಪ್‌ಮೆಂಟ್ ಪ್ರತಿನಿಧಿಗಳಿಗೆ ಬದಲಿಯಾಗಿ 'ಎಐ ಚಾಟ್‌ಬಾಟ್'ಗಳನ್ನು ಅಭಿವೃದ್ಧಿಪಡಿಸಿವೆ. ಇವು ದೊಡ್ಡ ದೊಡ್ಡ ಕಂಪೆನಿಗಳಿಗೆ 'ನಿಮ್ಮ ಮಾರಾಟ ಪ್ರತಿನಿಧಿಗಳ ಬದಲಿಗೆ ಈ ಎಐ ಪ್ರತಿನಿಧಿಗಳನ್ನು ಬಳಸಿ. ಕಡಿಮೆ ಖರ್ಚಿನಲ್ಲಿ ಇವು ಮನುಷ್ಯರಷ್ಟೇ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ' ಎಂದು ಪ್ರಚಾರ ಮಾಡುತ್ತಿವೆ. ಇವರ ಪ್ರಚಾರದ ಸಾಮಗ್ರಿಗಳು, ವಿಡಿಯೊಗಳು ಎಷ್ಟು ಹೌದೆನ್ನಿಸುವಂತೆ ಇವೆಯೆಂದರೆ, ಕಂಪೆನಿಗಳು ನಂಬಿ ಈ ಎಐ ರೆಪ್ರೆಸೆಂಟೇಟಿವ್‌ಗಳನ್ನು ಖರೀದಿಸುತ್ತಿವೆ. ಈಗ ಎದ್ದಿರುವ ಎಐ ಅಲೆಯೂ ಅವರನ್ನು ಇನ್ನಷ್ಟು ಮನವೊಲಿಸುತ್ತಿವೆ.

ಆದರೆ, ಈ ಎಐ ಪ್ರತಿನಿಧಿಗಳನ್ನು ಬಳಸಲು ತೊಡಗಿದ ಕೆಲವೇ ವಾರಗಳಲ್ಲಿ ಕಂಪೆನಿಗಳಿಗೆ ಇವು ಮಾನವನಷ್ಟು ಪರಿಣಾಮಕಾರಿಯಲ್ಲ ಎಂಬುದು ತಿಳಿಯುತ್ತಿದೆ. ಹೀಗಾಗಿ, ಮತ್ತದೇ ಸೇಲ್ಸ್ ಟೀಮ್‌ಗೇ ಮೊರೆ ಹೋಗುತ್ತಿವೆ.

ಈ ಬಗ್ಗೆ ಉದ್ಯಮ ವಲಯದಲ್ಲಿ ಭಾರಿ ಚರ್ಚೆಯೂ ನಡೆದಿದೆ. ಕೆಲವರು ಈ ಎಐ 'ಎಸ್‌ಡಿಆರ್'ಗೆ ಎಂದರೆ, 'ಎಐ ಸೇಲ್ಸ್ ಡೆವಲಪ್‌ಮೆಂಟ್ ರೆಪ್ರೆಸೆಂಟೇಟಿವ್'ಗಳಿಗೇ ಎಲ್ಲವನ್ನೂ ಹಸ್ತಾಂತರಿಸಿ, ಇಡೀ ಮಾರಾಟ ವಿಭಾಗವನ್ನೇ ಬರಖಾಸ್ತುಗೊಳಿಸುವುದರ ಬದಲಿಗೆ, ಎಐ ಅನ್ನು ಕೆಲವು ಕಡೆಗಳಲ್ಲಿ ಬಳಸಿಕೊಂಡು ಉತ್ತಮವಾಗಿ ಸಂಶೋಧನೆ ನಡೆಸಿ, ಸಂಭಾವ್ಯ ಗ್ರಾಹಕರನ್ನು ಗುರುತಿಸಿ ಅವರ ಜೊತೆಗೆ ಮಾತುಕತೆ ನಡೆಸುವುದಕ್ಕೆ ಮನುಷ್ಯರನ್ನೇ ನಿಯೋಜಿಸುವುದು ಮತ್ತು ಮನುಷ್ಯರೇ ಮಾರಾಟದ ಅಂತಿಮ ನಿರ್ಧಾರವನ್ನು ಮಾಡುವುದು ಉತ್ತಮ ಎಂಬ ನಿಲುವಿಗೂ ಬಂದಿದ್ದಾರೆ.


ಸೇಲ್ಸ್ ಪಿಚ್‌ನಲ್ಲಿ ಮನುಷ್ಯರನ್ನೇ ಬಳಸಿಕೊಂಡು, ಡೇಟಾ ವಿಶ್ಲೇಷಣೆಯಲ್ಲಿ ಎಐ ಬಾಟ್‌ಗಳನ್ನು ಬಳಸಿಕೊಳ್ಳುವುದು ಹೆಚ್ಚು ಉತ್ತಮ ಎಂದು ಬಹಳ ಪರಿಣತರು ಅಭಿಪ್ರಾಯಪಟ್ಟಿದ್ದಾರೆ. ಅಷ್ಟೇ ಅಲ್ಲ, ಈಗ ತಲೆ ಎತ್ತಿರುವ ಹತ್ತಾರು ಎಐ ಸ್ಟಾರ್ಟಪ್‌ಗಳು ಎಐ ಎಸ್‌ಡಿಆರ್‌ಗಳನ್ನು ಮಾರಾಟ ಮಾಡುತ್ತಿದ್ದರೂ, ಇನ್ನು ಕೆಲವೇ ವರ್ಷಗಳಲ್ಲಿ ಅವು ಬಾಗಿಲು ಹಾಕಿಕೊಂಡು ಹೋಗುವ ಸಾಧ್ಯತೆಯೇ ಹೆಚ್ಚಿದೆ. ಏಕೆಂದರೆ, ಮಾನವನಿಗೆ ಸಂಪೂರ್ಣವಾಗಿ ಪರ್ಯಾಯವಾಗದೇ ಇರುವುದರಿಂದ ಆರಂಭದಲ್ಲಿ ಎಐ ಅಲೆಯಲ್ಲಿ ಕಂಪೆನಿಗಳು ಇದನ್ನು ಬಳಸಿದರೂ, ಅದರಿಂದ ಭಾರಿ ಪ್ರಯೋಜನವಾಗದು ಎಂದು ಕಂಡುಬರುತ್ತಿದ್ದಂತೆ ಈ ಎಐ ಎಸ್‌ಡಿಆರ್‌ಗಳನ್ನು ಬಿಟ್ಟು ಅಥವಾ ಭಾಗಶಃ ಅವುಗಳನ್ನು ಬಳಸಿಕೊಂಡು ಪ್ರಮುಖ ಸೇಲ್ಸ್ ನಿರ್ಧಾರಗಳಲ್ಲಿ ಮನುಷ್ಯರನ್ನೇ ಬಳಸಿಕೊಳ್ಳಲಿವೆ.

ಏನಿದು ಎಐ ಸೇಲ್ಸ್ ಪ್ರತಿನಿಧಿ?

ಸಾಮಾನ್ಯವಾಗಿ ಕಂಪೆನಿಗಳು ಸೇಲ್ಸ್‌ಗೆ ಲೀಡ್‌ಗಳು ಡಿಜಿಟಲ್ ರೂಪದಲ್ಲಿ ಪಡೆದುಕೊಳ್ಳುತ್ತವೆ. ನಾವು ಯಾವತ್ತೋ ಕಾರು ಇನ್ಶೂರೆನ್ಸ್ ಬಗ್ಗೆ ಹುಡುಕಿರುತ್ತೇವೆ. ನಮ್ಮ ಕಾರು ಇನ್ಶುರೆನ್ಸ್ ಮುಕ್ತಾಯವಾಗುವುದಕ್ಕೂ ಒಂದು ತಿಂಗಳು ಮೊದಲೇ ದೇಶದಲ್ಲಿ ಇರುವ ಎಲ್ಲ ಇನ್ಶುರೆನ್ಸ್ ಕಂಪೆನಿಗಳೂ ಒಮ್ಮೆ ಫೋನ್ ಮಾಡಿ, 'ನಮ್ಮ ಕಂಪೆನಿಯ ಇನ್ಶುರೆನ್ಸ್ ಅನ್ನೇ ಖರೀದಿ ಮಾಡಿ' ಎಂದು ದುಂಬಾಲು ಬೀಳುತ್ತವೆ. ಕಂಪೆನಿಗೆ ಸೇಲ್ಸ್ ಡೇಟಾ ವಿವಿಧ ಮೂಲದಿಂದ ಸಿಗುತ್ತವೆ. ಅದಕ್ಕೆ ವಿವಿಧ ಮಾನದಂಡಗಳನ್ನು ಹಾಕಿ, ಹೆಕ್ಕಿ ತೆಗೆದು, ಯಾರು ಸಂಭಾವ್ಯ ಗ್ರಾಹಕರು ಎಂಬುದನ್ನು ಕಂಡುಕೊಂಡು ಅವರನ್ನು ಸಂಪರ್ಕಿಸಿ, ತಮ್ಮ ಉತ್ಪನ್ನಗಳ ಬಗ್ಗೆಯೋ ಅಥವಾ ಸೇವೆಗಳ ಬಗ್ಗೆಯೋ ಅವರಿಗೆ ತಿಳಿಸುವ ಕೆಲಸವನ್ನು ಈ ಮಾರಾಟ ಪ್ರತಿನಿಧಿಗಳು ಮಾಡುತ್ತಾರೆ.

ಇಲ್ಲಿ ಎಐ ಪ್ರವೇಶಿಸಿದಾಗ ಈ ಅಷ್ಟೂ ಕೆಲಸವನ್ನು ಅಂದರೆ, ಡೇಟಾವನ್ನು ವಿಶ್ಲೇಷಿಸಿ, ಯಾರು ಸಂಭಾವ್ಯ ಗ್ರಾಹಕರು ಎಂಬುದನ್ನು ಗುರುತಿಸುವುದು ಮತ್ತು ಅವರಿಗೆ ಕರೆ ಮಾಡುವುದು ಅಥವಾ ಇಮೇಲ್ ಮೂಲಕ ಅವರನ್ನು ಸಂಪರ್ಕಿಸುವುದು ಅಥವಾ ಇತರ ವಿಧಾನದ ಮೂಲಕ ಅವರನ್ನು ಸಂಪರ್ಕಿಸುವುದೆಲ್ಲವನ್ನೂ ಎಐ ಮಾಡುತ್ತದೆ.

ಆದರೆ, ಮನುಷ್ಯನಲ್ಲಿರುವ ಸಂವೇದನೆಯನ್ನು ಅಥವಾ ಮಾನವೀಯ ಸ್ಪರ್ಶ ಈ ಸೇಲ್ಸ್ ಪಿಚ್‌ನಲ್ಲಿ ಮುಖ್ಯವಾಗಿರುತ್ತದೆ. ಎಐನಲ್ಲಿ ಇರುವ ಕೊರತೆಯೇ ಅದು. 'ಜೆನ್ ಎಐ' ಬಂದಮೇಲೆ ಸ್ವಲ್ಪ ಮಾನವೀಯತೆ ಎಐಗೆ ಬಂದಿದ್ದರೂ, ಅದು ಮನುಷ್ಯನ ಮಟ್ಟಕ್ಕೆ ಇನ್ನೂ ಬಂದಿಲ್ಲ. ಹೀಗಾಗಿ, ಸೇಲ್ಸ್ ಪಿಚ್ ಮಾಡುವಲ್ಲಿ ಅದು ಇನ್ನೂ ಹಿಂದೆ ಬಿದ್ದಿದೆ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

38) ಭೌತ ಮತ್ತು ರಾಸಾಯನಿಕ ಗುಣಗಳ ಆಧಾರದ ಮೇಲೆ ಎಥನಾಲ್ ಮತ್ತು ಎಥನೋಯಿಕ್ ಆಮ್ಲಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ


ಉತ್ತರ

ಎಥನಾಲ್	ಎಥನೋಯಿಕ್ ಆಮ್ಲ
ಭೌತ ಗುಣ	
* ಕೊಠಡಿ ಉಷ್ಣತೆಯಲ್ಲಿ ದ್ರವರೂಪದಲ್ಲಿರುತ್ತದೆ. ಮತ್ತು ಘಾಟು(ಆಲ್ಕೋಹಾಲ್) ವಾಸನೆಯಿಂದ ಕೂಡಿರುತ್ತದೆ.	ಇದು ಕೂಡಾ ಕೊಠಡಿಯ ಉಷ್ಣತೆಯಲ್ಲಿ ದ್ರವರೂಪದಲ್ಲಿದ್ದು ಸುವಾಸನೆಯಿಂದ ಕೂಡಿರುತ್ತದೆ.
ಇದು ಉತ್ತಮ ದ್ರಾವಕ	ಇದನ್ನು ಉತ್ತಮ ಸಂಗ್ರಾಹಕವಾಗಿ ಬಳಸುವರು. ಉದಾ:– ಉಪ್ಪಿನ ಕಾಯಿ ಸಂರಕ್ಷಕವಾಗಿ ಬಳಸುವರು
ರಾಸಾಯನಿಕ ಗುಣ	
ಎಥನಾಲ್ ಸೋಡಿಯಂ ನೊಂದಿಗೆ ವರ್ತಿಸಿ ಸೋಡಿಯಂ ಎಥಕ್ಸೈಡ್ ಉಂಟು ಮಾಡುತ್ತದೆ.	ಎಥನೋಯಿಕ್ ಆಮ್ಲವು ಸೋಡಿಯಂನೊಂದಿಗೆ ವರ್ತಿಸಿ ಸೋಡಿಯಂ ಎಥನೋಯೇಟ್ ಅನ್ನು ಉಂಟು ಮಾಡುತ್ತದೆ.
ಎಥನಾಲ್ ಇದು ಕಾರ್ಬೋನೆಟ್ ಮತ್ತು ಹೈಡ್ರೋಜನ್ ಕಾರ್ಬೋಟ್‌ಗಳೊಂದಿಗೆ ವರ್ತಿಸುವುದಿಲ್ಲ	ಎಥನೋಯಿಕ್ ಆಮ್ಲವು ಕಾರ್ಬೋನೇಟ್ ಮತ್ತು ಹೈಡ್ರೋಜನ್ ಕಾರ್ಬೋನೇಟ್ ಗಳೊಂದಿಗೆ ವರ್ತಿಸಿ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರನ್ನು ಅನ್ನು ಬಿಡುಗಡೆ ಮಾಡುತ್ತದೆ

39) ಮಾನವನ ಮಿದುಳಿನ ಚಿತ್ರ ಬರೆದು ವಿವಿಧ ಭಾಗಗಳನ್ನು ಗುರುತಿಸಿ

ಉತ್ತರ:– (ಜೂನ್–2020)

ಉತ್ತರ:–



40) ನಮ್ಮ ಕಣ್ಣಿನ ಮೂಲಕ ಹತ್ತಿರದ ವಸ್ತುವನ್ನು ನೋಡಲು ಹೇಗೆ ಸಾಧ್ಯವಾಗುತ್ತದೆ?

ಉತ್ತರ:– ಕಣ್ಣಿನ ಸಮೀಪವಿರುವ ವಸ್ತುಗಳನ್ನು ನೋಡುವಾಗ ಕಣ್ಣಿನ ಸಿಲಿಯರಿ ಸ್ನಾಯುಗಳು ಕುಗ್ಗುತ್ತವೆ. ಇದರಿಂದ ಕಣ್ಣಿನ ಮಸೂರದ ವಕ್ರತೆ ಹೆಚ್ಚಾಗುತ್ತದೆ. ಆಗ ಕಣ್ಣಿನ ಮಸೂರವು ದಪ್ಪವಾಗುತ್ತದೆ. ಇದರ ಪರಿಣಾಮವಾಗಿ ಕಣ್ಣಿನ ಸಂಗಮದೂರ ಕಡಿಮೆಯಾಗುತ್ತದೆ ಮತ್ತು ಹತ್ತಿರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ

41) ಓಮ್ ನಿಯಮವನ್ನು ಬರೆಯಿರಿ

ಉತ್ತರ:- ಸ್ಥಿರವಾದ ತಾಪಮಾನದಲ್ಲಿ ವಿದ್ಯುತ್ ಮಂಡಲದಲ್ಲಿನ ಲೋಹದ ತಂತಿಯ ನಡುವಿನ ವಿಭವಾಂತರ V ಯು ಅದರ ಮೂಲಕ ಹರಿಯುವ ವಿದ್ಯುತ್ ಪ್ರವಾಹಕ್ಕೆ ನೇರ ಅನುಪಾತದಲ್ಲಿರುತ್ತದೆ. ಇದನ್ನು ಓಮ್‌ನ ನಿಯಮ ಎಂದು ಕರೆಯುವರು.

42) ಒಂದು ದ್ರವರೂಪದ ಅಲೋಹವನ್ನು ಹೆಸರಿಸಿ

ಉತ್ತರ:– ಬ್ರೋಮಿನ್

43) ಒಂದು ದ್ರವರೂಪದ ಲೋಹವನ್ನು ಹೆಸರಿಸಿ

ಉತ್ತರ:– ಪಾದರಸ

44) ಹೊಳೆಯುವ ಅಲೋಹವನ್ನು ಬರೆಯಿರಿ

ಉತ್ತರ:– ಅಯೋಡಿನ್

45) ವಿಭಿನ್ನ ರೂಪದಲ್ಲಿ ದೊರೆಯುವ ಅಲೋಹ ಯಾವುದು?

ಉತ್ತರ:– **ಕಾರ್ಬನ್**

46) ಗ್ರಹಗಳು ಮಿನುಗುವುದಿಲ್ಲ ಏಕೆ?

ಉತ್ತರ:– ಗ್ರಹಗಳು ಭೂಮಿಗೆ ತುಂಬಾ ಹತ್ತಿರದಲ್ಲಿವೆ ಮತ್ತು ವಿಸ್ತರಿಸಿದ ಬೆಳಕಿನ ಮೂಲಗಳಂತೆ ಕಾಣುತ್ತವೆ. ನಾವು ಒಂದು ಗ್ರಹವನ್ನು ಹಲವಾರು ಬಿಂದು ಗಾತ್ರದ ಬೆಳಕಿನ ಮೂಲದ ಒಂದು ಸಂಗ್ರಹ ಎಂದು ಭಾವಿಸಿದರೆ ಒಟ್ಟು ಎಲ್ಲಾ ಬಿಂದುಗಳಿಂದ ನಮ್ಮ ಕಣ್ಣನ್ನು ತಲುಪುವ ಬೆಳಕಿನ ವ್ಯತ್ಯಾಸವು ಎಲ್ಲಾ ಬಿಂದುಗಳ ಬೆಳಕಿನ ಸರಾಸರಿ ಹತ್ತಿರವಾಗುತ್ತದೆ. ಇದರಿಂದಾಗಿ ಗ್ರಹಗಳ ಮಿನುಗುವಿಕೆ ಶೂನ್ಯವಾಗಿದೆ

47)ಯಾವುದಕ್ಕೆ ರೋಧಕ ಎಂದು ಕರೆಯುವರು ಕರೆಯುವರು?

ಉತ್ತರ:– ವಾಹಕದ ಮೂಲಕ ಇಲೆಕ್ಟ್ರಾನ್‌ಗಳ ಪ್ರವಾಹವು ಅದರ ರೋಧದಿಂದಾಗಿ ಕುಂಠಿತವಾಗುತ್ತದೆ. ಒಂದು ನಿರ್ದಿಷ್ಟ ಗಾತ್ರದ ವಸ್ತುವು ಕಡಿಮೆ ರೋಧವನ್ನು ಒದಗಿಸಿದರೆ ಅದು ಉತ್ತಮ ವಾಹಕವಾಗಿದೆ. ಒಂದು ವಾಹಕವು ಗಣನೀಯವಾದ ರೋಧವನ್ನು ಹೊಂದಿದ್ದರೆ ಅದನ್ನು ರೋಧಕ ಎಂದು ಕರೆಯುವರು. ಹೆಚ್ಚಿನ ರೋಧವನ್ನು ಒಡ್ಡುವ ಒಂದೇ ಗಾತ್ರದ ವಸ್ತುವು ದುರ್ಬಲ ವಾಹಕವಾಗಿದೆ.

48) ಓಝೋನ್ ಕುಸಿತದ ಕುರಿತು ಬರೆಯಿರಿ (ನಮ್ಮ ಪರಿಸರ)

ಉತ್ತರ:– 1980ರ ದಶಕದಲ್ಲಿ ಓಝೋನ್ ಪ್ರಮಾಣವು ತೀವ್ರವಾಗಿ ಕುಸಿಯಲಾರಂಭಿಸಿತು. ಶೀತಲೀಕರಣ ಮತ್ತು ಅಗ್ನಿಶಾಮಕದಲ್ಲಿ ಬಳಸಲ್ಪಡುವ ಕ್ಲೋರೋಫ್ಲೋರೋಕಾರ್ಬನ್(CFC)ಗಳಂಥ ಸಂಶ್ಲೇಷಿತ ರಾಸಾಯನಿಕಗಳು ಈ ಕುಸಿತಕ್ಕೆ ಕಾರಣ ಎಂದು ಕಂಡುಕೊಳ್ಳಲಾಯಿತು. 1987ರಲ್ಲಿ ಸಂಯುಕ್ತ ರಾಷ್ಟ್ರಗಳ ಪರಿಸರ ಕಾರ್ಯಕ್ರಮ (United Nations Environment Programme - UNEP) ಸಿಎಫ್‌ಸಿಗಳ ಉತ್ಪಾದನೆಯನ್ನು 1986ರ ಮಟ್ಟಕ್ಕೆ ಸ್ಥಗಿತಗೊಳಿಸುವಂಥ ಒಪ್ಪಂದ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು. ಪ್ರಪಂಚದಾದ್ಯಂತ ಸಿಎಫ್‌ಸಿ – ಮುಕ್ತ ರೆಫ್ರಿಜಿರೇಟರ್‌ಗಳನ್ನು ಎಲ್ಲಾ ಉತ್ಪಾದನಾ ಕಂಪನಿಗಳು ತಯಾರಿಸುವುದು ಇದೀಗ ಕಡ್ಡಾಯವಾಗಿದೆ.

49) ಕೆಳಗಿನ ಸಂದರ್ಭಗಳನ್ನು ಕಲ್ಪಿಸಿಕೊಳ್ಳಿ

(1) ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು

(2) ದೇಹದಲ್ಲಿ ಏರುಪೇರಾಗುತ್ತಿರುವ ರಕ್ತದ ಒತ್ತಡ

ಈ ಸಂದರ್ಭಗಳು ಕ್ರಿಯಾತ್ಮಕವಾಗಿ ಹೇಗೆ ಭಿನ್ನವಾಗಿವೆ? ಕಾರಣ ಕೊಡಿ. **(ಜೂನ್ 2019)**

ಉತ್ತರ:– (1) ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು

ಇದು ಐಚ್ಛಿಕ ಕ್ರಿಯೆ, ನಾವು ಮಾಡುವ ಆಲೋಚನೆಯ ಆಧಾರದ ಮೇಲೆ ನಡೆಯುವ ಕ್ರಿಯೆ.. ಮುಮ್ಮಿದುಳಿನಿಂದ ನಿಯಂತ್ರಿಸಲ್ಪಡುತ್ತದೆ.

(2) ದೇಹದಲ್ಲಿ ಏರುಪೇರಾಗುತ್ತಿರುವ ರಕ್ತದ ಒತ್ತಡ

ಇದು ಅನೈಚ್ಛಿಕ ಕ್ರಿಯೆ, ಆಲೋಚನೆ ನಿಯಂತ್ರಣವಿಲ್ಲದ ಕ್ರಿಯೆ, ಹಿಮ್ಮಿದುಳಿನಿಂದ ನಿಯಂತ್ರಿಸಲ್ಪಡುತ್ತದೆ.


ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

REVISION : MODEL QUESTIONS

30) Describe the structure of DNA with a neat labelled diagram.


Ans:- (........Contd)



This specific base pairing is called complementary base pairing. The stability of the helix is due to the interaction between hydrophobic base pairs. Hence, the two polynucleotide strands are complementary to each other. According to Watson and Crick, the DNA helix has a diameter of 20 Å. The helix makes one complete turn at every 34 Å along its length containing 10 nucleotides. Therefore, the distance between 2 nucleotides in a helix is 3.4 Å. The length of the DNA molecule varies from chromosome to chromosome and species to species If the double helix is coiled in a right handed direction it is B – DNA and if the double helix is coiled in a left handed direction it is Z – DNA. The Z – DNA is 18 – 19 Å in width & is rich in the base pairs G ≡ C.

31) Give the structure of a typical antibody.

Ans:-



32) Write a short note on Neanderthal man.

Ans:- A Neanderthal man, scientifically known as "Homo neanderthalensis," was an extinct human species that lived in Europe and parts of Western Asia between 400,000 and 40,000 years ago. They were characterized by a robust build with short limbs, large brains comparable to modern humans, prominent brow ridges, and a receding forehead, likely adaptations to cold climates. Neanderthals were skilled hunters, using sophisticated stone tools, and exhibited complex social behaviors including the burial of their dead, suggesting a level of symbolic thought. Their name comes from the Neander Valley in Germany where the first Neanderthal fossils were discovered.

***Key characteristics of Neanderthals*:**

Physical features: Stocky body with short limbs, large nose, prominent brow ridge, receding forehead, large cranial capacity (brain size similar to modern humans).

Habitat: Primarily lived in cold regions of Europe and Western Asia.

Diet: Primarily meat from hunting large animals, supplemented with plants and possibly some shellfish.

Tool use: Developed complex stone tools, including "Mousterian" technology.

Social behavior: Evidence of burial practices with grave goods, suggesting symbolic thought and potential ritualistic behavior.

33) Give the differences between Antigens and Antibodies.

Ans:-

Antigens(immunogens)	*Antibodies (immunoglobulins)*
They are usually foreign materials which bring about reaction in the body.	They are biochemicals formed in the body for combating antigens.
They trigger the formation of antibodies.	They have a variable site (V-region) for attaching to antigen.
Antigens are either proteins or polysaccharides and substances which can get attached to them.	Antibodies are proteinaceous in nature.
They are free molecules or components of surface covering of microbes.	They are extruded from the surface of plasma cells and become component of plasma.
They produce disease or allergic reaction.	They are protective, causing immobilization or lysis of antigenic materials.

34) Describe the Miller & Urey's Experiment.

Ans:- Miller and Urey's Experiment - It is an apparatus designed for simulating conditions prevalent on earth at the time of abiogenic evolution of organic substances by Stanley Miller.

(Contd....)

ಸರ್ಕಾರಿ ನೌಕರರ ಸಮಾವೇಶ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕರು ಹಾಗೂ ಪದಾಧಿಕಾರಿಗಳ 'ಸಮಾವೇಶ ಹಾಗೂ ಕಾರ್ಯಾಗಾರ' ಇದೇ 20ರಂದು ನಡೆಯಲಿದೆ.

ಅರಮನೆ ಮೈದಾನದಲ್ಲಿ ನಡೆಯುವ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ತಿಳಿಸಿದ್ದಾರೆ.

'ಪ್ರಜಾಹಿತ ಆಡಳಿತ ಕಾರ್ಯಾಗಾರ'ದಲ್ಲಿ 'ಆಡಳಿತದಲ್ಲಿ ದಕ್ಷತೆ, ಪಾರದರ್ಶಕತೆ, ಪ್ರಾಮಾಣಿಕತೆ' ವಿಷಯದ ಕುರಿತು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಉಪನ್ಯಾಸ ನೀಡಲಿದ್ದಾರೆ. 'ಸಾರ್ವಜನಿಕ ಸೇವೆಯಲ್ಲಿ ನೌಕರರ ಪಾತ್ರ' ವಿಷಯದ ಕುರಿತು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹಾಗೂ 'ಮಾಹಿತಿ ಹಕ್ಕು ಅಧಿನಿಯಮ: ಸವಾಲುಗಳು– ಪರಿಹಾರಗಳು' ವಿಷಯವಾಗಿ ಮಾಹಿತಿ ಆಯೋಗದ ಕಲಬುರಗಿ ಪೀಠದ ಆಯುಕ್ತ ರವೀಂದ್ರ ಗುರುನಾಥ ಧಾಕಪ್ಪ ಉಪನ್ಯಾಸ ನೀಡಲಿದ್ದಾರೆ ಎಂದಿದ್ದಾರೆ.

ಯುದ್ಧನೌಕೆಗಳ ಚಲನವಲನಗಳ ಮಾಹಿತಿ ಸೋರಿಕೆ ಆರೋಪ

ಎನ್‌ಐಎ: ಇಬ್ಬರು ಯುವಕರ ಸೆರೆ

ಪ್ರಜಾವಾಣಿ ವಾರ್ತೆ

ಕಾರವಾರ: ಕದಂಬ ನೌಕಾನೆಲೆಗೆ ಬರುವ ಯುದ್ಧನೌಕೆಗಳ ಚಲನವಲನಗಳ ಮಾಹಿತಿ ಸೋರಿಕೆ ಮಾಡಿದ ಆರೋಪದ ಮೇಲೆ ತಾಲ್ಲೂಕಿನ ಮುದಗಾದ ವೇತನ ತಾಂಡೇಲ (33) ಮತ್ತು ಅಂಕೋಲಾ ತಾಲ್ಲೂಕು ಹಳವಳ್ಳಿಯ ಅಕ್ಷಯ ನಾಯ್ಕ (29) ಎಂಬುವರನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಮಂಗಳವಾರ ಬಂಧಿಸಿದೆ.

'ತಲಾ ಮೂರು ಜನರ ಎರಡು ಪ್ರತ್ಯೇಕ ತಂಡ ರಚಿಸಿಕೊಂಡು ನಸುಕಿನಲ್ಲಿ ದಾಳಿ ನಡೆಸಿದ ಎನ್‌ಐಎ ಅಧಿಕಾರಿಗಳು ಮುದಗಾ ಮತ್ತು ಹಳವಳ್ಳಿಯಲ್ಲಿ ಏಕಕಾಲಕ್ಕೆ ಯುವಕರನ್ನು ವಶಕ್ಕೆ ಪಡೆದರು. ನಂತರ ಅವರನ್ನು ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿ, ವಿಚಾರಣೆಗೆ ಬಂಧಿಸಿ ಹೈದರಾಬಾದ್‌ಗೆ ಕರೆದೊಯ್ದರು. ಕದಂಬ ನೌಕಾನೆಲೆಯಲ್ಲಿ ಯುದ್ಧನೌಕೆಗಳನ್ನು ನಿರ್ವಹಿಸುವ ಕಂಪನಿಗಳಲ್ಲಿ ಈ ಯುವಕರು ಹೊರಗುತ್ತಿಗೆ ಆಧಾರದಲ್ಲಿ ಈ ಹಿಂದೆ ಕೆಲಸ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.



ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಆರೋಪಿ ವೇತನ ತಾಂಡೇಲ್‌ನನ್ನು (ಮಾಸ್ಕ್ ಧರಿಸಿರುವವ) ಕಾರವಾರದಲ್ಲಿ ನ್ಯಾಯಾಲಯಕ್ಕೆ ಮಂಗಳವಾರ ಹಾಜರುಪಡಿಸಿ, ಕರೆದೊಯ್ದರು

ಪ್ರಕರಣ ಏನು?: 2023ರಲ್ಲಿ ಆಂಧ್ರಪ್ರದೇಶದ ವಿಶಾಖಪಟ್ಟಣಂ ನೌಕಾನೆಲೆಯ ಮಾಹಿತಿ ಪಾಕಿಸ್ತಾನದ ಬೇಹುಗಾರರಿಗೆ ರವಾನೆಯಾಗಿದ್ದ ಹಿನ್ನೆಲೆಯಲ್ಲಿ ವಿಜಯವಾಡಾದಲ್ಲಿ ದಾಖಲಾಗಿದ್ದ ಪ್ರಕರಣ ಆಧರಿಸಿ ಎನ್‌ಐಎ ತನಿಖೆ ಕೈಗೊಂಡಿತ್ತು. ಆಗ ವಿದೇಶಿ ಬೇಹುಗಾರರಿಗೆ ಕಾರವಾರದ ಕದಂಬ ನೌಕಾನೆಲೆಯಿಂದಲೂ ಯುದ್ಧನೌಕೆ ಚಲನವಲನದ ಮಾಹಿತಿ ತಲುಪಿರುವುದು ಗೊತ್ತಾಗಿತ್ತು.

ಸದ್ಯ ಬಂಧನಕ್ಕೆ ಒಳಗಾದ ಇಬ್ಬರು ಆರೋಪಿಗಳು ಸೇರಿ ಮೂವರನ್ನು ಎನ್‌ಐಎ ಅಧಿಕಾರಿಗಳು 2024ರ ಆಗಸ್ಟ್ 28ರಂದು ವಿಚಾರಣೆ ನಡೆಸಿ, ನೋಟಿಸ್ ನೀಡಿದ್ದರು. ಸೋಮವಾರ ಪುನಃ ಆರು ಜನ ಅಧಿಕಾರಿಗಳನ್ನು ಒಳಗೊಂಡ ತಂಡವು ಕಾರವಾರ ನಗರ ಪೊಲೀಸ್ ಠಾಣೆಯಲ್ಲಿ ಹಲವು ಗಂಟೆ ಮಾಹಿತಿ ಸಂಗ್ರಹಿಸಿತ್ತು.

'ಯುವಕರನ್ನು ಸಾಮಾಜಿಕ ಜಾಲತಾಣದಲ್ಲಿ ಯುವತಿಯರ ಹೆಸರಿನಲ್ಲಿ ಪರಿಚಯಿಸಿಕೊಂಡಿದ್ದ ಬೇಹುಗಾರರ ಪರ ಏಜೆಂಟರು ನೌಕಾನೆಲೆ ಮಾಹಿತಿ ಸಂಗ್ರಹಿಸಿದ್ದರು. ಅದಕ್ಕಾಗಿ ಆರೋಪಿಗಳ ಖಾತೆಗೆ ಹಣ ಪಾವತಿಸಿದ್ದರು. ಈ ಬಗ್ಗೆ ವಿಚಾರಣೆ ನಡೆದಿದೆ' ಎಂದು ಮೂಲಗಳು ಹೇಳಿವೆ.

ಕುಟುಂಬದ ಮೂವರು ಆತ್ಮಹತ್ಯೆ

ಆರ್ಥಿಕ ಸಮಸ್ಯೆ: ಪ್ರಕರಣಕ್ಕೆ ಹೆದರಿ ಜೀವ ಕಳೆದುಕೊಂಡರು

ಪ್ರಜಾವಾಣಿ ವಾರ್ತೆ

ಮೈಸೂರು: ಹಣಕಾಸಿನ ವಿಚಾರದಲ್ಲಿ ಉಂಟಾದ ಸಮಸ್ಯೆಯಿಂದಾಗಿ ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅವಳಿ ಸಹೋದರರಾದ ಜೋಶಿ ಆ್ಯಂಟನಿ (45), ಜೋಬಿ ಆ್ಯಂಟನಿ (45) ಹಾಗೂ ಜೋಬಿ ಪತ್ನಿ ಶರ್ಮಿಳಾ ಅಲಿಯಾಸ್ ಸ್ವಾತಿ (40) ಮೃತಪಟ್ಟವರು.

ಜೋಶಿ ಸೋಮವಾರ ಮಧ್ಯಾಹ್ನ ರಮ್ಮನಹಳ್ಳಿ ಗ್ರಾಮದ ಸ್ಮಶಾನದ ಆವರಣದಲ್ಲಿರುವ ಬೇವಿನ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಜಯನಗರದ ಸಾರ್ವಜನಿಕ ಕ್ರೀಡಾಂಗಣದ ನೀರಿನ ಟ್ಯಾಂಕ್‌ನ ಏಣಿಯಲ್ಲಿ ಜೋಬಿ ಹಾಗೂ ಶರ್ಮಿಳಾ ಮೃತದೇಹಗಳು ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಮಂಗಳವಾರ ಪತ್ತೆಯಾಗಿವೆ.

ಜೋಬಿ ಹಾಗೂ ಅವರ ಪತ್ನಿ ಶರ್ಮಿಳಾ ಯರಗನಹಳ್ಳಿಯಲ್ಲಿ ವಾಸವಿದ್ದರು. ಜೋಶಿಯು ತಂಗಿ ಮೇರಿಶರೀನ್ ಹಾಗೂ ಆಕೆಯ ಮಗುವಿನೊಂದಿಗೆ ವಿದ್ಯಾನಗರದಲ್ಲಿದ್ದರು.



ಜೋಶಿ ಆ್ಯಂಟನಿ



ಜೋಬಿ ಆ್ಯಂಟನಿ



ಶರ್ಮಿಳಾ

ಆತ್ಮಹತ್ಯೆಗೆ ಮುನ್ನ ಜೋಶಿ, ವಿಡಿಯೊ ಮಾಡಿ ತನ್ನ ತಂಗಿಗೆ ಕಳುಹಿಸಿದ್ದರು. 'ನಾನು ಆತ್ಮಹತ್ಯೆ ಮಾಡಿಕೊಳ್ಳಲು ಅಣ್ಣ ಹಾಗೂ ಅತ್ತಿಗೆ ಕಾರಣ. ನಿನ್ನ ಹೆಸರಿನಲ್ಲಿ ಸಾಲ ಮಾಡಿ ಅವರು ಆರಾಮಾಗಿದ್ದಾರೆ. ನಿನ್ನನ್ನೂ ಬದುಕಲು ಬಿಡುವುದಿಲ್ಲ' ಎಂದು ಹೇಳಿರುವುದು ವಿಡಿಯೊದಲ್ಲಿದೆ.

ಈ ಬಗ್ಗೆ ಮೇರಿಶರೀನ್ ದಕ್ಷಿಣ ಪೊಲೀಸ್ ಠಾಣೆಗೆ ದೂರು ನೀಡಿದ್ದು, 'ಜೋಬಿಯು ಹಣ ದ್ವಿಗುಣ ಮಾಡಿಕೊಡುತ್ತೇನೆಂದು ತಿಳಿಸಿ ನನ್ನ ಮೂಲಕ ಅನೇಕರಿಂದ ಸುಮಾರು ₹80 ಲಕ್ಷ ಸಾಲ ಪಡೆದಿದ್ದಾರೆ. ಸಾಲ ನೀಡಿದವರು ಮನೆಗೆ ಬಂದು ಮರುಪಾವತಿಸಲು ಒತ್ತಾಯಿಸುತ್ತಿದ್ದಾರೆ. ಆದರೆ, ಜೋಬಿಯು ಹಣ ವಾಪಸ್ ನೀಡದೆ ಸತಾಯಿಸುತ್ತಿದ್ದಾರೆ. ಅಣ್ಣನ ಆತ್ಮಹತ್ಯೆಗೆ ಕಾರಣರಾದ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಉಲ್ಲೇಖಿಸಿದ್ದರು. ಮಂಗಳವಾರ ಬೆಳಿಗ್ಗೆ ಜೋಬಿ– ಶರ್ಮಿಳಾ ದಂಪತಿ ಶವಗಳು ಪತ್ತೆಯಾಗಿವೆ.

'ದಂಪತಿಯು ತಮ್ಮ ವಿರುದ್ಧ ದಾಖಲಾದ ಪ್ರಕರಣಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೇಲ್ನೋಟಕ್ಕೆ ಕಂಡುಬಂದಿದೆ. ಜೂಜಾಟಕ್ಕಾಗಿ ಹಣ ಪಡೆಯುತ್ತಿದ್ದರು ಎಂಬ ಮಾಹಿತಿ ದೊರೆತಿದ್ದು, ತನಿಖೆ ಮುಂದುವರಿದಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ದಂಪತಿ ಆತ್ಮಹತ್ಯೆ ಬಗ್ಗೆ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯದಲ್ಲಿ ಹೆಚ್ಚಿದ ತಾಪಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಿಸಿಲ ಧಗೆ ದಿನದಿಂದ ದಿನಕ್ಕೆ ಹೆಚ್ಚಲಾರಂಭಿಸಿದ್ದು, ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ತಾಪಮಾನವು 36 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ.

ವಾತಾವರಣದಲ್ಲಿನ ಉಷ್ಣಾಂಶವು ವಾಡಿಕೆಗಿಂತ 4 ಡಿಗ್ರಿ ಸೆಲ್ಸಿಯಸ್‌ವರೆಗೆ ಹೆಚ್ಚಿದೆ. ಇದರಿಂದಾಗಿ ಫೆಬ್ರುವರಿ ತಿಂಗಳಲ್ಲಿಯೇ ಉಷ್ಣಾಂಶವು ಗಣನೀಯ ಏರಿಕೆ ಕಾಣುತ್ತಿದೆ. ಪರಿಣಾಮ, ಮಕ್ಕಳು, ವೃದ್ಧರು ಹಾಗೂ ಮಹಿಳೆಯರು ಬಸವಳಿಯುತ್ತಿದ್ದಾರೆ. ಬಿಸಿಲಿನಿಂದ ರಕ್ಷಣೆ ಪಡೆಯಲು ಹರಸಾಹಸ ಪಡುತ್ತಿದ್ದಾರೆ.

ಹವಾಮಾನ ಇಲಾಖೆಯ ಪ್ರಕಾರ, ರಾಜ್ಯದಲ್ಲಿ ಒಣಹವೆ ಮುಂದುವರಿಯಲಿದ್ದು, ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು 2ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಜ್ಯದ 19 ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್ ದಾಟಿದೆ. ರಾಯಚೂರಿನಲ್ಲಿ 37.2 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ಕಲಬುರಗಿಯಲ್ಲಿ 37 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ.

ಬಳ್ಳಾರಿ, ಬೆಳಗಾವಿ, ದಕ್ಷಿಣ ಕನ್ನಡ, ದಾವಣಗೆರೆ, ಹಾವೇರಿ, ಯಾದಗಿರಿ, ವಿಜಯಪುರ, ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲೂ ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್ ದಾಟಿದೆ.

ಕಾಳಸಂತೆಯಲ್ಲಿ ಪೌಷ್ಟಿಕ ಆಹಾರ ಮಾರಾಟ: 26 ಜನರ ಬಂಧನ

ಹುಬ್ಬಳ್ಳಿ: 'ಅಂಗನವಾಡಿ ಮಕ್ಕಳು, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ವಿತರಿಸುವ ಪೌಷ್ಟಿಕ ಆಹಾರ ಪದಾರ್ಥಗಳನ್ನು ಹಳೇಗಬ್ಬೂರಿನ ಗೋದಾಮಿನಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟು, ಕಾಳಸಂತೆಯಲ್ಲಿ ಮಾರುತ್ತಿದ್ದ ಆರೋಪದ ಮೇಲೆ 18 ಮಂದಿ ಅಂಗನವಾಡಿ ಕಾರ್ಯಕರ್ತೆಯರು ಸೇರಿ 26 ಜನರನ್ನು ಕಸಬಾ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯರಾದ ಶಮಿಮಾ ಬಾನು ಮುಜಾವರ, ಶಮಿಮಾಬಾನು ದಾರುಗಾರ, ಬೇಬಿ ಆಯಿಶಾ ಕಾರಿಗಾರ, ಬೇಬಿ ಆಯಿಶಾ ಶೇಖ್, ರೇಷ್ಮಾ ವಡ್ಡೊ, ಶಾಹೀನಾ ಚಕ್ಕೇಹಾರಿ, ಪೈರೋಜಾ ಮುಲ್ಲಾ, ಶಕುಂತಲಾ ನ್ಯಾಮತಿ, ಚಿತ್ರಾ ಉರಾಣಿಕರ, ಮೆಹಬೂಬಿ ಹಲ್ಯಾಳ, ಮೀನಾಕ್ಷಿ ಬೆಟಗೇರಿ, ಹೀನಾಕೌಸರ ನರಗುಂದ, ಹೀನಾಕೌಸರ ಮೇಸ್ತ್ರಿ, ಶೀಲಾ ಹಿರೇಮಠ, ಶೃತಿ ಕೊಟಬಾಗಿ, ಪರವೀನಬಾನು ಖಲೀಫ್, ರೇಣುಕಾ ಕಮದಿನ್ನಿ, ಗಂಗಮ್ಮ ಪಾಂಡರೆ ಸೇರಿ ಗೋದಾಮಿನ ಮಾಲೀಕ ಮೊಹ್ಮದ್‌ಗೌಸ್ ಖಲೀಫಾ, ಬಾಡಿಗೆದಾರ ಗೌತಮಸಿಂಗ್ ಠಾಕೂರ ಎಂಬುವರನ್ನು ಬಂಧಿಸಲಾಗಿದೆ.

'₹4 ಲಕ್ಷ ಮೌಲ್ಯದ 329 ಚೀಲಗಳಲ್ಲಿನ 4.84 ಟನ್ ಗೋಧಿ, ರವಾ ಅಕ್ಕಿ, ಹಾಲಿನ ಪುಡಿ, ಬೆಲ್ಲ ಸೇರಿ 17 ಪೌಷ್ಟಿಕ ಆಹಾರ ಪದಾರ್ಥಗಳನ್ನು ಮತ್ತು ₹3 ಲಕ್ಷ ಮೌಲ್ಯದ ವಾಹನ ವಶಪಡಿಸಿಕೊಳ್ಳಲಾಗಿದೆ. ಇನ್ನೂ ಕೆಲ ಆರೋಪಿಗಳ ಪತ್ತೆಗೆ ಶೋಧ ಮುಂದುವರೆದಿದೆ' ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

'ಅಂಗನವಾಡಿ ಕಾರ್ಯಕರ್ತೆಯರು ಗರ್ಭಿಣಿ, ಬಾಣಂತಿ ಮತ್ತು ಮಕ್ಕಳ ಸಂಖ್ಯೆಯನ್ನು ಹೆಚ್ಚು ತೋರಿಸಿ, ಆಹಾರ ಪದಾರ್ಥಗಳನ್ನು ತರಿಸಿಕೊಳ್ಳುತ್ತಿದ್ದರು' ಎಂದು ಡಿಸಿಪಿ ಮಹಾನಿಂಗ ನಂದಗಾವಿ ಹೇಳಿದರು.

'ಹೃದಯ ಜ್ಯೋತಿ' ಯೋಜನೆ ವಿಸ್ತರಣೆ

ಬೆಳಗಾವಿ: 'ಹಠಾತ್ ಹೃದಯಾಘಾತದಿಂದ ಸಾವು ಸಂಭವಿಸುವುದನ್ನು ತಡೆಯಲು ನೆರವಾಗುವ 'ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ' ಯೋಜನೆಯನ್ನು ರಾಜ್ಯದ ಎಲ್ಲ ತಾಲ್ಲೂಕುಗಳಿಗೂ ವಿಸ್ತರಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

'ಹೃದಯಾಘಾತ ಸಂಭವಿಸಿದಾಗ ಪ್ರಾಣಹಾನಿ ತಡೆಗೆ 'ಜೀವರಕ್ಷಕ ಚುಚ್ಚುಮದ್ದು' ಇದೆ. ಇದನ್ನು ಪುನೀತ್ ರಾಜ್‌ಕುಮಾರ್ ಹೃದಯಜ್ಯೋತಿ ಯೋಜನೆಯಡಿ ಜಿಲ್ಲಾ ಆಸ್ಪತ್ರೆಗಳಲ್ಲಿ ನೀಡಲು ವ್ಯವಸ್ಥೆ ಮಾಡಲಾಗಿದೆ. ಶೀಘ್ರವೇ ತಾಲ್ಲೂಕು ಆಸ್ಪತ್ರೆಗಳಲ್ಲೂ ಲಭ್ಯವಾಗಲಿದೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಜಿಲ್ಲೆಗಳಲ್ಲಿ ಹಗಲು ಆರೈಕೆ ಕಿಮೊಥೆರಪಿ ಕೇಂದ್ರ, ಮಾನಸಿಕ ಆರೋಗ್ಯ ತಪಾಸಣಾ ಕೇಂದ್ರ ಆರಂಭಿಸಲಾಗುವುದು. 120 ತಜ್ಞ ವೈದ್ಯರ ಹಾಗೂ 1,300 ಇಎನ್‌ಎಂ ಸಿಬ್ಬಂದಿ ನೇಮಕಾತಿ ಆದೇಶ ನೀಡಲಾಗುತ್ತಿದೆ. ಅಗತ್ಯವಿರುವ ಕಡೆ ಸ್ತ್ರೀರೋಗ ತಜ್ಞರು, ಹೆರಿಗೆ ತಜ್ಞರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಅನುಮತಿ ನೀಡಲಾಗಿದೆ' ಎಂದು ತಿಳಿಸಿದರು.

'ಗರ್ಭಿಣಿ, ಬಾಣಂತಿ ಹಾಗೂ ನವಜಾತ ಶಿಶುಗಳ ಸಾವಿನ ಪ್ರಮಾಣ ತಡೆಗೆ ಹೆಚ್ಚು ಆಸ್ಥೆ ವಹಿಸಲಾಗಿದೆ. ಪ್ರತಿ ಸಾವಿನ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ. ಭ್ರೂಣಹತ್ಯೆ ತಡೆಗೂ ಸರ್ಕಾರ ವಿಶೇಷ ಕಾಳಜಿ ತೋರಿದೆ' ಎಂದರು.

ಅಂಬ್ಲಿಗೊಳ: ಹುಲಿ ಕಳೇಬರ ಪತ್ತೆ


ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಿಲ್ಲೆಯ ಶಿಕಾರಿಪುರ-ಸಾಗರ ಗಡಿಭಾಗದ ಬೈರಾಪುರ ಬಳಿಯ ಅಂಬ್ಲಿಗೊಳ ಜಲಾಶಯದ ಹಿನ್ನೀರಿನಲ್ಲಿ 9 ವರ್ಷದ ಗಂಡು ಹುಲಿ ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಜಲಾಶಯದ ಹಿನ್ನೀರಿನಲ್ಲಿ ಸೋಮವಾರ ಮೀನು ಹಿಡಿಯಲು ಹೋದವರು ನೀರಿನಲ್ಲಿ ಹುಲಿ ತೇಲುತ್ತಿರುವುದನ್ನು ಗಮನಿಸಿದ್ದು, ಅಂಬ್ಲಿಗೊಳ ವಲಯ ಅರಣ್ಯಾಧಿಕಾರಿಗೆ ಮಾಹಿತಿ ನೀಡಿದ್ದಾರೆ.

'ಹುಲಿಯ ಸಾವಿಗೆ ಕಾರಣ ತಿಳಿದುಬಂದಿಲ್ಲ. ಅರಣ್ಯ ಇಲಾಖೆಯ ಡಾಟಾಬೇಸ್‌ನಲ್ಲೂ ಮೃತ ಹುಲಿಯ ಬಗ್ಗೆ ಮಾಹಿತಿ ಇಲ್ಲ. ಅದು ಎಲ್ಲಿಂದ ಬಂದಿದೆ. ಹಿನ್ನೀರಿನತ್ತ ಏಕೆ ಬಂದಿದೆ ಎಂಬುದರ ಮಾಹಿತಿ ಸಂಗ್ರಹಿಸುತ್ತಿದ್ದೇವೆ. ಹುಲಿಯ ಕಳೇಬರವನ್ನು ಮಂಗಳವಾರ ಬೆಳಿಗ್ಗೆ ನೀರಿನಿಂದ ಹೊರ ತೆಗೆದಿದ್ದು, ಮರಣೋತ್ತರ ಪರೀಕ್ಷೆ ನಡೆದಿದೆ. ವಿಧಿ-ವಿಜ್ಞಾನ ಪ್ರಯೋಗಾಲಯದ ವರದಿಯ ನಂತರ ಹುಲಿಯ ಸಾವಿಗೆ ನಿಖರ ಕಾರಣ ತಿಳಿದುಬರಲಿದೆ' ಎಂದು ಸಾಗರ ವನ್ಯಜೀವಿ ವಿಭಾಗದ ಡಿಸಿಎಫ್ ಡಿ.ಮೋಹನ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಗುಂಡು ಹೊಡೆದು ಹುಲಿ ಹತ್ಯೆ?: 'ಹುಲಿಯ ದೇಹದ ಮೇಲೆ ಎರಡು ಕಡೆ ರಂಧ್ರಗಳು ಕಂಡುಬಂದಿದ್ದು, ನಾಡ ಬಂದೂಕಿನಿಂದ ಗುಂಡು ಹಾರಿಸಿ ಕೊಂದಿರಬಹುದು. ಬೇಟೆಗಾರರು ಬೇಟೆಯ ಉದ್ದೇಶದಿಂದ ಇಲ್ಲವೇ ಹುಲಿಯನ್ನು ಬೆದರಿಸಲು ಕೃತ್ಯ ನಡೆಸಿರಬಹುದು. ಗುಂಡು ತಗುಲಿದ ಸ್ಥಳದಲ್ಲಿ ಹುಲಿ ಬಿದ್ದಿಲ್ಲ. ಬದಲಿಗೆ ಹಿನ್ನೀರಿನೊಳಗೆ ಬಂದು ಮೃತಪಟ್ಟಿದೆ. ಪ್ರಯೋಗಾಲಯದ ವರದಿಯ ನಂತರ ನಿಖರ ಕಾರಣ ತಿಳಿದುಬರಲಿದೆ. ಮರಣೋತ್ತರ ಪರೀಕ್ಷೆಯ ನಂತರ ಜಲಾಶಯ ಸಮೀಪದ ಡ್ಯಾಂ ಹೊಸೂರಿನಲ್ಲಿ ಮೃತ ಹುಲಿಯ ಅಂತ್ಯಕ್ರಿಯೆ ನೆರವೇರಿಸಲಾಯಿತು' ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.



ಅಂಬ್ಲಿಗೊಳ ಜಲಾಶಯದ ಹಿನ್ನೀರಿನಲ್ಲಿ ಪತ್ತೆಯಾದ ಹುಲಿಯ ಕಳೇಬರ

12 ಹುಲಿ ಉಗುರು ವಶ

ಹುಣಸೂರು (ಮೈಸೂರು ಜಿಲ್ಲೆ): ಪೊನ್ನಂಪೇಟೆ ತಾಲ್ಲೂಕಿನ ಟಿ.ಶೆಟ್ಟಿಗೇರಿ ಕೆರೆಯ ಬಳಿ ಹುಲಿ ಉಗುರುಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಮಹಿಳೆ ಸೇರಿದಂತೆ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ.

ಶೆಟ್ಟಿಗೇರಿ ಗ್ರಾಮದ ರಾಜಪ್ಪ (63) ಹಾಗೂ ಬೆಂಗಳೂರಿನ ಬನಶಂಕರಿ ಲೇಔಟ್‌ನ ಗೀತಾ (63) ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಅವರ ಬಳಿ ದೊರೆತ 12 ಹುಲಿ ಉಗುರುಗಳನ್ನು ಜಪ್ತಿ ಮಾಡಲಾಗಿದೆ ಎಂದು ಹುಲಿ ಯೋಜನೆಯ ಎಸಿಎಫ್ ಲಕ್ಷ್ಮಿಕಾಂತ್ ತಿಳಿಸಿದರು.

ಹುಣಸೂರು ವನ್ಯಜೀವಿ ಉಪವಿಭಾಗದಿಂದ ಮಂಗಳವಾರ ದಾಳಿ ನಡೆದಿದೆ. ಮತ್ತೊಬ್ಬ ಆರೋಪಿ ಸಂಜು ಪರಾರಿಯಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಅಂಗನವಾಡಿಗೆ ಕನ್ನಡ ಶಿಕ್ಷಕಿ ನೇಮಕ: ಕೋರ್ಟ್ ಆದೇಶ

ಕಾಸರಗೋಡು: ಜಿಲ್ಲೆಯ ಅಡೂರು ಬಳಿಯ ಕೋರಿಕಂಡ ಅಂಗನವಾಡಿಗೆ ಕನ್ನಡ ಗೊತ್ತಿರುವ ಶಿಕ್ಷಕಿಯನ್ನು ನೇಮಿಸುವಂತೆ ಕೇರಳ ಹೈಕೋರ್ಟ್ ತೀರ್ಪು ನೀಡಿದೆ.

ಕನ್ನಡ ಮಾಧ್ಯಮದ ಈ ಅಂಗನವಾಡಿಗೆ ರಾಜ್ಯ ಸರ್ಕಾರ ಮಲಯಾಳ ಭಾಷೆಯ ಶಿಕ್ಷಕಿಯನ್ನು ನೇಮಿಸಿದೆ. ಈ ಅಂಗನವಾಡಿಯ ಮಕ್ಕಳ ಪೋಷಕರು, ಅಂಗನವಾಡಿ ಮೇಲುಸ್ತುವಾರಿ ಸಮಿತಿಯವರು (ಎಎಲ್‌ಎಂಎಸ್) ಹೈಕೋರ್ಟ್‌ಗೆ 3 ಪ್ರತ್ಯೇಕ ರಿಟ್ ಅರ್ಜಿ ಸಲ್ಲಿಸಿದ್ದರು. ವಾದ-ಪ್ರತಿವಾದ ಆಲಿಸಿದ ಹೈಕೋರ್ಟ್, ಮಲಯಾಳ ಶಿಕ್ಷಕಿಯ ನೇಮಕ ಸರಿಯಲ್ಲ; ತಕ್ಷಣವೇ ಕನ್ನಡ ಶಿಕ್ಷಕಿಯನ್ನು ನೇಮಿಸಿ ಎಂದು ಆದೇಶಿಸಿದೆ.

ಆರಂಭ– ಅಂತ್ಯ ಎರಡಕ್ಕೂ ಸಾಕ್ಷಿಯಾದ ಚಿಕ್ಕಮಗಳೂರಿನ ಹಾಗಲಗಂಚಿ: ಅಂದು ನಿರಾಸೆ– ಇಂದು ಸಮಾಧಾನ

ಎಎನ್‌ಎಫ್ ಇಲ್ಲದೆ ನಕ್ಸಲ್ ನಾಡು ನಿರಾಳ

• ವಿಜಯಕುಮಾರ್ ಎಸ್‌.ಕೆ.

ಚಿಕ್ಕಮಗಳೂರು: ನಕ್ಸಲ್ ಚಳವಳಿಯ ಕೊನೆಯ ಕೊಂಡಿಗಳು ಮುಖ್ಯವಾಹಿನಿಗೆ ಬಂದ ನಂತರ ಈಗ ನಕ್ಸಲ್ ನಾಡಿನಲ್ಲಿ ಇನ್ನು ಮುಂದೆ ನಕ್ಸಲ್ ನಿಗ್ರಹ ಪಡೆ (ಎಎನ್‌ಎಫ್) ಸದ್ದು ಇರುವುದಿಲ್ಲ ಎಂಬ ಸಮಾಧಾನ ಕಂಡುಬಂದಿದೆ. ನಕ್ಸಲ್ ಚಳವಳಿ ಆರಂಭವಾದ ಸ್ಥಳದಿಂದಲೇ ಅಂತ್ಯವನ್ನೂ ಕಂಡಿದ್ದು, ಈ ಭಾಗದ ಜನರಲ್ಲಿ ಈಗ ನಿರಾಳ ಭಾವ ಮನೆ ಮಾಡಿದೆ.

25 ವರ್ಷಗಳ ಹಿಂದೆ ನಕ್ಸಲ್ ಚಳವಳಿ ಮೊಳಕೆಯ ಮಾತುಗಳು ಆರಂಭವಾಗಿದ್ದು ಶೃಂಗೇರಿ ತಾಲ್ಲೂಕಿನ ಹಾಗಲಗಂಚಿ ಮತ್ತು ಸುತ್ತಮುತ್ತಲ ಕಾಡಂಚಿನ ಜನವಸತಿಗಳಲ್ಲಿ. ಬಂದೂಕು ಹಿಡಿದು ಹೋದವರು ಮತ್ತೆ ಅದೇ ಕಾಡಂಚಿನ ಹಾಗಲಗಂಚಿ ಸುತ್ತಮುತ್ತಲ ಕಾಡಿನಲ್ಲಿ ಕೊನೆಯ ಸಭೆಗಳನ್ನು ನಡೆಸಿ ಹೊರ ಬಂದರು. ಬಂದೂಕು ಬಿಟ್ಟು ಮುಖ್ಯವಾಹಿನಿಗೆ ಬರಬೇಕು ಎಂದು ಬಯಸಿದಾಗ ನಕ್ಸಲರಿಗೂ ನೆನಪಾಗಿದ್ದು ಇದೇ ಹಾಗಲಗಂಚಿ. ಅವರನ್ನು ಮುಖ್ಯವಾಹಿನಿಗೆ ತರಲು ಪ್ರಮುಖ ಪಾತ್ರ ವಹಿಸಿದ್ದು ಕೂಡ ಇದೇ ಊರಿನ ಜನ.



ನಕ್ಸಲರು ಕಾಡಿನಿಂದ ಹೊರ ಬರುವ ಮುನ್ನ ಕೊನೆಯ ಬಾರಿಗೆ ಶೃಂಗೇರಿ ತಾಲ್ಲೂಕಿನ ಕಾಡಿನಲ್ಲಿ ಕೂಂಬಿಂಗ್ ನಡೆಸಿದ್ದ ಎಎನ್‌ಎಫ್ ಸಿಬ್ಬಂದಿ

ಎರಡೂವರೆ ದಶಕಗಳ ಹಿಂದೆ ಮೀಸಲು ಅರಣ್ಯ ವಿರೋಧಿ ಹೋರಾಟ, ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಹೋರಾಟದಲ್ಲಿ ಸಕ್ರಿಯ ವಾಗಿದ್ದ ಯುವಕ–ಯುವತಿಯರು ನಿರಾಶರಾಗಿದ್ದರು. ಸಾಕೇತ್ ರಾಜನ್ ಅವರಿಂದ ಇತಿಹಾಸದ ಪಾಠಗಳನ್ನು ಕೇಳುತ್ತಿದ್ದ ವರು ಅವರ ಪ್ರಭಾವಕ್ಕೆ ಒಳಗಾಗಿ ಬಂದೂಕು ಹೆಗಲಿಗೇರಿಸಿ ಕಾಡಿಗೆ ನಡೆದೇ ಬಿಟ್ಟರು. ಬಂದೂಕು ಹಿಡಿಯದೆ ಊರಿನಲ್ಲೇ ಉಳಿದ ಅವರ ಸಮಕಾಲೀನ ಹೋರಾಟಗಾರರು, ಕುಟುಂಬದವರು, ಸಂಬಂಧಿಕರು ನೆಮ್ಮದಿಯನ್ನೇ ಕಳೆದು ಕೊಂಡಿದ್ದರು. ನಕ್ಸಲ್ ನಿಗ್ರಹ ಪಡೆಯ (ಎಎನ್‌ಎಫ್) ಸಿಬ್ಬಂದಿ ಆಗಾಗ ಬಂದು ನೀಡುತ್ತಿದ್ದ ಕಿರುಕುಳದಿಂದ ರೋಸಿ ಹೋಗಿದ್ದರು. ನಕ್ಸಲರ ಸಂಪರ್ಕ ಇಲ್ಲದಿದ್ದರೂ ಹಲವರು ಮೊಕದ್ದಮೆಗಳನ್ನು ಎದುರಿಸಿದರು. ಜೈಲಿಗೂ ಹೋಗಿ ಬಂದರು.

'ಮನೆಯಲ್ಲಿ ಮಾಡುವ ಅಡುಗೆ ಸ್ವಲ್ಪ ಜಾಸ್ತಿಯಾದರೂ ಎಎನ್‌ಎಫ್ ಅಧಿಕಾರಿಗಳಿಂದ ಪ್ರಶ್ನೆಗಳನ್ನು ಎದುರಿಸಿದ್ದೇವೆ. ನಕ್ಸಲರೊಂದಿಗೆ ಸಂಪರ್ಕ ಇಲ್ಲ ಎಂದರೂ ಎರಡು ಬಾರಿ ಬಂಧನಕ್ಕೆ ಒಳಗಾಗಿದ್ದೇನೆ' ಎಂದು ಜೋಗಿಬೈಲು ರವಿ ಹೇಳಿದರು.

'ಸಂಬಂಧಿಕರು ಮನೆಗೆ ಬರುವುದನ್ನು ನಿಲ್ಲಿಸಿದರು. ಅಪರೂಪಕ್ಕೆ ಬರುತ್ತಿದ್ದ ಸ್ನೇಹಿತರು ಕಿರಿಕಿರಿ ಅನುಭವಿಸಿ ಬೇಸತ್ತರು. ಆಪ್ತರೇ ಆಗಿದ್ದ ವೈದ್ಯರು ಮತ್ತೆ ಆಸ್ಪತ್ರೆಗೆ ಬರುವುದು ಬೇಡ, ನೀವು ಬಂದರೆ ಪೊಲೀಸರು ನಮಗೆ ಕಿರಿಕಿರಿ ನೀಡುತ್ತಾರೆ ಎಂದರು... ಹೀಗೆ ಒಂದಷ್ಟು ವರ್ಷ ಅನುಭವಿಸಿದ ತೊಂದರೆಗಳು ಅಷ್ಟಿಷ್ಟಲ್ಲ. 'ವಾಚಕರ ವಾಣಿ'ಗೆ ಬರೆದಿದ್ದ ಬರಹಗಳನ್ನೂ ಪೊಲೀಸರು ಹೊತ್ತೊಯ್ದರು. ಮಾನವ ಹಕ್ಕು ಆಯೋಗ, ಮಹಿಳಾ ಆಯೋಗ, ಮಾಧ್ಯಮಗಳ ಕಚೇರಿಗೆ ಸುತ್ತಾಡಿ ಜೀವ–ಜೀವನ ಉಳಿಸಿಕೊಂಡೆವು' ಎಂದು ಹಾಗಲಗಂಚಿಯ ಭಾಗ್ಯ ನೆನಪು ಮಾಡಿಕೊಂಡರು.

'ಈಚೆಗೆ ಏಳು ಮಂದಿ ಮುಖ್ಯವಾಹಿನಿಗೆ ಬರುವ ತನಕ ಜೀವ ಬಿಗಿ ಹಿಡಿದು ಮಾತುಕತೆ ನಡೆಸಿದೆವು' ಎಂದು ಹಾಗಲಗಂಚಿ ವೆಂಕಟೇಶ್ ಸಮಾಧಾನದ ನಿಟ್ಟುಸಿರು ಬಿಟ್ಟರು.

'ಯಾರೂ ನಂಬಲಿಲ್ಲ; ಹೋರಾಟವೂ ಉಳಿಯಲಿಲ್ಲ'

'ಬಂದೂಕು ಹಿಡಿದು ನಡೆಸುವ ಹೋರಾಟದ ಬಗ್ಗೆ ನಮಗೆ ನಂಬಿಕೆ ಇರಲಿಲ್ಲ. ಪ್ರಜಾಸತ್ತಾತ್ಮಕ ಚಳವಳಿಯ ಮೂಲಕವೇ ನ್ಯಾಯ ಕೇಳುವ ಹಾದಿಯನ್ನು ನಾನು ನಂಬಿದ್ದೆ. ಆದರೆ, ನನ್ನನ್ನು ಪೊಲೀಸರು ನಂಬಲಿಲ್ಲ, ಕಾಡಿಗೆ ಹೋದ ಗೆಳೆಯರೂ ನೆನಪಿಸಿಕೊಳ್ಳಲಿಲ್ಲ' ಎಂದು ಕಲ್ಕುಳಿ ವಿಠಲ ಹೆಗಡೆ ಬೇಸರ ವ್ಯಕ್ತಪಡಿಸಿದರು.

'ನಮ್ಮೊಂದಿಗೆ ಹೋರಾಟದಲ್ಲಿ ಇದ್ದವರು ಒಬ್ಬೊಬ್ಬರಾಗಿ ಕಾಣೆಯಾದರು. ಬಂದೂಕು ಹಿಡಿದು ಕಾಡು ಸೇರಿದ್ದಾರೆ ಎಂಬುದು ಎಷ್ಟೋ ದಿನಗಳ ನಂತರ ಗೊತ್ತಾಯಿತು. ಆದರೆ, ಪೊಲೀಸರು ನನಗೆ ಎಲ್ಲವೂ ಗೊತ್ತಿದೆ, ನಾನೇ ಎಲ್ಲರನ್ನು ಕಳಿಸಿದ್ದೇನೆ ಎಂಬಂತೆ ಕಾಡಿದರು' ಎಂದರು.

'ನಕ್ಸಲ್ ಹೋರಾಟದ ಉದ್ದೇಶ, ಅವರ ಬೇಡಿಕೆ ಬಗ್ಗೆ ಸಹಮತ ಇತ್ತು. ಆದರೆ ಸಶಸ್ತ್ರ ಹೋರಾಟದ ಬಗ್ಗೆ ನಮಗೆ ತಕರಾರಿತ್ತು. ಇನ್ನೊಂದೆಡೆ ನಕ್ಸಲ್ ಹೋರಾಟ ಜೀವಂತವಾಗಿದ್ದ ಅಷ್ಟೂ ದಿನ ಪ್ರಜಾಸತ್ತಾತ್ಮಕ ಹೋರಾಟಕ್ಕೆ ಅವಕಾಶ ಇಲ್ಲದಂತೆ ಪ್ರಭುತ್ವ ಮಾಡಿತು' ಎಂದು ಹೋರಾಟಗಾರ ಗುರುಮೂರ್ತಿ ಬೇಸರ ವ್ಯಕ್ತಪಡಿಸುತ್ತಾರೆ.

'ಇಂತಹ ಸಂದಿಗ್ಧ ಸಂದರ್ಭದಲ್ಲಿ ನಕ್ಸಲರ ಗುಂಪು ಸೇರಬೇಕಿತ್ತು, ಇಲ್ಲವೇ ಪೊಲೀಸರಿಗೆ ಮಾಹಿತಿದಾರರಾಗಿ ಕೆಲಸ ಮಾಡಬೇಕಿತ್ತು. ಇವೆರಡನ್ನೂ ಬಿಟ್ಟರೆ ಮೂರನೇ ಅವಕಾಶ ಇರಲಿಲ್ಲ. ಇವೆರಡೂ ನಮಗೆ ಇಷ್ಟ ಇರಲಿಲ್ಲ. ಇದರಿಂದಾಗಿ ಭೂಮಿಯ ಹಕ್ಕು ಪಡೆಯುವ ನಮ್ಮ ಹೋರಾಟಕ್ಕೆ ಹಿನ್ನಡೆಯಾಯಿತು. ಸಾಗುವಳಿದಾರರು ಭೂಮಿಯ ಹಕ್ಕುಪತ್ರ ಪಡೆಯಲು ಇಂದಿಗೂ ಸಾಧ್ಯವೇ ಆಗಿಲ್ಲ. ಮುಂದಿನ ದಿನಗಳಲ್ಲಿ ಪ್ರಜಾಸತ್ತಾತ್ಮಕ ಹಾದಿಯಲ್ಲಿ ಹೋರಾಟ ಮುನ್ನಡೆಸುವ ಆಲೋಚನೆಗಳು ನಡೆಯಬೇಕಿದೆ' ಎಂದರು.

ಸುದ್ದಿ 2 ನಿಮಿಷ

'ಬಿಜೆಪಿ ಸರ್ಕಾರದಲ್ಲಿ ₹5 ಕೋಟಿ ಕೊಟ್ಟವರಿಗೆ ಕುಲಪತಿ ಹುದ್ದೆ'

ಮೈಸೂರು: 'ರಾಜ್ಯದಲ್ಲಿ 9 ವಿಶ್ವವಿದ್ಯಾಲಯಗಳನ್ನು ಮುಚ್ಚಲು ಮುಂದಾಗಿರುವ ರಾಜ್ಯ ಸರ್ಕಾರದ ನಿಲುವು ಸ್ವಾಗತಾರ್ಹ' ಎಂದು ವಿಧಾನಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್ ಹೇಳಿದರು.



ಇಲ್ಲಿ ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಸೂಕ್ತ ಅನುದಾನವಿಲ್ಲದೆ ಜಿಲ್ಲೆಗೊಂದು ವಿಶ್ವವಿದ್ಯಾಲಯ ಸ್ಥಾಪಿಸಿದ್ದು ತಪ್ಪು' ಎಂದರು.

'ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ವಿದ್ದಾಗ ₹5 ಕೋಟಿ ನೀಡಿದವರಿಗೆ ಕುಲಪತಿ ಹುದ್ದೆ ಕೊಡಲಾಯಿತು. ಇದು ಬಹಿರಂಗ ಸತ್ಯ. ವಿದ್ಯೆಯನ್ನು ಮಾರಾಟಕ್ಕಿಟ್ಟ ಭ್ರಷ್ಟ ವ್ಯವಸ್ಥೆ ಈಗಲೂ ಮುಂದುವರಿದಿದೆ. ವಿದ್ಯಾರ್ಥಿಗಳ ಶುಲ್ಕದಲ್ಲಿ ವಿಶ್ವ ವಿದ್ಯಾಲಯ ನಡೆಯುವಂತಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಉತ್ತರ ಪ್ರದೇಶ, ಪಂಜಾಬ್‌ನಿಂದ ವಿದ್ಯುತ್ ಖರೀದಿ: ಜಾರ್ಜ್

ದಾವಣಗೆರೆ: ಬೇಸಿಗೆಯಲ್ಲಿ ವಿದ್ಯುತ್‌ಗೆ ಶೇ 5ರಿಂದ 10ರಷ್ಟು ಬೇಡಿಕೆ ಹೆಚ್ಚಿದ್ದು, ಕೊರತೆ ನೀಗಿಸಲು ಉತ್ತರ ಪ್ರದೇಶ, ಪಂಜಾಬ್‌ನಿಂದ ವಿನಿಮಯ ಯೋಜನೆಯಡಿ ವಿದ್ಯುತ್ ಖರೀದಿಗೆ ನಿರ್ಧರಿಸಲಾಗಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

'ರಾಜ್ಯದಲ್ಲಿ ಸದ್ಯ ನಿತ್ಯ 18,500 ಮೆಗಾವಾಟ್ ವಿದ್ಯುತ್‌ಗೆ ಬೇಡಿಕೆ ಇದೆ. ಮಾರ್ಚ್ ಹಾಗೂ ಏಪ್ರಿಲ್‌ನಲ್ಲಿ ಈ ಬೇಡಿಕೆ ಇನ್ನೂ ಹೆಚ್ಚುವ ಸಾಧ್ಯತೆ ಇದೆ. ಉತ್ತರ ಪ್ರದೇಶ ಹಾಗೂ ಪಂಜಾಬ್‌ನಿಂದ ಪಡೆದ ವಿದ್ಯುತ್ ಅನ್ನು ಜೂನ್ ಬಳಿಕ ಮರಳಿ ನೀಡಲಾಗುತ್ತದೆ. ಈ ಕುರಿತು ಹಲವು ಸುತ್ತಿನ ಚರ್ಚೆಗಳು ನಡೆದಿವೆ' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ವಿದ್ಯುತ್ ದರ ಏರಿಕೆ ಸಂಬಂಧ ಎಲ್ಲ 'ಎಸ್ಕಾಂ'ಗಳು ಪ್ರತಿ ವರ್ಷ ಪ್ರಸ್ತಾವ ಸಲ್ಲಿಸುತ್ತವೆ. ಅಹವಾಲು ಆಲಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ನಿರ್ಧಾರ ಕೈಗೊಳ್ಳುತ್ತದೆ. ಕೆಇಆರ್‌ಸಿ ಶಿಫಾರಸು ಆಧರಿಸಿ ಸರ್ಕಾರದ ನಿರ್ಧಾರ ಹೊರಬೀಳಲಿದೆ. 'ಎಸ್ಕಾಂ'ಗಳಿಗೆ ಹಲವು ಇಲಾಖೆಗಳು ಬಾಕಿ ಇರುವ ಬಿಲ್ ಪಾವತಿಸಿದರೆ ನಷ್ಟದಿಂದ ಹೊರಬರಲು ಸಾಧ್ಯ ' ಎಂದರು.

'ಪ್ರಸಕ್ತ ವರ್ಷ ರಾಜ್ಯದ ಯಾವ ಭಾಗದಲ್ಲೂ ಲೋಡ್ ಶೆಡ್ಡಿಂಗ್ ಇಲ್ಲ. ಕೃಷಿ ಪಂಪ್ ಸೆಟ್‌ಗಳಿಗೆ 7 ಗಂಟೆ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ' ಎಂದು ಹೇಳಿದರು.

ಆಗಮ ಶಿಕ್ಷಣ ಪ್ರಮಾಣ ಪತ್ರ 21ಕ್ಕೆ ವಿತರಣೆ

ಬೆಂಗಳೂರು: ಧಾರ್ಮಿಕ ದತ್ತಿ ಇಲಾಖೆಯ ಆಗಮ ಶಿಕ್ಷಣ ಮತ್ತು ಪರೀಕ್ಷಾ ಸಮಿತಿಯು ಏಳು ಆಗಮಗಳಿಗೆ ಸಂಬಂಧಿಸಿ ನಡೆಸಿದ್ದ ಪರೀಕ್ಷೆಗಳಲ್ಲಿ ಉತ್ತೀರ್ಣರಾದರಿಗೆ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ ಫೆ. 21ರಂದು ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ನಡೆಯಲಿದೆ.

2019–20, 2020–21, 2021–22ನೇ ಸಾಲಿನ ಆಗಮ ಪರೀಕ್ಷೆಗಳನ್ನು 2022ನೇ ಸಾಲಿನಲ್ಲಿ ನಡೆಸಲಾಯಿತು. ಸರ್ವಾಗಮ ಪ್ರವರ ಪ್ರಸಿದ್ಧ ಪರೀಕ್ಷೆಗೆ 2,258 ವಿದ್ಯಾರ್ಥಿಗಳು ಹಾಜರಾಗಿದ್ದರು. ಇದರಲ್ಲಿ 936 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸರ್ವಾಗಮ ಪ್ರವೀಣ ಪ್ರಸಿದ್ಧ ಪರೀಕ್ಷೆಗೆ 593 ವಿದ್ಯಾರ್ಥಿಗಳು ಹಾಜರಾಗಿದ್ದು, 348 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

2022–23, 2023–24ನೇ ಸಾಲಿನ ಸರ್ವಾಗಮ ಪ್ರಸಿದ್ಧ ಪರೀಕ್ಷೆಯನ್ನು 2024ನೇ ಸಾಲಿನಲ್ಲಿ ನಡೆಸಲಾಯಿತು. ಸರ್ವಾಗಮ ಪ್ರವರ ಪ್ರಸಿದ್ಧ ಪರೀಕ್ಷೆಗೆ 1,245 ವಿದ್ಯಾರ್ಥಿಗಳು ಹಾಜರಾಗಿದ್ದು, 419 ಮಂದಿ ಉತ್ತೀರ್ಣರಾಗಿದ್ದಾರೆ.

ಸಚಿವ ಎಚ್‌.ಸಿ. ಮಹದೇವಪ್ಪ ಅವರು ಪ್ರಮಾಣ ಪತ್ರ ವಿತರಿಸಲಿದ್ದಾರೆ. ವಿದ್ವಾಂಸ ಭಾಷ್ಯಂ ಸ್ವಾಮೀಜಿ ಅವರು ಭಾಷಣ ಮಾಡಲಿದ್ದಾರೆ ಎಂದು ಮುಜರಾಯಿ ಇಲಾಖೆಯ ಪ್ರಕಟಣೆ ತಿಳಿಸಿದೆ.

ಭೂ ಒತ್ತುವರಿ: ಸರ್ವೆ ಕಾರ್ಯ ಪೂರ್ಣ

ಕೇಂದ್ರ ಸಚಿವ ಎಚ್‌ಡಿಕೆ, ಸಂಸದ ಡಾ.ಮಂಜುನಾಥ್, ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಜಮೀನು ಸರ್ವೆ



ರಾಮನಗರ ತಾಲ್ಲೂಕಿನ ಬಿಡದಿ ಬಳಿಯ ಕೇತಗಾನಹಳ್ಳಿಯಲ್ಲಿಯಲ್ಲಿರುವ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರ ತೋಟ ಹಾಗೂ ಸುತ್ತಮುತ್ತಲಿನ ಜಮೀನಿನ ಸರ್ವೆ ಕಾರ್ಯವನ್ನು ಅಧಿಕಾರಿಗಳು ಮಂಗಳವಾರ ನಡೆಸಿದರು

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ, ಬೆಂಗಳೂರು ಗ್ರಾಮಾಂತರ ಸಂಸದ ಡಾ. ಸಿ.ಎನ್. ಮಂಜುನಾಥ್ ಹಾಗೂ ಸಂಬಂಧಿ, ಮಾಜಿ ಸಚಿವ ಡಿ.ಸಿ. ತಮ್ಮಣ್ಣ ಅವರಿಗೆ ಸೇರಿದ ಜಮೀನುಗಳ ಜಂಟಿ ಸರ್ವೆ ಕಾರ್ಯ ಮಂಗಳವಾರ ಪೂರ್ಣಗೊಂಡಿದೆ.

ಕೇತಗಾನಹಳ್ಳಿಯಲ್ಲಿ ಭೂ ಒತ್ತುವರಿ ಮಾಡಿಕೊಂಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಹಾಗೂ ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಸೋಮವಾರ ಜಮೀನು ಸರ್ವೆ ಕಾರ್ಯ ಆರಂಭಿಸಿದ್ದರು.

ಜಿಲ್ಲೆಯ ವಿವಿಧ ಭಾಗಗಳ ಅಧಿಕಾರಿಗಳನ್ನು ಒಳಗೊಂಡ ಮೂರು ತಂಡಗಳು ಅತ್ಯಾಧುನಿಕ ಉಪಕರಣಗಳೊಂದಿಗೆ ಕುಮಾರಸ್ವಾಮಿ ಹಾಗೂ ತಮ್ಮಣ್ಣ ಅವರ ಜಮೀನು ಇರುವ ಸರ್ವೆ ನಂಬರ್ 7 ಮತ್ತು 8 ಹಾಗೂ ಡಾ. ಸಿ.ಎನ್. ಮಂಜುನಾಥ್ ಅವರಿಗೆ ಸೇರಿದ ಸರ್ವೆ ನಂ. 16ರ ಜಮೀನಿನ ಸರ್ವೆ ನಡೆಸಿದವು. ಕಂದಾಯ ಇಲಾಖೆಯ ಸ್ಥಳೀಯ ಅಧಿಕಾರಿಗಳು ಈ ತಂಡಕ್ಕೆ ಸಹಾಯ ನೀಡಿದರು.

'ಹೈಕೋರ್ಟ್ ಸೂಚನೆಯಂತೆ ಜಮೀನಿನ ಸರ್ವೆ ಕಾರ್ಯ ನಡೆಸಲಾಗಿದೆ. ಸರ್ಕಾರ ರಚಿಸಿರುವ ವಿಶೇಷ ತನಿಖಾ ತಂಡಕ್ಕೆ(ಎಸ್‌ಐಟಿ) ಜಂಟಿ ಸರ್ವೆ ವರದಿ ಸಲ್ಲಿಸಲಾಗುವುದು. ಎಸ್‌ಐಟಿ ಈ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಲಿದೆ. ಈ ಹಂತದಲ್ಲಿ ನಾವು ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ. ಮಾಹಿತಿ ಬೇಕಾದವರು ಮೇಲಧಿಕಾರಿಗಳನ್ನು ಸಂಪರ್ಕಿಸ ಬಹುದು' ಎಂದು ಸರ್ವೆ ಕಾರ್ಯದಲ್ಲಿ ಪಾಲ್ಗೊಂಡಿದ್ದ ಅಧಿಕಾರಿಗಳು ತಿಳಿಸಿದರು.

ಅಧಿಕಾರಿಗಳ ವಿರುದ್ಧ ಆಕ್ರೋಶ

ಸರ್ವೆ ವೇಳೆ ಸ್ಥಳದಲ್ಲಿ ಜಮಾಯಿಸಿದ್ದ ಜಮೀನಿನ ಮೂಲ ಮಾಲೀಕರು ಸರ್ವೆ ತಂಡದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಸರ್ವೆ ನಡೆಯುವ ಫೆ. 17ರಂದು ಜಮೀನಿನಲ್ಲಿ ಹಾಜರಿದ್ದು ತಮ್ಮ ಸರ್ವೆ ನಂಬರ್ ಹಾಗೂ ಹಿಸ್ಸೆಗಳನ್ನು ತೋರಿಸಿ ಅಗತ್ಯ ದಾಖಲೆಗಳನ್ನು ಒದಗಿಸಬೇಕು ಎಂದು ಭೂ ಮಾಪನ ಇಲಾಖೆ ಅಧಿಕಾರಿಗಳು ನಮಗೆ ಫೆ. 12ರಂದು ನೋಟಿಸ್ ಕೊಟ್ಟಿದ್ದರು' ಎಂದು ತಿಳಿಸಿದರು.

'ಅದರಂತೆ, ಜಮೀನಿಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಸೋಮವಾರ ಮತ್ತು ಮಂಗಳವಾರ ಎರಡೂ ದಿನ ಸ್ಥಳದಲ್ಲಿದ್ದೆವು. ಆದರೆ, ಅಧಿಕಾರಿಗಳು ನಮ್ಮ ದಾಖಲೆಗಳನ್ನು ಪರಿಶೀಲಿಸಲಿಲ್ಲ. ನಮ್ಮ ಸಮ್ಮುಖದಲ್ಲಿ ಸರ್ವೆ ನಡೆಸಲಿಲ್ಲ. ಈ ಕುರಿತು ಅಧಿಕಾರಿಗಳನ್ನು ಕೇಳಿದಾಗ 'ನಮಗೇನೂ ಗೊತ್ತಿಲ್ಲ. ಮೇಲಧಿಕಾರಿಗಳನ್ನು ಕೇಳಿ' ಎಂದು ನುಣುಚಿಕೊಂಡರು' ಎಂದು ಬೇಸರ ತೋಡಿಕೊಂಡರು.

'ಸರ್ವೆ ಸಂದರ್ಭದಲ್ಲಿ ಎಲ್ಲರು ಹಾಜರಿರಬೇಕು ಎಂದು ಹೇಳಿದ್ದ ಅಧಿಕಾರಿಗಳು, ನಮಗೆ ಗೊತ್ತಾಗದಂತೆ ಒಳಗೊಳಗೆ ತಮಗೆ ಬೇಕಾದಂತೆ ಸರ್ವೆ ಮಾಡಿಕೊಂಡು ಹೋಗಿದ್ದಾರೆ. ಈ ಸರ್ವೆ ನಾಮಕಾವಸ್ತೆಗೆ ನಡೆದಿದ್ದು, ಸ್ಥಳೀಯರ ಸಮ್ಮುಖದಲ್ಲಿ ಮರು ಸರ್ವೆ ಆಗಬೇಕು' ಎಂದು ಆಗ್ರಹಿಸಿದರು.

ನನ್ನ ವಿರುದ್ಧ ಷಡ್ಯಂತ್ರ: ಸಂಸದ ಮಂಜುನಾಥ್

'ಕೇತಗಾನಹಳ್ಳಿಯಲ್ಲಿ ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡಿದ್ದೇನೆ ಎಂಬ ಆರೋಪದಲ್ಲಿ ಹುರುಳಿಲ್ಲ. ಇಂತಹ ಆರೋಪದ ಮೂಲಕ ನನ್ನ ಹೆಸರಿಗೆ ಮಸಿ ಬಳಿಯುವ ಷಡ್ಯಂತ್ರ ನಡೆಯುತ್ತಿದೆ' ಎಂದು ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಾ. ಸಿ.ಎನ್. ಮಂಜುನಾಥ್ ಮಂಗಳವಾರ ರಾಮನಗರದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

'1996ರಲ್ಲಿ ನಮ್ಮ ತಂದೆ ಕೇತಗಾನಹಳ್ಳಿಯಲ್ಲಿ ಖರೀದಿಸಿದ್ದ 3 ಎಕರೆ 25 ಗುಂಟೆ ಜಮೀನು ಅವರು ನಿಧನರಾದ ಬಳಿಕ ನನ್ನ ಹೆಸರಿಗೆ ವರ್ಗಾವಣೆಯಾಗಿದೆ. ಚುನಾವಣೆಗೆ ಸಲ್ಲಿಸಿದ್ದ ನಾಮಪತ್ರದ ಅಫಿಡೆವಿಟ್‌ನಲ್ಲೂ ಈ ಮಾಹಿತಿ ನಮೂದಿಸಿದ್ದೇನೆ. ರೈತ ಕುಟುಂಬದವರಾದ ನಮಗೆ ಜಮೀನು ಒತ್ತುವರಿ ಮಾಡಿಕೊಳ್ಳುವ ಅಗತ್ಯವಿಲ್ಲ. ಕಾನೂನು ಪ್ರಕಾರ ಈಗ ನಡೆಯುತ್ತಿರುವ ಸರ್ವೆಯಲ್ಲಿ ಸತ್ಯಾಂಶ ಗೊತ್ತಾಗಲಿದೆ' ಎಂದರು.

ಜಾತಿಗಣತಿ ವರದಿ ಜಾರಿಗೆ ಬದ್ಧ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ಜಾರಿಗೆ ತರಬೇಕು ಮತ್ತು ಒಟ್ಟು ಮೀಸಲಾತಿ ಪ್ರಮಾಣವನ್ನು ಶೇ 75ಕ್ಕೆ ಹೆಚ್ಚಿಸಬೇಕು ಎಂದು ಹಿಂದುಳಿದ ವರ್ಗಗಳ ಸಂಘಟನೆಗಳು ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿವೆ.

ಹಿಂದುಳಿದ ವರ್ಗಗಳ ಪ್ರತಿನಿಧಿಗಳ ಜತೆ ಮಂಗಳವಾರ ನಡೆಸಿದ ಬಜೆಟ್ ಪೂರ್ವಬಾವಿ ಸಭೆಯಲ್ಲಿ, ಈ ಒತ್ತಾಯ ಕೇಳಿಬಂತು. ಇದಕ್ಕೆ ಪ್ರತಿಕ್ರಿಯಿಸಿದ, ಆ ಬಗ್ಗೆ ಭರವಸೆ ನೀಡಿದ ಸಿದ್ದರಾಮಯ್ಯ, 'ಜಾತಿ ಗಣತಿ ವರದಿಯು ವೈಜ್ಞಾನಿಕವಾಗಿ ನಡೆದಿದ್ದು ಅದನ್ನು ನಮ್ಮ ಸರ್ಕಾರ ಖಂಡಿತವಾಗಿಯೂ ಜಾರಿಗೊಳಿಸುತ್ತದೆ ಇದರಲ್ಲಿ ಯಾವುದೇ ಸಂಶಯ ಬೇಡ' ಎಂದರು.

'ಜಾತಿ ಗಣತಿ ವರದಿ ವೈಜ್ಞಾನಿಕವಾಗಿದ್ದು, ಸರ್ಕಾರ ಅದನ್ನು ಸ್ವೀಕರಿಸಿದೆ ಮತ್ತು ಜಾರಿಗೊಳಿಸಲು ಸರ್ಕಾರ ಬದ್ಧವಾಗಿದೆ. ಮುಂದಿನ ದಿನಗಳಲ್ಲಿ ಅದನ್ನು ಅನುಷ್ಠಾನಕ್ಕೆ ತರುತ್ತೇವೆ' ಎಂದರು.

'ಅಲೆಮಾರಿ ಜನಾಂಗಗಳಿಗೆ ಉಚಿತ ಶಿಕ್ಷಣ ಒದಗಿಸಲು ಸರ್ಕಾರ ಬದ್ಧವಾಗಿದೆ. ಬಜೆಟ್‌ನಲ್ಲಿ ಈ ಬಗ್ಗೆ ವಿಶೇಷ ಗಮನಹರಿಸುತ್ತೇನೆ' ಎಂದು ಸಿದ್ದರಾಮಯ್ಯ ಅವರು ಭರವಸೆ ನೀಡಿದರು.

ಸಿ.ಎಂಗೆ ಪರಿಶಿಷ್ಟ ಸಮುದಾಯದ ಮುಖಂಡರ ಆಗ್ರಹ

'ಗ್ಯಾರಂಟಿ'ಗೆ ಪರಿಶಿಷ್ಟರ ಹಣ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗೆ (ಟಿಎಸ್‌ಪಿ) ಒದಗಿಸಿದ ಅನುದಾನವನ್ನು ಇತರೆ ಯೋಜನೆಗಳಿಗೆ ಬಳಕೆ ಮಾಡದಂತೆ ದಲಿತ ಸಮುದಾಯದ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದರು.

ವಿಧಾನಸೌಧದಲ್ಲಿ ದಲಿತ ಸಂಘಟನೆಗಳ ಮುಖಂಡರ ಜತೆ ಮಂಗಳವಾರ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಎಸ್‌ಸಿಎಸ್‌ಪಿ, ಟಿಎಸ್‌ಪಿಯ ₹39,914 ಕೋಟಿ ಅನುದಾನವನ್ನು 'ಗ್ಯಾರಂಟಿ ಸೇರಿದಂತೆ ಇತರೆ ಯಾವುದೇ ಯೋಜನೆಗಳಿಗೆ ಬಳಕೆ ಮಾಡಬಾರದು' ಎಂದು ಆಗ್ರಹಪಡಿಸಿದರು.

'ಗ್ಯಾರಂಟಿ ಯೋಜನೆಯಲ್ಲಿ ಪರಿಶಿಷ್ಟ ಫಲಾನುಭವಿಗಳೂ ಇದ್ದಾರೆ ಎಂಬ ಲೆಕ್ಕಾಚಾರದಲ್ಲಿ ಸುಮಾರು ₹11 ಸಾವಿರ ಕೋಟಿ ಬಳಸಿಕೊಳ್ಳಲಾಗಿದೆ. ಬಜೆಟ್‌ನಲ್ಲಿ ಗ್ಯಾರಂಟಿಗೆ ಪ್ರತ್ಯೇಕ ಅನುದಾನ ಮೀಸಲಿಟ್ಟ ಮೇಲೆ ಪರಿಶಿಷ್ಟರ ನಿಧಿ ಬಳಕೆ ಸಲ್ಲದು ಎಂದರು.

'ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಜಮೀನು ಪರಭಾರೆ ನಿಷೇಧ- ಪಿಟಿಸಿಎಲ್) ಕಾಯ್ದೆಗೆ ತಿದ್ದುಪಡಿ ತಂದು ದಲಿತರ ಭೂಮಿ ಉಳಿಸಲಾಗಿದೆ. ಆದರೆ, ಸುಪ್ರೀಂ ಕೋರ್ಟ್ ತೀರ್ಪಿನಂತೆ ಕಾಲಮಿತಿ ಮತ್ತಿತರ ಕೆಲ ಅಂಶಗಳು ಕಾನೂನು ಹೋರಾಟಕ್ಕೆ ತೊಡಕಾಗಿವೆ. ಅಂತಹ ಎಲ್ಲ ತೊಡಕುಗಳನ್ನೂ ನಿವಾರಿಸಲು ಕ್ರಮ ಕೈಗೊಳ್ಳಬೇಕು ಎಂದು ಕೋರಿದರು.

ಡಿ.ಜಿ. ಸಾಗರ್, ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ಎಂ. ವೆಂಕಟಸ್ವಾಮಿ, ಶ್ರೀಧರ ಕಲಿವೀರ, ಬಸವ ರಾಜ ಕೌತಾಳ ಸಭೆಯಲ್ಲಿ ಪಾಲ್ಗೊಂಡಿದ್ದರು.

'ಎಸ್‌ಸಿಎಸ್‌ಪಿ ಕಾಯ್ದೆ ಬಿಜೆಪಿ ಏಕೆ ತರಲಿಲ್ಲ?'

'ದಲಿತರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನ ಅಭಿವೃದ್ಧಿ ಹಣದಲ್ಲಿ ಶೇ 24ರಷ್ಟು ಮೀಸಲಿಡುವ ಕಾಯ್ದೆ ಜಾರಿಗೆ ತಂದಿದ್ದೇ ಕಾಂಗ್ರೆಸ್ ನೇತೃತ್ವದ ಸರ್ಕಾರ. ಇಂತಹ ಕಾಯ್ದೆಯನ್ನು ಕೇಂದ್ರ ಅಥವಾ ಬಿಜೆಪಿ ಆಡಳಿತ ಇರುವ ಯಾವ ರಾಜ್ಯಗಳು ಜಾರಿಗೆ ತಂದಿಲ್ಲ ಏಕೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

'ಸಮುದಾಯದ ಗುತ್ತಿಗೆದಾರರಿಗೆ ₹1 ಕೋಟಿವರೆಗಿನ ಗುತ್ತಿಗೆಯಲ್ಲಿ ಮೀಸಲಾತಿ ತಂದಿದ್ದೆವು. ಈಗ ಅದನ್ನು ₹2 ಕೋಟಿಗೆ ವಿಸ್ತರಿಸಬೇಕು ಎನ್ನುವ ಬೇಡಿಕೆ ಪರಿಶೀಲಿಸುತ್ತೇನೆ' ಎಂದು ಸಿದ್ದರಾಮಯ್ಯ ಹೇಳಿದರು.

ಬಜೆಟ್ ಗಾತ್ರದ ಶೇ 24ರಷ್ಟು ಅನುದಾನವನ್ನು ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಡಬೇಕಿದ್ದು, ಈ ಬಾರಿ ₹45 ಸಾವಿರ ಕೋಟಿ ಸಿಗುವ ಭರವಸೆ ಇದೆ

ಹೆಣ್ಣೂರು ಶ್ರೀನಿವಾಸ್
ರಾಜ್ಯ ಸಂಚಾಲಕ, ದಸಂಸ

ದಸಂಸ ಸ್ಥಾಪಕ ಬಿ. ಕೃಷ್ಣಪ್ಪ ಅವರ ಜನ್ಮ ದಿನವನ್ನು ಸರ್ಕಾರಿ ಕಾರ್ಯಕ್ರಮವಾಗಿ ಆಚರಿಸಬೇಕು. ಅವರಿಗೆ ಮರಣೋತ್ತರ ಕರ್ನಾಟಕ ರತ್ನ ನೀಡಬೇಕು

ಎಂ. ಗುರುಮೂರ್ತಿ
ರಾಜ್ಯ ಸಂಚಾಲಕ ದಸಂಸ

ಗ್ಯಾರಂಟಿ ಯೋಜನೆ ಹಣ ತಿಂಗಳ ಸಂಬಳವಲ್ಲ: ಜಾರ್ಜ್

ಚಿತ್ರದುರ್ಗ: 'ಗ್ಯಾರಂಟಿ ಯೋಜನೆಗಳಲ್ಲಿ ಫಲಾನುಭವಿಗಳ ಸಂಖ್ಯೆ ಹೆಚ್ಚಿದ್ದು ಬಾಕಿ ಕೊಡುವುದು ತಡವಾಗಿರಬಹುದು. ಇದೇನು ತಿಂಗಳ ಸಂಬಳದ ರೀತಿಯಲ್ಲ. ಯಾವುದೇ ಸಮಸ್ಯೆಗಳಿದ್ದರೂ ಸರಿಪಡಿಸಲಾಗುವುದು' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.



ಕೆ.ಜೆ.ಜಾರ್ಜ್

'ಗ್ಯಾರಂಟಿ ಯೋಜನೆಗಳ ಬಾಕಿ ಹಣವನ್ನು ಮಾರ್ಚ್‌ನೊಳಗೆ ನೀಡಲಾಗುವುದು ಎಂದು ಮುಖ್ಯಮಂತ್ರಿಗಳೇ ತಿಳಿಸಿದ್ದಾರೆ. ಬೇರೆ ಬೇರೆ ಕಾರಣಗಳಿಗೆ ತಡವಾಗಿದೆ. ಶೀಘ್ರ ಫಲಾನುಭವಿಗಳ ಖಾತೆಗೆ ಹಣ ಬರಲಿದೆ' ಎಂದು ಮಂಗಳವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದರು.

'ಗೃಹಜ್ಯೋತಿ ಯೋಜನೆಯಡಿ ಪ್ರತಿ ತಿಂಗಳು ಶೂನ್ಯ ಬಿಲ್ ಬರುತ್ತಿದೆ. ಇದರಲ್ಲಿ ಯಾವುದೇ ಸಮಸ್ಯೆ ಇಲ್ಲ. ಗೃಹಲಕ್ಷ್ಮಿ, ಅನ್ನಭಾಗ್ಯ ಯೋಜನೆ ಬಾಕಿ ಕುರಿತಂತೆ ಆಯಾ ಸಚಿವರೇ ಉತ್ತರ ನೀಡುತ್ತಾರೆ' ಎಂದರು.

ಸಿದ್ದರಾಮಯ್ಯ ಹಣಕಾಸು ಸಚಿವರಾಗಲು ಲಾಯಕ್ ಇಲ್ಲ ಎಂಬ ಕೆ.ಎಸ್.ಈಶ್ವರಪ್ಪ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಈಶ್ವರಪ್ಪ ಯಾವುದಕ್ಕೆ ಲಾಯಕ್ಕು ಎಂಬುದು ಎಲ್ಲರಿಗೂ ಗೊತ್ತಿದೆ. ಬಿಜೆಪಿ ಅಧಿಕಾರದಲ್ಲಿದ್ದಾಗ ಏನನ್ನೂ ಕೊಡಲಿಲ್ಲ. ಚುನಾವಣೆ ಸಮಯದಲ್ಲಿ ಈಗ ಮೋದಿ ಅವರು ಕೊಡುತ್ತಿರುವುದು ಗ್ಯಾರಂಟಿಯಲ್ಲವೇ ಎಂಬುದನ್ನು ಪ್ರಶ್ನಿಸಲಿ. ಮುಖ್ಯಮಂತ್ರಿಗಳು ಎಂತಹ ದಕ್ಷ ಹಣಕಾಸು ಸಚಿವರು ಎಂಬುದು ಇಡೀ ಪ್ರಪಂಚಕ್ಕೆ ಗೊತ್ತಿದೆ' ಎಂದರು.

'ಪಕ್ಷ ವಿರೋಧಿ ಚಟುವಟಿಕೆಯಲ್ಲ'

ಬಿಜೆಪಿ ಶಿಸ್ತು ಸಮಿತಿ ನೋಟಿಸ್‌ಗೆ ಉತ್ತರಿಸಿದ ಯತ್ನಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ಕೇಂದ್ರೀಯ ಶಿಸ್ತು ಸಮಿತಿ ನೀಡಿರುವ ನೋಟಿಸ್‌ಗೆ ಉತ್ತರ ಕಳುಹಿಸಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ, 'ಪಕ್ಷ ಸಂಘಟನೆ ಬಲವಾಗಬೇಕು ಎಂಬುದಷ್ಟೇ ನಮ್ಮ ಉದ್ದೇಶ. ನಮ್ಮದು ಪಕ್ಷ ವಿರೋಧಿ ಚಟುವಟಿಕೆ ಅಲ್ಲ' ಎಂದಿದ್ದಾರೆ.



ಬಸನಗೌಡ ಪಾಟೀಲ ಯತ್ನಾಳ

ಇದೇ 10ರಂದು ನೋಟಿಸ್ ನೀಡಿದ್ದ ಸಮಿತಿ ಮೂರು ದಿನಗಳಲ್ಲಿ ಉತ್ತರ ನೀಡಲು ಸೂಚಿಸಿತ್ತು. ಆದರೆ ನೋಟಿಸ್ ಬಂದ ಮರುದಿನವೇ ಯತ್ನಾಳರು 9 ಪುಟಗಳಷ್ಟು ದೀರ್ಘವಾದ ಉತ್ತರ ನೀಡಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

'ನೋಟಿಸ್‌ಗೆ ಬೆದರಿರುವ ಯತ್ನಾಳ ಮತ್ತು ಅವರ ಗುಂಪು ತಣ್ಣಗಾಗಿದೆ. ಯತ್ನಾಳರು ಇಷ್ಟು ದಿನ ಕಳೆದರೂ ಉತ್ತರಿಸಿಲ್ಲ ಎಂದು ಸುದ್ದಿ ಹರಿಬಿಡಲಾಗುತ್ತಿದೆ. ಅದನ್ನು ನಿವಾರಿಸಲು ಉತ್ತರ ನೀಡಿರುವ ವಿಚಾರ ಬಹಿರಂಗಪಡಿಸಲಾಗಿದೆ' ಎಂದು ಹೇಳಿವೆ.

'ಯತ್ನಾಳರು ಯಾವ ರೀತಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆ ಎಂಬುದನ್ನು ನೋಟಿಸ್‌ನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿಲ್ಲ. ತಾವು ಯಾವುದೇ ರೀತಿ ಪಕ್ಷಕ್ಕೆ ಧಕ್ಕೆಯಾಗುವಂತೆ ನಡೆದುಕೊಂಡಿಲ್ಲ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ' ಎಂದು ಮಾಹಿತಿ ನೀಡಿವೆ. 'ಪಕ್ಷ ಸಂಘಟನೆಗೆ ದುಡಿಯುತ್ತಿರುವವರಿಗೆ ನೋಟಿಸ್ ನೀಡಿ, ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಎಸ್‌. ಟಿ. ಸೋಮಶೇಖರ್, ಶಿವರಾಂ ಹೆಬ್ಬಾರ್ ಅಂತಹ ಶಾಸಕರಿಗೆ ನೋಟಿಸ್ ನೀಡದಿರುವುದನ್ನು ಉಲ್ಲೇಖಿಸಲಾಗಿದೆ' ಎಂದು ತಿಳಿಸಿವೆ.

'ಪಕ್ಷವನ್ನು ಬಲಪಡಿಸಬೇಕಿದ್ದರೆ, ರಾಜ್ಯಾಧ್ಯಕ್ಷರನ್ನು ಬದಲಿಸಬೇಕು. ಸ್ವಜನಪಕ್ಷಪಾತ ಮತ್ತು ಕುಟುಂಬ ರಾಜಕಾರಣ ಕೊನೆಯಾಗಬೇಕು ಎಂಬುದನ್ನು ಒತ್ತಿ ಹೇಳಲಾಗಿದೆ' ಎಂದು ಹೇಳಿವೆ.

'ಸಂದೇಶ ರವಾನೆಗಾಗಿ ಸಭೆ'

'ನೋಟಿಸ್ ನೀಡಿದ ನಂತರ ಯತ್ನಾಳ, ಅವರ ಜತೆ ಗುರುತಿಸಿಕೊಂಡಿರುವವರು ಸುಮ್ಮನಾಗಿದ್ದಾರೆ ಎಂಬ ಸುದ್ದಿ ಹಬ್ಬಿಸಲಾಗಿದೆ. ಅದು ಸುಳ್ಳು ಎಂದು ಸಂದೇಶ ರವಾನಿಸಲು, ನಮ್ಮ ಜತೆ ಗುರುತಿಸಿಕೊಂಡಿರುವವರಲ್ಲಿ ವಿಶ್ವಾಸ ಮೂಡಿಸಲು ಇದೇ 20ರಂದು ಸಭೆ ಕರೆಯಲಾಗಿದೆ' ಎಂದು ಯತ್ನಾಳ ಬಣದ ನಾಯಕರೊಬ್ಬರು ತಿಳಿಸಿದ್ದಾರೆ.

'ನಮ್ಮ ಬಲ ಕುಂದಿಲ್ಲ ಮತ್ತು ಹೋರಾಟದಿಂದ ಹಿಂದೆ ಸರಿದಿಲ್ಲ. ಹೋರಾಟದ ಬಗ್ಗೆ ನಮ್ಮ ಬದ್ಧತೆ ಇನ್ನಷ್ಟು ಗಟ್ಟಿಯಾಗಿದೆ. ಹೀಗಾಗಿಯೇ ಸಭೆ ಕರೆದಿದ್ದೇವೆ. ಸಮಸ್ಯೆಗೆ ತಾರ್ಕಿಕ ಅಂತ್ಯ ಸಿಗುವವರೆಗೂ ಹೋರಾಟ ನಿಲ್ಲುವುದಿಲ್ಲ' ಎಂದು ಅವರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಹಣಕ್ಕೆ ಬೇಡಿಕೆ, ಹಲ್ಲೆ ಆರೋಪ: ತಾ.ಪಂ ಇಒ ಬಂಧನ

ಪ್ರಜಾವಾಣಿ ವಾರ್ತೆ

ಬಾಳೆಹೊನ್ನೂರು (ಚಿಕ್ಕಮಗಳೂರು): ಲಾರಿ ಅಡ್ಡಗಟ್ಟಿ ಹಣಕ್ಕಾಗಿ ಬೇಡಿಕೆ ಇಟ್ಟು ಹಲ್ಲೆ ಮಾಡಿದ ಆರೋಪದಲ್ಲಿ ಶೃಂಗೇರಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸುದೀಪ್ ಹಾಗೂ ಮೆಣಸೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮಂಜು ಅವರನ್ನು ಬಾಳೆಹೊನ್ನೂರು ಪೊಲೀಸರು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.



ಸುದೀಪ್

'ಕಾಫಿ ಸಾಗಾಣಿಕೆ ಮಾಡುತ್ತಿದ್ದ ಲಾರಿಯನ್ನು ಹರಿಗೆ ಬಳಿ ಸರ್ಕಾರಿ ವಾಹನದಲ್ಲಿ ಬಂದು ಅಡ್ಡಗಟ್ಟಿ ದರು. ಕಾಫಿ ಸರಕಿನ ಬಿಲ್ ನೀಡಲು ಹೋದಾಗ ₹50 ಸಾವಿರ ಹಣ ಕೇಳಿದರು. ಹಣ ನೀಡಲು ನಿರಾಕರಿಸಿದಾಗ ಚಾಲಕ ಆತೀಫ್ ಅವರಿಗೆ ಅವಾಚ್ಯವಾಗಿ ನಿಂದಿಸಿ ಹಲ್ಲೆ ನಡೆಸಿದರು' ಎಂದು ಆತೀಫ್ ಅವರ ಸ್ನೇಹಿತ ಹಾಗೂ ಹೇರೂರು ಗ್ರಾಮ ಪಂಚಾಯಿತಿ ಸದಸ್ಯ ಅಮ್ಜದ್ ದೂರು ನೀಡಿದ್ದಾರೆ.

ವಕ್ಫ್ ಮಂಡಳಿ ಲೆಕ್ಕಾಧಿಕಾರಿ ಸೆರೆ

ವಿಜಯಪುರ: ಇಲ್ಲಿನ ಅಂಜುಮನ್ ಇಸ್ಲಾಂ ಸಮಿತಿಯ ನವೀಕರಣ ಪ್ರಕ್ರಿಯೆಗೆ ₹1.5 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಜಿಲ್ಲಾ ವಕ್ಫ್ ಮಂಡಳಿ ಲೆಕ್ಕಾಧಿಕಾರಿ ಮಹಮ್ಮದ್ ಮೊಹ್ಸಿನ್ ಜಮಖಂಡಿ ಮತ್ತು ಆತನ ಸಹೋದರ ಮುಜಾಹಿದ್ ಜಮಖಂಡಿ ಎಂಬುವರನ್ನು ಲೋಕಾ ಯುಕ್ತ ಪೊಲೀಸರು ಬಂಧಿಸಿದ್ದಾರೆ.



ಮಹಮ್ಮದ್ ಮೊಹ್ಸಿನ್

'ಸಮಿತಿಯ ಅಧ್ಯಕ್ಷ ಖಾಜಿ ಸಾಬಾ ನದಾಫ್ ಅವರು ಸಮಿತಿಯ ನವೀಕರಣಕ್ಕೆ ಅರ್ಜಿ ಸಲ್ಲಿಸಿದಾಗ, ಆರೋಪಿಗಳು ಲಂಚಕ್ಕೆ ಬೇಡಿಕೆ ಇಟ್ಟರು. ವಿಜಯಪುರ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಸೋಮವಾರ ರಾತ್ರಿ ಆರೋಪಿಗಳು ಲಂಚದ ಹಣ ಪಡೆಯು ವಾಗ ಬಂಧಿಸಲಾಯಿತು' ಎಂದು ಲೋಕಾ ಯುಕ್ತ ಎಸ್ಪಿ ಟಿ.ಮಲ್ಲೇಶ್ ತಿಳಿಸಿದ್ದಾರೆ.

10 ನಾಡ ಪಿಸ್ತೂಲ್, 24 ಗುಂಡು ವಶ

ವಿಜಯಪುರ: 'ಜಿಲ್ಲೆಯಲ್ಲಿ ಕಾರ್ಯಾಚರಣೆ ನಡೆಸಿ, 10 ನಾಡ ಪಿಸ್ತೂಲ್ ಮತ್ತು 24 ಸಜೀವ ಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

'ಅರಕೇರಿ ತಾಂಡಾ ನಂ.1ರಲ್ಲಿ ಈಚೆಗೆ ನಡೆದ ಕೊಲೆ ಪ್ರಕರಣದ ಆರೋಪಿ ಸಾಗರ ರಾಠೋಡನನ್ನು ವಿಚಾರಣೆಗೆ ಒಳಪಡಿಸಿದಾಗ ಈ ಬಗ್ಗೆ ಮಾಹಿತಿ ಸಿಕ್ಕಿತು. ಆತ ಅವುಗಳನ್ನು ಮಧ್ಯಪ್ರದೇಶದಿಂದ ಅಕ್ರಮವಾಗಿ ತಂದು, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಹಲವರಿಗೆ ಮಾರಿದ್ದು ತನಿಖೆಯಿಂದ ಗೊತ್ತಾಗಿದೆ' ಎಂದು ಅವರು ಮಂಗಳವಾರ ತಿಳಿಸಿದರು.

ಕಲ್ಯಾಣ ಕರ್ನಾಟಕ ರಾಷ್ಟ್ರೀಯ ಸಾಹಿತ್ಯೋತ್ಸವದಲ್ಲಿ ಸಿದ್ದನಗೌಡ ಪಾಟೀಲ ಅಭಿಮತ

'ಗಂಗೆ ಮಾತ್ರ ಪವಿತ್ರ: ಧಾರ್ಮಿಕ ಸರ್ವಾಧಿಕಾರ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಗಂಗೆ ಮಾತ್ರ ಪವಿತ್ರ. ಗಂಗಾ ನದಿಯಲ್ಲಿ ಮುಳುಗಿದರಷ್ಟೇ ಪುಣ್ಯ ಪ್ರಾಪ್ತಿಯಾಗುತ್ತದೆ ಎಂಬ ಭಾವನೆಯನ್ನು ಜನಮಾನಸದಲ್ಲಿ ಬಿತ್ತಿರುವುದು ಧಾರ್ಮಿಕ ಸರ್ವಾಧಿಕಾರದ ಸಂಕೇತವಾಗಿದೆ. ಹಾಗಿದ್ದರೆ ನಮ್ಮ ಊರಿನ ಕೆರೆ, ಹಳ್ಳ, ಕೃಷ್ಣಾ, ಭೀಮಾ, ಕಾರಂಜಾ ನದಿಗಳು ಅಪವಿತ್ರವೇ' ಎಂದು ಪ್ರಗತಿಪರ ಚಿಂತಕ ಸಿದ್ದನಗೌಡ ಪಾಟೀಲ ಪ್ರಶ್ನಿಸಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಪಾಲಿ ಮತ್ತು ಬೌದ್ಧ ಅಧ್ಯಯನ ಸಂಸ್ಥೆಯ ಸಹಯೋಗದಲ್ಲಿ ಮಂಗಳವಾರ ನಡೆದ ಎರಡು ದಿನಗಳ ಕಲ್ಯಾಣ ಕರ್ನಾಟಕ ರಾಷ್ಟ್ರೀಯ ಸಾಹಿತ್ಯೋತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ದೂರದ ಗಂಗೆಯಲ್ಲಿ ಮಿಂದೇಳುವ ಬದಲು ನಮಗೆ ನೀರು, ಆಹಾರ ನೀಡಿ ಪೊರೆವ ನಮ್ಮ ನದಿಗಳಲ್ಲಿ ಮುಳುಗೇಳುವುದು ಪವಿತ್ರವಲ್ಲ ಎಂಬ ಭಾವನೆಯನ್ನು ಮೂಡಿಸಲಾಗಿದೆ. ರೊಟ್ಟಿ ತಿನ್ನುವವನು ಕನಿಷ್ಠ, ಪಿಜ್ಜಾ ತಿನ್ನುವವ ಶ್ರೇಷ್ಠ ಎಂಬಂತಾಗಿದೆ. ನಮ್ಮ ನಡುವೆ ಬಹುದೊಡ್ಡ ಸಾಂಸ್ಕೃತಿಕ ಪಲ್ಲಟಗಳು ನಡೆಯುತ್ತಿದ್ದು, ಇತ್ತೀಚಿನವರೆಗೆ ನಮ್ಮ ಆದರ್ಶವಾಗಿದ್ದ ಗಾಂಧೀಜಿಯವರನ್ನು ಖಳನಾಯಕ ಎಂಬಂತೆ ಬಿಂಬಿಸುವ ಪ್ರಯತ್ನಗಳು ವೇಗವಾಗಿ ನಡೆಯುತ್ತಿವೆ. ಗಾಂಧಿಯನ್ನು ಕೊಂದ ನಾಥೂರಾಮ್ ಗೋಡ್ಸೆಯನ್ನು ನಾಯಕನನ್ನಾಗಿ ವಿಜೃಂಭಿಸಲಾಗುತ್ತಿದೆ' ಎಂದು ವಿಷಾದಿಸಿದರು.



ಕಲ್ಯಾಣ ಕರ್ನಾಟಕ ರಾಷ್ಟ್ರೀಯ ಸಾಹಿತ್ಯೋತ್ಸವದಲ್ಲಿ ಪ್ರಗತಿಪರ ಚಿಂತಕ ಸಿದ್ದನಗೌಡ ಪಾಟೀಲ ಮಾತನಾಡಿದರು. ಪ್ರೊ.ಎಚ್‌ಟಿ.ಪೋತೆ, ಪ್ರೊ. ಎಸ್‌ಎನ್‌ಗಾಯಕವಾಡ, ಸಿದ್ದಪ್ಪ ಮೂಲಗೆ, ಪ್ರೊ.ಮೇಧಾವಿನಿ ಕಟ್ಟಿ, ಪ್ರೊ.ಅಬ್ದುಲ್ ರಬ್ ಉಸ್ತಾದ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

'ಶಾಂತಿ, ಸಹಬಾಳ್ವೆ, ಸಮಾನತೆಯ ಗುಣಗಳನ್ನು ಕಲಿಸಿದ ಗೌತಮ ಬುದ್ಧ, ಮಹಾತ್ಮ ಗಾಂಧಿಯನ್ನು ಹೇಡಿಗಳು ಎಂಬ ಅಪಪ್ರಚಾರ ಮಾಡಲಾಗುತ್ತಿದೆ. ತೋಳ್ಬಲದಿಂದ ಹೋರಾಡುವುದನ್ನು ಕ್ಷಾತ್ರ ತೇಜಸ್ಸು ಎಂದು ಕರೆಯಲಾಗುತ್ತಿದೆ. ಬ್ರಿಟಿಷರು ಭಾರತವನ್ನು ಆಳುವಾಗ, ಕಲ್ಯಾಣ ಕರ್ನಾಟಕ, ಗೋವಾ ವಿಮೋಚನೆ ತಡವಾದಾಗ ಆ ಕ್ಷಾತ್ರ ತೇಜಸ್ಸಿನವರು ಎಲ್ಲಿ ಹೋಗಿದ್ದರು' ಎಂದು ಸಿದ್ದನಗೌಡ ಪ್ರಶ್ನಿಸಿದರು.

'ಸಾಂಸ್ಕೃತಿಕ ವಲಯದ ಒಂದು ಗುಂಪು, ಕಲ್ಯಾಣ ಕ್ರಾಂತಿಯ ಮಹತ್ವವನ್ನು ಕಡಿಮೆ ಮಾಡಲು 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಕ್ರಾಂತಿಯೇ ನಡೆದಿಲ್ಲ. ಅಕ್ಕಮಹಾದೇವಿ ಬಸವ ಕಲ್ಯಾಣಕ್ಕೆ ಬಂದೇ ಇಲ್ಲ ಎಂಬ ವಾದವನ್ನು ಮುಂದಿಡುತ್ತಿದೆ. ಆ ಮೂಲಕ ಬಸವಣ್ಣ ವಚನಗಳ ಮೂಲಕ ವೈದಿಕ ಸಂಸ್ಕೃತಿಯನ್ನು ವಿರೋಧಿಸಿದ್ದೇ ಸುಳ್ಳು ಎಂದು ಸಾಧಿಸುವುದು ಈ ಗುಂಪಿನ ಹುನ್ನಾರವಾಗಿದೆ' ಎಂದರು.

ಸಾಹಿತ್ಯೋತ್ಸವದ ಸಂಘಟಕ ಪ್ರೊ.ಎಚ್‌.ಟಿ.ಪೋತೆ ಮಾತನಾಡಿ, 'ವಿಶ್ವವಿದ್ಯಾಲಯಗಳು ಹೊಸ ವಿಚಾರಗಳನ್ನು ನಿಗ್ರಹಿಸುವ ಕೆಲಸ ಮಾಡಬಾರದು' ಎಂದು ಮನವಿ ಮಾಡಿದರು.

'ಎರಡು ದಿನಗಳ ಕಾಲ ಉತ್ತಮ ಕಾರ್ಯಕ್ರಮ ಮಾಡಿದ್ದರೂ ವಿದ್ಯಾರ್ಥಿಗಳ ಸ್ಪಂದನೆ ನೀರಸವಾಗಿತ್ತು. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳ ಕೈಯಲ್ಲಿ ಪುಸ್ತಕಗಳೇ ಕಾಣುವುದಿಲ್ಲ. ಎಲ್ಲರೂ ವಾಟ್ಸ್‌ಆ್ಯಪ್‌ನ ಗೀಳಿಗೆ ಬಿದ್ದಿದ್ದಾರೆ' ಎಂದರು.

ನೂತನ ಮುಖ್ಯ ಚುನಾವಣಾ ಆಯುಕ್ತರ ಆಯ್ಕೆ: ಭಿನ್ನಾಭಿಪ್ರಾಯ ಬಹಿರಂಗಪಡಿಸಿದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ

‘ಪ್ರಧಾನಿ, ಗೃಹಸಚಿವರ ವಿವೇಚನಾರಹಿತ ನಡೆ’

ಪ್ರಜಾವಾಣಿ ವಾರ್ತೆ/ಟಿಪಿಐ

ನವದೆಹಲಿ: ನೂತನ ಮುಖ್ಯ ಚುನಾವಣಾ ಆಯುಕ್ತರ (ಸಿಇಸಿ) ಆಯ್ಕೆ ಕುರಿತಂತೆ ಕಾಂಗ್ರೆಸ್ ನಾಯಕ ಹಾಗೂ ಲೋಕಸಭೆಯಲ್ಲಿ ವಿರೋಧ ಪಕ್ಷ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಭಿನ್ನಾಭಿಪ್ರಾಯವನ್ನು ಮಂಗಳವಾರ ಬಹಿರಂಗವಾಗಿ ವ್ಯಕ್ತಪಡಿಸಿದ್ದಾರೆ.

‘ಸಿಇಸಿ ಆಯ್ಕೆ ಪ್ರಕ್ರಿಯೆ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಫೆ.19ಕ್ಕೆ ನಡೆಸಲಿದೆ. ಇಂತಹ ಸಂದರ್ಭದಲ್ಲಿ ‘ಮಧ್ಯರಾತ್ರಿ’ಯಲ್ಲಿ ನೂತನ ಸಿಇಸಿ ಆಯ್ಕೆ ಕುರಿತು ನಿರ್ಧಾರ ಕೈಗೊಂಡಿರುವುದು ಪ್ರಧಾನಿ ಹಾಗೂ ಗೃಹ ಸಚಿವರಿಗೆ ‘ಗೌರವ ತರುವುದಿಲ್ಲ’ ಹಾಗೂ ಇದು ‘ವಿವೇಚನಾರಹಿತ’ ನಡೆ’ ಎಂದು ಹೇಳಿದ್ದಾರೆ.

‘ಪ್ರಜಾತಾಂತ್ರಿಕ ಪ್ರಕ್ರಿಯೆ ಹಾಗೂ ಆಯೋಗದ ಕಾರ್ಯನಿರ್ವಹಣೆಯಲ್ಲಿ ಕಾರ್ಯಾಂಗದ ಹಸ್ತಕ್ಷೇಪದ ಬಗ್ಗೆ ಅಂಬೇಡ್ಕರ್ ಎಚ್ಚರಿಸಿದ್ದರು. ರಾಷ್ಟ್ರ ನಿರ್ಮಾಣ ಮಾಡಿದ ಮಹಾನ್ ನಾಯಕರ ಆದರ್ಶ ಎತ್ತಿ ಹಿಡಿಯುವುದು ನನ್ನ ಕರ್ತವ್ಯವಾಗಿದೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಸಮಿತಿ ಸಭೆಯಲ್ಲಿ ಪಾಲ್ಗೊಂಡಿದ್ದ ನಾನು, ಆಯೋಗದ ನೂತನ ಆಯುಕ್ತರ ನೇಮಕಾತಿಗೆ ಸಂಬಂಧಿಸಿ ನನ್ನ ಭಿನ್ನಾಭಿಪ್ರಾಯವನ್ನು ಪ್ರಧಾನಿ ಹಾಗೂ ಗೃಹ ಸಚಿವರಿಗೆ ತಿಳಿಸಿದ್ದೇನೆ’ ಎಂದೂ ಅವರು ಪೋಸ್ಟ್ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆಯ್ಕೆ ಸಮಿತಿಯು ಫೆ.17ರಂದು ಮಧ್ಯರಾತ್ರಿ, ಜ್ಞಾನೇಶ್‌ಕುಮಾರ್ ಅವರನ್ನು ಮುಖ್ಯ ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡಿದೆ.

‘ನೂತನ ಸಿಇಸಿ ಆಯ್ಕೆಗಾಗಿ ರಚಿಸಲಾಗಿರುವ ಸಮಿತಿ ಹಾಗೂ ಅನುಸರಿಸಲಾಗುವ ಪ್ರಕ್ರಿಯೆಯನ್ನೇ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಲಾಗಿದೆ. ಬುಧವಾರವೇ ಸುಪ್ರೀಂ ಕೋರ್ಟ್ ಈ ಅರ್ಜಿ ವಿಚಾರಣೆ ಕೈಗೆತ್ತಿಕೊಳ್ಳಲಿದೆ. ಪರಿಸ್ಥಿತಿ ಹೀಗಿರುವಾಗ ನಡುರಾತ್ರಿಯಲ್ಲಿ, ನೂತನ ಸಿಇಸಿ ಆಯ್ಕೆ ಮಾಡಿರುವುದು ಸರಿಯಲ್ಲ’ ಎಂದು ಪ್ರತಿಪಾದಿಸಿದ್ದಾರೆ.

‘ನೂತನ ಸಿಇಸಿ ಆಯ್ಕೆ ಸಮಿತಿಯಿಂದ ಸಿಜೆಐ ಅವರನ್ನು ಹೊರಗಿಡಲಾಗಿದೆ.



ದೇಶದ ಚುನಾವಣಾ ಪ್ರಕ್ರಿಯೆ ಕುರಿತು ಮತದಾರರಲ್ಲಿ ವಿಶ್ವಾಸ ಕುಂದುತ್ತಿದೆ ಎಂಬ ಹಲವು ಸಮೀಕ್ಷೆಗಳ ಅಭಿಪ್ರಾಯವನ್ನೇ ಈ ಬೆಳವಣಿಗೆ ಪ್ರತಿಫಲಿಸುತ್ತದೆ

ರಾಹುಲ್ ಗಾಂಧಿ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ

ಇನ್ನೊಂದೆಡೆ ಈ ಕುರಿತ ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲಂಘಿಸಲಾಗಿದೆ. ಇಂತಹ ನಡೆಗಳ ಮೂಲಕ ಪ್ರಧಾನಿ ಮೋದಿ ನೇತೃತ್ವದ ಸರ್ಕಾರವು ನಮ್ಮ ಚುನಾವಣಾ ಪ್ರಕ್ರಿಯೆಯ ಸಮಗ್ರತೆಯನ್ನು ಕಡೆಗಣಿಸುವ ಮೂಲಕ ಕೋಟ್ಯಂತರ ಮತದಾರರ ಆತಂಕ ಹೆಚ್ಚಿಸಿದ್ದಾರೆ’ ಎಂದು ರಾಹುಲ್ ಗಾಂಧಿ ಟೀಕಿಸಿದ್ದಾರೆ.

ರಾಹುಲ್ ವಾದ

ನೂತನ ಮುಖ್ಯ ಚುನಾವಣಾ ಆಯುಕ್ತರ ಆಯ್ಕೆಗಾಗಿ ಫೆ.17ರಂದು ನಡೆದ ಚರ್ಚೆಯಲ್ಲಿ ರಾಹುಲ್ ಗಾಂಧಿ ಪಾಲ್ಗೊಂಡಿರಲಿಲ್ಲ.ಈ ಕುರಿತಂತೆ ಎರಡು ಪುಟಗಳ ಟಿಪ್ಪಣಿ ಬರೆದಿರುವ ಅವರು ತಮ್ಮ ಭಿನ್ನಾಭಿಪ್ರಾಯ ದಾಖಲಿಸಿದ್ದಾರೆ. ಪ್ರಮುಖ ಅಂಶಗಳು ಹೀಗಿವೆ.

- ನೂತನ ಸಿಇಸಿ ಆಯ್ಕೆ ಪ್ರಕ್ರಿಯೆ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಫೆ.19ರಂದು ನಡೆಸಲಿದೆ. ಹೀಗಾಗಿ ಫೆ.17ರಂದು ಕರೆದಿರುವ ಆಯ್ಕೆ ಸಮಿತಿ ಸಭೆಯನ್ನು ಮುಂದೂಡಬೇಕು ಎಂದರು
- ಸಿಇಸಿ ಹಾಗೂ ಚುನಾವಣಾ ಆಯುಕ್ತರ ಆಯ್ಕೆ ಪ್ರಕ್ರಿಯೆಯಲ್ಲಿ ಕಾರ್ಯಾಂಗದ ಹಸ್ತಕ್ಷೇಪ ಇರಕೂಡದು. ಇದು, ಚುನಾವಣಾ ಆಯೋಗದ ಸ್ವತಂತ್ರ ಕಾರ್ಯ ನಿರ್ವಹಣೆಯ ಮೂಲಭೂತ ಲಕ್ಷಣ
- ಸಿಇಸಿ ಆಯ್ಕೆ ಮಾಡುವ ಸಮಿತಿಯಲ್ಲಿ ಪ್ರಧಾನಿ, ಸಿಜೆಐ ಹಾಗೂ ವಿರೋಧ ಪಕ್ಷದ ನಾಯಕ ಇರಬೇಕು ಎಂಬುದಾಗಿ ಸುಪ್ರೀಂ ಕೋರ್ಟ್ 2023ರ ಮಾರ್ಚ್ 2ರಂದು ನೀಡಿರುವ ತೀರ್ಪಿನಲ್ಲಿ ಹೇಳಿದೆ. ಈ ತೀರ್ಪು ದೇಶದ ಕೋಟ್ಯಂತರ ಮತದಾರರ ಕಳಕಳಿಯನ್ನು ಬಿಂಬಿಸಿದೆ

ಚುನಾಯಿತ ಸರ್ಕಾರದ ಅಧಿಕಾರ ಕುಗ್ಗಿಸುವ ಯತ್ನ: ಬಿಜೆಪಿ

‘ನೂತನ ಸಿಇಸಿ ಹಾಗೂ ಚುನಾವಣಾ ಆಯುಕ್ತರೊಬ್ಬರ ನೇಮಕ ರಾಜಕೀಯ ಪ್ರೇರಿತ’ ಎಂಬ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಟೀಕೆಯನ್ನು ಮಂಗಳವಾರ ತಳ್ಳಿಹಾಕಿದೆ.

‘ನ್ಯಾಯಾಂಗ ಹೋರಾಟದಂತಹ ‘ದುರುದ್ದೇಶಪೂರಿತ’ ಮಾರ್ಗದ ಮೂಲಕ ರಾಹುಲ್ ಗಾಂಧಿ ಅವರು ಚುನಾಯಿತ ಸರ್ಕಾರವು ಹೊಂದಿರುವ ಸಾಂವಿಧಾನಿಕ ಅಧಿಕಾರವನ್ನು ಕುಗ್ಗಿಸುತ್ತಿದ್ದಾರೆ’ ಎಂದು ಬಿಜೆಪಿ ವಾಗ್ದಾಳಿ ನಡೆಸಿದೆ.



‘ನೂತನ ಸಿಇಸಿ ನೇಮಕ ಕುರಿತು ರಾಹುಲ್ ಗಾಂಧಿ ವ್ಯಕ್ತಪಡಿಸುವ ಭಿನ್ನಾಭಿಪ್ರಾಯ ಕೂಡ ರಾಜಕೀಯ ಪ್ರೇರಿತ ಮಾತ್ರವಲ್ಲ, ಅದಕ್ಕೆ ಮೌಲ್ಯವೂ ಇಲ್ಲ’ ಎಂದು ಬಿಜೆಪಿ ಐ.ಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದ್ದಾರೆ.

‘ಚುನಾವಣಾ ಆಯೋಗಕ್ಕೆ ಆಯುಕ್ತರ ನೇಮಕಕ್ಕೆ ಸಂಬಂಧಿಸಿ ಪ್ರಕ್ರಿಯೆಯನ್ನು ಪರಿಷ್ಕರಿಸಿ, ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳಿದ್ದ ಸಂವಿಧಾನ ಪೀಠವು ತೀರ್ಪು ನೀಡಿದೆ. ಪ್ರಧಾನಿ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ಹಾಗೂ ಸಿಜೆಐ ಅವರಿರುವ ಸಮಿತಿ ಮಾಡುವ ಶಿಫಾರಸಿನ ಆಧಾರದಲ್ಲಿ ಸಿಇಸಿ ಹಾಗೂ ಆಯುಕ್ತರನ್ನು ರಾಷ್ಟ್ರಪತಿಗಳು ನೇಮಕ ಮಾಡಬೇಕು ಎಂದು ಪೀಠವು ಹೇಳಿದೆ’ ಎಂದು ಮಾಳವೀಯ, ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಆದರೆ, ‘ಸಿಇಸಿ ಹಾಗೂ ಚುನಾವಣಾ ಆಯುಕ್ತರ ಆಯ್ಕೆಗಾಗಿ ಶಾಶ್ವತ ವಿಧಾನ ಸ್ಥಾಪಿಸಲು ಸಂಸತ್ ಕಾಯ್ದೆಯೊಂದನ್ನು ರೂಪಿಸುವವರೆಗೆ ಈ ವ್ಯವಸ್ಥೆ ಜಾರಿಯಲ್ಲಿ ಇರುತ್ತದೆ ಎಂಬುದಾಗಿಯೂ ಸಂವಿಧಾನ ಪೀಠ ಸ್ಪಷ್ಟಪಡಿಸಿದೆ’ ಎಂದಿದ್ದಾರೆ.

ಜ್ಞಾನೇಶ್ ಪ್ರಮಾಣವಚನ ಇಂದು

ನವದೆಹಲಿ(ಪಿಟಿಐ): ನೂತನ ಮುಖ್ಯ ಚುನಾವಣಾ ಆಯುಕ್ತರಾಗಿ (ಸಿಇಸಿ) ಜ್ಞಾನೇಶ್ ಕುಮಾರ್ ಫೆ. 19ರಂದು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ನೂತನ ಕಾಯ್ದೆಯಡಿ ನೇಮಕಗೊಂಡಿರುವ ಮೊದಲ ಸಿಇಸಿ ಎನಿಸಿರುವ ಜ್ಞಾನೇಶ್ ಕುಮಾರ್ ಅವರ ಅವಧಿ 2029ರ ಜನವರಿ 26ರ ವರೆಗೆ ಇರಲಿದೆ



ಜ್ಞಾನೇಶ್ ಕುಮಾರ್

ಅವರು 1988ರ ಬ್ಯಾಚ್‌ನ ಕೇರಳ ಕೇಡರ್ ಐಎಎಸ್ ಅಧಿಕಾರಿಯಾಗಿದ್ದು, ವಿವಿಧ ಇಲಾಖೆಗಳಲ್ಲಿ ಮಹತ್ವದ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಐಐಟಿ–ಕಾನ್ಪುರದಿಂದ ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಬಿ.ಟೆಕ್ ಪದವಿ ಪಡೆದಿರುವ ಅವರು, ಐಸಿಎಫ್‌ಎಐನಲ್ಲಿ ಬ್ಯುಸಿನೆಸ್ ಫೈನಾನ್ಸ್, ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಪರಿಸರ ಅರ್ಥಶಾಸ್ತ್ರ ಅಧ್ಯಯನ ಪೂರೈಸಿದ್ದಾರೆ.

ಕೇರಳದಲ್ಲಿ ಉಪವಿಭಾಗಾಧಿಕಾರಿ, ಎಸ್‌ಸಿ,ಎಸ್‌ಟಿ ಅಭಿವೃದ್ಧಿ ನಿಗಮ, ಕೊಚ್ಚಿ ಮಹಾನಗರ ಪಾಲಿಕೆ ಹಾಗೂ ಸರ್ಕಾರದ ಕಾರ್ಯದರ್ಶಿ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಪ್ರಮುಖ ಪಾತ್ರ: ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದು ಮಾಡುವುದಕ್ಕೆ ಸಂಬಂಧಿಸಿದ ಆಡಳಿತಾತ್ಮಕ ಪ್ರಕ್ರಿಯೆಯಲ್ಲಿ ಜ್ಞಾನೇಶ್ ಮಹತ್ವದ ಪಾತ್ರ ವಹಿಸಿದ್ದಾರೆ. ಆಗ, ಗೃಹ ಸಚಿವಾಲಯದಲ್ಲಿ ಹಿರಿಯ ಅಧಿಕಾರಿಯಾಗಿದ್ದರು.

ರಾಮ ಮಂದಿರ ಟ್ರಸ್ಟ್ ಸ್ಥಾಪನೆಯಲ್ಲೂ ಪ್ರಮುಖ ಪಾತ್ರ ವಹಿಸಿದ್ದಾರೆ. ರಕ್ಷಣಾ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿ, ಗೃಹ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿ ಹಾಗೂ ಹೆಚ್ಚುವರಿ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಸಚಿವಾಲಯ ಹಾಗೂ ಸಹಕಾರ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿದ್ದರು.

ಸಿಇಸಿ ನೇಮಕ: ‘ಸುಪ್ರೀಂ’ ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಹಾಗೂ ಚುನಾವಣಾ ಆಯುಕ್ತರನ್ನು 2023ರ ಕಾಯ್ದೆಯಡಿ ನೇಮಿಸುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ‘ಆದ್ಯತೆ ಮೇಲೆ’ ಫೆ.19ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಸ್ವಯಂ ಸೇವಾ ಸಂಸ್ಥೆ ‘ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್’ (ಎಡಿಆರ್) ಹಾಗೂ ಜಯಾ ಠಾಕೂರ್ ಪರ ವಕೀಲರ ನಿವೇದನೆ ಆಲಿಸಿದ ನಂತರ, ನ್ಯಾಯಮೂರ್ತಿಗಳಾದ ಸೂರ್ಯಕಾಂತ ಹಾಗೂ ಎನ್. ಕೋಟೀಶ್ವರ ಸಿಂಗ್ ಅವರು ಇದ್ದ



ನ್ಯಾಯಪೀಠ ಈ ಮಾತು ಹೇಳಿದೆ.

ಎಡಿಆರ್ ಪರ ಹಾಜರಿದ್ದ ಹಿರಿಯ ವಕೀಲ ಪ್ರಶಾಂತ ಭೂಷಣ್, ‘ಸಿಜೆಐ ಅವರನ್ನೂ ಒಳಗೊಂಡ ಸಮಿತಿಯ ಶಿಫಾರಸು ಮೂಲಕವೇ ಸಿಇಸಿ ಹಾಗೂ ಇತರ ಚುನಾವಣಾ ಆಯುಕ್ತರನ್ನು ನೇಮಕ ಮಾಡಬೇಕು ಎಂದು ಅನೂಪ್ ಬರನವಾಲಾ ಪ್ರಕರಣದಲ್ಲಿ 2023ರಲ್ಲಿ ಸುಪ್ರೀಂ ಕೋರ್ಟ್‌ನ ಸಂವಿಧಾನ

2023ರ ಕಾಯ್ದೆ ಪ್ರಶ್ನಿಸಿದ ಅರ್ಜಿಗಳ ವಿಚಾರಣೆ ಬಾಕಿ ಇರುವಾಗ ಇದೇ ಕಾಯ್ದೆಯಡಿ ಚುನಾವಣಾ ಆಯುಕ್ತರ ನೇಮಕ ಮಾಡಿರುವುದು ನ್ಯಾಯಾಂಗ ನಿಂದನೆ

ಪ್ರಶಾಂತ ಭೂಷಣ್, ಹಿರಿಯ ವಕೀಲ

ಪೀಠ ನಿರ್ದೇಶನ ನೀಡಿತ್ತು’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

‘ಈಗ, ಸಿಜೆಐ ಅವರನ್ನು ಆಯ್ಕೆ ಸಮಿತಿಯಿಂದ ಹೊರಗಿಡಲಾಗಿದೆ. ಇದು ಪ್ರಜಾಪ್ರಭುತ್ವದ ಅಣಕ’ ಎಂದು ಹೇಳಿದ ಪ್ರಶಾಂತ ಭೂಷಣ್,‘ನೂತನ ಕಾಯ್ದೆಯ ಸಿಂಧುತ್ವ ಪರಿಗಣಿಸಬೇಕು’ ಎಂದು ನ್ಯಾಯಪೀಠವನ್ನು ಕೋರಿದರು.

‘ಈ ವಿಚಾರ ಕುರಿತ ಅರ್ಜಿಗಳನ್ನು ಫೆ.19ರ ವಿಚಾರಣಾ ಪಟ್ಟಿಗೆ ಸೇರಿಸಲಾಗಿದ್ದು, ಈ ಪ್ರಕರಣದ ಅನುಕ್ರಮ ಸಂಖ್ಯೆ 41 ಇದೆ. ಸಂವಿಧಾನ ಪೀಠದ ನಿರ್ದೇಶನ ಕಡೆಗಣಿಸಿ, 2023ರ ಕಾಯ್ದೆಯಂತೆಯೇ ಕೇಂದ್ರ ಸರ್ಕಾರ ಸಿಇಸಿ ಹಾಗೂ ಚುನಾವಣಾ ಆಯುಕ್ತರ ನೇಮಕ ಮಾಡಿದೆ. ಹೀಗಾಗಿ, ಅರ್ಜಿಗಳನ್ನು ತುರ್ತು ವಿಚಾರಣೆಗೆ ಪರಿಗಣಿಸಿ’ ಎಂದು ಮನವಿ ಮಾಡಿದರು.

‘ನೂತನ ಕಾಯ್ದೆ ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿದೆ. ಆದಾಗ್ಯೂ, ಅದೇ ಕಾಯ್ದೆಯಡಿ ಈ ನೇಮಕಾತಿಗಳನ್ನು ಮಾಡಲಾಗಿದೆ’ ಎಂದು ಅರ್ಜಿದಾರರಾದ ಜಯಾ ಠಾಕೂರ್ ಪರ ವಕೀಲ ವರುಣ್ ಠಾಕೂರ್, ನ್ಯಾಯಪೀಠಕ್ಕೆ ತಿಳಿಸಿದರು.

‘2023ರ ಕಾಯ್ದೆಗೆ ತಡೆಯಾಜ್ಞೆ ನೀಡುವಂತೆ ಕೋರಿದ್ದ ಅರ್ಜಿಯನ್ನು ನ್ಯಾಯಾಲಯ ಈ ಹಿಂದೆ ತಿರಸ್ಕರಿಸಿತ್ತು’ ಎಂದ ನ್ಯಾಯಪೀಠ, ‘ಫೆ.19ರಂದು ಅರ್ಜಿಗಳ ತುರ್ತು ವಿಚಾರಣೆ ನಡೆಸಲಾಗುವುದು’ ಎಂದು ಅರ್ಜಿದಾರರ ಪರ ವಕೀಲರಿಗೆ ಭರವಸೆ ನೀಡಿತು.

ನೂತನ ಕಾಯ್ದೆ: ಕೇಂದ್ರ ಸರ್ಕಾರವು 2023ರ ಡಿಸೆಂಬರ್‌ನಲ್ಲಿ ‘ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರ (ನೇಮಕಾತಿ, ಸೇವಾ ನಿಬಂಧನೆಗಳು ಹಾಗೂ ಅಧಿಕಾರ) ಕಾಯ್ದೆ–2023’ ರೂಪಿಸಿತ್ತು.

ನೂತನ ಕಾಯ್ದೆ ಪ್ರಕಾರ, ಸಮಿತಿಯಲ್ಲಿ ಸುಪ್ರೀಂ ಕೋರ್ಟ್ ಮುಖ್ಯ-ನ್ಯಾಯಮೂರ್ತಿ ಬದಲಾಗಿ ಕೇಂದ್ರ ಸಚಿವರೊಬ್ಬರು ಸದಸ್ಯರಾಗಿರುತ್ತಾರೆ.

ದಲಿತ ಸಚಿವರ ಪಟ್ಟು ಬಿಗಿ

ಒಂದನೇ ಪುಟದಿಂದ...

ಒಂದು ವೇಳೆ ಸಿದ್ದರಾಮಯ್ಯ ಅವರು ಕುರ್ಚಿ ತ್ಯಜಿಸುವ ಸನ್ನಿವೇಶ ಸೃಷ್ಟಿಯಾದರೆ ಮುಖ್ಯಮಂತ್ರಿಯಾಗಲೇಬೇಕೆಂಬ ಹಂಬಲದಲ್ಲಿರುವ ಗೃಹ ಸಚಿವ ಜಿ. ಪರಮೇಶ್ವರ ಅವರು ಸೋಮವಾರ ದೆಹಲಿಯಾತ್ರೆ ಕೈಗೊಂಡರು.

ದೆಹಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ(ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿಯಾದ ಪರಮೇಶ್ವರ ಚರ್ಚೆ ನಡೆಸಿದರು. ‘ತಳಮಟ್ಟದಲ್ಲಿ ಪಕ್ಷ ಸಂಘಟನೆಗೆ ಅನುಕೂಲವಾಗುವ ಶೋಷಿತರ ಸಮಾವೇಶಕ್ಕೆ ಹೈಕಮಾಂಡ್ ಅನುಮತಿ ನೀಡಬೇಕು. ರಾಜ್ಯ ಸರ್ಕಾರದಲ್ಲಿ ಅಧಿಕಾರ ಹಂಚಿಕೆ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿದ್ದು, ಈ ಬಗ್ಗೆ ರಾಷ್ಟ್ರೀಯ ನಾಯಕರು ಸ್ಪಷ್ಟನೆ ನೀಡಿದರೆ ಗೊಂದಲ ಪರಿಹಾರ ಆಗಲಿದೆ ಎಂದೂ ಅವರು ಪ್ರಸ್ತಾಪಿಸಿದರು’ ಎಂದು ಮೂಲಗಳು ತಿಳಿಸಿವೆ.

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಬಿಬಿಎಂಪಿ ಚುನಾವಣೆಗೆ ಮುನ್ನ ಡಿ.ಕೆ. ಶಿವಕುಮಾರ್ ಅವರನ್ನು ಬದಲಿಸಿ ದಲಿತ ಸಮುದಾಯ ನಾಯಕರನ್ನು ನೇಮಿಸಬೇಕು ಎಂದು ಅವರು ಬಲವಾಗಿ ಪ್ರತಿಪಾದಿಸಿದರು.

ಇತ್ತ ವಿಧಾನಸೌಧದಲ್ಲಿನ ಸಮಾಜಕಲ್ಯಾಣ ಸಚಿವ ಎಚ್. ಸಿ. ಮಹದೇವಪ್ಪ ಅವರ ಕೊಠಡಿಗೆ ತೆರಳಿದ್ದ ಕೆ.ಎನ್. ರಾಜಣ್ಣ ಸುಮಾರು ಒಂದು ತಾಸು ಚರ್ಚೆ ನಡೆಸಿದರು. ‘ಕೆಲ ಸಚಿವರು ಮುಖ್ಯಮಂತ್ರಿ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆ, ಪಕ್ಷದಲ್ಲಿನ ಪ್ರಸ್ತುತ ವಿದ್ಯಮಾನಗಳ ಕುರಿತು ಒಂದು ಗಂಟೆಗೂ ಹೆಚ್ಚುಕಾಲ ಇಬ್ಬರೂ ಮಾತುಕತೆ ನಡೆಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಸಚಿವ ರಾಜಣ್ಣ ಅವರ ಹೇಳಿಕೆಗಳ ಕುರಿತು ಪ್ರತಿಕ್ರಿಯೆ ನೀಡಿದ ಮಾಜಿ ಸಂಸದ ಡಿ.ಕೆ. ಸುರೇಶ್, ‘ಡಿ.ಕೆ. ಶಿವಕುಮಾರ್ ಅವರಿಗೆ ಒಳ್ಳೆಯದಾಗಲಿ ಎಂಬ ಭಾವನೆ ಇದೆ. ಹಾಗಾಗಿ ಮಾತನಾಡುತ್ತಿದ್ದಾರೆ. ಕಲ್ಲಿಗೆ ಪೆಟ್ಟು ಬಿದ್ದಾಗಲೇ ಶಿಲೆಯಾಗಿ ಮಾರ್ಪಾಡಾಗುತ್ತದೆ. ಶಿವಕುಮಾರ್ ಅವರಿಗೆ ಒಳ್ಳೆಯದಾಗಬೇಕು ಎಂದು ಅವರು ಬಯಸುತ್ತಿರುವಾಗ ಏನು ಮಾಡಲು ಆಗುತ್ತದೆ. ಇದು ಮಳೆ ಬರುವ ಕಾಲ ಅಲ್ಲ, ಮಳೆ ಬರಲು ಇನ್ನ ಕಾಲಾವಕಾಶವಿದೆ’ ಎಂದರು.

ರಾಜಣ್ಣ ಏನು ಹೇಳಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಪಕ್ಷದಲ್ಲಿ ಗೊಂದಲಗಳಿಲ್ಲ, ಕೆಪಿಸಿಸಿ ಅಧ್ಯಕ್ಷರು ನೀಡುವ ಸೂಚನೆಗಳನ್ನು ಪಾಲಿಸುತ್ತೇವೆ

ಕೆ.ಜೆ.ಜಾರ್ಜ್, ಇಂಧನ ಸಚಿವ

‘ಜನರ ಸಮಸ್ಯೆ ನಿವಾರಣೆ ಮುಖ್ಯ’ (ಗದಗ ವರದಿ): ‘ರಾಜ್ಯದಲ್ಲಿ ಜನರ ಸಮಸ್ಯೆ ನಿವಾರಣೆಗೆ ಆದ್ಯತೆ ನೀಡಬೇಕೆ ಹೊರತು ಸಚಿವ ಸಂಪುಟ ವಿಸ್ತರಣೆಗಲ್ಲ. ಜನರ ಸಮಸ್ಯೆ ನಿವಾರಣೆ, ಅಭಿವೃದ್ಧಿ ಮುಖ್ಯವಾಗಬೇಕು’ ಎಂದು ಸಚಿವ ಸಂತೋಷ್ ಲಾಡ್ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಚಿವ ಸಂಪುಟ ವಿಸ್ತರಣೆ ವಿಷಯ ಹೈಕಮಾಂಡ್ ತೀರ್ಮಾನಿಸುತ್ತದೆ. ಅದಕ್ಕಿಂತ ಮುಖ್ಯವಾಗಿ ಕುಂಭಮೇಳದಲ್ಲಿ ಎಷ್ಟು ಮಂದಿ ಸತ್ತರು? ರೈಲು ನಿಲ್ದಾಣದಲ್ಲಿ ಕಾಲ್ತುಳಿತದಲ್ಲಿ ಎಷ್ಟು ಜನ ಅಸುನೀಗಿದ್ದಾರೆ? ಕೇಂದ್ರ ಸರ್ಕಾರದ ಬಜೆಟ್ ಬಗ್ಗೆಯೂ ಚರ್ಚೆ ಆಗಬೇಕು’ ಎಂದರು.

ಡಿಕೆಶಿ ಬದಲಿಸುವಂತೆ ಪ್ರಾರ್ಥನೆ: ಸತೀಶ

ಒಂದನೇ ಪುಟದಿಂದ...

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ನಮ್ಮ ಪಕ್ಷ ಬೆಳೆಯಬೇಕು, ಮತ್ತೆ ಅಧಿಕಾರಕ್ಕೆ ಬರಬೇಕು ಎಂಬ ಕಾರಣಕ್ಕೆ ಹೈಕಮಾಂಡ್ ಮುಂದೆ ಕೆಲವೊಂದಿಷ್ಟು ವಿಚಾರಗಳನ್ನು ವ್ಯಕ್ತಪಡಿಸಿದ್ದೇವೆ. ಸಣ್ಣ ಪುಟ್ಟ ವ್ಯತ್ಯಾಸಗಳಿದ್ದರೆ ಸರಿಪಡಿಸುವ ಕಾರ್ಯವನ್ನು ಹೈಕಮಾಂಡ್ ಮಾಡುತ್ತದೆ’ ಎಂದರು.

‘ದಲಿತ ಸಮಾವೇಶ ಸದ್ಯಕ್ಕೆ ಇಲ್ಲ. ಅದು ನಡೆಯುವುದು ಗೃಹಸಚಿವ ಜಿ.ಪರಮೇಶ್ವರ ನೇತೃತ್ವದಲ್ಲಿ. ಅವರು ಹೇಳಿದಾಗ ಸಮಾವೇಶ ನಡೆಸುತ್ತೇವೆ’ ಎಂದರು.

‘ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿ ಎಂದು ಡಿ.ಕೆ.ಶಿವಕುಮಾರ್ ಅವರೇ ಹೇಳಿರುವುದರಿಂದ ಈ ಬಗ್ಗೆ ಪ್ರತಿಕ್ರಿಯಿಸುವ ಪ್ರಶ್ನೆಯೇ ಬರುವುದಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಹಿರಂಗ ಚರ್ಚೆ ಸರಿಯಲ್ಲ: ದಿನೇಶ್

ಬಾಗಲಕೋಟೆ: ‘ಕೆಪಿಸಿಸಿ ಅಧ್ಯಕ್ಷ, ಮುಖ್ಯಮಂತ್ರಿ ಬದಲಾವಣೆ ಕುರಿತು ಬಹಿರಂಗ ಚರ್ಚೆ ಸರಿಯಲ್ಲ. ಇವೆಲ್ಲವೂ ಅನಾವಶ್ಯಕ ಮಾತುಗಳಿಗೆ ಅವಕಾಶ ಮಾಡಿಕೊಡುತ್ತದೆ’ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

‘ಹಲವರದ್ದು ನೂರೆಂಟು ಅಭಿಪ್ರಾಯ ಇರುತ್ತವೆ. ಎಲ್ಲವನ್ನೂ ಬಹಿರಂಗ ಪಡಿಸಲು ಆಗದು. ಉನ್ನತ ಹುದ್ದೆಗೆ ಹೋಗುವ ಆಸೆ ಇರುತ್ತದೆ. ಅದಕ್ಕೆ ಪೈಪೋಟಿಯೂ ಇರುತ್ತದೆ. ಆದರೆ, ಅದನ್ನು ಕೆಲವರು ಪ್ರತಿಷ್ಠೆ ಆಗಿಸಿಕೊಂಡಿದ್ದಾರೆ’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ರಾಜಣ್ಣ ಹೇಳಿಕೆ ಎಐಸಿಸಿ ಗಮನಿಸುತ್ತಿದೆ’

‘ಶಿವಕುಮಾರ್ ಹಗಲು, ರಾತ್ರಿ ಕಷ್ಟಪಟ್ಟು ಪಕ್ಷ ಕಟ್ಟಿದ್ದಾರೆ. ಸಚಿವ ರಾಜಣ್ಣ ಆ ರೀತಿ ಮಾತನಾಡುವುದು ತಪ್ಪು. ರಾಜಣ್ಣ ಹೇಳಿಕೆಯನ್ನು ಎಐಸಿಸಿ ಗಮನಿಸುತ್ತಿದೆ’ ಎಂದು ಶಾಸಕ ಎಚ್.ಡಿ. ರಂಗನಾಥ್ ಹೇಳಿದರು.

‘ಶಿವಕುಮಾರ್ ಅವರು ಪಕ್ಷಕಟ್ಟಲು ಶ್ರಮಿಸುತ್ತಿದ್ದಾರೆ. ಸದಾ ಜನಪರವಾಗಿ ಕೆಲಸ ಮಾಡುವ ಅವರು ನಿತ್ಯ ಮಲಗುವುದೇ ಬೆಳಗಿನ ಜಾವ 4 ಗಂಟೆಗೆ. ಕಾಂಗ್ರೆಸ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಿವಕುಮಾರ್ ಒಬ್ಬರೂ ಅನಿವಾರ್ಯ. ಅವರ ಸಂಘಟನಾ ಕಾರ್ಯವನ್ನು ಸಿದ್ದರಾಮಯ್ಯ ಅವರೇ ಮೆಚ್ಚಿದ್ದಾರೆ. ರಾಜಣ್ಣ ಅವರ ಹೇಳಿಕೆಯಿಂದ ನೋವಾಗಿದೆ’ ಎಂದರು.

ರಾಜ್ಯದ ಪಾಲು ಹೆಚ್ಚಳಕ್ಕೆ ಡಿಕೆಶಿ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುಮತಿ ಹಾಗೂ ಅನುದಾನಗಳನ್ನು ನೀಡಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

ರಾಜಸ್ಥಾನದ ಉದಯಪುರದಲ್ಲಿ ಮಂಗಳವಾರ ನಡೆದ ಅಖಿಲ ಭಾರತ ರಾಜ್ಯಗಳ ಜಲಸಂಪನ್ಮೂಲ ಸಚಿವರ ಸಮ್ಮೇಳನದಲ್ಲಿ ಮಾತನಾಡಿದರು.

‘ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿ ಪರಿಗಣಿಸಿ ಅನುಮತಿ ನೀಡುವಂತೆ ಕೇಂದ್ರ ಜಲ ಆಯೋಗಕ್ಕೆ ನಿರ್ದೇಶನ ನೀಡಬೇಕು. ಇದರಿಂದ ತಮಿಳುನಾಡಿಗೆ ಪ್ರತಿ ತಿಂಗಳ ಲೆಕ್ಕಾಚಾರದ ನೀರು ನೀಡಬಹುದು. ಜತೆಗೆ 400 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮತ್ತು ಬೆಂಗಳೂರಿನ ಕುಡಿಯುವ ನೀರಿನ ಅಗತ್ಯ ಪೂರೈಸಲು ಸಾಧ್ಯವಾಗುತ್ತದೆ; ಎಂದು ಹೇಳಿದರು.

‘2023-24 ರ ಕೇಂದ್ರ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಅನುದಾನ ಘೋಷಿಸಿದ್ದರೂ ಈವರೆಗೂ ಹಣ ಬಿಡುಗಡೆಯಾಗಿಲ್ಲ. ಹೀಗಾಗಿ ಬೇಗನೆ ಯೋಜನೆ ಪೂರ್ಣಗೊಳಿಸಲು ಹಣ ಬಿಡುಗಡೆ ಮಾಡಬೇಕು’ ಎಂದು ಕೋರಿದರು.

ಕಳಸಾ ನಾಲಾ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮತಿ ದೊರಕಿಸಿಕೊಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಜಲಶಕ್ತಿ ಸಚಿವಾಲಯವು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ ಮೇಲೆ ಒತ್ತಡ ಹೇರಿ, ನದಿ ಜೋಡಣೆ ಯೋಜನೆಯಡಿ ಗೋದಾವರಿ-



ಡಿ.ಕೆ.ಶಿವಕುಮಾರ್

ಕಾವೇರಿ ಯೋಜನೆಗೆ ಸಂಬಂಧಿಸಿದಂತೆ ರಾಜ್ಯದ ಪಾಲನ್ನು ಮರುಪರಿಶೀಲನೆ ಮಾಡಬೇಕು. ಈ ಯೋಜನೆಯಡಿ ಪ್ರಸ್ತುತ ಕರ್ನಾಟಕಕ್ಕೆ 15.8 ಟಿಎಂಸಿ (ಶೇ. 10.74) ನೀರನ್ನು ಮಾತ್ರ ಹಂಚಿಕೆ ಮಾಡಲಾಗಿದೆ ಎಂದು ಅವರು ಹೇಳಿದರು.



ಸರ್ಕಾರಿ ಶಾಲೆಯ ಹಳೆ ವಿದ್ಯಾರ್ಥಿಗಳು ಬಾನುವಳ್ಳಿಯಲ್ಲಿ ಈಚೆಗೆ ಏರ್ಪಡಿಸಿದ್ದ ಉದ್ಯೋಗ ಮೇಳದಲ್ಲಿ ಗ್ರಾಮದ ಮುಖಂಡರೊಬ್ಬರು ಉದ್ಯೋಗಾರ್ಥಿಯೊಬ್ಬರಿಗೆ ಕಂಪನಿಯೊಂದರ ಉದ್ಯೋಗಪತ್ರ ನೀಡಿದರು ಪ್ರಜಾವಾಣಿ ಚಿತ್ರ

ಹಳ್ಳಿಯಲ್ಲಿ ಯಶಸ್ವಿ ಉದ್ಯೋಗ ಮೇಳ

ಒಂದನೇ ಪುಟದಿಂದ...

‘ಭಾನುವಳ್ಳಿ ಮಾತ್ರವಲ್ಲ ಸುತ್ತಲಿನ ಊರುಗಳಿಗೂ ನೆರವಾಗಿ ಎಂದು ಊರ ಮುಖಂಡರು ಸಲಹೆ ನೀಡಿದರು. ಕೂಡಲೇ ಉದ್ಯೋಗದಾತ ಕಂಪನಿಗಳನ್ನು ಸಂಪರ್ಕಿಸಿದೆವು. ಜಿ.ಎಂ. ಯೂನಿವರ್ಸಿಟಿಯಲ್ಲಿ ಉದ್ಯೋಗ ಮೇಳ ಆಯೋಜಿಸಿದ ಅನುಭವ ನನಗೆ ಇಲ್ಲಿ ನೆರವಿಗೆ ಬಂತು. ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರ ತಂದೆ-ತಾಯಿ ಹೆಸರಲ್ಲಿರುವ ಭೀಮಸಮುದ್ರ ಜಿ.ಮಲ್ಲಿಕಾರ್ಜುನಪ್ಪ, ಶ್ರೀಮತಿ ಹಾಲಮ್ಮ ಚಾರಿಟಿ ಪ್ರತಿಷ್ಠಾನದ ನೆರವಿನೊಂದಿಗೆ ಫೆಬ್ರುವರಿ 9ರಂದು ಗ್ರಾಮದ ಪ್ರೌಢಶಾಲೆ ಆವರಣದಲ್ಲಿ ಮೇಳ ನಡೆಸಿದೆವು’ ಎಂದು ಅವರು ವಿವರಿಸಿದರು.

‘ಈ ಗ್ರಾಮಗಳ ಅನೇಕ ಯುವಕ/ ಯುವತಿಯರು 10ನೇ ತರಗತಿ ಪಾಸ್ ಅಥವಾ ಫೇಲ್ ಆಗಿ ಗ್ರಾಮದಲ್ಲಿ ಕೃಷಿ ಕೂಲಿ ಮತ್ತಿತರ ಕೆಲಸ ಮಾಡುತ್ತಿದ್ದರು. ಕೆಲವರು ಪಿಯುಸಿ, ಪದವಿ, ಐಟಿಐ, ಡಿಪ್ಲೊಮಾ ಓದಿ ಉದ್ಯೋಗ ಅರಸುತ್ತಿದ್ದರು. ಅಂಥವರಿಗೆ ಮೇಳದಿಂದ ನೆರವಾಯಿತು. ಎರಡು ದಿನ ಸ್ನೇಹ ಸಮ್ಮಿಲನ ಕಾರ್ಯಕ್ರಮ ನಡೆಸಿ ಮೂರನೇ ದಿನ ಉದ್ಯೋಗ ಮೇಳ ಆಯೋಜಿಸಿದೆವು’ ಎಂದು ಅವರು ಹೇಳಿದರು.

ಹಳೆಯ ವಿದ್ಯಾರ್ಥಿಗಳೆಲ್ಲ ಸೇರಿ ‘ಸ್ನೇಹಸಂಭ್ರಮ ಗೆಳೆಯರ ಬಳಗ’ ರಚಿಸಿ ನೆರವು ನೀಡಲು ನಿರ್ಧರಿಸಿದ್ದೇವೆ. ಇಂಥ ಸಾಮಾಜಿಕ ಕಾರ್ಯ ಪ್ರತಿ ವರ್ಷ ನಡೆಯಲಿದೆ

ತೇಜಸ್ವಿ ಕಟ್ಟೀಮನಿ, ಹಳೆಯ ವಿದ್ಯಾರ್ಥಿ

ಮೇಳ ನಡೆದ ದಿನವೇ 417 ಜನರಿಗೆ ಉದ್ಯೋಗದ ಆದೇಶ ನೀಡಲಾಯಿತು. ವಾರದ ನಂತರ ಬಹುತೇಕರು ಕೆಲಸಕ್ಕೆ ಹಾಜರಾಗಿದ್ದಾರೆ. ಮುಂದೆಯೂ ಇಂಥ ಮೇಳ ಆಯೋಜಿಸಲು ಹಾಗೂ ಈ ಗ್ರಾಮಗಳ ಜನರ ಅನುಕೂಲಕ್ಕಾಗಿ ಕೆಲವೇ ದಿನಗಳಲ್ಲಿ ಬೃಹತ್ ಆರೋಗ್ಯ ಉಚಿತ ಮೇಳ ಆಯೋಜಿಸಲು ನಿರ್ಧರಿಸಿದ್ದೇವೆ’ ಎಂದು ಅವರು ಮಾಹಿತಿ ನೀಡಿದರು.

ಅಶ್ಲೀಲ ಮಾತಿಗೆ ಸುಪ್ರೀಂ ಕೋರ್ಟ್ ಕಿಡಿ • ಬಂಧನದಿಂದ ರಕ್ಷಣೆ

‘ಕೊಳಕು ಮನಸ್ಸು ತೋರಿದ ರಣವೀರ್’

ಪ್ರಜಾವಾಣಿ ವಾರ್ತೆ

ನವದೆಹಲಿ: ಪಾಡ್‌ಕಾಸ್ಟರ್ ರಣವೀರ್ ಅಲಹಾಬಾದಿಯಾ ಅವರು ಕಾರ್ಯಕ್ರಮವೊಂದರಲ್ಲಿ ಕೆಲವು ಮಾತುಗಳ ಮೂಲಕ ತಮ್ಮ ಕೊಳಕು ಮನಸ್ಸು ಮತ್ತು ವಿಕೃತ ಮನಃಸ್ಥಿತಿಯನ್ನು ಪ್ರದರ್ಶಿಸಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, ರಣವೀರ್ ಮತ್ತು ಅವರ ಜೊತೆಗಾರರಿಗೆ ಬಂಧನದಿಂದ ರಕ್ಷಣೆ ನೀಡಿದೆ. ರಣವೀರ್ ಅವರು ಆಡಿರುವ ಮಾತುಗಳು ಅಶ್ಲೀಲವಲ್ಲ ಎಂದಾದರೆ, ಅದು ಇನ್ನೇನು ಎಂದು ಕೋರ್ಟ್ ಪ್ರಶ್ನಿಸಿದೆ.

‘ಒಂದಿಷ್ಟು ಜವಾಬ್ದಾರಿ ಇರಬೇಕು. ಇಂತಹ ವರ್ತನೆಗಳನ್ನು ಖಂಡಿಸಬೇಕು... ಇದು ವ್ಯಕ್ತಿಯೊಬ್ಬನ ನೈತಿಕತೆಗೆ ಸಂಬಂಧಿಸಿದ ಪ್ರಶ್ನೆಯಲ್ಲ. ಆತ ತಂದೆ-ತಾಯಿಯನ್ನು ಅವಮಾನಿಸುತ್ತಿದ್ದಾನೆ. ಈ ವ್ಯಕ್ತಿಯ ಮನಸ್ಸಿನಲ್ಲಿ ಏನೋ ಕೊಳಕಿದೆ, ಅದನ್ನು ಈ ಕಾರ್ಯಕ್ರಮದ ಮೂಲಕ ಹರಡಲಾಗುತ್ತಿದೆ’ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ಪೀಠವು ಹೇಳದೆ.

ವಕೀಲ ಅಭಿನವ್ ಚಂದ್ರಚೂಡ್ ಅವರು ರಣವೀರ್ ಪರವಾಗಿ ಹಾಜರಿದ್ದರು. ರಣವೀರ್ ಅವರು ತಮ್ಮ ಪಾಲಕರಿಗೆ ಏನು ಮಾಡಿದ್ದಾರೋ ಅದರ ಬಗ್ಗೆ ನಾಚಿಕೆಪಟ್ಟುಕೊಳ್ಳಬೇಕು ಎಂದು ಪೀಠ ಹೇಳಿದೆ. ‘ನಾವು ದಂತಗೋಪುರದಲ್ಲಿ ಕುಳಿತಿಲ್ಲ. ಅವರು ಆಸ್ಟ್ರೇಲಿಯಾದ ಕಾರ್ಯಕ್ರಮವೊಂದನ್ನು ಹೇಗೆ ನಕಲು ಮಾಡಿದ್ದಾರೆ ಎಂಬುದು ನಮಗೆ ತಿಳಿದಿದೆ. ಆದರೆ ಇಂತಹ ಕಾರ್ಯಕ್ರಮಗಳಲ್ಲಿ ಒಂದು ಎಚ್ಚರಿಕೆಯೂ ಇದೆ’ ಎಂದು ಪೀಠವು ಹೇಳಿದೆ.

ರಣವೀರ್ ವಿರುದ್ಧ ಅಸ್ಸಾಂ ಮತ್ತು ಮಹಾರಾಷ್ಟ್ರದಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳಿಗೆ ಸಂಬಂಧಿಸಿದಂತೆ ಅವರನ್ನು ಬಂಧಿಸಬಾರದು, ಆದರೆ ಅವರು ತನಿಖೆಗೆ ಸಹಕರಿಸಬೇಕು ಎಂದು ಪೀಠವು ಸೂಚಿಸಿದೆ. ರಣವೀರ್ ಮತ್ತು ಅವರ ಜೊತೆಗಾರರು ಮುಂದಿನ ಆದೇಶದವರೆಗೆ ಬೇರೆ ಯಾವುದೇ ಕಾರ್ಯಕ್ರಮ ನಡೆಸಬಾರದು ಎಂದು ತಾಕೀತು ಮಾಡಿದೆ.

ಪ್ರಯಾಗರಾಜ್: ಫೀಕಲ್ ಕೋಲಿಫಾರ್ಮ್ ಪ್ರಮಾಣ ಅಧಿಕ

‘ಸಂಗಮದ ನೀರು ಸ್ನಾನಕ್ಕೆ ಯೋಗ್ಯವಲ್ಲ’

ನವದೆಹಲಿ(ಪಿಟಿಐ): ಮಹಾ ಕುಂಭ ಮೇಳ ನಡೆಯುತ್ತಿರುವ ಪ್ರಯಾಗರಾಜ್‌ದಲ್ಲಿ ಮೂರು ನದಿಗಳು ಸೇರುವ ವಿವಿಧ ಸ್ಥಳಗಳಲ್ಲಿ ಫೀಕಲ್ ಕೋಲಿಫಾರ್ಮ್ (ಎಫ್‌ಸಿ) ಬ್ಯಾಕ್ಟೀರಿಯಾ ಪ್ರಮಾಣವು ಅನುಮತಿಸಲ್ಪಟ್ಟ ಮಿತಿಗಿಂತ ಅಧಿಕ ಇದೆ. ನೀರು ಸ್ನಾನಕ್ಕೆ ಯೋಗ್ಯವಾದ ಗುಣಮಟ್ಟ ಹೊಂದಿಲ್ಲ ಎಂದು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಹೇಳಿದೆ.

ಮಂಡಳಿಯು, ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ಸಲ್ಲಿಸಿರುವ ವರದಿಯಲ್ಲಿ ಈ ಮಾಹಿತಿ ಉಲ್ಲೇಖಿಸಿದೆ.

ಸಂಸ್ಕರಿಸದೇ ಇರುವ ನೀರು ಅಥವಾ ಕಲುಷಿತ ನೀರು ನದಿಗೆ ಸೇರ್ಪಡೆಗೊಂಡಾಗ ಮತ್ತು ಮಲದಲ್ಲಿ ಈ ಫೀಕಲ್ ಕೋಲಿಫಾರ್ಮ್



ಬ್ಯಾಕ್ಟೀರಿಯಾ ಕಂಡುಬರುತ್ತದೆ. ನೀರಿನಿಂದ ಹರಡಬಹುದಾದ ಸಾಂಕ್ರಾಮಿಕ ರೋಗಗಳಿಗೆ ಈ ಬ್ಯಾಕ್ಟೀರಿಯಾಗಳು ಕಾರಣವಾಗುತ್ತವೆ.

ಫೀಕಲ್ ಕೋಲಿಫಾರ್ಮ್ ಬ್ಯಾಕ್ಷೀರಿಯಾದ ಅನುಮತಿಸಿದ ಮಿತಿಯು ಪ್ರತಿ 100 ಮಿಲಿ ಲೀಟರ್‌ಗೆ 2,500 ಎಂಪಿಎನ್ (ಗರಿಷ್ಠ ಇರಬಹುದಾದ ಸಂಖ್ಯೆ) ಇರಬೇಕು ಎಂದು ಮಂಡಳಿ ಹೇಳುತ್ತದೆ.

ಅವಧಿ ವಿಸ್ತರಣೆಯಿಲ್ಲ, ಮಹಾಕುಂಭ ನಗರ (ಪಿಟಿಐ): ‘ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದ ಅವಧಿಯು ಯಾವುದೇ ಕಾರಣಕ್ಕೂ ವಿಸ್ತರಣೆ ಆಗುವುದಿಲ್ಲ’ ಎಂದು ಜಿಲ್ಲಾಧಿಕಾರಿ ರವೀಂದ್ರ ಮಂದರ್ ಸ್ಪಷ್ಟಪಡಿಸಿದರು.

ಸದನದಲ್ಲಿ ಗದ್ದಲ: ಉತ್ತರ ಪ್ರದೇಶದ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರಾದ ಆನಂದಿಬೇನ್ ಪಟೇಲ್ ಅವರು ಭಾಷಣ ಮಾಡುತ್ತಿದ್ದ ವೇಳೆ ಸಮಾಜವಾದಿ ಪಕ್ಷದ ಶಾಸಕರು ಪ್ರತಿಭಟನೆ ನಡೆಸಿ, ತೀವ್ರ ಗದ್ದಲ ಎಬ್ಬಿಸಿದರು. ಇದರ ಪರಿಣಾಮ ರಾಜ್ಯಪಾಲರು 8 ನಿಮಿಷಗಳಲ್ಲಿಯೇ ಭಾಷಣ ಮುಗಿಸಿದರು.

‘ಮಹಾ ಕುಂಭ ‘ಮೃತ್ಯು ಕುಂಭ’ವಾಗಿದೆ’

ಕೋಲ್ಕತ್ತ/ಲಖನೌ (ಪಿಟಿಐ): ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ‘ಮಹಾ ಕುಂಭ’ದಲ್ಲಿ ಸಂಭವಿಸಿದ ಕಾಲ್ತುಳಿತದಿಂದಾಗಿ ಅದು ‘ಮೃತ್ಯು ಕುಂಭ’ವಾಗಿ ಪರಿವರ್ತನೆ ಆಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಂಗಳವಾರ ದೂರಿದರು.

ವಿಧಾನಸಭಾ ಅಧಿವೇಶನದಲ್ಲಿ ಮಾತನಾಡಿದ ಅವರು, ಕಾಲ್ತುಳಿತದಲ್ಲಿ ಮೃತಪಟ್ಟವರ ನೈಜ ಸಂಖ್ಯೆಯನ್ನು ಉತ್ತರ ಪ್ರದೇಶದ ಬಿಜೆಪಿ ಸರ್ಕಾರ ನೀಡುತ್ತಿಲ್ಲ ಎಂದು ಕಿಡಿಕಾರಿದರು.

ಆಧಾರರಹಿತ: ‘ಬಿಜೆಪಿಯುವರು ನನ್ನನ್ನು ಮುಸ್ಲಿಂ ಲೀಗ್‌ನ ಸದಸ್ಯೆ ಎಂದು ಆರೋಪಿಸಿದ್ದಾರೆ. ಇದು ಆಧಾರರಹಿತ ವಾಗಿದೆ’ ಎಂದು ಅವರು ಹೇಳಿದರು.



ಸುಭಾಷಿತ

ಅಸತ್ಯಕ್ಕೆ ಅನಂತ ರೂಪಗಳು. ಆದರೆ ಸತ್ಯಕ್ಕೆ ಇರುವುದು ಒಂದೇ ರೂಪ.

-ಗಳಗನಾಥ

ರೈಲು ನಿಲ್ದಾಣದಲ್ಲಿ ಕಾಲ್ತುಳಿತ ವ್ಯವಸ್ಥೆಯ ಲೋಪಕ್ಕೆ ಕೈಗನ್ನಡಿ

ನವದೆಹಲಿಯ ರೈಲು ನಿಲ್ದಾಣದಲ್ಲಿ ಶನಿವಾರ ಸಂಭವಿಸಿದ ಕಾಲ್ತುಳಿತಕ್ಕೆ ಕಾರಣಗಳು ಏನು ಎಂಬ ವಿಚಾರದಲ್ಲಿ ಹಲವು ವಿವರಣೆಗಳಿವೆ. ಮಹಾ ಕುಂಭಮೇಳದಲ್ಲಿ ಭಾಗಿಯಾಗಲು ಪ್ರಯಾಗರಾಜ್‌ಗೆ ತೆರಳುವ ಪ್ರಯಾಣಿಕರು ರೈಲು ನಿಲ್ದಾಣದಲ್ಲಿ ಭಾರಿ ಸಂಖ್ಯೆಯಲ್ಲಿ ಇದ್ದಾಗ ಉಂಟಾದ ಕಾಲ್ತುಳಿತಕ್ಕೆ ಕನಿಷ್ಠ 18 ಮಂದಿ ಬಲಿಯಾಗಿದ್ದಾರೆ. ಈ ದುರ್ಘಟನೆಗೆ ನೀಡಿರುವ ಹಲವು ವಿವರಣೆಗಳ ಪೈಕಿ ಸತ್ಯವು ಯಾವುದೋ ಒಂದು ವಿವರಣೆಯಲ್ಲಿ ಇದ್ದಿರಬಹುದು. ಅಧಿಕಾರಿಗಳು ತೋರಿದ ನಿರ್ಲಕ್ಷ್ಯ ಮತ್ತು ಜನಜಂಗುಳಿಯನ್ನು ನಿಭಾಯಿಸುವಲ್ಲಿ ಆದ ವೈಫಲ್ಯವು ಪರಿಸ್ಥಿತಿ ವಿಷಮಗೊಳ್ಳುವಂತೆ ಮಾಡಿತು ಎಂಬುದಂತೂ ನಿಜ. ಮೌನಿ ಅಮಾವಾಸ್ಯೆಯ ದಿನ ಪ್ರಯಾಗರಾಜ್‌ನಲ್ಲಿ ಸಂಭವಿಸಿದ ದುರಂತಕ್ಕೆ ಅಲ್ಲಿ ಜನಜಂಗುಳಿಯನ್ನು ನಿಯಂತ್ರಿಸುತ್ತಿದ್ದವರ ವೈಫಲ್ಯವು ಹೇಗೆ ಕಾರಣವೋ ಅದೇ ರೀತಿಯಲ್ಲಿ ರೈಲು ನಿಲ್ದಾಣದಲ್ಲಿ ಜನ ಜೀವ ಕಳೆದುಕೊಂಡಿದ್ದಕ್ಕೆ ಅಲ್ಲಿನ ಅಧಿಕಾರಿಗಳು ಹೊಣೆ ಆಗಬೇಕಾಗುತ್ತದೆ. ಪ್ರಯಾಣಿಕರಿಗಾಗಿ ನಿರ್ಮಿಸಿರುವ ಮೇಲ್ಸೇತುವೆಯಿಂದ ಕೆಳಕ್ಕೆ ಇಳಿಯುತ್ತಿದ್ದ ಕೆಲವರು ಮುಂದೆ ಇದ್ದವರ ಮೇಲೆ ಬಿದ್ದ ಪರಿಣಾಮವಾಗಿ ಕಾಲ್ತುಳಿತ ಉಂಟಾಯಿತು ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.



ದೆಹಲಿಯ ಕಾಲ್ತುಳಿತವು ಜನದಟ್ಟಣೆಯ ಸಂದರ್ಭಗಳಲ್ಲಿ ಕಟ್ಟೆಚ್ಚರದ ಅಗತ್ಯವನ್ನು ಮತ್ತೊಮ್ಮೆ ಹೇಳುವಂತಿದೆ

ಆದರೆ ಈ ವಿವರಣೆಯು ಎಲ್ಲವೂ ದುರದೃಷ್ಟವಶಾತ್ ಆಗಿಹೋದವು ಎಂದು ಹೇಳುತ್ತದೆ. ಇದು ಪೂರ್ಣ ಸತ್ಯವನ್ನು ಹೇಳುತ್ತಿಲ್ಲ. ಅಂದು ರೈಲು ನಿಲ್ದಾಣದಲ್ಲಿ ರೈಲುಗಳು ಹೊರಡುವುದು ವಿಳಂಬವಾಗಿತ್ತು, ಟಿಕೆಟ್ ಮಾರಾಟ ಪ್ರಮಾಣವು ಹೆಚ್ಚಳ ಕಂಡಿತ್ತು, ರೈಲ್ವೆ ಪ್ಲ್ಯಾಟ್‌ಫಾರ್ಮ್ ಬದಲಾವಣೆ ವಿಚಾರವಾಗಿ ಕೊನೆಯ ಕ್ಷಣದಲ್ಲಿ ಒಂದಿಷ್ಟು ಘೋಷಣೆಗಳನ್ನು ಮಾಡಲಾಗಿತ್ತು ಎಂಬ ವರದಿಗಳಿವೆ. ಜನ ಹೆಚ್ಚಿನ ಸಂಖ್ಯೆಯಲ್ಲಿ ನಿಲ್ದಾಣಕ್ಕೆ ಬರುತ್ತಾರೆ ಎಂಬುದನ್ನು ಅಧಿಕಾರಿಗಳು ಮೊದಲೇ ಅಂದಾಜಿಸಬೇಕಿತ್ತು, ಬದಲಿ ವ್ಯವಸ್ಥೆ ಮಾಡಿಕೊಳ್ಳಬೇಕಿತ್ತು ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಿತ್ತು.

ದುರ್ಘಟನೆಗೆ ಕಾರಣ ಪತ್ತೆ ಮಾಡಲು ತನಿಖೆಗೆ ಆದೇಶಿಸಲಾಗಿದೆ. ಈ ತನಿಖೆಯು ಪಾರದರ್ಶಕವಾಗಿ ನಡೆಯಬೇಕು, ಲೋಪಗಳಿಗೆ ಹೊಣೆಗಾರರು ಯಾರು ಎಂಬುದನ್ನು ಅದು ಪತ್ತೆ ಮಾಡಬೇಕು. ಆದರೆ ಇಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ. ರೈಲುಗಳ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ಮಾರಾಟ ಮಾಡಿದ್ದು ಏಕೆ? ರೈಲು ಹೊರಡುವುದರಲ್ಲಿ ವಿಳಂಬ ಆಗಿತ್ತೇ? ರೈಲು ಇನ್ನೇನು ಹೊರಡಲಿದೆ ಎಂಬ ಹೊತ್ತಿನಲ್ಲಿ ಪ್ಲ್ಯಾಟ್‌ಫಾರ್ಮ್ ಬದಲಾವಣೆ ಬಗ್ಗೆ ಘೋಷಣೆ ಮಾಡಿ ಪ್ರಯಾಣಿಕರಲ್ಲಿ ಗೊಂದಲ ಮೂಡಿಸಲಾಯಿತೇ? ರೈಲು ನಿಲ್ದಾಣ ಹಾಗೂ ಬಸ್ ನಿಲ್ದಾಣಗಳಲ್ಲಿ ಜನದಟ್ಟಣೆಯನ್ನು ನಿರ್ವಹಿಸುವಾಗ ಪಾಲಿಸಬೇಕಿರುವ ನಿಯಮಗಳು ಇವೆ. ಹಬ್ಬ, ಧಾರ್ಮಿಕ ಕಾರ್ಯಕ್ರಮಗಳಿಗೆ ತೆರಳುವ ಜನರನ್ನು ನಿರ್ವಹಿಸುವುದು ಹೇಗೆ ಎಂಬುದೂ ಈ ನಿಯಮಗಳ ಭಾಗ. ಈ ನಿಯಮಗಳು ದುರ್ಘಟನೆಯ ಸಾಧ್ಯತೆಗಳನ್ನು ವಿವರಿಸಿವೆ. ನಿಯಮಗಳನ್ನು ಸರಿಯಾಗಿ ಪಾಲನೆ ಮಾಡಿದಲ್ಲಿ ಬಹುತೇಕ ದುರ್ಘಟನೆಗಳನ್ನು ತಡೆಯಬಹುದು. ಕುಂಭ ಮೇಳ ನಡೆಯುತ್ತಿದ್ದ ಸ್ಥಳದಲ್ಲಿ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಕೆ ಮಾಡಲಾಗಿದೆ. ಕುಂಭಮೇಳಕ್ಕೆ ಸಂಬಂಧಿಸಿದ ಇತರ ಕಡೆಗಳಲ್ಲಿಯೂ ಅದರ ಬಳಕೆ ಹೆಚ್ಚಬೇಕು. ಕುಂಭಮೇಳದ ಸ್ಥಳದಲ್ಲಿ ವ್ಯವಸ್ಥೆಯ ಲೋಪದಿಂದಾಗಿ ಕಾಲ್ತುಳಿತ ಉಂಟಾದ ರೀತಿಯಲ್ಲೇ ರೈಲು ನಿಲ್ದಾಣದಲ್ಲಿಯೂ ಆಗಿದೆ.

ಕಾಲ್ತುಳಿತದಂತಹ ದುರ್ಘಟನೆಗಳು ನಡೆದಾಗ ಆರಂಭದಲ್ಲಿ ಅದನ್ನು ನಿರಾಕರಿಸುವ, ನಂತರ ವಿವರಗಳನ್ನು ತಪ್ಪಾಗಿ ನೀಡುವ ಅಧಿಕೃತ ನೀತಿಯೊಂದು ಜಾರಿಯಲ್ಲಿ ಇರುವಂತೆ ಕಾಣುತ್ತಿದೆ. ಇದು ತೀರಾ ದುರದೃಷ್ಟಕರ. ಸಾವಿನ ಸಂಖ್ಯೆಯನ್ನು ತಿಳಿಸುವಾಗ ಸಾಮಾನ್ಯವಾಗಿ ವಾಸ್ತವಕ್ಕಿಂತ ಕಡಿಮೆ ಸಂಖ್ಯೆಯನ್ನು ಹೇಳುವುದಿದೆ. ದುರ್ಘಟನೆಗೆ ಕಾರಣವಾದ ಸಂದರ್ಭವನ್ನು ಸರಿಯಾಗಿ ತಿಳಿಸುತ್ತಿಲ್ಲ. ಇದರಿಂದಾಗಿ ಪರಿಸ್ಥಿತಿಯ ಸೂಕ್ತ ವಿಶ್ಲೇಷಣೆ ಸಾಧ್ಯವಾಗುತ್ತಿಲ್ಲ, ತಪ್ಪು ಮಾಡಿದವರು ಹೊಣೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ, ಭವಿಷ್ಯದಲ್ಲಿ ಇಂತಹ ದುರ್ಘಟನೆಗಳನ್ನು ತಡೆಯುವ ಸಾಧ್ಯತೆ ಕ್ಷೀಣವಾಗುತ್ತದೆ. ಕುಂಭಮೇಳದಲ್ಲಿ ಕಳೆದ ತಿಂಗಳು ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟವರ ನಿಖರ ಸಂಖ್ಯೆ ಈಗಲೂ ಗೊತ್ತಾಗಿಲ್ಲ. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಏನನ್ನೋ ಮುಚ್ಚಿಡುವ ಯತ್ನ ನಡೆದಿರುವಂತಿದೆ, ತನಿಖಾಧಿಕಾರಿಗಳು ನಿರ್ಣಯಕ್ಕೆ ಬರುವ ಮುನ್ನವೇ ಊಹಾಪೋಹಗಳಿಗೆ ರೆಕ್ಕೆ ಬಂದಿರುವಂತಿದೆ. ಶನಿವಾರ ನಡೆದ ದುರ್ಘಟನೆಯ ವಿಚಾರದಲ್ಲಿ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ತಮ್ಮ ಹೇಳಿಕೆಯನ್ನು ಕೆಲವೇ ಕ್ಷಣಗಳಲ್ಲಿ ಬದಲಾಯಿಸಿದರು, 'ಕಾಲ್ತುಳಿತ' ಎಂಬ ಪದವನ್ನೇ ಕೈಬಿಟ್ಟರು. ಕುಂಭಮೇಳವು ಕೊನೆಗೊಳ್ಳಲು ಇನ್ನೂ ಕೆಲವು ದಿನಗಳು ಬಾಕಿ ಇವೆ, ದೆಹಲಿಯ ಕಾಲ್ತುಳಿತ ಪ್ರಕರಣವು ಕಟ್ಟೆಚ್ಚರದ ಅಗತ್ಯವನ್ನು ಮತ್ತೊಮ್ಮೆ ಹೇಳುವಂತಿದೆ.

ದಿನದ ಟ್ವೀಟ್

ಗಳಿಸಿ, ವ್ಯಯಿಸಿ, ಸಂಭ್ರಮಿಸಿ



ಹಣದ ವಿಷಯ! ಎಸ್‌ಐಪಿಯಲ್ಲಿ ಹೂಡಿಕೆ ಮಾಡಿ. ಉತ್ತಮ ಕಾರು, ಮನೆ ಖರೀದಿಸಿ, ಸಂಭ್ರಮಿಸಿ. ಸಂಚರಿಸಿ, ಒಳ್ಳೆಯ ಆಹಾರ ಸೇವಿಸಿ, ಉತ್ತಮ ಬಟ್ಟೆ ಧರಿಸಿ, ನಿಮಗೆ ಮತ್ತು ನಿಮ್ಮ ಕುಟುಂಬಕ್ಕಾಗಿ ಹಣ ವ್ಯಯಿಸಿ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ, ಅದರಿಂದ, ದೊಡ್ಡವರಾದಾಗ ಅವರಿಗೆ ನಿಮ್ಮ ಹಣ ಬೇಕಾಗದು. ಉತ್ತಮ ಟರ್ಮ್ ಇನ್ಶೂರೆನ್ಸ್, ಆರೋಗ್ಯ ವಿಮೆ ಖರೀದಿಸಿ. ನಿಮ್ಮ ಲೆಕ್ಕಪರಿಶೋಧಕ, ಹೂಡಿಕೆ ಸಲಹೆಗಾರ, ಬ್ಯಾಂಕರ್, ನಿಕಟರಾದವರು... ಹೇಳುವ ಎಲ್ಲವನ್ನೂ ಕೇಳದಿರಿ. ಅತ್ಯಂತ ಮುಖ್ಯವಾಗಿ, ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೂ ಹಣ ಗಳಿಸುತ್ತಾ ಹೋಗಿ!

ಡಾ. ದೀಪಕ್ ಕೃಷ್ಣಮೂರ್ತಿ, ಹೃದ್ರೋಗ ತಜ್ಞ

ಕಿಡಿನುಡಿ

ಕೆಲ ಖಾಸಗಿ ಆಸ್ಪತ್ರೆಗಳಿಗೆ ಹೋಗಲು ಭಯ ಪಡುವಂತೆ ಆಗಿದೆ. ಹಲವಾರು ಅನಗತ್ಯ ತಪಾಸಣೆಗಳನ್ನು ಮಾಡಿಸಲಾಗುತ್ತದೆ. ₹10 ಲಕ್ಷದಿಂದ ₹20 ಲಕ್ಷಕ್ಕೂ ಹೆಚ್ಚು ಬಿಲ್ ಮಾಡಲಾಗುತ್ತದೆ. ವೈದ್ಯಕೀಯ ಸೇವೆ ವ್ಯಾಪಾರ ಆಗಿದೆ.



ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

25 ವರ್ಷಗಳ ಹಿಂದೆ

ಶನಿವಾರ, 19-2-2000

• ಲೋಕಾಯುಕ್ತ ದಾಳಿ ಕಾನೂನು ಕ್ರಮ ವಿಳಂಬ

ಬೆಂಗಳೂರು, ಫೆ. 18– ಸರ್ಕಾರಿ ಇಲಾಖೆಗಳಲ್ಲಿ ವ್ಯಾಪಕವಾಗಿ ತಾಂಡವವಾಡುತ್ತಿರುವ ಭ್ರಷ್ಟಾಚಾರ ತಡೆಗೆ ಲೋಕಾಯುಕ್ತ ಆರಂಭಿಸಿರುವ 'ಪ್ರಹಾರ' ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದ್ದು, ಇತ್ತೀಚೆಗೆ ಉನ್ನತ ಅಧಿಕಾರಿಗಳ ಮನೆ ಮೇಲೆ ನಡೆದ ದಾಳಿಗಳು ಇದಕ್ಕೆ ಸಾಕ್ಷಿಯಾಗಿವೆ. ಆದರೆ ದಾಳಿಯ ನಂತರ ಏನಾಗಿದೆ?

ಇಂತಹ ದಾಳಿಗೆ ಒಳಗಾಗಿರುವ 'ಕೋಟ್ಯಧಿಪತಿ' ಅಧಿಕಾರಿಗಳ ಮೇಲೆ ಸರ್ಕಾರ ತ್ವರಿತಗತಿಯಲ್ಲಿ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಇರುವುದರಿಂದ, ಲೋಕಾಯುಕ್ತ ಪೊಲೀಸರ ದಾಳಿ ತನ್ನ ಮಹತ್ವವನ್ನೇ ಕಳೆದುಕೊಳ್ಳುತ್ತಿದೆ ಎಂಬ ಭಾವನೆ ಜನರಲ್ಲಿ ದಟ್ಟವಾಗತೊಡಗಿದೆ.

50 ವರ್ಷಗಳ ಹಿಂದೆ

ಬುಧವಾರ, 19-2-1975

• ಎಮ್ಮೆ ಕದ್ದ ಆರೋಪಿ ಭೂ ಪಂಚಾಯಿತಿ ಸದಸ್ಯ: ಹೆಗಡೆ ಆಪಾದನೆ

ಬೆಂಗಳೂರು, ಫೆ. 18– 'ಎಮ್ಮೆ ಕದ್ದ ಆರೋಪಿ, ಗೋಡೌನ್ ಕೀಪರ್ ಹುದ್ದೆಯಿಂದ ವಜಾ ಮಾಡಲ್ಪಟ್ಟ ನೌಕರ' –ಇವರುಗಳು ಅರ್ಹರೇ?

ಭೂ ಪಂಚಾಯಿತಿಗಳಿಗೆ ನೇಮಕ ಮಾಡಲ್ಪಟ್ಟವರ ಅರ್ಹತೆ ಪ್ರಶ್ನೆ ಇಂದು ವಿಧಾನ ಪರಿಷತ್ತಿನಲ್ಲಿ ಬಂದಾಗ, ವಿರೋಧ ಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಅವರು ಉತ್ತರ ಬಯಸಿದ ಪ್ರಶ್ನೆ ಇದು.

ನಿರ್ವಹಿಸಬೇಕಾದ ಜವಾಬ್ದಾರಿ ಅರಿತು ಕೆಲಸ ಮಾಡುವ ಅರ್ಹತೆಯುಳ್ಳ ಯೋಗ್ಯರನ್ನು ನೇಮಿಸಲಾಗಿದೆ ಎಂದು ಕಂದಾಯ ಸಚಿವ ಎನ್. ಹುಚ್ಚಮಾಸ್ತಿ ಗೌಡ ಅವರು ಆರ್.ಎಸ್. ಭಾಗವತ್ ಅವರಿಗೆ ನೀಡಿದ ಉತ್ತರದಿಂದ ಹೆಗಡೆ ಅವರಿಗೆ ಅತೃಪ್ತಿ.

ಉತ್ತರ ಕನ್ನಡ ಜಿಲ್ಲೆಯಲ್ಲಿ 'ಅನರ್ಹ' ವ್ಯಕ್ತಿಗಳ ನೇಮಕವಾಗಿದೆ. ತಾಲ್ಲೂಕು ಸಮಿತಿಯ ಅಧ್ಯಕ್ಷರ 'ಸಾಕ್ಷಾತ್' ಅಳಿಯ ಮತ್ತು ಭಾವಂದಿರನ್ನು ಪಂಚಾಯಿತಿಯೊಂದಕ್ಕೆ ಆರಿಸಲಾಗಿದೆ ಎಂದು ಹೇಳಿದರು.

• ಬಜೆಟ್ ಬಿಸಿಯಲ್ಲಿ ಸಿಗರೇಟು ಸೇದಿರಿ–ಸಿಕ್ಕರೆ!

ನವದೆಹಲಿ, ಫೆ. 18– ಫೆಬ್ರುವರಿ ನಿರಾತಂಕದ ತಿಂಗಳು; ಏಕೆಂದರೆ ಸಂಸಾರದ ಬಜೆಟ್ ತೂಗಿಸುವವರಿಗೆ ಇಪ್ಪತ್ತೆಂಟೇ ದಿನ. ಆದರೆ ಸಿ. ಸುಬ್ರಹ್ಮಣ್ಯಂ ದಯದಿಂದ ಅದು ಆತಂಕದ ತಿಂಗಳೂ ಹೌದು. ತಿಂಗಳು ಕಳೆದು ಬರುವ ಮಾರ್ಚ್ 1ಕ್ಕೆ ಕೇಂದ್ರದ ಬಜೆಟ್. ಅಂದಿನಿಂದ ತಿಂಗಳ ವೆಚ್ಚ ಭರಿಸುವುದು ಹೇಗೆಂದು ಯೋಚಿಸಿ ಕಂಗೆಟ್ಟು ದಿನ ಕಳೆಯುವುದರಲ್ಲಿ ಅತಿ ಪುಟ್ಟ ತಿಂಗಳು ಫೆಬ್ರುವರಿ ಅತಿದೊಡ್ಡ ಪ್ರಯಾಸದ ತಿಂಗಳಾಗಿರುತ್ತದೆ.

ಆತಂಕ ಪರಿಹಾರಕ್ಕೆ ಧೂಮಪಾನ ಮಾಡುವವರಿಗೆ ಸಿಗರೇಟೇ ಫೆಬ್ರುವರಿ ತಿಂಗಳಲ್ಲಿ ಆತಂಕಕ್ಕೆ ದಾರಿ. ಬಜೆಟ್‌ನಲ್ಲಿ ಸಿಗರೇಟ್ ಬೆಲೆ ಹೆಚ್ಚಬಹುದೆಂದು ಫೆಬ್ರುವರಿಯಲ್ಲಿ 'ಒಂದೆರಡು ಕಾಸು ಮಾಡಿಕೊಳ್ಳುವವರು' ಸಿಗರೇಟನ್ನು ಮಾಯ ಮಾಡಿರುತ್ತಾರೆ.

ಸಾಮಾನ್ಯವಾಗಿ ಬಜೆಟ್ ನಂತರ ಬೆಲೆ ಏರಿಸಿಕೊಳ್ಳುವ ಸಿಗರೇಟ್ ಹವ್ಯಾಸ ದುಬಾರಿ ಆಗಿರುತ್ತದೆ.

ಹೈಕಮಾಂಡ್ ಉದ್ದೇಶ, ಸಂವಿಧಾನದ ಆಶಯ ಒಂದೇ ಇದ್ದಾಗ ಪ್ರಯೋಗಿಸಲು ಅಡ್ಡಿಯೇನು?

ಕಾಂಗ್ರೆಸ್ಸಿಗೆ ಐತಿಹಾಸಿಕ ಅವಕಾಶ!



ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಸಂವಿಧಾನದ ಆಶಯಗಳ ಕುರಿತು ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಸಮಯಾನುಸಾರ ಬಹಳಷ್ಟು ಮಾತನಾಡುವುದನ್ನು, ಉಲ್ಲೇಖಿಸುವುದನ್ನು ಕೇಳುತ್ತಿರುತ್ತೇವೆ. ಸಂವಿಧಾನವನ್ನು ಧರ್ಮಗ್ರಂಥಕ್ಕೆ ಹೋಲಿಸುವ ಮೂಲಕ ಪೂಜನೀಯ ಆಗಿಸುವುದನ್ನು ಗಮನಿಸಿದ್ದೇವೆ. ಆರಾಧನೆಯ ಕೋಶದಲ್ಲಿ ವಿಚಾರವಂತಿಕೆಯ ಕಣಗಳು ಜೀವಿಸುವುದಿಲ್ಲ ಎಂಬುದನ್ನು ಮರೆಯಲಾಗುತ್ತದೆ. ಸಂವಿಧಾನದ ಪುಸ್ತಕ ಹಿಡಿದು ಓಡಾಡುವುದನ್ನು, ಪ್ರದರ್ಶಿಸುವುದನ್ನು, ಭಾಷಣ ಬಿಗಿಯುವುದನ್ನು ಪ್ರಚಾರ ಪ್ರಿಯತೆಯ ಭಾಗವಾಗಿಸಿಕೊಂಡವರನ್ನೂ ಕಾಣುತ್ತೇವೆ. ಇವೆಲ್ಲ ಮೇಲ್ಪದರದ ಕ್ರಿಯೆಗಳು ಒಂದು ಸ್ತರದಲ್ಲಿ ಅಪೇಕ್ಷಣೀಯವೂ ಒಂದು ರೀತಿಯಲ್ಲಿ ಪ್ರಭಾವಶಾಲಿಯೂ ಆಗಿರುತ್ತವೆ ಎಂದೂ ಹೇಳಲಾಗುತ್ತದೆ.

ಆದರೆ ಸಂವಿಧಾನದ ಬಗೆಗಿನ ಗೌರವ, ಕಾಳಜಿ ಮತ್ತು ನಿರೀಕ್ಷೆಗಳು ಇವಿಷ್ಟೇ ಕಕ್ಷೆಗಳಲ್ಲಿ ಪ್ರದಕ್ಷಿಣೆ ಹಾಕತೊಡಗಬಾರದಲ್ಲವೇ? ಧರ್ಮಕೇಂದ್ರಿತ ಸಿದ್ಧಾಂತಗಳಿಗೆ ಜಾತ್ಯತೀತ ಸಂವಿಧಾನವನ್ನು 'ಪರ್ಯಾಯ' ಆಗಿ ಬಿಂಬಿಸುವ ಬದಲು 'ಸಮಾನಾಂತರ' ನೆಲೆಯಲ್ಲಿ ತೇಲಿಸಿದರೆ ಸಾಂವಿಧಾನಿಕ ಆಶಯಗಳ ಮೂಲಕ್ಕೇ ಗಾಸಿ ಮಾಡಿದಂತೆ ಆಗುವುದಲ್ಲವೇ?

ಇನ್ನೊಂದೆಡೆ, ಸಂವಿಧಾನವನ್ನು ಬರೀ ಒಂದು ಕಾನೂನು ಗ್ರಂಥ ಎಂಬ ಸೀಮಿತ ಅರ್ಥದಲ್ಲಿ ಪರಿಗಣಿಸುವ, ವ್ಯಾಖ್ಯಾನಿಸುವ ಪಂಡಿತರ ಬಹುದೊಡ್ಡ ಪಡೆಯನ್ನು ಕಾಣಬಹುದು. ಸಂವಿಧಾನದೊಳಗಿನ ಅಂತರ್ಗತ ಆಶಯ ಮತ್ತು ಸತ್ವವನ್ನು ಸೂಕ್ಷ್ಮವಾಗಿ ಅರ್ಥೈಸದಿರುವುದು ಅಥವಾ ಮುದ್ದಾಂ ನಿರ್ಲಕ್ಷಿಸುವುದು ಭಾಗಶಃ ತಿಳಿವಳಿಕೆಗೆ, ಜಾರಿಯಲ್ಲಿನ ಕೊರತೆಗೆ ಬಹುಮುಖ್ಯ ಕಾರಣ ಎಂದು ಅನ್ನಿಸುತ್ತದೆ. ಸಂವಿಧಾನದ ಸಂರಕ್ಷಕರೆಂದೇ ಕರೆದುಕೊಳ್ಳುವ ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ಸರ್ಕಾರವು ಪ್ರಭಾವಿ ಜಾತಿಗಳ ಒತ್ತಡಕ್ಕೆ ಮಣಿದು ಜಾತಿ ಜನಗಣತಿ ವರದಿ ಬಗ್ಗೆ ದೃಢ ನಿಲುವು ತಾಳದಿರುವುದು, ಒಳಮೀಸಲಾತಿ ಜಾರಿಯನ್ನು ವಿನಾಕಾರಣ ಮುಂದೂಡುವುದು ಸಂವಿಧಾನದ ಸಮಾನತೆಯ ಆಶಯಕ್ಕೆ ಎಷ್ಟು ಅನುಗುಣ ಎಂಬುದನ್ನು ಅವಲೋಕಿಸಬೇಕಿದೆ.

ಇತ್ತೀಚಿನ ದಿನಗಳಲ್ಲಿ ಶಾಸಕಾಂಗ ಪಕ್ಷದ ನಾಯಕನನ್ನು ಶಾಸಕರು ಬಹುಮತದ ಮೂಲಕ ಚುನಾಯಿಸುವ ಸಾಂವಿಧಾನಿಕ ಪ್ರಕ್ರಿಯೆಯನ್ನು ಯಾವ ರಾಷ್ಟ್ರೀಯ ಪಕ್ಷವೂ ಪಾಲಿಸಿದ ನಿದರ್ಶನ ಲಭಿಸುವುದಿಲ್ಲ. ಅಧಿಕಾರಕ್ಕೆ ಏರುವ ಶಾಸಕಾಂಗ ಪಕ್ಷದ ನಾಯಕ ಅರ್ಥಾತ್ ಮುಖ್ಯಮಂತ್ರಿಯನ್ನು ಆರಿಸಲು ಕರೆಯುವ ಶಾಸಕಾಂಗ ಪಕ್ಷದ ಸಭೆಯ ನಡಾವಳಿಯ ಔಪಚಾರಿಕತೆ, ನಾಟಕೀಯತೆ ಯಾರಿಗೂ ಅಸಹಜ ಎನ್ನಿಸುವುದೇ ಇಲ್ಲ. ಅಂತಿಮವಾಗಿ ಹೈಕಮಾಂಡ್ ಸೂಚಿಸಿದ ಅಭ್ಯರ್ಥಿಯನ್ನು ನಾಯಕನನ್ನಾಗಿ ಘೋಷಿಸಲಾಗುತ್ತದೆ. ಮಧ್ಯದಲ್ಲಿ ಭಿನ್ನಮತ, ಪಕ್ಷಾಂತರ, ಹೈಕಮಾಂಡ್‌ನಿಂದ ಮುಖ್ಯಮಂತ್ರಿ ಬದಲಾವಣೆ ಘಟಿಸಿದರೂ ಸಂವಿಧಾನ ಸಹಿಸಿಕೊಳ್ಳಬೇಕು!

2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಗಳಿಸಿದ ಕಾಂಗ್ರೆಸ್, ತನ್ನ ಶಾಸಕಾಂಗ ಪಕ್ಷದ ನಾಯಕನನ್ನು ದೆಹಲಿಯ ಹೈಕಮಾಂಡ್ ಸಮ್ಮುಖದಲ್ಲಿ ಆಯ್ಕೆ ಮಾಡಿದ ಸನ್ನಿವೇಶ ಹೊಸತೊಂದು ಪ್ರಸಂಗದ ಜನನಕ್ಕೆ ಕಾರಣವಾಯಿತು. ಅಧಿಕಾರಾವಧಿಯ ಪೂರ್ವಾರ್ಧದಲ್ಲಿ ಸಿದ್ದರಾಮಯ್ಯ, ಉತ್ತರಾರ್ಧದಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂಬ ಹೊಂದಾಣಿಕೆ, ಒಪ್ಪಂದ ಮತ್ತು ಹೈಕಮಾಂಡ್ ಸೂಚನೆ ಕುರಿತು ರಾಜ್ಯದ ತುಂಬ ಚರ್ಚೆ ನಡೆಯಿತು. ಒಪ್ಪಂದ ಆಗಿದೆ ಎಂದು ಜನ, ಪಕ್ಷದ ಕಾರ್ಯಕರ್ತರು, ಕೆಲವು ಮುಖಂಡರು ನಂಬಿದ್ದಾರೆ ಕೂಡ. ಆದರೆ ರಹಸ್ಯದ ಭಾಗಿದಾರರು ಮಾತ್ರ ಸುತ್ತಿಬಳಸಿ ಹೇಳಿಕೆಗಳನ್ನು ನೀಡುತ್ತಿದ್ದಾರೆಯೇ ವಿನಾ ಈ ಬಗೆಗಿನ ಸತ್ಯಾಸತ್ಯ ಹೊರಹಾಕಲು ಬಿಲ್‌ಕುಲ್ ತಯಾರಿಲ್ಲ.

ಶಿವಕುಮಾರ್ ಅವರು ದೆಹಲಿಯ ಇಂಗ್ಲಿಷ್ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ, ಬಾಯಿ ತಪ್ಪಿಯೋ ಮನ ಒಪ್ಪಿಯೋ ಅಧಿಕಾರ ಹಂಚಿಕೆ ಒಪ್ಪಂದ ಖಚಿತಪಡಿಸಿ, ನಂತರ ತಮ್ಮದೇ ಮಾತನ್ನು ಕರ್ನಾಟಕದಲ್ಲಿ ತೇಲಿಸಿಬಿಟ್ಟರು.

ಬಹಳ ಮುಖ್ಯವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಡುವೆ ಆಗಿರುವ ಅಥವಾ ಆಗದಿರುವ ಅಧಿಕಾರ ಹಂಚಿಕೆಯ ಒಡಂಬಡಿಕೆ ಖಾಸಗಿ ಸ್ವರೂಪದ್ದಲ್ಲ. ಇದಕ್ಕೆ ಸಾಂವಿಧಾನಿಕ ಮಾನ್ಯತೆಯಂತೂ ಇಲ್ಲವೇ ಇಲ್ಲ.

ಕರ್ನಾಟಕದಂತಹ ಒಂದು ದೊಡ್ಡ ರಾಜ್ಯದ ಸರ್ಕಾರ ಮತ್ತು ಅದು ಪ್ರತಿನಿಧಿಸುವ ಏಳು ಕೋಟಿ ಪ್ರಜೆಗಳ ಹಿತಾಸಕ್ತಿ ಇದರಲ್ಲಿ ಅಡಗಿದೆ ಎಂಬುದನ್ನು ಮರೆಯಬಾರದು. ಇಂತಹ ಮಹತ್ವದ ವಿಷಯವನ್ನು ಪಕ್ಷ ಅಥವಾ ಪಕ್ಷದ ವರಿಷ್ಠರಿಗೆ ಸಂಬಂಧಿಸಿದ ಆಂತರಿಕ ನಿರ್ಧಾರ ಎಂಬಂತೆ ರಹಸ್ಯವಾಗಿ ಇರಿಸಿದಾಗ ರಾಜ್ಯದ ಆಡಳಿತ ವ್ಯವಸ್ಥೆ ಮತ್ತು ರಾಜಕಾರಣದ ಸಮೀಕರಣದಲ್ಲಿ ಉಂಟಾಗುವ ಗೊಂದಲಕ್ಕೆ ಯಾರು ಹೊಣೆ?

ಈಗಾಗಲೇ ಇಂತಹ ಗೊಂದಲ ದಿನಕ್ಕೊಂದು ಸ್ವರೂಪ ಪಡೆಯುತ್ತಾ ವಿವಿಧ ಬಣಗಳ ಹೇಳಿಕೆ, ಪ್ರತಿಹೇಳಿಕೆ, 'ರಾಜಕೀಯ ಚರ್ಚಿಸದ' ಡಿನ್ನರ್-ಲಂಚ್ ಸಭೆಗಳು, ದೆಹಲಿ ಭೇಟಿಗಳು ಸದ್ಯೋಭವಿಷ್ಯದ ಬಗ್ಗೆ ಏನೋ ಮುನ್ಸೂಚನೆ ನೀಡುತ್ತಿವೆ. ಬಿಜೆಪಿ ನಾಯಕರಂತೆ ರಾಜ್ಯ ಕಾಂಗ್ರೆಸ್ಸಿನ ಇಬ್ಬರು ದಿಗ್ಗಜರ ನಡುವೆ ನೇರಾನೇರ ಹಗ್ಗಜಗ್ಗಾಟ ನಡೆಯುತ್ತಿಲ್ಲ. ಆದರೆ ಸಿದ್ದರಾಮಯ್ಯ ನೇತೃತ್ವದಲ್ಲೇ ಸರ್ಕಾರ ಪೂರ್ಣಾವಧಿ ಮುಗಿಸುವ ಬಗ್ಗೆ ಕೆಲವು ಸಚಿವರು ಇತ್ತೀಚೆಗೆ ಗಟ್ಟಿದನಿಯಲ್ಲಿಯೇ ಹೇಳತೊಡಗಿದ್ದಾರೆ. ಮುಂದಿನ ಅವಧಿಗೂ 'ಅವರು' ಅನಿವಾರ್ಯ ಎನ್ನುವಷ್ಟರ ಮಟ್ಟಿಗೆ ಈ ದನಿಯಲ್ಲಿ ದೃಢತೆ ಇದೆ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಹಾಲಿ ಮುಖ್ಯಮಂತ್ರಿಯ ಚಾಣಾಕ್ಷ ನಡೆ ಗುರುತಿಸಲು ಹೆಚ್ಚಿನ ಜಾಣತನವೇನೂ ಬೇಕಿಲ್ಲ.



ಇನ್ನೊಂದು ಬದಿಯಲ್ಲಿ, ತಾವು ಶಾಸಕರ ಬೆಂಬಲ ನಂಬಿಲ್ಲ ಎಂದು ಬಹಿರಂಗವಾಗಿ ಘೋಷಿಸಿರುವ ಡಿ.ಕೆ. ಶಿವಕುಮಾರ್ ಅವರು, ಹೈಕಮಾಂಡ್ ಭರವಸೆಯನ್ನು ಸಂಪೂರ್ಣ ಅವಲಂಬಿಸಿದಂತೆ ತೋರುತ್ತದೆ. ಸ್ವಜಾತಿ ಮಠಮಾನ್ಯಗಳ ಬೆಂಬಲದ ಕ್ರೋಡೀಕರಣವಂತೂ ಇತ್ತೀಚೆಗೆ ಎಲ್ಲಾ ರಾಜಕಾರಣಿಗಳ ಕಾರ್ಯತಂತ್ರದ ಭಾಗವೇ ಆಗಿರುವುದರಿಂದ ಯಾರನ್ನಾಗಲಿ ಹೊರತುಪಡಿಸುವ ಸಾಧ್ಯತೆಯಿಲ್ಲ. ಸಿದ್ದರಾಮಯ್ಯ ಪರ ಆಟವಾಡುತ್ತಿರುವ ತಂಡ ಅದೆಷ್ಟೇ ಘರ್ಷಣಾತ್ಮಕವಾಗಿ ಮುನ್ನುಗ್ಗಿದರೂ ಸವಾಲೆಸೆದರೂ ಶಿವಕುಮಾರ್ ತಮ್ಮ ಸ್ವಭಾವಕ್ಕೆ ವ್ಯತಿರಿಕ್ತವಾಗಿ ಸಂಯಮ ಪ್ರದರ್ಶಿಸುತ್ತಿರುವುದರಲ್ಲಿ ಆಟ ಕೆಡಿಸಿಕೊಳ್ಳಬಾರದೆಂಬ ವಿವೇಕಯುತ ಕಾರ್ಯತಂತ್ರವಿದೆ.

ಇಂತಹ ರಾಜಕೀಯ ಸಂದರ್ಭದ ನಿರ್ಣಾಯಕ ಘಟ್ಟದಲ್ಲಿ ಸ್ಪರ್ಧಾಳುಗಳ ನಿಲುವು ಏನಾಗಿರಬಹುದು ಎಂಬ ಕುತೂಹಲಕಾರಿ ಪ್ರಶ್ನೆಯನ್ನು ವಿಶ್ಲೇಷಣೆಯ ಮೂಸೆಗೆ ಒಡ್ಡಿದರೆ ಹೊಸತೊಂದು ಸಾಧ್ಯತೆ ಮಿಂಚುತ್ತದೆ. ಅಧಿಕಾರ ಹಸ್ತಾಂತರ ಅನಿವಾರ್ಯ ಅಂತಾದರೆ ಸಿದ್ದರಾಮಯ್ಯ ಯಾವ ನಿಲುವು ತಾಳುತ್ತಾರೆ? ಅಧಿಕಾರ ತಮಗೆ ದಕ್ಕದೆಂದು ಖಚಿತವಾದರೆ ಶಿವಕುಮಾರ್ ಯಾವ ಹೆಜ್ಜೆ ಇರಿಸಬಹುದು? ಸಾಮಾನ್ಯವಾಗಿ ಇಂತಹ ಸನ್ನಿವೇಶದಲ್ಲಿ ಎರಡೂ ಬಣಗಳ ಒಮ್ಮತದ ಅಭ್ಯರ್ಥಿ ಅಥವಾ ವರಿಷ್ಠರ ಆಯ್ಕೆಯ ಹೊಸ ಮುಖ ಹೊರಹೊಮ್ಮುವ ಸಂಭವ ಹೆಚ್ಚು.

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಪರಿಶಿಷ್ಟ ಸಮುದಾಯದ ರಾಜಕಾರಣಿಯೊಬ್ಬರು ಮುಖ್ಯಮಂತ್ರಿ ಪದವಿಗೇರಿದ ನಿದರ್ಶನವೇ ಇಲ್ಲದಿರುವುದು ಪ್ರಾತಿನಿಧ್ಯದ ದೃಷ್ಟಿಯಲ್ಲಿ ಸಣ್ಣ ಲೋಪವೇನಲ್ಲ. ಬಹುಶಃ ಇದನ್ನು ಸರಿಪಡಿಸುವ ಸಂದರ್ಭ ಇದೀಗ ಸೃಷ್ಟಿಯಾಗಿದೆ. ಇದು ಕಾಂಗ್ರೆಸ್ ಪಕ್ಷದ ಪಾಲಿಗೆ ದಲಿತ ಸಮುದಾಯದ ನಾಯಕರೊಬ್ಬರನ್ನು ಮುಖ್ಯಮಂತ್ರಿ ಮಾಡುವ ಐತಿಹಾಸಿಕ ಅವಕಾಶ ಕೂಡ ಹೌದು. ಈವರೆಗೆ 14 ಬಾರಿ ಲಿಂಗಾಯತ ಮತ್ತು 8 ಬಾರಿ ಒಕ್ಕಲಿಗ ಸಮುದಾಯದವರು ಮುಖ್ಯಮಂತ್ರಿ ಗದ್ದುಗೆ ಏರಿದ್ದಾರೆ, ಹಿಂದುಳಿದ ವರ್ಗ ಮತ್ತು ಬ್ರಾಹ್ಮಣರಿಗೂ ಅವಕಾಶ ಸಿಕ್ಕಿದೆ. ಸಂವಿಧಾನದ ಆಶಯವಾದ ಪ್ರಾತಿನಿಧ್ಯದಿಂದ ಸತತವಾಗಿ ವಂಚಿತರಾದವರೆಂದರೆ ದಲಿತರು, ಮುಸಲ್ಮಾನರು ಮತ್ತು ಮಹಿಳೆಯರು ಎಂಬುದು ಗಮನಾರ್ಹ ಅನ್ಯಾಯ.

ಕಾಂಗ್ರೆಸ್ ನೇತಾರ ರಾಹುಲ್ ಗಾಂಧಿ, 'ದೇಶದ ಅಧಿಕಾರ ವ್ಯವಸ್ಥೆ ಮತ್ತು ಸಂಸ್ಥೆಗಳಲ್ಲಿ ದಲಿತರು ಹಾಗೂ ದಮನಿತರು ನಾಯಕತ್ವದ ಸ್ಥಾನ ವಹಿಸಿಕೊಳ್ಳುವ ದಿನಕ್ಕಾಗಿ ಕಾಯುತ್ತಿರುವೆ' ಎಂದು ಬಿಹಾರದಲ್ಲಿ ಭಾಷಣ ಮಾಡಿದ್ದಾರೆ. ಮುಂದುವರಿದು, 'ಸಮಾಜದಲ್ಲಿ ದಲಿತರು, ಅಲ್ಪಸಂಖ್ಯಾತರು ಮತ್ತು ದುರ್ಬಲ ವರ್ಗದವರ ನಿಖರ ಸಂಖ್ಯೆ ತಿಳಿಯಲು ದೇಶದಾದ್ಯಂತ ಜಾತಿ ಜನಗಣತಿ ನಡೆಸುವ ಅಗತ್ಯವಿದೆ' ಎಂದು ಒತ್ತಿಹೇಳಿದ್ದಾರೆ. ಹೈಕಮಾಂಡ್ ಉದ್ದೇಶವೂ ಸಂವಿಧಾನದ ಆಶಯವೂ ಒಂದೇ ಆಗಿರುವಾಗ ಕರ್ನಾಟಕದಲ್ಲಿ ಪ್ರಯೋಗಿಸಲು ಅಡಚಣೆಯೇನು?

ಚುರುಮುರಿ



ಹಾರಿಬಲ್ ಹಾರಾಟ

• ಮಣ್ಣೆ ರಾಜು

'ವಿಪರೀತ ಬಿಸಿಲು...' ಬೆವರು ಒರೆಸಿಕೊಂಡು ಬಂದ ಗೆಳೆಯ ಗೋಪಾಲಿ.

'ಬೇಸಿಗೇಲಿ ತಾರೆಯರು ಪ್ರವಾಸ, ಶೂಟಿಂಗ್ ಅಂತ ತಣ್ಣಗಿರುವ ದೇಶಗಳಿಗೆ ಹೋಗಿ ಸೌಂದರ್ಯ ಕಾಪಾಡಿಕೊಳ್ತಾರೇನೊ' ಅಂದ ಶಂಕ್ರಿ.

'ಅಮೆರಿಕಕ್ಕೆ ಹೋಗಲು ನಮ್ಮವರು ಹಾತೊರೆಯುತ್ತಾರಲ್ಲ, ಅಲ್ಲಿನ ಟೆಂಪರೇಚರ್ ಎಷ್ಟಿದೆ?' ಕೇಳಿದ ಗೋಪಾಲಿ.

'ಅಮೆರಿಕದ 'ಟ್ರಂಪ್‌ರೇಚರ್' ನಮ್ಮವರಿಗೆ ಅನುಕೂಲಕರವಾಗಿಲ್ಲ. ಹೋದವರು ಕೋಳ ತೊಡಿಸಿಕೊಂಡು, ಬಂದ ದಾರಿಗೆ ಸುಂಕವಿಲ್ಲದೆ ವಾಪಸಾಗುತ್ತಿದ್ದಾರೆ'.

'ಮೋದಿಯವರನ್ನು ಟ್ರಂಪ್ ಗೌರವದಿಂದಲೇ ಕಂಡು ಆತಿಥ್ಯ ನೀಡಿದರಂತೆ ಕಣ್ರೀ. ಆ ಖುಷಿಯಲ್ಲಿ ಭಾರತದಲ್ಲಿ ವಿಶ್ವವಿದ್ಯಾಲಯ ತೆರೆಯಿರಿ ಅಂತ ಮೋದಿ 'ಇನ್ವೆಸ್ಟ್ ಇಂಡಿಯಾ'ಗೆ ಆಹ್ವಾನಿಸಿದ್ರಂತೆ'.

'ಅನುದಾನವಿಲ್ಲವೆಂದು ನಮ್ಮಲ್ಲಿನ ಕೆಲವು ವಿಶ್ವವಿದ್ಯಾಲಯಗಳನ್ನು ಮುಚ್ಚುತ್ತಿದ್ದಾರೆ. ಪರದೇಶದವರು ವಿಶ್ವವಿದ್ಯಾಲಯಗಳನ್ನು ಉದ್ದಿಮೆಯಾಗಿ ಸ್ಥಾಪಿಸಬಹುದು. ಯಾಕೆಂದರೆ ಶಿಕ್ಷಣ ಈಗ ವ್ಯಾಪಾರೀಕರಣವಾಗಿದೆ'.

'ವಿ.ವಿಗಳನ್ನು ಮುಚ್ಚಬೇಡಿ, ಫೇಲಾಗುತ್ತಿರುವ ಪರೀಕ್ಷಾ ವ್ಯವಸ್ಥೆಯನ್ನು ಪಾಸ್ ಮಾಡಿ ಎಂದು ವಿಪಕ್ಷಗಳು ಒತ್ತಾಯಿಸ್ತಿವೆ'.

'ಮಹಾರಾಷ್ಟ್ರದ ಹುಡುಗನೊಬ್ಬ ನೆಲ ಮಾರ್ಗದ ಟ್ರಾಫಿಕ್‌ಗೆ ಹೆದರಿ ಪ್ಯಾರಾಗ್ಲೈಡ್‌ನಲ್ಲಿ ಹಾರಿಕೊಂಡು ಹೋಗಿ ಪರೀಕ್ಷೆ ಬರೆದನಂತೆ'.

'ಪ್ಯಾರಾಗ್ಲೈಡ್ ಕೊಡುಸ್ತೀವಿ ಪರೀಕ್ಷೆ ಚೆನ್ನಾಗಿ ಬರಿ ಅಂತ ಅಪ್ಪ ಅಮ್ಮ ಮಕ್ಕಳಿಗೆ ಆಮಿಷ ಒಡ್ಡಬಹುದು. ಬೈಕ್ ಕೇಳುತ್ತಿದ್ದ ಮಕ್ಕಳು ಪ್ಯಾರಾಗ್ಲೈಡ್‌ಗೆ ಹಟ ಮಾಡಬಹುದು!'

'ಎಲ್ಲರೂ ಹಾರುವ ಮಾರ್ಗ ಅನುಸರಿಸಿದರೆ ಅಲ್ಲೂ ಟ್ರಾಫಿಕ್ ಜಾಮ್, ಆ್ಯಕ್ಸಿಡೆಂಟ್ ಆಗಬಹುದು, ಹಾರಾಟ ಹಾರಿಬಲ್!'

'ಗಾಬರಿಯಾಗಬೇಡ, ಆಗ ಸರ್ಕಾರ ಹಾರಾಟ ನಿಯಮ ರೂಪಿಸುತ್ತದೆ. ಟ್ರಾಫಿಕ್ ಪೊಲೀಸರು ಹಾರಿಕೊಂಡು ಹೋಗಿ ಹಾರಾಟಗಾರರ ಹೆಲ್ಮೆಟ್, ಇನ್ಶೂರೆನ್ಸ್, ಡ್ರೈವಿಂಗ್ ಲೈಸೆನ್ಸ್ ತಪಾಸಣೆ ಮಾಡಿ, ಟ್ರಾಫಿಕ್ ನಿಯಂತ್ರಿಸಿ ಹಾರಾಟ ಸುರಕ್ಷತೆ ಕಾಪಾಡ್ತಾರೆ' ಎಂದ ಗೋಪಾಲಿ.

ಸಂಗತ

ಸಾಲ: ಇರಲಿ ಸಕಾರಾತ್ಮಕ ಧೋರಣೆ

ಸಮರ್ಪಕವಾಗಿ ಬಳಸಿಕೊಳ್ಳುವ ಸಾಲವು ಪ್ರಗತಿಗೆ ಊರುಗೋಲಾಗುತ್ತದೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಈಚೆಗೆ ನಡೆದ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಸ್ವಾಮೀಜಿಯೊಬ್ಬರು, ಸಾಲ ಮಾಡಿ ಹೆಂಡತಿಗೆ ಚಿನ್ನದ ದೊಡ್ಡ ಸರ ಮಾಡಿಸಿ, ಸಾಲ ತೀರಿಸಲು ಹೊಲ ಕಳೆದುಕೊಂಡಂತಹ ಜಾನಪದ ಕಥೆಯೊಂದನ್ನು ಉದಾಹರಿಸಿದರು. 'ಮೈಕ್ರೊಫೈನಾನ್ಸ್ ಕಂಪನಿಗಳ ಹಾವಳಿ ಹೆಚ್ಚಾಗಿದೆ. ಈ ಕಂಪನಿಗಳ ಕಚೇರಿಗಳಿಗೆ ಬೀಗ ಹಾಕಬೇಕು' ಎಂದು ಜೋರಾಗಿ ಹೇಳಿದರು. ಜನ ಚಪ್ಪಾಳೆ ತಟ್ಟಿ ಮೆಚ್ಚುಗೆ ಸೂಚಿಸಿದರು.

'ಸಾಲ ಮಾಡಬಾರದು, ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು, ಸಾಲ ಎಂದರೆ ಶೂಲ' ಎಂಬಂತಹ ಭಾವನೆ ಜನಸಾಮಾನ್ಯರಲ್ಲಿ ಒಂದು ಕಾಲದಲ್ಲಿ ಬಲವಾಗಿ ಬೇರೂರಿತ್ತು. ಸಾಲ ಮಾಡುವುದು ಅಪರಾಧ, ಅಪಮಾನ ಎನ್ನುವಂತೆ ಸಭೆ-ಸಮಾರಂಭಗಳಲ್ಲಿ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಧಾರ್ಮಿಕ ಮುಖಂಡರು ಹಾಗೂ ಹಿರಿಯರು ಹೇಳುತ್ತಾರೆ. ಆದರೆ ಈ ಬಗೆಯ ಯೋಚನೆಯು ಉದ್ಯಮ-ವ್ಯವಹಾರದಲ್ಲಿ ತೊಡಗಿಕೊಳ್ಳಲು ಬಯಸುವವರ ಆತ್ಮಸ್ಥೈರ್ಯ ಕುಗ್ಗಿಸುತ್ತದೆ ಎಂಬುದನ್ನು ಮರೆಯಬಾರದು.

ಸಾಲದ ಹಣವನ್ನು ದುಂದುವೆಚ್ಚ ಮಾಡಿ ತೊಂದರೆ ಅನುಭವಿಸುವವರ ಕುರಿತು '...ಸಾಲಿಗನು ಬಂದು ಎಳೆಯುವಾಗ ಕಿಬ್ಬದಿಯ ಕೀಲು ಮುರಿದಂತೆ' ಎಂದು ಸರ್ವಜ್ಞ ಕವಿ ಹೇಳಿದ ಮಾತನ್ನು ಎಲ್ಲ ವ್ಯವಹಾರಗಳಿಗೂ ಅನ್ವಯಿಸಿ ಹೇಳುವುದು ಸರಿಯಲ್ಲ. ಅದು ಅನವಶ್ಯವಾಗಿ ಖರ್ಚು ಮಾಡುವವರಿಗೆ ಹೇಳಿದ ಎಚ್ಚರಿಕೆ ಅಷ್ಟೆ.

'ಸಾಲ ಪಡೆದು ಶ್ರೀಮಂತರಾಗಿ' ಎನ್ನುವ ಮಾತು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹತ್ವದ ಘೋಷವಾಕ್ಯ ಆಗಿದೆ. ಸಮರ್ಪಕವಾಗಿ ಬಳಸಿಕೊಳ್ಳುವ ಸಾಲವು ಪ್ರಗತಿಗೆ ಊರುಗೋಲಾಗುತ್ತದೆ. ಸಾಲ ಪಡೆದು ಆರ್ಥಿಕ ಉನ್ನತಿ ಸಾಧಿಸುವುದನ್ನು ಹಣಕಾಸು ವ್ಯವಹಾರದ ಪರಿಭಾಷೆಯಲ್ಲಿ 'ಲೀವರೇಜಿಂಗ್' ಎಂದು ಹೇಳುತ್ತಾರೆ. ದೊಡ್ಡ ಭಾರದ ವಸ್ತುಗಳನ್ನು ಎತ್ತಲು ಭೌತಶಾಸ್ತ್ರದ ಸನ್ನೆ ವಿಧಾನವನ್ನು ಅನುಸರಿಸಲಾಗುತ್ತದೆ. ಸನ್ನೆಯ ವೈಜ್ಞಾನಿಕ ತತ್ವವನ್ನು ಪ್ರತಿಪಾದಿಸಿದ ಭೌತ ವಿಜ್ಞಾನಿ ಆರ್ಕಿಮಿಡೀಸ್ 'ವಿಶ್ವದ ಹೊರಗೆ ನಿಲ್ಲಲು ಸ್ವಲ್ಪ ಜಾಗ ಕೊಡಿ. ಉದ್ದನೆಯ ಕೋಲು ಹಿಡಿದು ಸನ್ನೆಯ ತತ್ವದ ಮೂಲಕ ವಿಶ್ವವನ್ನು ಚೆಂಡಿನಂತೆ ಆಡುತ್ತೇನೆ' ಎಂದು ಹೇಳುತ್ತಿದ್ದರಂತೆ. ಹಾಗೆಯೇ ಹಣಕಾಸಿನ ಒಂದು ಸಣ್ಣ ಸಹಾಯ ವಿಶ್ವಮಟ್ಟದ ಆರ್ಥಿಕ ಬೆಳವಣಿಗೆಗೆ ಮೆಟ್ಟಿಲಾಗುತ್ತದೆ ಎನ್ನುವುದು ಕೂಡ ವಾಸ್ತವ ಸಂಗತಿಯಾಗಿದೆ.

ಪಶು ಸಂಗೋಪನೆ, ಕಿರಾಣಿ ವ್ಯಾಪಾರ, ಹೊಲಿಗೆ, ಕಸೂತಿ ಕೆಲಸ, ತರಕಾರಿ ಮಾರಾಟದಂಥ ಸ್ವಉದ್ಯೋಗಗಳನ್ನು ಆರಂಭಿಸಲು ಮಹಿಳೆಯರಿಗೆ ಕಿರುಸಾಲ ಬಹಳ ನೆರವಾಗುತ್ತದೆ. ರಾಜ್ಯದಲ್ಲಿ 31 ನೋಂದಾಯಿತ ಮೈಕ್ರೊಫೈನಾನ್ಸ್ ಸಂಸ್ಥೆಗಳಿವೆ. ಇವುಗಳಲ್ಲಿ ಒಟ್ಟು 1.09 ಕೋಟಿ ಮಹಿಳೆಯರು ಸಾಲ ಪಡೆದಿದ್ದಾರೆ. ಇದರಿಂದ ಬಹಳಷ್ಟು ಕುಟುಂಬಗಳಿಗೆ ಅನುಕೂಲವಾಗಿದೆ.

ಬಾಗಲಕೋಟೆಯಲ್ಲಿ ಈಚೆಗೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಮೈಕ್ರೊಫೈನಾನ್ಸ್ ಕಂಪನಿಗಳ ಪ್ರತಿನಿಧಿಗಳು, ಗಿರವಿದಾರರು, ಲೇವಾದೇವಿ ವ್ಯವಹಾರ ನಡೆಸುವವರ ಸಭೆ ನಡೆಯಿತು. ಕೊಟ್ಟ ಸಾಲದಲ್ಲಿ ಶೇ 95ರಷ್ಟು ಸಾಲ ವಸೂಲಾಗುತ್ತದೆ, ಶೇ 5ರಷ್ಟು ಸಾಲ ಮರುಪಾವತಿ ಮಾತ್ರ ಸಮಸ್ಯೆ ಆಗುತ್ತದೆ ಎಂದು ಅವರೆಲ್ಲರೂ ಹೇಳಿದರು. ವ್ಯವಹಾರಗಳಲ್ಲಿ ಇಂಥ ಸಣ್ಣ ಮಟ್ಟದ ಸಮಸ್ಯೆ ಸಾಮಾನ್ಯ. ಸಾಲದಿಂದ ಜನಸಾಮಾನ್ಯರ ಆರ್ಥಿಕ ಉನ್ನತಿಗೆ ಆಗುವ ಅನುಕೂಲ ಮತ್ತು ಸಾಲ ನೀಡುವ ಸಂಸ್ಥೆಗಳು ಗಳಿಸುವ ಲಾಭದ ಪ್ರಮಾಣದಲ್ಲಿ ಇದು ನಗಣ್ಯ. ಯಾವುದೇ ವ್ಯವಹಾರ, ವ್ಯಾಪಾರದಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶ ಇರುವುದಿಲ್ಲ. ನಿಯಮದ ಅನುಸಾರ ಸಣ್ಣ ಮಟ್ಟದ ಸೋರಿಕೆಗಳನ್ನು ಸಹಿಸಿಕೊಳ್ಳಬೇಕು, ಸರಿಪಡಿಸಿಕೊಳ್ಳಬೇಕು.

'ಗ್ರಾಹಕನನ್ನು ಗೌರವದಿಂದ ಕಾಣಬೇಕು. ದೂಷಿಸಬಾರದು. ಅವನು ನಮಗೆ ಸೇವೆಯ ಅವಕಾಶ ಒದಗಿಸುತ್ತಾನೆ. ಗ್ರಾಹಕ ಸದಾ ಶ್ರೇಷ್ಠ' ಎಂದು ಗಾಂಧೀಜಿ ಹೇಳುತ್ತಿದ್ದರು. ದೊಡ್ಡ ದೊಡ್ಡ ಉದ್ಯಮಿಗಳೆಲ್ಲ ಸಾಲ ಪಡೆದೇ ಸಂಸ್ಥೆಗಳನ್ನು ಕಟ್ಟುತ್ತಾರೆ. ಸಾಲ ಸೌಲಭ್ಯ ಪಡೆಯದೆ ದೊಡ್ಡ ಸಂಸ್ಥೆಗಳನ್ನು, ಕಾರ್ಖಾನೆಗಳನ್ನು ಕಟ್ಟಲು ಸಾಧ್ಯವಾಗುವುದಿಲ್ಲ.



ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿ ಆಗಿದ್ದಾಗ ರೈತರ ಸಾಲ ಮನ್ನಾ ಮಾಡುವ ಕುರಿತು ತೀವ್ರ ಚರ್ಚೆ ನಡೆದಿತ್ತು. ಸಾಲ ಮನ್ನಾ ಸರಿಯಾದ ಕ್ರಮವಲ್ಲ, ಇದರಿಂದ ಸಾಲ ಮರುಪಾವತಿ ಮಾಡಬೇಕು ಎಂಬ ನಂಬಿಕೆ ಹೊರಟು ಹೋಗಬಹುದು, ಬಡ್ಡಿಯನ್ನು ಮಾತ್ರ ಕಡಿಮೆ ಮಾಡಬೇಕು ಎಂದು ತಜ್ಞರು ಸಲಹೆ ಮಾಡಿದ್ದರು. ಸಾಲ ಮರುಪಾವತಿ ಮಾಡುವುದು ಒಂದು ನೈತಿಕ ಹೊಣೆ ಮತ್ತು ಜವಾಬ್ದಾರಿ. ಸಾಲ ಮರುಪಾವತಿ ಮಾಡದಿದ್ದರೆ ಕೊಟ್ಟವರ ಋಣದಲ್ಲಿ ಉಳಿಯಬೇಕಾಗುತ್ತದೆ ಎಂಬ ನಂಬಿಕೆ ಜನಸಂಸ್ಕೃತಿಯ ಭಾಗವಾಗಿದೆ. ಮರುಪಾವತಿ ಮಾಡಬೇಕೆಂಬ ಮನೋಭಾವವನ್ನು ಹೆಚ್ಚಿನವರು ಹೊಂದಿರುತ್ತಾರೆ.

ಪ್ರಧಾನಿಯಾಗಿದ್ದ ಪಿ.ವಿ.ನರಸಿಂಹ ರಾವ್ ಮತ್ತು ಹಣಕಾಸು ಸಚಿವರಾಗಿದ್ದ ಮನಮೋಹನ್ ಸಿಂಗ್ ಅವರು 90ರ ದಶಕದಲ್ಲಿ ಆರಂಭಿಸಿದ ಉದಾರೀಕರಣ ನೀತಿಯು ಆರ್ಥಿಕ ಸಬಲೀಕರಣಕ್ಕೆ ಕಾರಣವಾಯಿತು. ದೇಶವು ಉದ್ದಿಮೆ ಪ್ರಧಾನ ವ್ಯವಸ್ಥೆಯ ಕಡೆಗೆ ದಾಪುಗಾಲು ಇಟ್ಟು ನಡೆಯತೊಡಗಿತು. ಜನರ ಕೈಗೆ ದುಡ್ಡು ಕೊಟ್ಟು ಉದ್ಯೋಗ, ವ್ಯವಹಾರ, ವ್ಯವಸಾಯ ಮಾಡುವುದಕ್ಕೆ ಬೆಂಬಲ ನೀಡಲಾಯಿತು. ಇದರಿಂದ ದೇಶದಲ್ಲಿ ಹಣದ ಸಂಚಲನ ಹೆಚ್ಚಿ, ಕೊಳ್ಳುವ ಸಾಮರ್ಥ್ಯವೂ ಬೆಳೆಯಿತು.

ಸಾಲ ಶೂಲ ಎಂಬ ಭಾವನೆ ಅಳಿಯಬೇಕು. ಸಾಲದ ವ್ಯವಹಾರ ಜನಸ್ನೇಹಿ ಆಗಬೇಕು. ಸಾಲ ಪಡೆಯುವವರು ಮತ್ತು ನೀಡುವವರು ಜವಾಬ್ದಾರಿಯಿಂದ ನಡೆದುಕೊಂಡರೆ ಮಾತ್ರ ಇದು ಸಾಧ್ಯ.

ವಾಚಕರ ವಾಣಿ

ಮೆಟ್ರೊ ಪ್ರಯಾಣ ದರ: ಗೊಂದಲ ಬಗೆಹರಿಯಲಿ

ಬೆಂಗಳೂರು ಮೆಟ್ರೊ ಪ್ರಯಾಣ ದರ ಏರಿಕೆ ಕುರಿತಾಗಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವಿನ ಮಾತಿನ ಚಕಮಕಿ ನಾನಾ ಬಗೆಯ ಸಂಚಲನಗಳನ್ನು ಮೂಡಿಸಿದೆ. ರಾಜ್ಯ ಕಾಂಗ್ರೆಸ್ ನಾಯಕರು ದರ ಏರಿಕೆಗೆ ಕೇಂದ್ರ ಸರ್ಕಾರವೇ ಹೊಣೆ ಎಂದು ದೂರುತ್ತಿದ್ದರೆ, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ಇತ್ತೀಚಿನ ಸ್ಪಷ್ಟನೆ ಈ ವಾದಕ್ಕೆ ಹೊಸ ಆಯಾಮವನ್ನು ತಂದಿದೆ. ಕೇಂದ್ರ ಸಚಿವರ ಪ್ರಕಾರ, ಮೆಟ್ರೊ ಪ್ರಯಾಣ ದರ ಏರಿಕೆ ಪ್ರಸ್ತಾವವನ್ನು ಮೊದಲು ರಾಜ್ಯ ಸರ್ಕಾರವೇ ಸಲ್ಲಿಸಿತ್ತು. ಆದರೆ, ಇದಕ್ಕೆ ಪ್ರತಿಯಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ನಾವು ಬರೀ ಪ್ರಸ್ತಾವ ಸಲ್ಲಿಸಿದ್ದೇವೆ. ದರ ಹೆಚ್ಚಳದ ಅಂತಿಮ ನಿರ್ಧಾರ ತೆಗೆದುಕೊಂಡಿದ್ದು ಕೇಂದ್ರ ಸರ್ಕಾರ' ಎಂಬ ವಾದವನ್ನು ಮುಂದಿಟ್ಟಿದ್ದಾರೆ. ಕೆಲವು ರಾಜ್ಯಗಳ ಮೆಟ್ರೊ ಪ್ರಯಾಣ ದರಕ್ಕೆ ಹೋಲಿಸಿದರೆ, ಬೆಂಗಳೂರಿನ ಮೆಟ್ರೊ ದರ ಹೆಚ್ಚು ಎಂಬ ಆರೋಪವಿದೆ. ಜನ ಮೆಟ್ರೊ ಪ್ರಯಾಣ ದರ ಏರಿಕೆಯನ್ನು ವಿರೋಧಿಸುತ್ತಿರುವ ಈ ಸಂದರ್ಭದಲ್ಲಿ ದರ ಏರಿಕೆ ಬೇಡವೆಂದು ರಾಜ್ಯ ಸರ್ಕಾರ ತೀರ್ಮಾನಿಸಿದ್ದಾದರೆ, ಅದು ಪ್ರಸ್ತಾವ ಸಲ್ಲಿಸಿದ್ದೇಕೆ ಎಂಬ ಪ್ರಶ್ನೆ ಸಹ ತಲೆದೋರುತ್ತದೆ.

ದರ ಏರಿಕೆ ನಿರ್ವಹಣೆ ಹೊಣೆಯ ಬಗ್ಗೆ ರಾಜ್ಯ ಸರ್ಕಾರ ಸ್ಪಷ್ಟನೆ ನೀಡದೆ, ಕೇಂದ್ರದ ಮೇಲೆ ಆರೋಪ ಮಾಡುವುದು ಜನರಲ್ಲಿ ಗೊಂದಲ ಮೂಡಿಸುತ್ತಿದೆ. ದೋಷಾರೋಪ ಮಾಡುವುದರ ಬದಲು, ಸರ್ಕಾರ ಜನಪರ ನೀತಿಯೊಂದಿಗೆ ಸ್ಪಷ್ಟನೆ ನೀಡಲಿ.

ಜಿ.ನಾಗೇಂದ್ರ ಕಾವೂರು, ಸಂಡೂರು

ನಿಷ್ಕ್ರಿಯ ಕಂಪನಿ: ಪರ್ಯಾಯ ಮಾರ್ಗ ಯೋಚಿಸಿ

ನಿಷ್ಕ್ರಿಯ ಹಾಗೂ ನಷ್ಟದಲ್ಲಿರುವ ಸರ್ಕಾರಿ ಸ್ವಾಮ್ಯದ 49 ಕಂಪನಿಗಳನ್ನು ಮುಚ್ಚಲು ಅಥವಾ ಮತ್ತೊಂದು ಕಂಪನಿಯ ಜೊತೆ ವಿಲೀನಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ವರದಿಯಾಗಿದೆ (ಪ್ರ.ವಾ., ಫೆ. 18). ಈ ಆಲೋಚನೆಯನ್ನು ಸರ್ಕಾರವು ಪುನರ್‌ಪರಿಶೀಲನೆಗೆ ಒಳಪಡಿಸಬೇಕು. ಜನಸಾಮಾನ್ಯರ ತೆರಿಗೆ ಹಣದಲ್ಲಿ ಹೂಡಿಕೆ ಮಾಡಿ ಪ್ರಾರಂಭಿಸಿದ ಕಂಪನಿಗಳನ್ನು ಈಗ ನಷ್ಟದ ನೆಪದಲ್ಲಿ ಮುಚ್ಚಲು ಹೊರಟರೆ ಜನರಿಗೆ ಅನ್ಯಾಯ ಎಸಗಿದಂತೆ ಆಗುತ್ತದೆ. ಖಾಸಗಿ ಉದ್ಯಮಗಳು ಲಾಭದಲ್ಲಿ ಮುನ್ನಡೆಯಬೇಕಾದರೆ ಸರ್ಕಾರಿ ಉದ್ಯಮಗಳು ಮಾತ್ರ ಯಾಕೆ ನಷ್ಟದಲ್ಲಿರುತ್ತವೆ ಎಂಬುದು ಜನಸಾಮಾನ್ಯರನ್ನು ಕಾಡುವ ಪ್ರಶ್ನೆ. ಸರ್ಕಾರವು ಕಂಪನಿಗಳಿಗೆ ಅಗತ್ಯವಾದ ಮೂಲ ಸೌಕರ್ಯವನ್ನು ಸಕಾಲಕ್ಕೆ ದೊರಕಿಸಿಕೊಟ್ಟರೆ ನಷ್ಟದ ಮಾತು ಯಾಕೆ ಬರುತ್ತದೆ? ಕಂಪನಿಗಳ ನಷ್ಟದ ಹಿಂದೆ ಅಧಿಕಾರಿಗಳ ಭ್ರಷ್ಟಾಚಾರ, ನಿರ್ಲಕ್ಷ್ಯ ಮತ್ತು ಸರ್ಕಾರದ ಸಹಕಾರದ ಕೊರತೆ ಇದ್ದಿರಬಹುದು. ಸರ್ಕಾರ ತನ್ನ ಲೋಪದೋಷಗಳನ್ನು ಮುಚ್ಚಿಕೊಳ್ಳಲು ಕಂಪನಿಗಳನ್ನೇ ಮುಚ್ಚಲು ಅಥವಾ ವಿಲೀನಗೊಳಿಸಲು ಮುಂದಾಗುವುದು ಎಷ್ಟು ಸರಿ?

ರಾಜ್ಯದಲ್ಲಿ ನಿರುದ್ಯೋಗದ ಸಮಸ್ಯೆಯಿಂದ ಬಹಳಷ್ಟು ಜನ ಬಳಲುತ್ತಿದ್ದಾರೆ. ಈ ಕಂಪನಿಗಳನ್ನು ಮುಚ್ಚುವುದರಿಂದ ಅಲ್ಲಿ ಈಗಾಗಲೇ ಕೆಲಸ ಮಾಡುತ್ತಿರುವ ಸಾವಿರಾರು ಜನ ಕೆಲಸ ಕಳೆದುಕೊಳ್ಳಬಹುದು. ಇದರಿಂದಾಗಿ, ನಿರುದ್ಯೋಗದ ಪ್ರಮಾಣವನ್ನು ಸರ್ಕಾರವೇ ಇನ್ನೂ ಹೆಚ್ಚಿಗೆ ಮಾಡಿದಂತೆ ಆಗುತ್ತದೆ. ಹಾಗಾಗಿ, ಸರ್ಕಾರ ಈ ಕಂಪನಿಗಳನ್ನು ಅಭಿವೃದ್ಧಿಪಡಿಸಬಹುದಾದ ಪರ್ಯಾಯ ಮಾರ್ಗಗಳ ಬಗ್ಗೆ ಯೋಚಿಸಬೇಕು.

ನಾಗೇಶ್ ಹರಳಯ್ಯ, ಕಲಬುರಗಿ

ದುರಾಸೆಯೇ ದುಃಖಕ್ಕೆ ಕಾರಣ

'ಆಸೆಯೇ ದುಃಖಕ್ಕೆ ಮೂಲ' ಎಂಬ ಗವಿಸಿದ್ಧೇಶ್ವರ ಸ್ವಾಮೀಜಿ ಅವರ ಅಂಕಣ ಬರಹ (ನುಡಿ ಬೆಳಗು, ಫೆ. 17) ಬಹಳ ಅರ್ಥಪೂರ್ಣ, ಚಿಂತನಾರ್ಹ ಮತ್ತು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದಂತಹದ್ದಾಗಿದೆ. ಆದರೆ ಆಸೆ ದುಃಖಕ್ಕೆ ಕಾರಣವಲ್ಲ, ದುರಾಸೆ ದುಃಖಕ್ಕೆ ಕಾರಣ. ಆಸೆಯಿಲ್ಲದೆ ಬದುಕುವುದು ಸಾಧ್ಯವೇ ಇಲ್ಲ. ನಾವು ನಮ್ಮ ಜೀವನದ ಅವಶ್ಯಕತೆಗಳಿಗಾಗಿ ಆಸೆ ಪಡಲೇಬೇಕು. ಬುದ್ಧ ಸಹ ಆಸೆ ದುಃಖಕ್ಕೆ ಕಾರಣ ಎಂದಿಲ್ಲ, ದುರಾಸೆ ದುಃಖಕ್ಕೆ ಕಾರಣ ಎಂದಿದ್ದಾನೆ. ಪಾಳಿ ಭಾಷೆಯಿಂದ ಸಂಸ್ಕೃತ, ಸಂಸ್ಕೃತದಿಂದ ಇಂಗ್ಲಿಷ್, ಇಂಗ್ಲಿಷ್‌ನಿಂದ ಕನ್ನಡಕ್ಕೆ ಹೀಗೆ ಅನುವಾದವಾಗುವಾಗ ಪಾಳಿ ಭಾಷೆಯ ತನ್ಹಾ ಎನ್ನುವ ಪದಕ್ಕೆ ಹಪಹಪಿ, ದುರಾಸೆ, ಅಭೀಪ್ಸೆ, ದಾಹ, ಮತ್ತಷ್ಟು ಮಗದಷ್ಟು ಎನ್ನುವ ಅರ್ಥಗಳನ್ನು ಬಳಸಲಾಗುತ್ತದೆ.

ನಾವು ಅನಗತ್ಯಗಳಿಗೆ ದುರಾಸೆ ಪಡಬಾರದು. ಪ್ರತಿಷ್ಠೆ ಪ್ರದರ್ಶನದ ದುಬಾರಿ ಭವ್ಯ ಬಂಗಲೆ, ಐಷಾರಾಮಿ ಕಾರು, ಐಷಾರಾಮಿ ಜೀವನಶೈಲಿಯಂತಹ ದುರಾಸೆಗಳಿಂದ ದೂರವಿದ್ದು, ನಮ್ಮ ಆರೋಗ್ಯ, ಶಾಂತಿ, ನೆಮ್ಮದಿಯನ್ನು ಕಾಪಾಡಿಕೊಂಡರೆ ಖಂಡಿತ ಸುಖವಾಗಿ ಬಾಳಬಹುದು. ಚಿಕ್ಕವರಿದ್ದಾಗ ಚಿಕ್ಕ ಚಿಕ್ಕ ಆಸೆಗಳು ಇದ್ದಿದ್ದರಿಂದ ಅವನ್ನು ನಮ್ಮ ತಂದೆ-ತಾಯಿ ಸುಲಭವಾಗಿ ತೀರಿಸುತ್ತಿದ್ದರು ಅಥವಾ ನಾವೇ ತೀರಿಸಿಕೊಳ್ಳುತ್ತಿದ್ದೆವು. ಈಗ ಯಾರಿಂದಲೂ ಬಗೆಹರಿಸಲಾಗದಂಥ ದುರಾಸೆಗಳನ್ನು ಇಟ್ಟುಕೊಂಡು ದುಃಖದಿಂದ ತೊಳಲಾಡುತ್ತಿರುತ್ತೇವೆ. ಇದಕ್ಕೆ ನಾವೇ ಕಾರಣ ವಿನಾ ದೇವರಾಗಲಿ, ಬಂಧುಗಳಾಗಲಿ, ದೋಷಗಳಾಗಲಿ, ಗ್ರಹಗತಿಗಳಾಗಲಿ ಅಲ್ಲ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಅವೈಜ್ಞಾನಿಕ ಪದ್ಧತಿ ನಿವಾರಣೆಗೆ ಬೇಕು ಮಾರ್ಗಸೂಚಿ

ರಾಜ್ಯದ ಮಠವೊಂದರಲ್ಲಿ ನಮ್ಮ ಅಣ್ಣನಿಗೆ ದಾಸಪ್ಪ ಬಿಡಿಸುವ ಶಾಸ್ತ್ರ ನಡೆಯಿತು. ಅದರಲ್ಲಿ ಐದು ಜನರಿಗೆ ಒಂದೇ ದಬ್ಬಳವನ್ನು ಬಳಸಿ ಕಿವಿ ಚುಚ್ಚಿದ್ದನ್ನು ಗಮನಿಸಿದೆ. ಇದರಿಂದ ಒಬ್ಬರಿಂದ ಇನ್ನೊಬ್ಬರಿಗೆ ರೋಗ ಸುಲಭವಾಗಿ ಹರಡಬಹುದಾದ ಸಾಧ್ಯತೆ ಇರುತ್ತದೆ. ದೊಡ್ಡ ಸಂಸ್ಥಾನದಲ್ಲಿ ಈ ತರಹದ ಅವೈಜ್ಞಾನಿಕ ಪದ್ಧತಿ ಅನುಸರಿಸುತ್ತಿರುವುದನ್ನು ನಿವಾರಿಸುವ ಬಗ್ಗೆ ಸಂಬಂಧಿಸಿದವರು ಗಮನಹರಿಸಬೇಕಾಗಿದೆ.

ಕೆಲವು ಧಾರ್ಮಿಕ ಸಂಸ್ಥಾನಗಳಲ್ಲಿ ಮುಡಿ ಕೊಡುವ ಸಂದರ್ಭದಲ್ಲಿ ಹಲವರಿಗೆ ರಕ್ತ ಬರುತ್ತದೆ. ಕೂದಲು ತೆಗೆಯುವುದಕ್ಕೆ ಬಳಸುವ ಪರಿಕರವನ್ನು ಸರಿಯಾಗಿ ಸ್ಟೆರಲೈಸ್ ಮಾಡದೆ ಅದರಲ್ಲೇ ಇನ್ನೊಬ್ಬರಿಗೂ ಮುಡಿ ತೆಗೆಯಲಾಗುತ್ತದೆ. ಇದರಿಂದ ಕೂಡ ಆರೋಗ್ಯದ ಸಮಸ್ಯೆ ಕಂಡುಬರುವ ಸಂಭವ ಇರುತ್ತದೆ. ಆರೋಗ್ಯ ಇಲಾಖೆ ಈ ದಿಸೆಯಲ್ಲಿ ಒಂದು ಮಾರ್ಗಸೂಚಿಯನ್ನು ಸಿದ್ಧಪಡಿಸಬೇಕಾದ ಅಗತ್ಯವಿದೆ.

ಪೂರ್ಣಚಂದ್ರ, ಮಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ವಿರಾಟ್ ಕೊಹ್ಲಿ

ಬುಧವಾರ ಆರಂಭವಾಗಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಭಾರತದ ತಾರಾಮಣಿಗಳಿಗೆ ತಮ್ಮ ನೈಜ ಸಾಮರ್ಥ್ಯಕ್ಕೆ ಮರಳುವ ಒತ್ತಡ. ನವಪ್ರತಿಭೆಗಳಿಗೆ ಹೆಜ್ಜೆಗುರುತು ಮೂಡಿಸುವ ತವಕ. ಇದರಿಂದಾಗಿ ತಂಡದೊಳಗೇ ಮೂಡಿರುವ ಪೈಪೋಟಿಯು ಭಾರತಕ್ಕೆ ಟ್ರೋಫಿ ತಂದುಕೊಡುವುದಾದರೆ ಅದಕ್ಕಿಂತ ಅದ್ಭುತ ಇನ್ನೊಂದಿಲ್ಲ

ಇಂದಿನಿಂದ ಚಾಂಪಿಯನ್ಸ್ ಟ್ರೋಫಿ

ಮೂವರು 'ಚಾಂಪಿಯನ್'ಗಳ ಕೊನೆ ಆಟ?



ರೋಹಿತ್ ಶರ್ಮಾ

• ಗಿರೀಶ ದೊಡ್ಡಮನಿ

ಚಾಂಪಿಯನ್ಸ್ ಟ್ರೋಫಿ...
ಈ ಹೆಸರು ಕೇಳಿದಾಗಲೆಲ್ಲ ಥಟ್ಟನೇ ನೆನಪಾಗುವುದೆಂದರೆ ಮಹೇಂದ್ರಸಿಂಗ್ ಧೋನಿ, ವಿರಾಟ್ ಕೊಹ್ಲಿ ಮತ್ತು ಪಾಕಿಸ್ತಾನ! 2013ರಲ್ಲಿ ಭಾರತವು ಚಾಂಪಿಯನ್ಸ್ ಟ್ರೋಫಿ ಜಯಿಸಿದಾಗ ನಾಯಕರಾಗಿದ್ದವರು ಧೋನಿ. 2017ರಲ್ಲಿ ಭಾರತ ತಂಡವು ಪಾಕಿಸ್ತಾನದ ಎದುರು ಫೈನಲ್ ಪಂದ್ಯದಲ್ಲಿ ಸೋತಾಗ ನಾಯಕರಾಗಿದ್ದವರು ವಿರಾಟ್ ಕೊಹ್ಲಿ. ಐಸಿಸಿ ಟ್ರೋಫಿ ಕ್ರಿಕೆಟ್ ಟೂರ್ನಿಗಳಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕ್ ವಿರುದ್ಧ ಸೋತ ಮೊದಲ ಪಂದ್ಯ ಅದು.

ಇದರಿಂದಾಗಿ ಆಗಿನ ನಾಯಕ ವಿರಾಟ್, ಮುಖ್ಯ ಕೋಚ್ ಅನಿಲ್ ಕುಂಬ್ಳೆ, ಅನುಭವಿ ಆಟಗಾರರಾದ ಧೋನಿ, ರೋಹಿತ್ ಶರ್ಮಾ ಅವರೆಲ್ಲರೂ ಕ್ರಿಕೆಟ್ ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದ್ದರು. ಇದು ತಂಡದ ಡ್ರೆಸಿಂಗ್ ರೂಮ್ 'ನೆಮ್ಮದಿ'ಯನ್ನೂ ಕದಡಿತ್ತು ಎಂದು ವರದಿಯಾಗಿತ್ತು.

ಬುಧವಾರ ಮತ್ತೆ ಚಾಂಪಿಯನ್ಸ್ ಟ್ರೋಫಿ ಟೂರ್ನಿ ಆರಂಭವಾಗುತ್ತಿದೆ. ಅದರೆ ಕೊಹ್ಲಿ, ರೋಹಿತ್, ರವೀಂದ್ರ ಜಡೇಜ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಮೇಲೆ ಎಲ್ಲರ ಕಣ್ಣು ನೆಟ್ಟಿವೆ.

ಮೂವರಿಗೆ ಕೊನೆ ಆಟ?: ಕೊಹ್ಲಿ, ರೋಹಿತ್ ಮತ್ತು ಆಲ್‌ರೌಂಡರ್ ಜಡೇಜ ಅವರಿಗೆ ಏಕದಿನ ಮಾದರಿ ಕ್ರಿಕೆಟ್‌ನಲ್ಲಿ ಇದು ಬಹುತೇಕ ಕೊನೆಯ ಐಸಿಸಿ ಟ್ರೋಫಿಯಾಗುವ ಎಲ್ಲ ಸಾಧ್ಯತೆಗಳೂ ಇವೆ. ಟ್ರೋಫಿಗೆ ಮುತ್ತಿಟ್ಟು ಹೊರಹೋಗುವರೇ ಎಂಬುದಷ್ಟೇ ಈಗಿರುವ ಕುತೂಹಲ. 2013ರಲ್ಲಿ ಭಾರತ ಚಾಂಪಿಯನ್ ಆದಾಗಲೂ ಈ ಮೂವರು ತಂಡದಲ್ಲಿದ್ದರು.

ಹೋದ ವರ್ಷ ಅಮೆರಿಕ–ವೆಸ್ಟ್ ಇಂಡೀಸ್ ಆಯೋಜಿಸಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ಗೆದ್ದ ನಂತರ ವಿರಾಟ್, ರೋಹಿತ್ ಹಾಗೂ ಜಡೇಜ ಚುಟುಕು ಮಾದರಿಗೆ ವಿದಾಯ ಹೇಳಿದ್ದರು. ಟೆಸ್ಟ್ ಮತ್ತು ಏಕದಿನ ಮಾದರಿಯಲ್ಲಿ ಮುಂದುವರಿದಿದ್ದರು. ಜಡೇಜ ಅವರು ತಮ್ಮ ಚುರುಕಾದ ಸ್ಪಿನ್ ಬೌಲಿಂಗ್, ಕೆಳಕ್ರಮಾಂಕದ ಬ್ಯಾಟಿಂಗ್‌ನಲ್ಲಿ ಮಿಂಚು ಮತ್ತು ಫೀಲ್ಡಿಂಗ್‌ನಲ್ಲಿ ಸಂಚಲನ ಮೂಡಿಸುತ್ತಲೇ ಇದ್ದಾರೆ. ಅವರ ಸಾಮರ್ಥ್ಯದ ಬಗ್ಗೆ ಯಾರಿಗೂ ಸಂಶಯವಿಲ್ಲ. ಆದರೆ 36 ವರ್ಷದ ಎಡಗೈ ಆಲ್‌ರೌಂಡರ್ 2027ರ ಏಕದಿನ ವಿಶ್ವಕಪ್ ಮತ್ತು 2029ರ ಚಾಂಪಿಯನ್ಸ್ ಟ್ರೋಫಿಯವರೆಗೂ ಆಡುವುದು ಅನುಮಾನ. ಆದ್ದರಿಂದ ಇದೇ ಅವರ ಕೊನೆಯ ಏಕದಿನ ಐಸಿಸಿ ಟೂರ್ನಿಯಾಗಬಹುದು. ನಾಯಕತ್ವದ ಉಸಾಬರಿಗೆ ಹೋಗದೇ ತಮ್ಮ ಪಾಡಿಗೆ ತಾವು ಆಡುತ್ತ ಸಾಗಿರುವ ಜಡೇಜ ಇನ್ನೊಂದೆರಡು ವರ್ಷ ಟೆಸ್ಟ್ ಕ್ರಿಕೆಟ್‌ನಲ್ಲಿ ಮುಂದುವರಿಯಲೂ ಬಹುದು.



ರವೀಂದ್ರ ಜಡೇಜ

ಆದರೆ ರೋಹಿತ್ ಮತ್ತು ಕೊಹ್ಲಿ ಅವರ ಪರಿಸ್ಥಿತಿ ಬೇರೆ ಇದೆ. ನ್ಯೂಜಿಲೆಂಡ್, ಆಸ್ಟ್ರೇಲಿಯಾ ತಂಡಗಳ ಎದುರಿನ ಟೆಸ್ಟ್ ಸರಣಿಗಳಲ್ಲಿ ವೈಫಲ್ಯ ಅನುಭವಿಸಿದ್ದ ಈ 'ದಿಗ್ಗಜ' ಬ್ಯಾಟರ್‌ಗಳು ತೀವ್ರ ಟೀಕೆಗೆ ಒಳಗಾಗಿದ್ದರು. ಇತ್ತೀಚೆಗೆ ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯಲ್ಲಿ ಶತಕ ಹೊಡೆಯುವ ಮೂಲಕ ರೋಹಿತ್ ತಮ್ಮಲ್ಲಿನ್ನೂ ಸಾಮರ್ಥ್ಯ ಇದೆ ಎಂಬುದನ್ನು ತೋರಿಸಿಕೊಟ್ಟರು. 'ಆಫ್‌ಸ್ಟಂಪ್' ಹೊರಗಿನ ಎಸೆತಗಳನ್ನು ಕೆಣಕಿ ಕೈಸುಟ್ಟುಕೊಳ್ಳುತ್ತಿರುವ ವಿರಾಟ್, ಇಂಗ್ಲೆಂಡ್ ಎದುರು ಒಂದು ಅರ್ಧಶತಕವನ್ನೇನೋ ಹೊಡೆದರು. ಆದರೆ ಅದರಲ್ಲಿ ವಿರಾಟ್ ಅವರ ಸಹಜ ಆಟದ ಸ್ಪರ್ಶ ಕಂಡಿದ್ದು ಕಡಿಮೆ. ದೈಹಿಕವಾಗಿ ಈಗಲೂ ಅತ್ಯಂತ ಫಿಟ್ ಆಟಗಾರನೇ ಆಗಿರುವ ವಿರಾಟ್ ತಮ್ಮ ಬ್ಯಾಟಿಂಗ್ ಲಯ ಕಂಡುಕೊಂಡರೆ, ಭಾರತಕ್ಕೆ ಟ್ರೋಫಿ ಜಯದ ಕನಸು ಕೈಗೂಡಬಹುದು.

ಅಲ್ಲದೇ ಎಂಟು ವರ್ಷಗಳ ಹಿಂದೆ ಪಾಕ್ ವಿರುದ್ಧ ಸೋತ ಸೇಡು ತೀರಿಸಿಕೊಂಡಂತೆಯೂ ಆಗಲಿದೆ. ಏಕೆಂದರೆ ಈ ಬಾರಿ ಪಾಕಿಸ್ತಾನವೇ ಆತಿಥೇಯ ದೇಶ.

ಚಾಂಪಿಯನ್ಸ್ ಟ್ರೋಫಿಯ ಮೈಲಿಗಲ್ಲುಗಳು

791	ಆಟಗಾರರೊಬ್ಬರು ಗಳಿಸಿರುವ ಗರಿಷ್ಠ ರನ್. ಈ ದಾಖಲೆ ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ ಹೆಸರಿನಲ್ಲಿದೆ (2002–2013)
474	ಆವೃತ್ತಿಯೊಂದರಲ್ಲಿ ಒಬ್ಬ ಬ್ಯಾಟರ್ ದಾಖಲಿಸಿದ ಗರಿಷ್ಠ ರನ್. 2006ರಲ್ಲಿ ಗೇಲ್ ಈ ಸಾಧನೆ ಮಾಡಿದ್ದಾರೆ
88.16	ಗರಿಷ್ಠ ರನ್ ಸರಾಸರಿ. ಭಾರತದ ವಿರಾಟ್ ಕೊಹ್ಲಿ ಈ ಸಾಧನೆ ಮಾಡಿದವರು (2009–2017)
145	ಪಂದ್ಯವೊಂದರಲ್ಲಿ ಗಳಿಸಿದ ಅತಿ ಹೆಚ್ಚು ವೈಯಕ್ತಿಕ ರನ್. ನ್ಯೂಜಿಲೆಂಡ್‌ನ ನೇಥನ್ ಆ್ಯಸ್ಟಲ್ (2004) ಮತ್ತು ಜಿಂಬಾಬ್ವೆಯ ಆ್ಯಂಡಿ ಫ್ಲವರ್ (2002) ಅವರು ಈ ದಾಖಲೆ ಮಾಡಿದ್ದಾರೆ
28	ಒಬ್ಬ ಬೌಲರ್ ಗಳಿಸಿದ ಗರಿಷ್ಠ ವಿಕೆಟ್‌ಗಳು. 2002–2013ರ ನಡುವೆ ನ್ಯೂಜಿಲೆಂಡ್‌ನ ಕೈಲ್ ಮಿಲ್ಸ್ ಈ ಸಾಧನೆ ತೋರಿದ್ದಾರೆ
14ಕ್ಕೆ 6	ಶ್ರೇಷ್ಠ ಬೌಲಿಂಗ್. ಶ್ರೀಲಂಕಾದ ಫರ್ವೀಜ್ ಮಹರೂಫ್ 2006ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಈ ದಾಖಲೆ ಮಾಡಿದ್ದಾರೆ
13	ಒಂದೇ ಆವೃತ್ತಿಯಲ್ಲಿ ಬೌಲರ್ ಪಡೆದ ಅತಿ ಹೆಚ್ಚು ವಿಕೆಟ್‌ಗಳು. ಪಾಕಿಸ್ತಾನದ ಹಸನ್ ಅಲಿ (2017) ಮತ್ತು ವೆಸ್ಟ್ ಇಂಡೀಸ್‌ನ ಜೆರೋಮ್ ಟೇಲರ್ (2006) ಈ ಸಾಧಕರು
4ಕ್ಕೆ 347	ಇನಿಂಗ್ಸ್‌ವೊಂದರಲ್ಲಿ ದಾಖಲಾದ ಗರಿಷ್ಠ ಮೊತ್ತ. 2004ರಲ್ಲಿ ನ್ಯೂಜಿಲೆಂಡ್ ತಂಡ, ಅಮೆರಿಕದ ವಿರುದ್ಧ ಈ ಮೊತ್ತ ಪೇರಿಸಿತ್ತು
65	ಇನಿಂಗ್ಸ್‌ನ ಅತಿ ಕಡಿಮೆ ಮೊತ್ತ. ಅಮೆರಿಕ ತಂಡವು ಆಸ್ಟ್ರೇಲಿಯಾ ವಿರುದ್ಧ 2004ರಲ್ಲಿ ಇಷ್ಟು ರನ್ನಿಗೆ ಆಲ್‌ಔಟ್ ಆಗಿತ್ತು

ಪಾಕಿಸ್ತಾನ ಕ್ರಿಕೆಟ್‌ಗೆ ಮರುಜನ್ಮ!

ಕೆಲವು ವರ್ಷಗಳಲ್ಲಿ ವಿವಾದ, ಹಣದ ಬಿಕ್ಕಟ್ಟು ಹಾಗೂ ಭಯೋತ್ಪಾದಕರ ಭೀತಿ ಮತ್ತಿತರ ವಿಷಯಗಳಿಂದಲೇ ಪಾಕಿಸ್ತಾನದ ಕ್ರಿಕೆಟ್ ಸುದ್ದಿಯಾಗಿದ್ದು ಹೆಚ್ಚು. ಈಗ ಚಾಂಪಿಯನ್ಸ್ ಟ್ರೋಫಿ ಆತಿಥ್ಯದ ಮೂಲಕ ತನ್ನ ಗತವೈಭವಕ್ಕೆ ಮರಳಲು ಪಾಕಿಸ್ತಾನ ಪ್ರಯತ್ನಿಸುತ್ತಿದೆ. ಈ ಟೂರ್ನಿಯನ್ನು ಪಾಕ್ ಇದೇ ಮೊದಲ ಸಲ ಆಯೋಜಿಸುತ್ತಿದೆ. ದಶಕಗಳ ಹಿಂದೆ ಭಾರತ ಮತ್ತು ಪಾಕಿಸ್ತಾನ ಏಷ್ಯಾದ ಘಟಾನುಘಟಿ ಕ್ರಿಕೆಟ್ ತಂಡಗಳಾಗಿದ್ದವು. ಭಾರತ ಮಾತ್ರ ಆಟ ಮತ್ತು ಆರ್ಥಿಕ ಶಕ್ತಿಯಲ್ಲಿ ಇವತ್ತು ಕ್ರಿಕೆಟ್ ಲೋಕದ 'ದೊಡ್ಡಣ್ಣ'ನಾಗಿ ಬೆಳೆಯಿತು. ಆದರೆ, ಒಂದು ಕಾಲದಲ್ಲಿ ಜಗತ್ತಿನ ಎಲ್ಲ ದೇಶಗಳ ತಂಡಗಳಿಗೂ ಸವಾಲೊಡ್ಡಿದ್ದ ಜಹೀರ್ ಅಬ್ಬಾಸ್, ಇಮ್ರಾನ್ ಖಾನ್, ಜಾವೇದ್ ಮಿಯಾಂದಾದ್, ವಾಸೀಂ ಅಕ್ರಂ, ಇಂಜಮಾಮ್ ಉಲ್ ಹಕ್, ಶೋಯೆಬ್ ಅಖ್ತರ್, ಶಾಹೀದ್ ಆಫ್ರಿದಿ, ಸಕ್ಲೇನ್ ಮುಷ್ತಾಕ್ ಅವರಂತಹ ಖ್ಯಾತನಾಮರು ಬೆಳಗಿದ ಪಾಕ್ ಕ್ರಿಕೆಟ್ ಈಗ ತಳಕಂಡಿದೆ. ಕಾಲಕಾಲಕ್ಕೆ ಇಲ್ಲಿಯೂ ಉತ್ತಮ ಪ್ರತಿಭೆಗಳು ಬಂದಿವೆ. ಸರ್ಫರಾಜ್ ಖಾನ್ ನಾಯಕತ್ವದ ತಂಡವು 2017ರಲ್ಲಿ ಚಾಂಪಿಯನ್ ಆಗಿದ್ದೇ ಇದಕ್ಕೆ ಉದಾಹರಣೆ. ಅಂತಹ ಆಟಗಾರರನ್ನು ಪೋಷಿಸುವ ವ್ಯವಸ್ಥೆ ಹಳಿತಪ್ಪಿದ್ದರಿಂದ ಮತ್ತು ರಾಜಕೀಯದ ಆಟವೇ ಜೋರಾಗಿದ್ದರಿಂದ ಕ್ರಿಕೆಟ್ ಬೆಳೆಯಲಿಲ್ಲ. ಅಲ್ಲದೇ ಲಾಹೋರ್‌ನಲ್ಲಿ ಶ್ರೀಲಂಕಾ ತಂಡದ ಬಸ್ ಮೇಲೆ ಭಯೋತ್ಪಾದಕರ ದಾಳಿ ಹಾಗೂ ಮುಂಬೈ ದಾಳಿಯಲ್ಲಿ ಪಾಕಿಸ್ತಾನ ಭಯೋತ್ಪಾದಕರ ಕೈವಾಡದ ಕರಿನೆರಳು ಕೂಡ ಅಲ್ಲಿಯ ಕ್ರಿಕೆಟ್ ನಲುಗಲು ಕಾರಣವಾದವು. ಇದೀಗ ಮೊಹಮ್ಮದ್ ರಿಜ್ವಾನ್ ಆತಿಥೇಯ ತಂಡದ ಸಾರಥ್ಯ ವಹಿಸಿದ್ದಾರೆ.

ರಾಜತಾಂತ್ರಿಕ ಕಾರಣಗಳಿಂದ ಭಾರತ ತಂಡವು ಪಾಕ್ ನೆಲದಲ್ಲಿ ಕ್ರಿಕೆಟ್ ಆಡಲು ಒಪ್ಪಿಲ್ಲ. ಅದರಿಂದಾಗಿ ಭಾರತದ ಪಂದ್ಯಗಳು ತಟಸ್ಥ ಸ್ಥಳ ದುಬೈನಲ್ಲಿ ನಡೆಯುತ್ತಿವೆ. ಒಂದೊಮ್ಮೆ ಭಾರತ ಫೈನಲ್ ತಲುಪಿದರೆ ಪಂದ್ಯ ದುಬೈನಲ್ಲಿ ನಡೆಯಲಿದೆ. ತಲುಪದಿದ್ದರೆ ಲಾಹೋರ್‌ನಲ್ಲಿ ಫೈನಲ್ ನಡೆಯಲಿದೆ.

ಪ್ರಮುಖ ಬೌಲರ್‌ಗಳ ಗೈರು

• ನಾಗೇಶ್ ಶೆಣೈ

ಚಾಂಪಿಯನ್ಸ್ ಟ್ರೋಫಿಯಲ್ಲಿ ಅಗ್ರ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಆಡದಿದ್ದರೆ ಭಾರತ ಟ್ರೋಫಿ ಗೆಲ್ಲುವ ಸಾಧ್ಯತೆ ಶೇ 30 ರಿಂದ 35ರಷ್ಟು ಕಡಿಮೆಯಾಗುತ್ತದೆ ಎಂದು ತಂಡದ ಮಾಜಿ ನಾಯಕ– ಕೋಚ್ ರವಿ ಶಾಸ್ತ್ರಿ ಕೆಲವು ದಿನಗಳ ಹಿಂದೆಯೇ ಹೇಳಿದ್ದರು. ಬೂಮ್ರಾ ಬೆನ್ನುನೋವು ಗುಣವಾಗಿಲ್ಲ. ಎದುರಾಳಿಗಳಿಗೆ ಸಿಂಹಸ್ವಪ್ನವಾಗಿರುವ ಬೂಮ್ರಾ ಅಲಭ್ಯತೆ ಇತರ ತಂಡಗಳು ನಿಟ್ಟುಸಿರು ಬಿಡುವಂತೆ ಮಾಡಿದೆ.

ಟೆಸ್ಟ್ ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದರೂ, ಬೂಮ್ರಾ ಎಲ್ಲ ಮಾದರಿಗೆ ಸಲ್ಲುವವರು ಎನ್ನುವುದು ನಿರ್ವಿವಾದ.

ಈ ಬಾರಿ ಬೂಮ್ರಾ ಸೇರಿದಂತೆ ಕೆಲವು ಪ್ರಮುಖ ತಾರೆಗಳು ಗಾಯಾಳುಗಳಾಗಿ ತಮ್ಮ ತಂಡಗಳಿಂದ ಹೊರಬಿದ್ದಿದ್ದಾರೆ. **ಕಾಂಗರೂ ಪಡೆಗೆ ಹೊಡೆತ:** ಆಸ್ಟ್ರೇಲಿಯಾ ತಂಡದ ವೇಗದ ದಾಳಿ ಈಗ ಅನನುಭವಿಗಳನ್ನು ನೆಚ್ಚಿಕೊಳ್ಳಬೇಕಾಗಿದೆ. ಮೂವರು ದಿಗ್ಗಜ ಬೌಲರ್‌ಗಳಾದ ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್ ಮತ್ತು ಜೋಶ್ ಹ್ಯಾಜಲ್‌ವುಡ್ ಅವರು ಆಡುತ್ತಿಲ್ಲ. ಕಮಿನ್ಸ್‌ಗೆ ಪಾದದ ನೋವು, ಹ್ಯಾಜಲ್‌ವುಡ್‌ಗೆ ಪೃಷ್ಠದ ನೋವು ಬಾಧಿಸಿದೆ. ಸ್ಟಾರ್ಕ್ ವೈಯಕ್ತಿಕ ಕಾರಣ ನೀಡಿ ಹಿಂದೆ ಸರಿದಿದ್ದಾರೆ. ಆಲ್‌ರೌಂಡರ್ ಮಿಚೆಲ್ ಮಾರ್ಷ್ ಬೆನ್ನುನೋವು ಕಡಿಮೆಯಾಗಿಲ್ಲ. ಅನುಭವಿ ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ ಏಕದಿನ ಕ್ರಿಕೆಟ್‌ಗೆ ದಿಢೀರ್ ಆಗಿ ನಿವೃತ್ತಿ ಘೋಷಿಸಿರುವುದು ಆ ತಂಡಕ್ಕೆ ಹೊಡೆತ ನೀಡಿದೆ.


ದಕ್ಷಿಣ ಆಫ್ರಿಕಾ ತಂಡದ ವೇಗಿ ಆನ್ರಿಚ್ ನಾಕಿಯಾ ತೊಡೆಸಂದು ನೋವಿನಿದ ಬಳಲುತ್ತಿರುವ ಕಾರಣ ಡಿಸೆಂಬರ್‌ನಿಂದ ಯಾವುದೇ ಟೂರ್ನಿಯಲ್ಲಿ ಆಡಿಲ್ಲ. ಅವರ ಬದಲು ಸ್ಥಾನ ಪಡೆದಿದ್ದ ಜೆರಾಲ್ಡ್ ಕೋಟ್ಸಿಯಾ ಅವರಿಗೂ ತೊಡೆಸಂದು ನೋವು ಬಾಧಿಸಿದ್ದು ಅವರೂ ಹಿಂದೆ ಸರಿದಿದ್ದಾರೆ. ಕಗಿಸೊ ರಬಾಡ, ಮಾರ್ಕೊ ಯಾನ್ಸೆನ್ ಮೇಲೆ ಈಗ ಒತ್ತಡ ಬಿದ್ದಿದೆ.

ಲಯದಲ್ಲಿದ್ದ ಪಾಕಿಸ್ತಾನ ತಂಡದ ಆರಂಭಿಕ ಬ್ಯಾಟರ್ ಸಯೀಮ್ ಅಯೂಬ್ ಅವರು ಪಾದದ ನೋವಿನಿಂದಾಗಿ ಅಲಭ್ಯರಾಗಿದ್ದಾರೆ. ಅಫ್ಗಾನಿಸ್ತಾನವು, ಬೆನ್ನುಮೂಳೆ ನೋವಿನಿಂದ ಬಳಲುತ್ತಿರುವ ಭರವಸೆಯ ಸ್ಪಿನ್ನರ್ ಅಲ್ಲಾ ಘಜನ್ಫರ್ ಅವರಿಲ್ಲದೆ ಆಡಬೇಕಾಗಿದೆ.

ನ್ಯೂಜಿಲೆಂಡ್ ತಂಡದ ಅನುಭವಿ ವೇಗದ ಬೌಲರ್ ಲಾಕಿ ಫರ್ಗ್ಯುಸನ್ ಜೊತೆಗೆ ಯುವ ವೇಗಿ ಬೆನ್ ಸಿಯರ್ಸ್ ಅವರು ಕೂಡ ತಂಡದಲ್ಲಿಲ್ಲ. ಪಾಕಿಸ್ತಾನದಲ್ಲಿ ತ್ರಿಕೋನ ಸರಣಿ ಏಕದಿನ ಪಂದ್ಯದ ವೇಳೆ ಮುಖಕ್ಕೆ ಚೆಂಡುಬಡಿದು ಗಾಯಗೊಂಡಿರುವ ರಚಿನ್ ರವೀಂದ್ರ ಅವರಿಗೆ ಗಾಯದ ಜಾಗಕ್ಕೆ ಹೊಲಿಗೆ ಹಾಕಲಾಗಿದ್ದು, ತಂಡದಲ್ಲಿದ್ದರೂ ಆಡುವುದು ಖಚಿತವಾಗಿಲ್ಲ. ಇಂಗ್ಲೆಂಡ್ ತಂಡಕ್ಕೆ ಜೇಕಬ್ ಬೆಥೆಲ್ ಅಲಭ್ಯರಾಗಿದ್ದಾರೆ. ಒಟ್ಟಾರೆ ಈ ಆಟಗಾರರ ಗೈರುಹಾಜರಿ ಟೂರ್ನಿಯ ಪ್ರಭಾವಳಿಯನ್ನು ಒಂದಿಷ್ಟು ಮಸುಕುಗೊಳಿಸಿದೆ.



ಜಸ್‌ಪ್ರೀತ್ ಬೂಮ್ರಾ



ರವಿಚಂದ್ರನ್

ರವಿಚಂದ್ರನ್ ಚಿತ್ರಕ್ಕೆ ಶ್ರೇಯಾ ಧ್ವನಿ

ಬಾಲಿವುಡ್‌ನ ಜನಪ್ರಿಯ ಗಾಯಕಿ ಶ್ರೇಯಾ ಘೋಷಾಲ್ ಕನ್ನಡದಲ್ಲಿ ಹಾಡುತ್ತಿಲ್ಲ ಎಂಬ ಆರೋಪ ಕೇಳಿಬಂದಿತ್ತು. ರವಿಚಂದ್ರನ್ ಪ್ರಮುಖ ಪಾತ್ರದಲ್ಲಿರುವ ಇನ್ನೂ ಹೆಸರಿಡದ ಚಿತ್ರದ ಹಾಡೊಂದಕ್ಕೆ ಶ್ರೇಯಾ ಧ್ವನಿಯಾಗಿದ್ದಾರೆ. 'ಒಂದೇ ಮಾತಲ್ಲಿ ಹೇಳೋದಾದರೆ' ಎಂಬ ಗೀತೆ ಇತ್ತೀಚೆಗಷ್ಟೇ ಧ್ವನಿಮುದ್ರಣಗೊಂಡಿದೆ.

ಈ ಗೀತೆಗೆ ಪಳನಿ ಡಿ.ಸೇನಾಪತಿ ಸಂಗೀತ ನಿರ್ದೇಶನವಿದ್ದು, ಕವಿರಾಜ್ ಸಾಹಿತ್ಯವಿದೆ. ಈ ಚಿತ್ರಕ್ಕೆ ಎಸ್.ಸುಪ್ರೀತ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಎಸ್.ಎಂ.ಪ್ರೊಡಕ್ಷನ್ಸ್ ಮೂಲಕ ಹೆಚ್.ಎಸ್.ನಾಗಶ್ರೀ ಬಂಡವಾಳ ಹೂಡಿದ್ದಾರೆ.


'ಚಿತ್ರೀಕರಣ ಕೊನೆಯ ಹಂತದಲ್ಲಿದೆ. ಪ್ರೀತಿ, ಪ್ರೇಮದ ಕಥೆಯ ಜೊತೆಗೆ ತಂದೆ ಮಗಳ ನಡುವಿನ ಭಾವನಾತ್ಮಕ ಸಂಬಂಧವನ್ನೂ ತೆರೆದಿಡುವಂಥ ಕಥೆಯಿದೆ. ಕಾಶ್ಮೀರ, ರಾಜಸ್ಥಾನ, ಅಂಡಮಾನ್ ದ್ವೀಪ, ಮಂಗಳೂರು, ಚಿಕ್ಕಮಗಳೂರು, ಮೈಸೂರು ಹಾಗೂ ಬೆಂಗಳೂರು ಸುತ್ತಮುತ್ತ ಈಗಾಗಲೇ 70 ದಿನಗಳು ಚಿತ್ರೀಕರಣ ನಡೆಸಲಾಗಿದೆ. 15 ದಿನಗಳು ವಿದೇಶದಲ್ಲಿ ಪ್ರಮುಖ ಭಾಗದ ಚಿತ್ರೀಕರಣ ನಡೆಸುವ ಯೋಜನೆಯಿದೆ' ಎನ್ನುತ್ತಾರೆ ನಿರ್ದೇಶಕರು.

ಕೆ.ಎಸ್. ಚಂದ್ರಶೇಖರ್ ಛಾಯಾಚಿತ್ರಗ್ರಹಣವಿದೆ. ಸೋನು ನಿಗಮ್, ಕುನಾಲ್ ಗಾಂಜಾವಾಲ, ವಿಜಯಪ್ರಕಾಶ್, ರಾಜೇಶ್ ಕೃಷ್ಣನ್ ಹಾಗೂ ಪಲಕ್ ಮಚ್ಚಲ್ ಕೂಡ ಈ ಚಿತ್ರದಲ್ಲಿ ಹಾಡಿದ್ದಾರೆ. ನಟ ಶ್ರೀನಿವಾಸಮೂರ್ತಿ, ವಿಜಯ ಸೂರ್ಯ, ಶಂಕರ್ ಅಶ್ವತ್ಥ್ ಉಳಿದ ಪಾತ್ರವರ್ಗದಲ್ಲಿದ್ದಾರೆ. ❖

ಶಿವಕಾರ್ತಿಕೇಯನ್‌ಗೆ ರುಕ್ಮಿಣಿ ಜೋಡಿ

'ಬೀರ್‌ಬಲ್' ಬೆಡಗಿಯಾಗಿ ಚಂದನವನ ಪ್ರವೇಶಿಸಿದ್ದ ನಟಿ ರುಕ್ಮಿಣಿ ವಸಂತ್ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಬಳಿಕ ಸಾಲು ಸಾಲು ಸಿನಿಮಾಗಳಲ್ಲಿ ತೊಡಗಿಸಿಕೊಂಡಿದ್ದಾರೆ.

'ಬಾನದಾರಿಯಲ್ಲಿ', 'ಬಘೀರ', 'ಭೈರತಿ ರಣಗಲ್' ಬಳಿಕ ರುಕ್ಮಿಣಿ ಇದೀಗ ಕಾಲಿವುಡ್‌ನ ಖ್ಯಾತ ನಟ ಶಿವಕಾರ್ತಿಕೇಯನ್ ಜೊತೆ ತೆರೆ ಹಂಚಿಕೊಳ್ಳಲಿದ್ದಾರೆ. ಶಿವಕಾರ್ತಿಕೇಯನ್ ಹಾಗೂ ಮುರುಗದಾಸ್ ಕಾಂಬಿನೇಷನ್‌ನಲ್ಲಿ ಬರಲಿರುವ ಹೊಸ ಸಿನಿಮಾದ ಶೀರ್ಷಿಕೆ ಘೋಷಣೆಯಾಗಿದೆ. ಚಿತ್ರಕ್ಕೆ 'ಮದರಾಸಿ' ಎಂಬ ಟೈಟಲ್ ಇಡಲಾಗಿದೆ. 'ಅಮರನ್' ಬಳಿಕ ಶಿವಕಾರ್ತಿಕೇಯನ್ ನಟಿಸುತ್ತಿರುವ ಚಿತ್ರ ಇದಾಗಿದ್ದು, ಆ್ಯಕ್ಷನ್ ಜಾನರ್‌ನ ಸಿನಿಮಾವಾಗಿದೆ. ಚಿತ್ರಕ್ಕೆ ಸುದೀಪ್ ಎಲಾಮನ್ ಛಾಯಾಚಿತ್ರಗ್ರಹಣ, ಅನಿರುದ್ಧ್ ರವಿಚಂದರ್ ಸಂಗೀತ ನಿರ್ದೇಶನವಿದೆ. ವಿದ್ಯುತ್ ಜಮ್ವಾಲ್, ಬಿಜು ಮೆನನ್, ಶಬೀರ್ ಮತ್ತು ವಿಕ್ರಾಂತ್ ತಾರಾಗಣದಲ್ಲಿದ್ದಾರೆ. ಶ್ರೀಕರ್ ಪ್ರಸಾದ್ ಸಂಕಲನ, ಅರುಣ್ ವೆಂಜಾರಮೂಡು ಕಲಾ ನಿರ್ದೇಶನ, ಕೆವಿನ್ ಮಾಸ್ಟರ್ ಮತ್ತು ದಿಲೀಪ್ ಮಾಸ್ಟರ್ ಸಾಹಸ ನಿರ್ದೇಶನ 'ಮದರಾಸಿ' ಚಿತ್ರಕ್ಕಿದೆ. ❖



ರುಕ್ಮಿಣಿ ವಸಂತ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ನೋವಿಲ್ಲದ ಮನ, ಸಾವಿಲ್ಲದ ಮನೆ ಇಲ್ಲ!

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

135

ಸಂಬಂಧಗಳು ಮುರಿಯಬಾರದು ಅಂತೀವಿ. ಆದರೆ, ಯಾವ ಸಂಬಂಧಗಳು ಕಾಯಂ ಉಳಿದಿವೆ? ಈ ಭೂಮಿಯ ಮೇಲೆ ಗುರು ಶಿಷ್ಯರ ಸಂಬಂಧಗಳು ಸತ್ಯ ಅಂತ ಹೇಳೋಣವೇ? ಶಸ್ತ್ರ ಮತ್ತು ಶಾಸ್ತ್ರಗಳಲ್ಲಿ ಪ್ರವೀಣನಾದ ದ್ರೋಣಾಚಾರ್ಯ ತನ್ನ ಶಿಷ್ಯನ ಬೆರಳನ್ನೂ ಉಳಿಸಲಿಲ್ಲ. ಸಂಬಂಧ ಎಲ್ಲಿ ಉಳೀತು? ಗಂಡ ಹೆಂಡತಿ ಸಂಬಂಧ ಉಳಿಯುತ್ತವೆ ಎನ್ನೋಣವೇ? ಜಮದಗ್ನಿ ಋಷಿ ತನ್ನ ಹೆಂಡತಿಯ ತಲೆ ಕಡಿಯಲು ಮಗನಿಗೆ ಹೇಳಿದ. ತಾಯಿ ಮಗನ ಸಂಬಂಧ ಉಳಿತಾವೇನು? ಸಣ್ಣವರಿದ್ದಾಗ ಮಗು ಅಮ್ಮನ ಬಳಿಗೆ ಅಂಬೆಗಾಲಿಡುತ್ತಾ ಬಂದರೆ ತಾಯಿ ತಾನು ಕೆಲಸ ಮಾಡುತ್ತಿದ್ದೇನೆಂದು ದೂರ ಸರಿಸುತ್ತಾಳೆ. ದೊಡ್ಡವನಾದ ಮೇಲೆ ಮಗನ ಬಯಸಿದರೆ ಆತ ಬರೋದೇ ಇಲ್ಲ. ಯಾವ ಸಂಬಂಧ ಉಳೀತಾವೆ ಇಲ್ಲಿ? ನಾವು ಎಲ್ಲ ಸಂಬಂಧಗಳನ್ನು ಕಾಯಂ ಮಾಡಿಕೊಳ್ಳಲು ಹೊರಟಿದ್ದೇವೆ. ಆದರೆ ಅದರ ನಿಜರೂಪ ಹಾಗಿಲ್ಲ.

ಇಬ್ಬರು ಅಣ್ಣ ತಮ್ಮಂದಿರು ಇದ್ದರು. ತಂದೆ ಹೊಲ ಪಾಲು ಮಾಡಿ ಕೊಟ್ಟಿದ್ದ. ಹೊಲದ ಬದಿಯಲ್ಲಿ ಮಾವಿನ ಗಿಡ ನೆಟ್ಟಿದ್ದರು. ಮರದ ಬೇರು ಕಾಂಡ ಅಣ್ಣನ ಹೊಲದಲ್ಲಿ ಇತ್ತು. ರೆಂಬೆಗಳು ಬಾಗಿ ಕಾಯಿ ಹಣ್ಣು ತಮ್ಮನ ಹೊಲಕ್ಕೆ ಬಾಗಿದ್ದವು. ಅದಕ್ಕೆ ಇಬ್ಬರ ನಡುವೆ ಜಗಳ ಆಯಿತು. ಮರದ ಬೇರು ನನ್ನ ಹೊಲದಲ್ಲಿ ಇರುವುದರಿಂದ ಹಣ್ಣು ನನ್ನದು ಎಂದ ಅಣ್ಣ. ಇಲ್ಲ, ಹಣ್ಣುಗಳು ನನ್ನ ಹೊಲದಲ್ಲಿ ಐತಿ. ಅದಕ್ಕೆ ಅವು ನನ್ನದು ಎಂದ ತಮ್ಮ. ಪ್ರಕರಣ ಕೋರ್ಟಿಗೆ ಹೋತು. ಕೋರ್ಟ್ ತಮ್ಮನ ಪರ ತೀರ್ಪು ನೀಡಿತು. ಕೋರ್ಟ್‌ನಲ್ಲಿ ಗೆದ್ದಿದ್ದೀನಿ ಅಂತ ತಮ್ಮ ಊರಿಗೆಲ್ಲ ಊಟ ಹಾಕಿಸಿದ. ಮಾರನೇ ದಿನ ಬೆಳಿಗ್ಗೆ ಬಂದು ನೋಡಿದರೆ ಎಲ್ಲ ಮಾವಿನ ಮರಗಳನ್ನೂ ಯಾರೋ ಕಡಿದು ಹಾಕಿದ್ದರು. ಕೋರ್ಟ್‌ನಲ್ಲಿ ಕೇಸು ತಮ್ಮನ ಪರ ಆತು. ಆದರೆ ಸಂಬಂಧ ಮುರಿದು ಹೋಗಿತ್ತು.

ಪಕ್ಷಿಗಳು ಗೂಡು ಕಟ್ಟುತ್ತವೆ. ಮರಿಗಳನ್ನು ಮಾಡುತ್ತವೆ. ಅಲ್ಲಿ ಇಲ್ಲಿ ತಿರುಗಾಡಿ ಆಹಾರ ತಂದು ಮರಿಗಳಿಗೆ ತಿನ್ನಿಸುತ್ತವೆ. ರೆಕ್ಕೆ ಬಲಿತ ನಂತರ ಮರಿ ಹಕ್ಕಿಗಳು ಹಾರಿ ಹೋಗುತ್ತವೆ. ಕಾಡಿನಲ್ಲಿರುವ ಹಕ್ಕಿಗಳಿಗೂ ಅಷ್ಟೆ. ನಾಡಿನಲ್ಲಿರುವ ಮನುಷ್ಯರಿಗೂ ಅಷ್ಟೆ. ಯಾವ ಸಂಬಂಧಗಳೂ ಶಾಶ್ವತ ಅಲ್ಲ. ಸಾವು ಬರಬಾರದು ಅಂತೀವಿ. ಆದರೆ ಸಾವು ಬಿಟ್ಟೈತೇನು? ನೋವಿಲ್ಲದ ಮನ, ಸಾವಿಲ್ಲದ ಮನೆ ಈ ಜಗತ್ತಿನಲ್ಲಿ ಇಲ್ಲ. ಇದರ ನಡುವೆ ಒಂದು ಹೂವು ಅರಳುತ್ತದೆ ಎಂದರೆ ಅರಳಿದ್ದು ಬಾಡಲೇಬೇಕು, ಕಟ್ಟಿದ್ದು ಬೀಳಲೇ ಬೇಕು, ಹತ್ತಿದ್ದು ಆರಲೇ ಬೇಕು, ಹುಟ್ಟಿದ್ದು ಸಾಯಲೇ ಬೇಕು. ಇದು ನಿಸರ್ಗದ ನಿಯಮ. ನಮ್ಮ ಇಚ್ಛೆಯಂತೆಯೇ ಇಲ್ಲಿ ಯಾವುದೂ ನಡೆಯೋದಿಲ್ಲ. ಹಾಗಾದರೆ ಇದು ಯಾರ ಇಚ್ಛೆಯಂತೆ ನಡೀತೈತಿ? ನನಗೆ ಹಸಿವಾಗಿದೆ ಎಂದು ಮಾವು ಹಣ್ಣಾಗೋದಿಲ್ಲ. ನನಗೆ ಬಾಯಾರಿಕೆ ಆಗಿದೆ ಎಂದು ಹೊಳೆಯಲ್ಲಿ ನೀರು ಹರಿಯೋದಿಲ್ಲ. ನಮಗೆ ಬೇಕಾಗಿ ಗಾಳಿ ಬೀಸೋದಿಲ್ಲ. ಸೂರ್ಯೋದಯವಾಗುವುದಿಲ್ಲ. ಇದೆಲ್ಲ ಯಾರ ಇಚ್ಛೆ ಎಂದರೆ ಈಶ್ವರನ ಇಚ್ಛೆ. ಇದು ಅವನ ಇಚ್ಛೆ ಎಂದು ತಿಳಿದುಕೊಳ್ಳುವುದೇ ಶರಣಾಗತಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಫೆಬ್ರುವರಿ 19, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಷಷ್ಠಿ ಗಂ. 07-33 ನಕ್ಷತ್ರ: ಸ್ವಾತಿ ಗಂ. 10-40 ಯೋಗ: ವೃದ್ಧಿ ಗಂ. 10-48 ಕರಣ: ವಣಿಜ ಗಂ. 07-33, ಕುಂಭ ಮಾಸದ 07 ನೇ ದಿನ, ಮಳೆನಕ್ಷತ್ರ: ಶತಭಿಷ 1.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-55 **ಸೂರ್ಯಾಸ್ತ :** 06-34
ಮುಸ್ಲಿಂ ದಿನಾಂಕ : 20 ಶಬನ್
ದಿನ ವಿಶೇಷ : ಶಿವಾಜಿ ಜಯಂತಿ, ಅದೃಷ್ಟ ಸಂಖ್ಯೆ : 7, 2

ಮೇಷ: ಒಂದರೊಳಗೆ ಒಂದರಂತೆ ಕೆಲಸಗಳು ಆಗಿ ಬಾಕಿ ಉಳಿದಂಥ ಕೆಲಸಗಳೆಲ್ಲವೂ ಅಂತಿಮ ಹಂತ ತಲುಪುವುದು. ಮನೆಯ ರಿಜಿಸ್ಟ್ರೇಷನ್ ಕೆಲಸ ಮುನ್ನಡೆ ಕಾಣಲಿದೆ.

ವೃಷಭ: ಕೃತಿಗಳಿಗೆ ಜನರಿಂದ ಉತ್ತಮ ವಿಶ್ಲೇಷಣೆ ಬರಲಿದೆ. ಧನ ಹರಿವು ಉತ್ತಮವಾಗಿರುವುದು. ವಸ್ತ್ರ ವಿನ್ಯಾಸ ರೀತಿಗೆ ಶ್ಲಾಘನೆ ಸಿಗಲಿದೆ. ಮುಕ್ತ ಮಾತುಕತೆ ಲಾಭ ತಂದುಕೊಡಲಿದೆ.

ಮಿಥುನ: ವಿದ್ಯಾರ್ಥಿ ಜೀವನ ನಡೆಸುತ್ತಿರುವವರು ಮನೋರಂಜನೆಗಿಂತ ಓದಿನ ಮೇಲೆ ಗಮನ ಹರಿಸಿ. ಪೂರ್ವಜರ ತೀರ್ಮಾನಗಳಿಗೆ ಒಡಹುಟ್ಟಿದವರಿಂದ ಆಕ್ಷೇಪ ವ್ಯಕ್ತವಾಗಬಹುದು.

ಕರ್ಕಾಟಕ: ದಿನದ ಗುತ್ತಿಗೆ ಆಕಸ್ಮಿಕ ರೀತಿಯಲ್ಲಿ ದೊರೆತು ಸಂತೋಷ ಆಗುತ್ತದೆ. ವಿದ್ಯುತ್ ವಲಯದ ಕಾರ್ಮಿಕರು ಹೆಚ್ಚಿನ ಜಾಗ್ರತೆ ವಹಿಸಿರಿ. ಮಕ್ಕಳ ಆರೈಕೆಯ ಬಗ್ಗೆ ಗಮನವಿರಲಿ.

ಸಿಂಹ: ಆಸೆ ಆಕಾಂಕ್ಷೆಗಳಿಗೆ ಅಥವಾ ಯೋಚನೆಗಳಿಗೆ ಅಡ್ಡಿ ಎದುರಾಗಬಹುದು. ದೇವತಾಕಾರ್ಯಗಳಿಂದ ಮನಸ್ಸಿಗೆ ನೆಮ್ಮದಿ ಪ್ರಾಪ್ತಿ. ಆರ್ಥಿಕವಾಗಿ ಚೇತರಿಕೆಯನ್ನು ಕಾಣಬಹುದು.

ಕನ್ಯಾ: ದೀರ್ಘಕಾಲೀನ ಅನಾರೋಗ್ಯಕ್ಕೆ ಹಳ್ಳಿ ಅಥವಾ ನಾಟಿ ಔಷಧಿಯ ಮೊರೆ ಹೋಗುವಿರಿ. ಪ್ರಾಣಿ ಪಕ್ಷಿಗಳ ಸಾಕಣೆ ಮತ್ತು ಸಾಗಣೆ ಮಾಡುವವರಿಗೆ ಲಾಭ ಅಧಿಕ.

ತುಲಾ: ಈಚೆಗೆ ಚಿನ್ನಾಭರಣಗಳನ್ನು ಖರೀದಿ ಮಾಡಿ ತಂದಿದ್ದಲ್ಲಿ ಅದರ ತೂಕ ಅಥವಾ ಶುದ್ಧತೆ ಅನುಮಾನಿಸುವ ಘಟನೆ ನಡೆಯಲಿದೆ. ಆರೈಕೆ ಮಾಡಿದವರನ್ನು ಭೇಟಿಯಾಗುವಿರಿ.

ವೃಶ್ಚಿಕ: ಎಂದೋ ಆಡಿದ ಮಾತಿನ ಸಲುವಾಗಿ ಅದೇ ರೀತಿಯ ಚುಚ್ಚು ಮಾತುಗಳನ್ನು ಕೇಳಬೇಕಾಗುವುದು. ವೈದ್ಯರಾಗಿದ್ದಲ್ಲಿ ಕೈಗುಣದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಕೇಳುವಿರಿ.

ಧನು: ಸದ್ಯದ ಪರಿಸ್ಥಿತಿಯಲ್ಲಿ ಮನಸ್ಸನ್ನು ಚಂಚಲಗೊಳಿಸುವ ಸಕಲ ವ್ಯವಸ್ಥೆಗಳು ಸುತ್ತಮುತ್ತಲೂ ಇದ್ದರೂ ಗುರಿಯ ಮೇಲೆ ಮಾತ್ರ ಗಮನ ಹರಿಸಿ. ಹಣ ಸಂಪಾದನೆಯಲ್ಲಿ ತೃಪ್ತಿ ಮುಖ್ಯ.

ಮಕರ: ವ್ಯವಹಾರಗಳ ಕ್ಷೇತ್ರ ವಿಸ್ತರಿಸಿದಷ್ಟು ಲಾಭವಾದರೂ ಕುಟುಂಬದೊಂದಿಗೆ ಸಮಯ ಕಳೆಯುವುದು ಕಷ್ಟವಾಗುತ್ತದೆ. ಪ್ಲಾಸ್ಟಿಕ್ ಉತ್ಪನ್ನಗಳ ಮಾರಾಟಗಾರರಿಗೆ ಮಿಶ್ರ ಅನುಭವವಾಗುವುದು.

ಕುಂಭ: ತಲೆಯಲ್ಲಿ ಕೊರೆಯುತ್ತಿರುವ ವಿವಿಧ ವಿಚಾರಗಳಲ್ಲಿ ಸಂಬಂಧಪಡದ ವಿಚಾರಗಳ ಬಗ್ಗೆ ಯಾವುದೇ ಕಾರಣಕ್ಕೂ ತಲೆಕೆಡಿಸಿಕೊಳ್ಳಬೇಡಿ. ಅಲರ್ಜಿ ವಿಷಯದಲ್ಲಿ ನಿರ್ಲಕ್ಷ್ಯ ಸಲ್ಲ.


ಮೀನ: ಮನಸ್ಸಿನಲ್ಲಿ ದುಃಖ ಇದ್ದರೂ ಕೃತಕ ನಗುವಿನೊಂದಿಗೆ ದಿನ ಕಳೆಯುವಿರಿ. ಭೋಜನದ ಕ್ರಮ ಅಥವಾ ಸಮಯದಲ್ಲಿ ವ್ಯತ್ಯಾಸಗಳು ಆಗಬಹುದು. ಯಾತ್ರೆಯ ವಿಚಾರವಾಗಿ ಯೋಚಿಸುವಿರಿ.

ಪದಬಂಧ 5958

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಸ್ತಿಯಲ್ಲಿ ಭಾಗವನ್ನು ಪಡೆಯುವವನು (3)
2.ಕಲಾವಿದನ ಮನೆ ಬಾಗಿಲಿದು! (2)
5.ಜೋಗಜಲಪಾತವು ಈ ನದಿಯಿಂದ ರೂಪುಗೊಂಡಿದೆ (4)
7.ಯಾವುದೇ ಪ್ರಯೋಜನವಿಲ್ಲದ್ದು (4)
9.ಕಮರಿಯೊಳಗಿರುವ ಆನೆ (2)
10.ಹೊಂಬಳ ಗ್ರಾಮದಲ್ಲಿ ಜನಿಸಿದ ಚೆಂಬೆಳಕಿನ ಕವಿ (7)
12.ಸಂದುಗೊಂದುಗಳಲ್ಲಿ ಕಾಣುತ್ತಿರುವ ಅಂಟು! (2)
15.ಕೈಗಾರಿಕಾ ನಗರ ಎಂದು ಖ್ಯಾತಿ ಪಡೆದಿರುವ ಈ ಊರಿಗೆ ಮೊದಲು ಬೆಂಕಿಪುರ ಎಂಬ ಹೆಸರಿತ್ತು (4)
16.ವಾಯು,ಸಮುದ್ರ,ರೈಲು ಹಾಗೂ ರಸ್ತೆ ಈ ನಾಲ್ಕೂ ಸಾರಿಗೆ ವಿಧಾನಗಳನ್ನು ಹೊಂದಿರುವ ರಾಜ್ಯದ ಏಕೈಕ ನಗರ (4)
17.ಕಡಲ ಹತ್ತಿರ ಪಡೆದ ಸಾಲ! (2)
18.ಚಲಿಸದೇ ಇರುವಂಥದ್ದು (3)

ಮೇಲಿಂದ ಕೆಳಕ್ಕೆ
1.ಈತ ತತ್ವಜ್ಞಾನಿ (4)
3.ಹತ್ತು ವರ್ಷಗಳ ಅವಧಿ (3)
4.ಬೀಜ ಬಿತ್ತಲು ಮಾಡಿರುವ ಮಡಿ (2)
6.ಶ್ರೇಷ್ಠನಾದ ಕವಿ (4)
8.ನೋಡುಗ ಇಲ್ಲಿ ತಿರುಗಿದ್ದಾನಲ್ಲಾ! (3)
10.ರಾಜ ಕಾಲಾಳುಗಳಿಂದ ಆಡುವ ಒಳಾಂಗಣ ಆಟ (4)
11.ಆನೆಯ ಮರಿ (3)
13.ಮಾಡಿದ ಕೆಲಸಕ್ಕೆ ದೊರೆತ ಲಾಭ (4)
14.ಕರುವಿಗೆ ತೋರಿದ ದಯೆ (3)
16.ಹಿಮ ಇಲ್ಲಿ ಕಾಣುತ್ತಿದೆ (2)



5957ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವದನ 3.ಕುದುರೆ
5.ಪ್ರಸಾದ 7.ಮರ್ಕಟ
9.ಅನುರಾಗ 10.ಗಟವಾಣಿ
12.ಉಗುರು 14.ಕಕವ
16.ಕರಟ 17.ಶುನಕ

ಮೇಲಿಂದ ಕೆಳಕ್ಕೆ:
1.ವಸಪ್ರ 2.ನೀರೆ
3.ಕುತರ್ಕ 4.ಮಹಾರಾಣಿ
6.ಸಾಬೂನು 7.ಮಗಲು
8.ಟಗರು 9.ಅವಸಾನ
11.ವಾದಕ 13.ಗುದ್ದಾಟ
15.ವರ್ತಕ 16.ಕಣ್ಣು

ಸುಡೊಕು 6343

2				9		7		
	1		4		7		5	
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1	3		9	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6342 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,959
ಇಂದಿನ ಅಂತ್ಯ	22,945
▼	14
ದಿನದ ಕನಿಷ್ಠ	22,801

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹470
12 ಕ್ಕೆ	₹65
ಮೈಸೂರು	
100ಕ್ಕೆ	₹470

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹473-675
ದ್ವಿತಳಿ (ಬಿ.ವಿ)	₹360-865

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹187.50
ಆರ್‌ಎಸ್‌ಎಸ್-5	₹182.50
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹177.50

ಎಂಜಿ ಸೆಲೆಕ್ಟ್: ಡೀಲರ್ ಪಾಲುದಾರರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಎಸ್‌ಡಬ್ಲ್ಯು ಎಂಜಿ ಮೋಟರ್ ಇಂಡಿಯಾ ಕಂಪನಿಯು ಇತ್ತೀಚೆಗೆ ತನ್ನ ಲಕ್ಷುರಿ ಬ್ರ್ಯಾಂಡ್ ಚಾನೆಲ್ ಆದ ಎಂಜಿ ಸೆಲೆಕ್ಟ್ ಅನ್ನು ಅನಾವರಣ ಮಾಡಿದೆ.

ಬ್ರ್ಯಾಂಡ್ ಹಾಗೂ ಡೀಲರ್‌ಶಿಪ್ ಸದೃಢಕ್ಕೆ ಪೂರಕವಾಗಿ ದೇಶದ ವಿವಿಧೆಡೆ 12 ಡೀಲರ್ ಪಾಲುದಾರರನ್ನು ನೇಮಕ ಮಾಡುವುದಾಗಿ ಎಂಜಿ ಸೆಲೆಕ್ಟ್ ತಿಳಿಸಿದೆ. ಪ್ರಥಮ ಹಂತದ ವಿಸ್ತರಣೆಯನ್ನು 13 ನಗರಗಳಲ್ಲಿರುವ 14 ಎಂಜಿ ಸೆಲೆಕ್ಟ್ ಎಕ್ಸ್‌ಪೀರಿಯನ್ಸ್ ಸೆಂಟರ್‌ಗಳ ಮೂಲಕ (ಟಚ್ ಪಾಯಿಂಟ್) ಖರೀದಿದಾರರಿಗೆ ಲಕ್ಷುರಿ ಕಾರಿನ ಖರೀದಿ ಅನುಭವ ನೀಡಲು ಮುಂದಾಗಿದೆ. ಬೆಂಗಳೂರಿನಲ್ಲಿ ಎಂಜಿ ಸೆಲೆಕ್ಟ್ ಅನ್ನು ಪ್ರತಿನಿಧಿಸಲು ಐಕಾನಿಕ್ ಆಟೊಮೊಬೈಲ್ಸ್ ಅನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದೆ.

‘ಎಂಜಿ ಸೆಲೆಕ್ಟ್ ಗ್ರಾಹಕ ಕೇಂದ್ರಿತ ಕಾರ್ಯ ವಿಧಾನ ಹೊಂದಿದೆ. ಲಕ್ಷುರಿ ಖರೀದಿದಾರರಿಗೆ ಅನುಕೂಲವಾಗುವಂತೆ ವಿನ್ಯಾಸಗೊಳಿಸಲಾಗಿದೆ’ ಎಂದು ಎಂಜಿ ಸೆಲೆಕ್ಟ್‌ನ ಕಾರ್ಯ ನಿರ್ವಾಹಕ ಮುಖ್ಯಸ್ಥ ಮಿಲಿಂದ್ ಷಾ ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಮಾರುಕಟ್ಟೆ	ವಿಧ	ಧಾರಣೆ
ಬಂಟ್ವಾಳ	ಕೋಕ	20000-27500
	ಹೊಸತು	30000-37000
	ಹಳತು	45500-49000
ಸಾಗರ	ಬಿಳಿಗೋಟು	16290-17290
	ಚಾಲಿ	25599-33799
	ಕೋಕ	8129-14699
	ಕೆಂಪುಗೋಟು	8599-21800
	ರಾಶಿ	47829-50999
	ಸಿಪ್ಪೆಗೋಟು	13299-16311
ಶಿವಮೊಗ್ಗ	ಬೆಟ್ಟೆ	45500-56509
	ಗೊರಬಲು	16099-28190
	ರಾಶಿ	32609-52099
	ಸರಕು	55000-92996
ಸಿದ್ದಾಪುರ	ಬಿಳಿಗೋಟು	20689-25699
	ಚಾಲಿ	32109-37099
	ಕೋಕ	16619-25099
	ಹೊಸಚಾಲಿ	24809-34699
	ಕೆಂಪುಗೋಟು	19819-21409
	ರಾಶಿ	42119-49399
	ತಟ್ಟಿಬೆಟ್ಟೆ	29099-45099
ಶಿರಸಿ	ಬೆಟ್ಟೆ	26599-38618
	ಬಿಳಿಗೋಟು	14399-28999
	ಚಾಲಿ	32108-35499
	ಕೆಂಪುಗೋಟು	14999-27518
	ರಾಶಿ	43289-47899
ಯಲ್ಲಾಪುರ	ಅಪಿ	60675-71000
	ಬಿಳಿಗೋಟು	11899-27699
	ಚಾಲಿ	28869-38701
	ಕೋಕ	4609-16021
	ಕೆಂಪುಗೋಟು	15000-26761
	ರಾಶಿ	40129-56992
	ತಟ್ಟಿಬೆಟ್ಟೆ	29400-39610

ನಿರುದ್ಯೋಗ ಪ್ರಮಾಣ ಇಳಿಕೆ

ನವದೆಹಲಿ (ಪಿಟಿಐ): ದೇಶದ ನಗರ ಪ್ರದೇಶದ ವ್ಯಾಪ್ತಿಯಲ್ಲಿ 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ನಿರುದ್ಯೋಗ ಪ್ರಮಾಣವು ಶೇ 6.4ಕ್ಕೆ ಇಳಿಕೆಯಾಗಿದೆ ಎಂದು ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ (ಎನ್‌ಎಸ್‌ಎಸ್‌ಒ) ಮಂಗಳವಾರ ತಿಳಿಸಿದೆ.

ನಗರ ಪ್ರದೇಶದಲ್ಲಿ 15 ವರ್ಷ ಹಾಗೂ ಅದಕ್ಕಿಂತ ಮೇಲ್ಪಟ್ಟ ವಯೋಮಾನದವರ ನಿರುದ್ಯೋಗ ಪ್ರಮಾಣವು ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಶೇ 6.5ರಷ್ಟಿತ್ತು. ಇದಕ್ಕೆ ಹೋಲಿಸಿದರೆ ಅಲ್ಪ ಪ್ರಮಾಣದಲ್ಲಿ ಇಳಿದಿದೆ ಎಂದು ತಿಳಿಸಿದೆ.

ನಗರ ಪ್ರದೇಶದಲ್ಲಿ ಮಹಿಳೆಯರ ನಿರುದ್ಯೋಗ ಪ್ರಮಾಣವು ಶೇ 8.1ಕ್ಕೆ ಇಳಿದಿದೆ. ಪುರುಷರ ನಿರುದ್ಯೋಗ ಪ್ರಮಾಣವು ಯಥಾಸ್ಥಿತಿಯಲ್ಲಿದ್ದು, ಶೇ 5.8ರಷ್ಟಿದೆ ಎಂದು ತಿಳಿಸಿದೆ. ದೇಶದ ದುಡಿಯುವ ವರ್ಗದಲ್ಲಿರುವ ನಿರುದ್ಯೋಗಿಗಳ ಶೇಕಡಾವಾರು ಲೆಕ್ಕಾಚಾರ ಆಧರಿಸಿ ಈ ಸಮೀಕ್ಷೆ ನಡೆಸಲಾಗುತ್ತದೆ.

ಮೋದಿ–ಮಸ್ಕ್ ಚರ್ಚೆ: ವಿವಿಧ ಹುದ್ದೆಗೆ ಅರ್ಜಿ ಆಹ್ವಾನ

ಭಾರತಕ್ಕೆ ಟೆಸ್ಲಾ ಪ್ರವೇಶ?

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಇಲಾನ್ ಮಸ್ಕ್ ಅವರು ಇತ್ತೀಚೆಗೆ ಅಮೆರಿಕದಲ್ಲಿ ಮಾತುಕತೆ ನಡೆಸಿದ ಬೆನ್ನಲ್ಲೇ ವಿದ್ಯುತ್‌ಚಾಲಿತ ಕಾರು ತಯಾರಿಕಾ ಕಂಪನಿ ಟೆಸ್ಲಾ, ದೇಶದಲ್ಲಿ ವ್ಯವಹಾರ ಕಾರ್ಯಾಚರಣೆಯ ವಿಶ್ಲೇಷಕರು ಸೇರಿದಂತೆ ವಿವಿಧ ಹುದ್ದೆಗಳ ಭರ್ತಿಗೆ ತನ್ನ ವೆಬ್‌ಸೈಟ್‌ನಲ್ಲಿ ಅರ್ಜಿ ಆಹ್ವಾನಿಸಿದೆ.

ಹಾಗಾಗಿ, ಮಸ್ಕ್ ಒಡೆತನದ ಈ ಕಂಪನಿಯು ಶೀಘ್ರವೇ ಭಾರತದ ಇ.ವಿ ಮಾರುಕಟ್ಟೆ ಪ್ರವೇಶಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಮುಂಬೈ ಉಪನಗರದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸಲು ಅನುಕೂಲ ಆಗುವಂತೆ ಸೇವಾ ಸಲಹೆಗಾರ, ಬಿಡಿಭಾಗಗಳ ಸಲಹೆಗಾರ, ಟೆಕ್ನಿಷಿಯನ್, ಮ್ಯಾನೇಜರ್, ಸ್ಟೋರ್ ಮ್ಯಾನೇಜರ್, ಮಾರಾಟ ವಿಭಾಗದ ಮ್ಯಾನೇಜರ್, ವಾಹನ ವಿತರಣಾ ತಜ್ಞರು ಸೇರಿ ವಿವಿಧ ಹುದ್ದೆಗಳ ನೇಮಕಾತಿ ಕುರಿತು ಮಾಹಿತಿ ಪ್ರಕಟಿಸಿದೆ.

ಭಾರತದಲ್ಲಿ ಟೆಸ್ಲಾದ ಘಟಕದ ಆರಂಭಕ್ಕೆ ಸಂಬಂಧಿಸಿದಂತೆ ಈ ಹುದ್ದೆಗಳ ನೇಮಕಾತಿಗೆ ಅರ್ಜಿ ಕರೆಯಲಾಗಿದೆಯೇ ಎಂಬ ಬಗ್ಗೆ ಪಿಟಿಐ ಕಳುಹಿಸಿದ ಇ–ಮೇಲ್‌ಗೆ ಕಂಪನಿಯು ಉತ್ತರ ನೀಡಿಲ್ಲ.



ಕಳೆದ ವರ್ಷದ ಏಪ್ರಿಲ್‌ನಲ್ಲಿಯೇ ಮಸ್ಕ್ ಅವರು ಭಾರತಕ್ಕೆ ಭೇಟಿ ನೀಡಲಿದ್ದು, ಟೆಸ್ಲಾ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ ಅಧಿಕೃತವಾಗಿ ಘೋಷಣೆ ಮಾಡಲಿದ್ದಾರೆ ಎಂದು ಹೇಳಲಾಗಿತ್ತು. ಆದರೆ, ಕೊನೆಯ ಕ್ಷಣದಲ್ಲಿ ಅವರ ಭಾರತದ ಭೇಟಿ ರದ್ದಾಗಿತ್ತು.

ಕೇಂದ್ರ ಸರ್ಕಾರವು ಕಳೆದ ವರ್ಷ ಹೊಸ ಎಲೆಕ್ಟ್ರಿಕ್ ವಾಹನ ನೀತಿಯನ್ನು ಪ್ರಕಟಿಸಿದೆ. ಇದರಡಿ ಕನಿಷ್ಠ 500 ಮಿಲಿಯನ್ ಅಮೆರಿಕನ್ ಡಾಲರ್ (₹4,350 ಕೋಟಿ) ಹೂಡಿಕೆಯೊಂದಿಗೆ ದೇಶದಲ್ಲಿ ಉತ್ಪಾದನಾ ಘಟಕ ಸ್ಥಾಪಿಸುವ ಕಂಪನಿಗಳಿಗೆ ಆಮದು ಸುಂಕದಲ್ಲಿ ರಿಯಾಯಿತಿ ಘೋಷಿಸಿದೆ. ಟೆಸ್ಲಾ ಸೇರಿದಂತೆ ಜಾಗತಿಕ ಮಟ್ಟದ ಇ–ವಾಹನ ತಯಾರಿಕಾ ಕಂಪನಿಗಳನ್ನು ಆಕರ್ಷಿಸಲು ಸರ್ಕಾರ ಈ ನೀತಿ ರೂಪಿಸಿದೆ ಎಂದು ಹೇಳಲಾಗಿದೆ.

ಇ.ವಿ ನೀತಿಗೆ ಸಂಬಂಧಿಸಿದಂತೆ ನಡೆದ ವಿದ್ಯುತ್‌ಚಾಲಿತ ವಾಹನ ತಯಾರಿಕಾ ಕಂಪನಿಯ ಪ್ರತಿನಿಧಿಗಳ ಸಭೆಯಲ್ಲಿ ಟೆಸ್ಲಾದ ಸಲಹೆಗಾರ ಕೂಡ ಪಾಲ್ಗೊಂಡಿದ್ದರು. ವಿಯೆಟ್ನಾಂನ ವಿನ್‌ಫಾಸ್ಟ್ ಸೇರಿದಂತೆ ಮಾರುತಿ ಸುಜುಕಿ, ಹುಂಡೈ, ಟಾಟಾ, ಮಹೀಂದ್ರ, ಕಿಯಾ, ಸ್ಕೋಡಾ ಆಟೊ ಫೋಕ್ಸ್‌ವ್ಯಾಗನ್, ರೆನೊ, ಮರ್ಸಿಡೀಸ್ ಬೆಂಜ್, ಬಿಎಂಡಬ್ಲ್ಯು, ಔಡಿ ಕಂಪನಿಗಳು ಭಾಗವಹಿಸಿದ್ದವು.

ಸುಂಕ ಎಷ್ಟು?

ಸದ್ಯ ಸಂಪೂರ್ಣ ತಯಾರಾದ ಸ್ಥಿತಿಯಲ್ಲಿ (ಕಂಪ್ಲೀಟ್ ಬಿಲ್ಟ್ ಯೂನಿಟ್–ಸಿಬಿಯು) ಭಾರತಕ್ಕೆ ಆಮದು ಮಾಡಿಕೊಳ್ಳುವ ಕಾರುಗಳ ಮೇಲೆ ಶೇ 70ರಿಂದ ಶೇ 100ರಷ್ಟು ಕಸ್ಟಮ್ಸ್ ಸುಂಕ ವಿಧಿಸಲಾಗುತ್ತದೆ. ಎಂಜಿನ್‌ಗಳ ಗಾತ್ರ, ತಯಾರಿಕೆ, ವಿಮಾ ಮತ್ತು ಸಾಗಣೆ ಖರ್ಚು ಆಧರಿಸಿ ಈ ಸುಂಕವನ್ನು ಲೆಕ್ಕ ಹಾಕಲಾಗುತ್ತದೆ.

ಕರ್ನಾಟಕದ 45 ಕಂಪನಿಗೆ ಸ್ಥಾನ

ಬರ್ಗಂಡಿ ಹುರುನ್: ಮೌಲ್ಯಯುತ ಕಂಪನಿ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಕ್ಸಿಸ್ ಬ್ಯಾಂಕ್‌ನ ಖಾಸಗಿ ಬ್ಯಾಂಕಿಂಗ್ ವ್ಯವಹಾರ ವಿಭಾಗವಾದ ಬರ್ಗಂಡಿ ಪ್ರೈವೆಟ್ ಮತ್ತು ಹುರುನ್ ಇಂಡಿಯಾವು, ದೇಶದ 500 ಮೌಲ್ಯಯುತ ಕಂಪನಿಗಳ ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಿವೆ.

ಕಂಪನಿಗಳನ್ನು ಅವುಗಳ ಮಾರುಕಟ್ಟೆ ಬಂಡವಾಳ ಮೌಲ್ಯದ ಅನ್ವಯ ಶ್ರೇಣೀಕರಿಸಲಾಗಿದೆ. ಈ ಪಟ್ಟಿಯಲ್ಲಿ ಸರ್ಕಾರಿ ಸ್ವಾಮ್ಯದ ಕಂಪನಿಗಳು, ವಿದೇಶಿ ಮತ್ತು ಭಾರತದ ಕಂಪನಿಗಳ ಅಂಗ ಸಂಸ್ಥೆಗಳನ್ನು ಹೊರತುಪಡಿಸಿ ದೇಶದಲ್ಲಿ ಪ್ರಧಾನ ಕಚೇರಿ ಹೊಂದಿರುವ ಕಂಪನಿಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಲಾಗಿದೆ.

ಈ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ₹324 ಲಕ್ಷ ಕೋಟಿ ಆಗಿದೆ.

ಇನ್ಫೊಸಿಸ್‌ಗೆ ಅಗ್ರಸ್ಥಾನ: ಈ ಪಟ್ಟಿಯಲ್ಲಿ ಕರ್ನಾಟಕದ 45 ಕಂಪನಿಗಳು ಸ್ಥಾನ ಪಡೆದಿವೆ. ಈ ಪೈಕಿ 21 ನವೋದ್ಯಮಗಳಿವೆ. ಇದು ರಾಜ್ಯದ ಉದ್ಯಮಶೀಲತಾ ಪರಿಸರ ವ್ಯವಸ್ಥೆಯು ಸದೃಢವಾಗಿರುವುದಕ್ಕೆ ಕನ್ನಡಿ ಹಿಡಿದಿದೆ ಎಂದು ವರದಿ ಹೇಳಿದೆ.

₹8 ಲಕ್ಷ ಕೋಟಿ ಮಾರುಕಟ್ಟೆ ಬಂಡವಾಳ ಮೌಲ್ಯ ಹೊಂದಿರುವ ಇನ್ಫೊಸಿಸ್ ರಾಜ್ಯದ ಅತ್ಯಂತ ಮೌಲ್ಯಯುತ ಕಂಪನಿಯಾಗಿದೆ. ನಂತರದ ಸ್ಥಾನದಲ್ಲಿ ₹3.2 ಲಕ್ಷ ಕೋಟಿ ಎಂ–ಕ್ಯಾಪ್ ಹೊಂದಿರುವ ವಿಪ್ರೊ ಕಂಪನಿ ಇದೆ. ₹3.1 ಲಕ್ಷ ಕೋಟಿ ಎಂ–ಕ್ಯಾಪ್‌ನೊಂದಿಗೆ ಟೈಟಾನ್ ಕಂಪನಿ ಆ ನಂತರದ ಸ್ಥಾನದಲ್ಲಿದೆ.

ನವೋದ್ಯಮಗಳ ಪೈಕಿ ₹87,750 ಕೋಟಿ ಎಂ–ಕ್ಯಾಪ್‌ನೊಂದಿಗೆ ಜೆರೊದಾ ಅಗ್ರಸ್ಥಾನದಲ್ಲಿದೆ. ರೇಜರ್‌ಪೇ ₹63,620 ಕೋಟಿ ಮತ್ತು ಡೈಲಿಹಂಟ್ ₹42,410 ಕೋಟಿ ಮಾರುಕಟ್ಟೆ ಬಂಡವಾಳ ಹೊಂದಿವೆ.

ಕರ್ನಾಟಕದ ಕಂಪನಿಗಳು 13.1 ಲಕ್ಷ ಉದ್ಯೋಗಿಗಳನ್ನು ನೇಮಿಸಿಕೊಂಡಿವೆ. ಇನ್ಫೊಸಿಸ್ 1,24,569 ಮಹಿಳಾ ಉದ್ಯೋಗಿಗಳನ್ನು ನೇಮಿಸಿಕೊಂಡಿದ್ದು, ಮುಂಚೂಣಿ ಸ್ಥಾನದಲ್ಲಿದೆ. ಕ್ವೆಸ್ ಕಾರ್ಪ್ 95,725 ಮತ್ತು ವಿಪ್ರೊ 85,664 ಮಹಿಳೆಯರನ್ನು ನೇಮಿಸಿಕೊಂಡಿವೆ.

ಸಂಕ್ಷಿಪ್ತ ಸುದ್ದಿ

ರೂಪಾಯಿ ಮೌಲ್ಯ ಇಳಿಕೆ



ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 10 ಪೈಸೆ ಇಳಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹86.98 ಆಗಿದೆ.

ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳದ ಹೊರಹರಿವು ಮುಂದುವರಿದಿದೆ. ರೂಪಾಯಿ ಮೌಲ್ಯ ಉತ್ತೇಜನಕ್ಕೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪರಿಣಾಮ ಕಾರಿಯಾದ ಕ್ರಮ ಕೈಗೊಂಡಿಲ್ಲ. ಹಾಗಾಗಿ, ರೂಪಾಯಿ ಒತ್ತಡಕ್ಕೆ ಸಿಲುಕಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ. ಅಲ್ಲದೆ, ಜನವರಿ ತಿಂಗಳಿನಲ್ಲಿಯೂ ದೇಶದ ಆಮದು ಮತ್ತು ರಫ್ತು ವಹಿವಾಟಿನ ನಡುವಿನ ವ್ಯತ್ಯಾಸವಾದ ವ್ಯಾಪಾರ ಕೊರತೆ ಹೆಚ್ಚಿದೆ. ಇದು ಕೂಡ ರೂಪಾಯಿ ಒತ್ತಡಕ್ಕೆ ಸಿಲುಕಲು ಕಾರಣವಾಗಿದೆ ಎಂದು ಹೇಳಿದ್ದಾರೆ.

ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹300 ಹೆಚ್ಚಳವಾಗಿ, ₹88,500ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ದರವು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹88,100 ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹800 ಹೆಚ್ಚಳವಾಗಿ, ₹99 ಸಾವಿರ ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಚಿನ್ನದ ಆಮದು ಶೇ 40.79ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಜನವರಿಯಲ್ಲಿ ದೇಶದ ಚಿನ್ನದ ಆಮದು ಪ್ರಮಾಣದಲ್ಲಿ ಶೇ 40.79ರಷ್ಟು ಏರಿಕೆಯಾಗಿದೆ. ಒಟ್ಟು ₹23,300 ಕೋಟಿ ಮೌಲ್ಯದ ಚಿನ್ನವನ್ನು ಆಮದು ಮಾಡಿಕೊಳ್ಳಲಾಗಿದೆ.

ಕಳೆದ ವರ್ಷದ ಜನವರಿಯಲ್ಲಿ ಭಾರತವು ₹16,500 ಕೋಟಿ ಮೌಲ್ಯದ ಹಳದಿ ಲೋಹವನ್ನು ಆಮದು ಮಾಡಿಕೊಂಡಿತ್ತು. ದೇಶೀಯ ಮಟ್ಟದಲ್ಲಿ ಹೆಚ್ಚಿದ ಬೇಡಿಕೆಯಿಂದಾಗಿ ಆಮದು ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ. ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜನವರಿವರೆಗೆ ಒಟ್ಟು ₹4.34 ಲಕ್ಷ ಕೋಟಿ ಮೌಲ್ಯದ ಚಿನ್ನ ಆಮದಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹3.29 ಲಕ್ಷ ಕೋಟಿ ಮೌಲ್ಯದ ಚಿನ್ನವನ್ನು ಆಮದು ಮಾಡಿಕೊಳ್ಳಲಾಗಿತ್ತು. ಇದಕ್ಕೆ ಹೋಲಿಸಿದರೆ ಆಮದು ಪ್ರಮಾಣದಲ್ಲಿ ಶೇ 32ರಷ್ಟು ಏರಿಕೆಯಾಗಿದೆ.

ಈ ವರ್ಷದ ಆರಂಭದಿಂದ ಇಲ್ಲಿಯವರೆಗೆ ಚಿನ್ನದ ಬೆಲೆಯಲ್ಲಿ ಶೇ 11ರಷ್ಟು ಏರಿಕೆಯಾಗಿದೆ.

ಪ್ರಧಾನಿ ಮೋದಿ, ಕತಾರ್‌ನ ಅಮಿರ್ ಮಾತುಕತೆ

ವಹಿವಾಟು ದುಪ್ಪಟ್ಟಿಗೆ ನಿರ್ಧಾರ

ನವದೆಹಲಿ (ಪಿಟಿಐ): ಭಾರತ ಮತ್ತು ಕತಾರ್ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ವಾಣಿಜ್ಯ ವಹಿವಾಟನ್ನು ₹2.43 ಲಕ್ಷ ಕೋಟಿಗೆ (28 ಬಿಲಿಯನ್ ಡಾಲರ್) ಹೆಚ್ಚಿಸಲು ಮಂಗಳವಾರ ಸಮ್ಮತಿಸಿವೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಕತಾರ್‌ನ ಅಮಿರ್ ಆಗಿರುವ ಶೇಖ್ ತಮೀಮ್ ಬಿನ್ ಹಮದ್ ಅಲ್ ತಾನಿ ನಡುವೆ ನಡೆದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಯಿತು. ಅಲ್ಲದೆ, ದ್ವಿಪಕ್ಷೀಯ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಲು ನಿರ್ಧರಿಸಲಾಯಿತು.

ಕಾರ್ಯತಂತ್ರ ಪಾಲುದಾರಿಕೆಗೆ ಸಂಬಂಧಿಸಿದ ಮತ್ತು ದುಪ್ಪಟ್ಟು ತೆರಿಗೆ ತಪ್ಪಿಸುವ ಪರಿಷ್ಕೃತ ಒಪ್ಪಂದಗಳು ಹಾಗೂ ಆರ್ಥಿಕತೆ, ನಿರ್ವಹಣೆ, ಸಹಕಾರ, ಯುವಜನ, ಕ್ರೀಡಾಕ್ಷೇತ್ರಗಳಲ್ಲಿ ಬಾಂಧವ್ಯ ವೃದ್ಧಿಗೆ ಪೂರಕವಾಗಿ ಐದು ಒಡಂಬಡಿಕೆಗಳಿಗೆ ಸಹಿ ಹಾಕಲಾಯಿತು.

‘ಈ ಒಪ್ಪಂದಗಳಿಂದ ದ್ವಿಪಕ್ಷೀಯ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ವ್ಯಾಪಾರ, ಇಂಧನ ಭದ್ರತೆ, ಪ್ರಾದೇಶಿಕ, ಅಂತರರಾಷ್ಟ್ರೀಯ ವೇದಿಕೆಯಲ್ಲಿ ಸಹಕಾರ ವೃದ್ಧಿಯಾಗಲಿದೆ’ ಎಂದು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಅರುಣ್ ಕುಮಾರ್ ಚಟರ್ಜಿ ತಿಳಿಸಿದರು.

‘ಕಳೆದ ವರ್ಷ ಪ್ರಧಾನಿ ಅವರು ಕತಾರ್‌ಗೆ ಭೇಟಿ ನೀಡಿದ್ದಾಗ, 2048ರವರೆಗೂ ಎಲ್‌ಎನ್‌ಜಿ ಅನ್ನು ಮಾರುಕಟ್ಟೆ ಬೆಲೆಗಿಂತಲೂ ಕಡಿಮೆ ದರಕ್ಕೆ ಆಮದು ಮಾಡಿಕೊಳ್ಳುವ ಸಂಬಂಧ ಒಪ್ಪಂದಕ್ಕೆ ಸಹಿ ಹಾಕಿದ್ದರು’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಕತಾರ್‌ನ ಅಮಿರ್ ಆದ ಶೇಖ್ ತಮೀಮ್ ಬಿನ್ ಹಮದ್ ಅಲ್ ತಾನಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ನವದೆಹಲಿಯಲ್ಲಿ ಚರ್ಚಿಸಿದರು —ಪಿಟಿಐ ಚಿತ್ರ


ಪ್ರಸ್ತುತ ಉಭಯ ರಾಷ್ಟ್ರಗಳ ನಡುವಣ ವಹಿವಾಟು 14 ಬಿಲಿಯನ್ ಡಾಲರ್ ಇದೆ. ಇದನ್ನು ಐದು ವರ್ಷಗಳ ಅವಧಿಯಲ್ಲಿ ದುಪ್ಪಟ್ಟುಗೊಳಿಸಲು ಪ್ರಮುಖವಾಗಿ ತೀರ್ಮಾನಿಸಲಾಯಿತು ಎಂದು ಹೇಳಿದರು.

ಇದಕ್ಕೂ ಮೊದಲು ಕತಾರ್‌ನ ಅಮಿರ್ ಅವರಿಗೆ ರಾಷ್ಟ್ರಪತಿ ಭವನದಲ್ಲಿ ಸಾಂಪ್ರದಾಯಿಕ ಗೌರವ ಸಲ್ಲಿಸಲಾಯಿತು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅತಿಥಿಯನ್ನು ಬರಮಾಡಿಕೊಂಡರು. ಪ್ರಧಾನಿ ಮೋದಿ ಅವರು ಉಪಸ್ಥಿತರಿದ್ದರು.

ಭಾರತ ಮತ್ತು ಕತಾರ್ ನಡುವೆ ಸುದೀರ್ಘ ಅವಧಿಯ ಸ್ನೇಹ ಬಾಂಧವ್ಯ, ಪರಸ್ಪರ ವಿಶ್ವಾಸವಿದೆ. ಇತ್ತೀಚಿನ ವರ್ಷಗಳಲ್ಲಿ ವ್ಯಾಪಾರ, ಹೂಡಿಕೆ, ಇಂಧನ, ತಂತ್ರಜ್ಞಾನ, ಸಂಸ್ಕೃತಿ ಕ್ಷೇತ್ರದಲ್ಲಿ ವಹಿವಾಟು ವಿಸ್ತರಣೆಯಾಗಿವೆ ಎಂದು ಸಚಿವಾಲಯ ತಿಳಿಸಿದೆ.

ಸೋಮವಾರ ರಾತ್ರಿ ನವದೆಹಲಿಗೆ ಬಂದಿಳಿದ ಅಮಿರ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿ ವಿಮಾನ ನಿಲ್ದಾಣದಲ್ಲಿ ಆಲಂಗಿಸುವ ಮೂಲಕ ಬರಮಾಡಿಕೊಂಡರು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಾಗಿಣಿ ಕೆ. ಮೂರ್ತಿ, ಕೆ.ಆರ್. ಪುರಂ, ಬೆಂಗಳೂರು.

● **ಪ್ರಶ್ನೆ:** ನಾನು ವೃತ್ತಿಯಲ್ಲಿ ಕಾಲೇಜಿನ ಪ್ರಾಧ್ಯಾಪಕಿ. ನನಗೆ ಪುತ್ರ ಹಾಗೂ ಪುತ್ರಿ ಇದ್ದಾರೆ. ಇಬ್ಬರೂ ಕ್ರಮವಾಗಿ 10 ಹಾಗೂ 15 ವರ್ಷ ವಯಸ್ಸಿನವರಾಗಿದ್ದಾರೆ. ಮಕ್ಕಳ ಹೆಸರಲ್ಲಿ ಮುಂದಿನ ಭವಿಷ್ಯಕ್ಕಾಗಿ ನನ್ನ ಸಂಪಾದನೆಯ ಒಂದಿಷ್ಟು ಮೊತ್ತ ಉಳಿಸುವ ಪ್ರಯತ್ನ ಮಾಡುತ್ತಿದ್ದೇನೆ. ಅವರಿಗೆ ಉಳಿತಾಯ, ಆರ್ಥಿಕ ವಿಷಯಗಳ ಬಗ್ಗೆ ಹೇಗೆ ತಿಳಿಹೇಳಬಹುದು. ಈ ಬಗ್ಗೆ ಮಾರ್ಗದರ್ಶನ ನೀಡಲು ಕೋರಿಕೆ.

ಉತ್ತರ: ನಿಮ್ಮ ಮಕ್ಕಳು ಇನ್ನೂ ಬಾಲ್ಯದ ಹಂತದಲ್ಲೇ ಇದ್ದಾರೆ ಹಾಗೂ ಮುಂದಿನ 10-15 ವರ್ಷ ಅವರ ಶೈಕ್ಷಣಿಕ ಅವಧಿ ಇದೆ. ಇದರಿಂದ ಅವರ ಶಿಕ್ಷಣದ ವಿವಿಧ ಹಂತಗಳಲ್ಲಿ ಹಣದ ಅಗತ್ಯ ಇದ್ದೇ ಇರುತ್ತದೆ. ಇದಕ್ಕಾಗಿ ಸರಳ ಹಾಗೂ ಸುಲಭದ ಕೆಲವು ವಿಧಾನ ಹಾಗೂ ನೀವು ಈಗಾಗಲೇ ತಿಳಿದಿರಬಹುದಾದ ಹೂಡಿಕೆಗಳನ್ನು ಮಾಡುವ ಮೂಲಕ ಮುಂದುವರಿಯಬಹುದು.

ಮೊದಲ ಹಂತದಲ್ಲಿ ಮಕ್ಕಳ ಹೆಸರಿನಲ್ಲಿ ಪ್ರತ್ಯೇಕವಾದ ಬ್ಯಾಂಕ್ ಖಾತೆ ತೆರೆಯಿರಿ. ಹೆಚ್ಚುವರಿ ಮೊತ್ತವನ್ನು ಆ ಖಾತೆಗೆ ವರ್ಗಾಯಿಸಿ. ಮಕ್ಕಳ ಹೆಸರಲ್ಲಿ ರೆಕರಿಂಗ್ ಡೆಪಾಸಿಟ್ ಮಾಡಬಹುದು. ಉದ್ದೇಶಿತ ಹಣದ ಅಗತ್ಯಕ್ಕಾಗಿ ನಿಶ್ಚಿತ ಠೇವಣಿ ಇಡಬಹುದು. ಮಕ್ಕಳ ಹೆಸರಿನಲ್ಲಿ ವಿಮೆ ಪಡೆಯಬಹುದು. ಪಬ್ಲಿಕ್ ಪ್ರಾವಿಡೆಂಟ್ ಫಂಡ್‌ನಲ್ಲೂ ಹೂಡಿಕೆ ಮಾಡಬಹುದು. ಈ ಎಲ್ಲ ಹೂಡಿಕೆಗಳಿಗೆ ಆರ್ಥಿಕ ಅಪಾಯ ಇರದ ಕಾರಣ ಸಹಜವಾಗಿ ಶೇ 6ರಿಂದ ಶೇ 8ರಷ್ಟು ಬಡ್ಡಿ ಸಿಗುತ್ತದೆ.

ಹೆಣ್ಣು ಮಕ್ಕಳಿಗಾಗಿ ಚಿನ್ನದ ಬಾಂಡ್ ಅಥವಾ ನಾಣ್ಯ ಖರೀದಿಸಬಹುದು. ಇದರ ಮಾರುಕಟ್ಟೆ ಮೌಲ್ಯ ವರ್ಧಿಸಿದಂತೆ ಮಾರಾಟ ಮಾಡಿದಾಗ ಲಾಭವಾಗುತ್ತದೆ ಅಥವಾ ಸ್ವಂತ ಅಗತ್ಯಕ್ಕೂ ಯಾವುದೇ ಪಾವತಿ ಮಾಡದೆ ಉಪಯೋಗಿಸಿಕೊಳ್ಳಬಹುದು.

ನೀವು ಬ್ಯಾಂಕ್ ವ್ಯವಹಾರ ನಡೆಸುವಾಗ ಮಕ್ಕಳನ್ನು ನಿಮ್ಮೊಂದಿಗೆ ಕರೆದುಕೊಂಡು ಹೋಗಿ. ಅಲ್ಲಿನ ವಿವಿಧ ಸೇವೆ, ಉಳಿತಾಯ ಯೋಜನೆ ಬಗ್ಗೆ ಅವರಿಗೂ ಮಾಹಿತಿ ನೀಡಿ. ಆರ್ಥಿಕ ಸ್ವಾವಲಂಬನೆ ಬಗ್ಗೆ ಇಂದಿನ ಬೋಧನಾ ಕ್ರಮದಲ್ಲಿ ಯಾವ ವಿಚಾರಗಳೂ ಇಲ್ಲದ ಕಾರಣ ದಿನನಿತ್ಯದ ವ್ಯಾವಹಾರಿಕ ಅನುಭವವೇ ಮುಂದೆ ಅವರಿಗೆ ಹೆಚ್ಚಿನ ತಿಳಿವಳಿಕೆಗೆ ಸಹಕಾರಿಯಾಗುತ್ತದೆ.

ಮಕ್ಕಳಲ್ಲಿ ಉಳಿತಾಯದ ಬಗ್ಗೆ ಚಿಕ್ಕ ವಯಸ್ಸಿನಲ್ಲೇ ಅರಿವು ಮೂಡಿಸುವ ಪ್ರಯತ್ನ ಮಾಡಿ. ಇದು ಅವರ ಮುಂದಿನ ಬದುಕಿಗೆ ನೆರವಾಗಲಿದೆ. ಹಣದ ದುಂದುವೆಚ್ಚವನ್ನು ತಡೆಯುವಂತೆ ಮಾಡುತ್ತದೆ. ಉಳಿತಾಯವು ಭವಿಷ್ಯದ ಬಳಕೆಗಾಗಿ ಹಣವನ್ನು ಮೀಸಲಿಡುವುದು ಮಾತ್ರವಲ್ಲದೆ ಯಾವುದೇ ನಿಖರ ಉದ್ದೇಶವನ್ನು ಆರ್ಥಿಕ ದೃಷ್ಟಿಯಿಂದ ಸಾಫಲ್ಯಗೊಳಿಸುವಲ್ಲಿ ಸಹಕಾರಿಯಾಗುತ್ತದೆ. ಅವರಿಗೆ ನಿಗದಿತ ಉಳಿತಾಯದ ಬಗ್ಗೆ ಮನವರಿಕೆ ಮಾಡಿಕೊಡಿ. ಇದು ಅವರಲ್ಲಿ ಹೆಚ್ಚಿನ ಆತ್ಮವಿಶ್ವಾಸ ಹಾಗೂ ಹೆತ್ತವರ ಕಾಳಜಿಯನ್ನು ತೋರಿಸಿಕೊಡುತ್ತದೆ.

ರಾಜು ಎಸ್.ಆರ್., ಮೈಸೂರು ರಸ್ತೆ, ಬೆಂಗಳೂರು.

● **ಪ್ರಶ್ನೆ:** ನಾನು ಸಾರ್ವಜನಿಕ ವಲಯದ ಸಂಸ್ಥೆಯೊಂದರಲ್ಲಿ ಕೆಲಸ ಮಾಡಿ ಐದು ವರ್ಷದ ಹಿಂದೆ ನಿವೃತ್ತಿ ಹೊಂದಿದ್ದೇನೆ. ಮಾಸಿಕ ₹50 ಸಾವಿರ ಪಿಂಚಣಿ ಪಡೆಯುತ್ತಿದ್ದೇನೆ. ನಾನು ಉದ್ಯೋಗದಲ್ಲಿದ್ದಾಗ ಒಂದು ನಿವೇಶನ ಖರೀದಿಸಿದ್ದೆವು. ಈಗ ಅದರಲ್ಲಿ ಮನೆ ಕಟ್ಟುವ ಯೋಚನೆ ಮಾಡಿದ್ದೇವೆ. ಬ್ಯಾಂಕ್ ಸಾಲ ಕೂಡ ಅಗತ್ಯಕ್ಕೆ ತಕ್ಕಷ್ಟು ಪ್ರಮಾಣದಲ್ಲಿ ಮಾಡುವವರಿದ್ದೇವೆ. ಆದರೆ, ಬಡ್ಡಿ ಪಾವತಿ ನಿಯಂತ್ರಿಸುವ ಉದ್ದೇಶದಿಂದ ನಾನು ನನ್ನ ಉಳಿತಾಯದ ಮೊತ್ತವನ್ನೇ ಉಪಯೋಗಿಸುತ್ತಿದ್ದೇನೆ. ಮನೆ ನಿರ್ಮಾಣಕ್ಕೆ ಸುಮಾರು ₹50 ಲಕ್ಷದಿಂದ ₹60 ಲಕ್ಷ ವೆಚ್ಚವಾಗಲಿದೆ. ಅರ್ಧದಷ್ಟು ಮೊತ್ತ ನನ್ನ ಉಳಿತಾಯ ಖಾತೆಯಿಂದ ನಗದು ಮೂಲಕ ಹಂತ ಹಂತದಲ್ಲಿ ಹಿಂಪಡೆಯುವವನಿದ್ದೇನೆ. ಇತ್ತೀಚೆಗೆ ಬ್ಯಾಂಕ್‌ಗೆ ಭೇಟಿ ನೀಡಿದಾಗ ನಗದು ಪಡೆದಾಗ ತೆರಿಗೆ ಕಡಿತ ಮಾಡಬೇಕಾಗುವ ವಿಚಾರ ತಿಳಿಸಿರುತ್ತಾರೆ. ಈ ಕಡಿತ ಆಗದ ರೀತಿ ಅಥವಾ ಆ ಮೊತ್ತ ಹಿಂಪಡೆಯುವ ಬಗೆ ಏನಾದರೂ ಇದೆಯೇ. ನನ್ನ ಪೆನ್ಶನ್ ಮೊತ್ತವು ತೆರಿಗೆ ಗೊಳಪಡುವುದಿಲ್ಲ. ಹೀಗಿರುವಾಗ, ಬ್ಯಾಂಕ್‌ನಿಂದ ನಮ್ಮದೇ ಹಣ ಹಿಂಪಡೆಯುವಾಗ ಈ ತೆರಿಗೆ ನಮಗೆ ಅನಿವಾರ್ಯವೇ. ಈ ಬಗ್ಗೆ ಮಾಹಿತಿ ನೀಡಿ.

ಉತ್ತರ: ನೀವು ಪ್ರಶ್ನೆಯಲ್ಲಿ ನೀಡಿರುವ ಮಾಹಿತಿಯಂತೆ ನಿಮ್ಮ ಆದಾಯ, ತೆರಿಗೆಗೊಳಪಡುವುದಿಲ್ಲ ಎಂದು ತಿಳಿಸಿರುತ್ತೀರಿ. ಆದರೆ, ಗರಿಷ್ಠ ವಿನಾಯಿತಿ ಮೊತ್ತಕ್ಕಿಂತ ಪೆನ್ಶನ್ ಅಧಿಕ ಇರುವ ಕಾರಣ, ತೆರಿಗೆ ಅನ್ವಯಿಸದಿದ್ದರೂ ಈ ಸಂಬಂಧಿತ ತೆರಿಗೆ ರಿಟರ್ನ್ಸ್ ಸಲ್ಲಿಸಿರಬಹುದೆಂದು ಊಹಿಸಿ ಇಲ್ಲಿ ಉತ್ತರಿಸಲಾಗಿದೆ.

ಬ್ಯಾಂಕ್ ಖಾತೆಯಿಂದ ಹಣ ನಗದೀಕರಿಸುವಾಗ ಕೆಲವೆಲ್ಲ ಆದಾಯ ತೆರಿಗೆ ನಿಯಮಗಳ ಬಗ್ಗೆ ತಿಳಿದುಕೊಳ್ಳುವುದು ಅನಿವಾರ್ಯ. ಸಾಮಾನ್ಯವಾಗಿ ವಾರ್ಷಿಕವಾಗಿ ₹1 ಕೋಟಿಗೂ ಅಧಿಕ ಮೊತ್ತವನ್ನು ನಗದೀಕರಿಸಿದಾಗ ತೆರಿಗೆ ಕಟಾಯಿಸಲಾಗುತ್ತದೆ.

ಆದರೆ, ಯಾವುದೇ ವ್ಯಕ್ತಿ ಕಳೆದ ಯಾವುದೇ ಮೂರು ವರ್ಷಗಳಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸದಿದ್ದರೆ ಈ ಮಿತಿಯನ್ನು ₹20 ಲಕ್ಷದಿಂದಲೇ ತೆರಿಗೆ ಕಟಾವಿಗೆ ಪರಿಗಣಿಸಲಾಗುತ್ತದೆ. ಈ ಮಿತಿಗಿಂತ ಹೆಚ್ಚಿನ ಮೊತ್ತಕ್ಕೆ ಆದರೆ ₹1 ಕೋಟಿಯೊಳಗಿನ ಮೊತ್ತಕ್ಕೆ ಶೇ 2ರ ದರದಲ್ಲಿ ತೆರಿಗೆ ಕಡಿತ ಮಾಡಲಾಗುತ್ತದೆ. ತೆರಿಗೆ ಕಡಿತದ ಜವಾಬ್ದಾರಿಯು, ಹಣ ಪಡೆಯುವ ಗ್ರಾಹಕರಿಗಿಂತ ಬ್ಯಾಂಕ್‌ಗಳಿಗೆ ಇದೆ. ಹೀಗಾಗಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ ವಿವರವನ್ನು ಬ್ಯಾಂಕ್‌ಗೂ ಮಾಹಿತಿಗಾಗಿ ನೀಡಿ. ಪರ್ಯಾಯವಾಗಿ ನೀವು ಇನ್ನೊಂದು ಬೇರೆ ಬ್ಯಾಂಕ್ ಖಾತೆ ತೆರೆದು ₹20 ಲಕ್ಷಕ್ಕಿಂತ ಅಧಿಕ ಮೊತ್ತವನ್ನು ಅದಕ್ಕೆ ವರ್ಗಾಯಿಸಿ ನಗದೀಕರಿಸಬಹುದು. ಒಂದು ವೇಳೆ ಇದು ಅಸಾಧ್ಯವಾದರೆ ಕಟಾವಾದ ತೆರಿಗೆಯನ್ನು ಯಾವುದೇ ತೆರಿಗೆಗೊಳಪಡುವ ಆದಾಯವಿಲ್ಲದಿದ್ದರೆ ಸಂಪೂರ್ಣ ಹಿಂಪಡೆಯುವ ಅವಕಾಶ ಇದ್ದೇ ಇದೆ. ಇದಕ್ಕಾಗಿ ಮುಂದಿನ ಜುಲೈ ತಿಂಗಳೊಳಗೆ ತೆರಿಗೆ ರಿಟರ್ನ್ಸ್ ಸಲ್ಲಿಸಿ.

ವ್ಯಾಪಾರ ಸಂಬಂಧಿ ನಗದು ವ್ಯವಹಾರಗಳಿಗೆ ಹೆಚ್ಚಿನ ನಿಯಮಗಳಿವೆ. ಆದರೆ, ವೈಯಕ್ತಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಕೆಲವು ಸೀಮಿತ ನಿಯಮಗಳಿವೆ. ಆದರೆ, ಯಾವುದೇ ಮೊತ್ತ ಪಾವತಿಸುವುದಾದರೂ ಪ್ರತಿ ಸನ್ನಿವೇಶಕ್ಕೆ ಸಂಬಂಧಿಸಿ, ಪ್ರತಿದಿನ ಅಥವಾ ಪ್ರತಿ ಬಿಲ್ ಸಂದಾಯವಾಗುವ ಸಂದರ್ಭದಲ್ಲಿ ₹2 ಲಕ್ಷಕ್ಕೂ ಮೀರಿದ ನಗದು ಮೊತ್ತ ಪಡೆಯುವಂತಿಲ್ಲ ಎಂಬುದು ಸೆಕ್ಷನ್ 269 ಎಸ್‌ಟಿ ಹೇಳುತ್ತದೆ. ಇದು ವ್ಯವಹಾರದಲ್ಲಿರುವ ಆದರೆ ನಮ್ಮಿಂದ ಹಣ ಪಡೆಯುವ ವ್ಯಕ್ತಿಗಳನ್ನು ಉದ್ದೇಶಿಸಿ ಈ ಕಾನೂನಡಿ ನಿರ್ಬಂಧ ಹೇರಲಾಗಿದೆ. ಆದರೆ, ಪಾವತಿಸು ವವರಿಗೂ ಅದರ ಅರಿವು ಇದ್ದರೆ ಒಳಿತು. ಅದಕ್ಕೆ ಸಂಬಂಧಿತ ಸಮಾನ ಮೊತ್ತದ ದಂಡ, ಹಣ ಸ್ವೀಕರಿಸುವವರಿಗೆ ಹೇರುವ ಅವಕಾಶ ಕಾನೂನಿನಡಿ ಇದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಮುಂಬೈ ಧಾರಣೆ

ಶೇಂಗಾ
18-02-2025

ಜಾವಾ 70/80(ಹೊಸ)	9800-9900
ಜಾವಾ 80/90(ಹೊಸ)	9300-9400
ದಪ್ಪ ಮಧ್ಯಪ್ರದೇಶ(ಹೊಸ)	7700-7800
ದಪ್ಪ ಗುಜರಾತ್(ಹೊಸ)	8000-8100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1440)
ಒಂದು ವಾರದ ಡೆಲಿವರಿ	1435 (1435)
ಪಾಮ್ ವಾರದ ಡೆಲಿವರಿ	1363 (1358)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1360)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ ₹85,500 (84,900)
ಬೆಳ್ಳಿ ಕೆ.ಜಿ ₹96,100 (95,900)
ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹13500-14475
ಬೆಂಗಳೂರು	₹17000-19000
ತುರುವೇಕೆರೆ	₹14000-14000

ಆಧಾರ್ ಒಟಿಪಿ ಬಳಸಿ ಬ್ಯಾಂಕ್ ಖಾತೆ ತೆರೆಯಲು ಅವಕಾಶ

ಚೆನ್ನೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನಿಂದ (ಐಒಬಿ) ಗ್ರಾಹಕರಿಗೆ ಆಧಾರ್ ಒಟಿಪಿ ಮೂಲಕ ಉಳಿತಾಯ ಖಾತೆ ತೆರೆಯುವ ಸೌಲಭ್ಯ ಕಲ್ಪಿಸಲಾಗಿದೆ.

ಕಾರ್ಪೊರೇಟ್ ವಲಯದ ಗ್ರಾಹಕರ ಅನುಕೂಲಕ್ಕಾಗಿ ಎಪಿಐ (ಅಪ್ಲಿಕೇಷನ್ ಪ್ರೋಗ್ರಾಮಿಂಗ್ ಇಂಟರ್‌ಫೇಸ್) ಸೌಲಭ್ಯಕ್ಕೆ ಚಾಲನೆ ನೀಡಲಾಗಿದೆ. ಬ್ಯಾಂಕ್ 89ನೇ ಸಂಸ್ಥಾಪನಾ ದಿನಾಚರಣೆಯ ಸಂಭ್ರಮದಲ್ಲಿದೆ. ಇದರ ಬೆನ್ನಲ್ಲೇ ಗ್ರಾಹಕರಿಗೆ ಹಲವು ಸೌಲಭ್ಯ ಕಲ್ಪಿಸಲು ಕ್ರಮಕೈಗೊಳ್ಳಲಾಗಿದೆ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅಜಯ್ ಕುಮಾರ್ ಶ್ರೀವಾಸ್ತವ ತಿಳಿಸಿದ್ದಾರೆ.

ಗ್ರಾಹಕರು ಬ್ಯಾಂಕ್‌ನ ವೆಬ್‌ಸೈಟ್‌ಗೆ ತೆರಳಿ ಆಧಾರ್ ಸಂಖ್ಯೆ ನಮೂದಿಸಬೇಕು. ಬಳಿಕ ಆಧಾರ್ ಕಾರ್ಡ್‌ನಲ್ಲಿ ನೋಂದಾಯಿಸಿರುವ ಮೊಬೈಲ್ ಸಂಖ್ಯೆಗೆ ಒಟಿಪಿ ಬರಲಿದೆ. ಇದನ್ನು ಬಳಸಿ ಖಾತೆ ತೆರೆಯಬಹುದಾಗಿದೆ ಎಂದು ಹೇಳಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ ಆಧಾರ್ ಒಟಿಪಿ ಆಧರಿತ ಇ–ಕೆವೈಸಿ ಮಾರ್ಗಸೂಚಿಗಳ ಅನ್ವಯ ಈ ಸೌಲಭ್ಯ ಕಲ್ಪಿಸಲಾಗಿದೆ. ಯಾವುದೇ ತೊಂದರೆ ಇಲ್ಲದೆ ಗ್ರಾಹಕರು ಖಾತೆ ತೆರೆಯಬಹುದಾಗಿದೆ. ಇದಕ್ಕೆ ಹೆಚ್ಚಿನ ದಾಖಲೆಗಳನ್ನು ಸಲ್ಲಿಸುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

ಸಕಾಲದಲ್ಲಿ ಕಾರ್ಪೊರೇಟ್ ವಲಯದ ಗ್ರಾಹಕರು ನೇರವಾಗಿ ತಮ್ಮ ಖಾತೆಗಳಿಂದ ಇತರೆ ಬ್ಯಾಂಕ್ ಖಾತೆಗಳಿಗೆ ಸುಲಭವಾಗಿ ಹಣ ವರ್ಗಾಯಿಸಲು ಎಪಿಐ ಸೌಲಭ್ಯ ಒದಗಿಸಲಾಗಿದೆ ಎಂದು ತಿಳಿಸಿದ್ದಾರೆ.

ಅಮೆರಿಕ–ರಷ್ಯಾ ಮಾತುಕತೆ

ರಿಯಾದ್/ಬೆಲ್ಜಿಯಂ (ಎಎಫ್‌ಪಿ/ಎಪಿ): ಉಕ್ರೇನ್–ರಷ್ಯಾ ಯುದ್ಧ ಕೊನೆಗೊಳಿಸುವ ಸಂಬಂಧ ಇದೇ ಮೊದಲ ಬಾರಿಗೆ ಸಭೆಯೊಂದು ಮಂಗಳವಾರ ನಡೆದಿದೆ.

ಸೌದಿ ಅರೇಬಿಯಾದ ರಿಯಾದ್‌ನ ದಿರಿಯಾ ಅರಮನೆಯಲ್ಲಿ ನಡೆದ ಸಭೆಯಲ್ಲಿ ಅಮೆರಿಕ ಮತ್ತು ರಷ್ಯಾದ ಹಿರಿಯ ರಾಜತಾಂತ್ರಿಕ ಅಧಿಕಾರಿಗಳು ಭಾಗವಹಿಸಿದರು. ಆದರೆ, ಯುದ್ಧದಲ್ಲಿ ಭಾಗಿಯಾಗಿರುವ ಉಕ್ರೇನ್ ಅನ್ನು ಸಭೆಯಿಂದ ಹೊರಗಿಡಲಾಗಿತ್ತು.

ಯುದ್ಧವನ್ನು ಅಂತ್ಯಗೊಳಿಸುವ ಸಂಬಂಧ ಸಭೆ ನಡೆದಿದೆ ಎನ್ನಲಾಗುತ್ತಿದ್ದರೂ ಇದು ಅಮೆರಿಕ–ರಷ್ಯಾದ ‘ದ್ವಿಪಕ್ಷೀಯ ಮಾತುಕತೆ’ ಎಂದು ಆಯಾ ದೇಶಗಳ ಉನ್ನತ ಅಧಿಕಾರಿಗಳು ಹೇಳಿಕೆ ನೀಡಿದ್ದಾರೆ. ಬದ್ಧ ವೈರಿಗಳಾಗಿರುವ ಅಮೆರಿಕ ಮತ್ತು ರಷ್ಯಾ ದೇಶಗಳು ತಮ್ಮ ವೈರತ್ವವನ್ನು ಬದಿಗೊತ್ತಿ ‘ದ್ವಿಪಕ್ಷೀಯ ಮಾತುಕತೆ’ ನಡೆಸಿವೆ ಎನ್ನಲಾಗಿದೆ.

‘ರಷ್ಯಾ ಮತ್ತು ಅಮೆರಿಕದ ಸಂಕೀರ್ಣವಾದ ಸಂಬಂಧವನ್ನು ಸರಿಪಡಿಸಿಕೊಳ್ಳುವುದು ಈ ಮಾತುಕತೆಯ ಮುಖ್ಯ ಉದ್ದೇಶ. ಇದೇ ವೇಳೆ ಉಕ್ರೇನ್ ವಿಷಯ ಪ್ರಸ್ತಾಪವಾಗಬಹುದು’ ಎಂದು ರಷ್ಯಾದ ಮಾಧ್ಯಮ ಕಾರ್ಯದರ್ಶಿ ಡಿಮಿಟ್ರಿ ಪೆಸ್ಕೊ ಅವರು ಮಾತುಕತೆಗೂ ಮೊದಲು ಹೇಳಿದ್ದರು. ‘ಈ ಮಾತುಕತೆಯು ಅಮೆರಿಕ–ರಷ್ಯಾ ದೇಶಗಳ ದ್ವಿಪಕ್ಷೀಯ ಮಾತುಕತೆಯಾಗಿರಲಿದೆ’ ಎಂದು ರಷ್ಯಾ ಅಧ್ಯಕ್ಷ ವಾದ್ಲಿಮಿರ್ ಪುಟಿನ್ ಅವರ ಸಲಹೆಗಾರ ಯುರಿ ಯುಶಕಾಫ್ ಈಗಾಗಲೇ ಹೇಳಿದ್ದಾರೆ.

‘ಮಾತುಕತೆಗೆ ಉಕ್ರೇನ್ ಅನ್ನು ಆಹ್ವಾನಿಸಿಲ್ಲ. ಆದರೆ, ಯುದ್ಧ ಅಂತ್ಯಗೊಳಿಸುವ ಬಗ್ಗೆ ಮಾತುಕತೆ ನಡೆದಾಗ ಉಕ್ರೇನ್ ಅನ್ನು ಆಹ್ವಾನಿಸಲಾಗುವುದು. ಐರೋಪ್ಯ ಒಕ್ಕೂಟವನ್ನು ಹೊರಗಿಡುವ ಉದ್ದೇಶವಿಲ್ಲ’ ಎಂದು ಅಮೆರಿಕದ ವಿದೇಶಾಂಗ ಇಲಾಖೆಯ ವಕ್ತಾರೆ ಟಾಮಿ ಬ್ರೂಸ್ ತಿಳಿಸಿದರು.

‘ಯುದ್ಧ ಅಂತ್ಯಗೊಳಿಸಲು ಸಮಿತಿ’

- ಉಕ್ರೇನ್ ಜೊತೆಗಿನ ಯುದ್ಧವನ್ನು ಆದಷ್ಟು ಬೇಗ ಅಂತ್ಯಗೊಳಿಸುವ ಸಂಬಂಧ ಯಾವೆಲ್ಲಾ ಮಾರ್ಗಗಳಿವೆ ಎಂಬುದನ್ನು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲಾಗುವುದು. ಭವಿಷ್ಯದ ಆರ್ಥಿಕ ಸಹಕಾರ, ಜಾಗತಿಕ ತೈಲ ಬೆಲೆಗಳ ಕುರಿತು ಸಭೆಯಲ್ಲಿ ಮಾತುಕತೆ ನಡೆಯಿತು ಎಂದು ರಷ್ಯಾ ಹೇಳಿದೆ
- ಅಮೆರಿಕ ಅಧ್ಯಕ್ಷ ಟ್ರಂಪ್ ಹಾಗೂ ರಷ್ಯಾ ಅಧ್ಯಕ್ಷ ಪುಟಿನ್ ಅವರ ಭೇಟಿ ತಕ್ಷಣದಲ್ಲೇ ನಡೆಯುವ ಸಾಧ್ಯತೆಗಳಿಲ್ಲ ಎಂದು ರಷ್ಯಾ ಹೇಳಿದೆ

ಕೇರಳ: ಮತ್ತೊಂದು ರ‍್ಯಾಗಿಂಗ್ ಪ್ರಕರಣ



ತಿರುವನಂತಪುರ (ಪಿಟಿಐ): ಇಲ್ಲಿನ ಸರ್ಕಾರಿ ಕಾಲೇಜಿನ ವಿದ್ಯಾರ್ಥಿಯೊಬ್ಬರು ತನ್ನ ಮೇಲೆ ಹಿರಿಯ ವಿದ್ಯಾರ್ಥಿಗಳು ಕ್ರೂರ ರೀತಿಯಲ್ಲಿ ರ‍್ಯಾಗಿಂಗ್ ನಡೆಸಿದ್ದಾರೆ ಎಂದು ಆರೋಪಿಸಿ ದೂರು ದಾಖಲಿಸಿದ್ದಾರೆ.

'ಏಳು ಹಿರಿಯ ವಿದ್ಯಾರ್ಥಿಗಳ ಗುಂಪು ಫೆ.11ರಂದು ನನ್ನ ಮೇಲೆ ಹಲ್ಲೆ ನಡೆಸಿ, ದೌರ್ಜನ್ಯ ಎಸಗಿದೆ. ಅಲ್ಲದೆ ಬೆದರಿಕೆ ಹಾಕಿದೆ' ಎಂದು ನಗರದ ಕಾರ್ಯವಟ್ಟಂ ಸರ್ಕಾರಿ ಕಾಲೇಜಿನ ಬಯೋಟೆಕ್ನಾಲಜಿಯ ಮೊದಲ ವರ್ಷದ ವಿದ್ಯಾರ್ಥಿ ಬಿನ್ಸ್ ಜೋಸ್ ಹೇಳಿದ್ದಾರೆ. ಈ ಕುರಿತು ಪೊಲೀಸರಿಗೆ ಮತ್ತು ಕಾಲೇಜಿನ ಆಡಳಿತ ಮಂಡಳಿಗೆ ದೂರು ನೀಡಿರುವುದಾಗಿ ಜೋಸ್ ತಿಳಿಸಿದ್ದಾರೆ.

ಕೋಟಯಂ ನರ್ಸಿಂಗ್ ಕಾಲೇಜಿನಲ್ಲಿ ಇತ್ತೀಚಿಗೆ ಕಿರಿಯ ವಿದ್ಯಾರ್ಥಿ ಮೇಲೆ ನಡೆದಿದ್ದ ರ‍್ಯಾಗಿಂಗ್ ಪ್ರಕರಣ ದೇಶದಾದ್ಯಂತ ಭಾರಿ ಸದ್ದು ಮಾಡಿತ್ತು. ಅದರ ಬೆನ್ನಲ್ಲೇ ರಾಜ್ಯದಲ್ಲಿ ಈ ರೀತಿಯ ಇತರ ಪ್ರಕರಣಗಳು ಬೆಳಕಿಗೆ ಬರುತ್ತಿವೆ.

ವಿದ್ಯಾರ್ಥಿ ನೀಡಿದ ದೂರಿನ ಮೇರೆಗೆ ಕಳಕ್ಕೂಟಂ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

'ಈ ಘಟನೆ ಕುರಿತು ಯಾರಿಗಾದರೂ ಹೇಳಿದರೆ ಇನ್ನೂ ಕೆಟ್ಟ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಅಲ್ಲದೆ ಈ ಎಲ್ಲದಕ್ಕೂ ನನ್ನ ಸ್ನೇಹಿತನೇ ಕಾರಣ ಎಂಬುದಾಗಿ ದೂರು ನೀಡುವಂತೆ ಅವರು ಒತ್ತಾಯಿಸಿದರು' ಎಂದು ಜೋಸ್ ಮಾಧ್ಯಮಗಳಿಗೆ ಹೇಳಿದರು.

'ಎಂಜಲು ಉಗುಳಿದ ನೀರು ಕೊಟ್ಟರು'

'ನಾನು ಮತ್ತು ಸ್ನೇಹಿತ ಅಭಿಷೇಕ್, ಕಾಲೇಜಿನ ಆವರಣದಲ್ಲಿ ನಡೆದುಕೊಂಡು ಹೋಗುತ್ತಿರುವಾಗ, ನಮ್ಮನ್ನು ಅಡ್ಡಗಟ್ಟಿದ ಹಿರಿಯ ವಿದ್ಯಾರ್ಥಿಗಳ ತಂಡವು ನಮ್ಮನ್ನು ಥಳಿಸಲು ಆರಂಭಿಸಿತು. ಅಲ್ಲಿಂದ ತಪ್ಪಿಸಿಕೊಳ್ಳಲು ಯಶಸ್ವಿಯಾದ ನನ್ನ ಸ್ನೇಹಿತ ಪ್ರಾಂಶುಪಾಲರಿಗೆ ಮಾಹಿತಿ ನೀಡಲು ಓಡಿದ' ಎಂದು ಜೋಸ್ ಮಾಧ್ಯಮಗಳಿಗೆ ಮಂಗಳವಾರ ಪ್ರತಿಕ್ರಿಯಿಸಿದರು.

'ಬಿದಿರಿನ ಕೋಲು ಮತ್ತು ಬೆಲ್ಟ್‌ನಿಂದ ಹಿರಿಯ ವಿದ್ಯಾರ್ಥಿಗಳು ನನ್ನನ್ನು ಹೊಡೆದರು. ಬಳಿಕ ಕೋಣೆಯೊಂದರ ಒಳಗೆ ಕರೆದುಕೊಂಡು ಹೋಗಿ, ನನ್ನ ಅಂಗಿ ಬಿಚ್ಚಿಸಿ ಮಂಡಿಯೂರಿ ಕೂರಿಸಿದರು. ಕುಡಿಯಲು ನೀರು ಕೇಳಿದರೆ, ಅರ್ಧ ಗ್ಲಾಸ್ ನೀರಿಗೆ ಎಂಜಲು ಉಗುಳಿ ನೀಡಿದರು' ಎಂದು ಅವರು ದೂರಿದರು.

ಗರ್ಭಗುಡಿಯೊಳಗೆ ಪ್ರವೇಶ ನಿರಾಕರಣೆ ಆರೋಪ

ತಿರುಚಿರಾಪಲ್ಲಿ (ಪಿಟಿಐ): 'ಪೂಜಾರಿಯಾಗಲು ಇಚ್ಛಿಸುವ ಹಿಂದೂ ಧರ್ಮದ ಎಲ್ಲ ಜಾತಿಯವರಿಗೆ ತರಬೇತಿ ನೀಡುವ ಸರ್ಕಾರದ ಯೋಜನೆಯಡಿ 2021ರಲ್ಲಿ ನಾವು 'ಕುಮಾರವಯಲೂರ್ ಅರುಳ್‌ಮಿಗು ಸುಬ್ರಮಣ್ಯ' ದೇವಸ್ಥಾನಕ್ಕೆ ನೇಮಕಗೊಂಡಿದ್ದೇವೆ. ಆದರೆ, ಗರ್ಭಗುಡಿಯೊಳಗೆ ಹೋಗಲು ನಮಗೆ ಅವಕಾಶ ನಿರಾಕರಿಸಲಾಗಿದೆ' ಎಂದು ಬ್ರಾಹ್ಮಣೇತರ ಇಬ್ಬರು ಪೂಜಾರಿಗಳು ಆರೋಪಿಸಿದ್ದಾರೆ.

'ಫೆ.19ರಿಂದ ದೇವಾಲಯದಲ್ಲಿ ಕುಂಭಾಭಿಷೇಕ ನಡೆಯಲಿದೆ. ಇದಕ್ಕೆ ಸಂಬಂಧಿಸಿ ಎಲ್ಲ ಧಾರ್ಮಿಕ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಬೇಕು ಎಂಬ ಆಸೆ ಇದೆ. ಇದಕ್ಕೆ ನಮಗೆ ಅವಕಾಶ ಕಲ್ಪಿಸಿಕೊಡಬೇಕು' ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಹಿಂದೂ ಧರ್ಮ ಮತ್ತು ದತ್ತಿ ಇಲಾಖೆ ಸಚಿವ ಪಿ.ಕೆ. ಶೇಖರ್ ಬಾಬು ಸೇರಿದಂತೆ ಹಲವು ಅಧಿಕಾರಿಗಳಿಗೆ ಪೂಜಾರಿಗಳಾದ ಪ್ರಭು ಹಾಗೂ ಜಯಪಾಲ್ ಎಂಬುವರು ಮಂಗಳವಾರ ಪತ್ರ ಬರೆದಿದ್ದಾರೆ.

'ನೇಮಕವಾದಾಗಿನಿಂದಲೂ ಗಣೇಶ, ನವಗ್ರಹ ದೇವಾಲಯದಲ್ಲಿ ಮಾತ್ರವೇ ಪೂಜೆ ಮಾಡಲು ಅವಕಾಶ ನೀಡಲಾಗುತ್ತಿದೆ. ಮುರುಗನ್ ದೇವಸ್ಥಾನದ ಗರ್ಭಗುಡಿಯೊಳಗೆ ಹೋಗಲು ಮತ್ತು ಪೂಜೆ ಮಾಡಲು ಒಮ್ಮೆಯೂ ಅವಕಾಶ ನೀಡಿಲ್ಲ' ಎಂದು ಪತ್ರದಲ್ಲಿ ಆರೋಪಿಸಿದ್ದಾರೆ.

'ಭಕ್ತರು ನಮಗೆ ಗೌರವ ನೀಡುತ್ತಾರೆ ಮತ್ತು ಯಾವುದೇ ರೀತಿಯಲ್ಲೂ ತಾರತಮ್ಯ ಮಾಡುವುದಿಲ್ಲ. ಆದರೆ, ಶಿವಾಚಾರ್ಯರು ಗರ್ಭಗುಡಿಯೊಳಗೆ ಹೋಗದಂತೆ ನಮ್ಮನ್ನು ತಡೆಯುತ್ತಾರೆ' ಎಂದಿದ್ದಾರೆ. ಈ ಬಗ್ಗೆ ಪ್ರಕ್ರಿಯೆ ಪಡೆಯಲು ಶಿವಾರ್ಚಾರರು ಸಂಪರ್ಕಕ್ಕೆ ಸಿಗಲಿಲ್ಲ.

ಸಂಕ್ಷಿಪ್ತ ಸುದ್ದಿ

ರಂಜಾನ್: ಬೇಗ ಹೊರಡಲು ಮುಸ್ಲಿಂ ನೌಕರರಿಗೆ ಅನುಮತಿ

ಹೈದರಾಬಾದ್: ರಂಜಾನ್ ಮಾಸದ ವೇಳೆ ಮುಸ್ಲಿಂ ನೌಕರರು ಒಂದು ಗಂಟೆ ಮುಂಚಿತವಾಗಿ, 4ಕ್ಕೆ ಕಚೇರಿಗಳಿಂದ ಹೊರಡಲು ಅನುಮತಿ ನೀಡಿ ತೆಲಂಗಾಣ ಸರ್ಕಾರ ಆದೇಶ ಹೊರಡಿಸಿರುವುದು ವಿವಾದಕ್ಕೆ ಕಾರಣವಾಗಿದೆ.

ಒಂದು ಗಂಟೆ ಮುಂಚಿತವಾಗಿ ಕಚೇರಿಯಿಂದ ಹೊರಡಲು ಅನುಮತಿ ನೀಡುವಂತೆ ತೆಲಂಗಾಣ ರಾಜ್ಯ ಅಲ್ಪಸಂಖ್ಯಾತ ನೌಕರರ ಸೇವಾ ಸಂಘ ಮನವಿ ಮಾಡಿತ್ತು. ಈ ಮನವಿಗೆ ಸ್ಪಂದಿಸಿ, ಮುಖ್ಯ ಕಾರ್ಯದರ್ಶಿ ಶಾಂತಿ ಕುಮಾರಿ ಫೆ.15ರಂದು ಆದೇಶಿಸಿದ್ದಾರೆ.

ಸರ್ಕಾರದ ಈ ನಡೆಯನ್ನು ಟೀಕಿಸಿರುವ ಬಿಜೆಪಿ, ಇದು ತುಷ್ಟೀಕರಣದ ಪರಮಾವಧಿ ಎಂದಿದೆ.

'ಬಿಜೆಪಿ ಎಲ್ಲ ಧರ್ಮಗಳನ್ನು ಗೌರವಿಸುತ್ತದೆ. ಇಂತಹ ಕ್ರಮವನ್ನು ಸಹ ಸ್ವಾಗತಿಸುತ್ತದೆ. ಆದರೆ, ಇಂತಹ ಸೌಲಭ್ಯಗಳನ್ನು ಎಲ್ಲ ಸಮುದಾಯಗಳಿಗೆ ನೀಡಬೇಕು' ಎಂದು ಬಿಜೆಪಿ ವಕ್ತಾರ ಎನ್.ವಿ.ಸುಭಾಷ್ ಪ್ರತಿಪಾದಿಸಿದ್ದಾರೆ.

'ಓಲೈಕೆ ರಾಜಕಾರಣ ಮಿತಿ ಮೀರಿದೆ. ತೆಲಂಗಾಣ ಸರ್ಕಾರ ಹಿಂದೂ ಹಬ್ಬಗಳನ್ನು ನಿರ್ಲಕ್ಷಿಸುತ್ತದೆ. ಎಲ್ಲರಿಗೂ ಸಮಾನ ಹಕ್ಕುಗಳು ಇರಬೇಕು ಇಲ್ಲವೇ ಇರಬಾರದು' ಎಂದು ಬಿಜೆಪಿ ಶಾಸಕ ಠಾಕೂರ್ ರಾಜಾ ಸಿಂಗ್ ಟೀಕಿಸಿದ್ದಾರೆ.

ಮಧ್ಯವರ್ತಿ ಜೇಮ್ಸ್‌ಗೆ ಜಾಮೀನು

ನವದೆಹಲಿ (ಪಿಟಿಐ): ಆಗಸ್ಟಾ ವೆಸ್ಟ್‌ಲ್ಯಾಂಡ್ ಪ್ರಕರಣದಲ್ಲಿ ಮಧ್ಯವರ್ತಿಯಾಗಿ ಕೆಲಸ ಮಾಡಿದ್ದಾರೆ ಎನ್ನಲಾದ ಕ್ರಿಶ್ಚಿಯನ್ ಮಿಷೆಲ್ ಜೇಮ್ಸ್ ಅವರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ಜಾಮೀನು ನೀಡಿದೆ. ಸಿಬಿಐ ಈ ಪ್ರಕರಣದ ತನಿಖೆ ನಡೆಸುತ್ತಿದೆ.

ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಮತ್ತು ಸಂದೀಪ್ ಮೆಹ್ತಾ ಅವರು ಇರುವ ಪೀಠವು ಜಾಮೀನು ಮಂಜೂರು ಮಾಡಿದೆ. 'ತನಿಖೆ ಇನ್ನೂ ಪ್ರಗತಿಯಲ್ಲಿ ಇದೆ, ಜೇಮ್ಸ್ ಅವರು ಆರು ವರ್ಷಗಳಿಂದ ಜೈಲಿನಲ್ಲಿ ಇದ್ದಾರೆ' ಎಂದು ಹೇಳಿದೆ.

ಜೇಮ್ಸ್ ಅವರು ಹಣದ ಅಕ್ರಮ ವರ್ಗಾವಣೆ ಪ್ರಕರಣವೊಂದರಲ್ಲಿ ಆರೋಪಿಯಾಗಿದ್ದು, ಆ ಪ್ರಕರಣದಲ್ಲಿ ಅವರು ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯು ದೆಹಲಿ ಹೈಕೋರ್ಟ್‌ನಲ್ಲಿ ಬಾಕಿ ಇದೆ. ಹೀಗಾಗಿ ಅವರು ತಕ್ಷಣಕ್ಕೆ ಬಿಡುಗಡೆ ಆಗುವುದಿಲ್ಲ.

ನಗರಸಭಾ ಕಾರ್ಯಾಲಯ, ಸಾಗರ – 577401

E-121502:CMCSGR/ADMOEST1/26/2025-26 ದಿನಾಂಕ:13.02.2025

ತಿದ್ದುಪಡಿ ಪ್ರಕಟಣೆ – (ಅಂತಿಮ ತಿಳುವಳಿಕೆ)

ವಿಷಯ:– ಕರ್ತವ್ಯಕ್ಕೆ ಹಾಜರಾಗುವ ಬಗ್ಗೆ

ದಿನಾಂಕ:17.02.2025 ರಂದು ಪ್ರಕಟಗೊಂಡ ಪ್ರಜಾವಣಿ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಅಂತಿಮ ತಿಳುವಳಿಕೆ ಪ್ರಕಟಣೆಯಲ್ಲಿ ನೌಕರರ ಹೆಸರು ಬಿಟ್ಟುಹೋಗಿರುತ್ತದೆ. ಆದ್ದರಿಂದ ಈ ತಿದ್ದುಪಡಿ ಪ್ರಕಟಣೆಯಲ್ಲಿ ತಿಳಿಸಿರುವಂತೆ ನೌಕರರ ಹೆಸರನ್ನು ಶ್ರೀಮತಿ ನರಸಮ್ಮ ಕೋಂ. ದಿ॥ಗಂಗಾಂಜಿನಿ ಎಂದು ಓದಿಕೊಳ್ಳುವಂತೆ ಕೋರಿದೆ.

ಸಹಿ/– ಪೌರಾಯುಕ್ತರು, ನಗರಸಭೆ ಸಾಗರ

ವಾ.ಸಾ.ಸಂ.ಇ/ಶಿಎಸ್ಎಂಎ/ಶಿ/24-25/112/02/1671

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

ಕಾವೇರಿ ಭವನ, 9ನೇ ಮಹಡಿ, ಇ&ಎ ಬ್ಲಾಕ್, ಕೆ.ಜಿ. ರಸ್ತೆ, ಬೆಂಗಳೂರು–560009. ದೂರವಾಣಿ: 080–23118888

No. RGRHCL/CMPPCSP/04/2024 ದಿನಾಂಕ: 18-02-2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ -4ನೇ ಕರೆ

ದ್ವಿ–ಲಕೋಟೆ ಟೆಂಡರ್ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ರಾಜೀವ್ ಗಾಂಧಿ ವಸತಿ ನಿಗಮದ **ಕಛೇರಿಯ ಉಪಯೋಗಕ್ಕಾಗಿ ಕಂಪ್ಯೂಟರ್/ ಲ್ಯಾಪ್‌ಟಾಪ್‌ಗಳ ಸರಬರಾಜು ಮತ್ತು ಅಳವಡಿಕೆಗಾಗಿ** ಹೆಸರಾಂತ ಮೂಲ ತಯಾರಕರು (OEM) ಅಥವಾ ಅಧಿಕೃತ ಡೀಲರ್ (AUD) / OEM ನ ವಿತರಕರಿಂದ ದ್ವಿ–ಲಕೋಟೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **https://kppp.karnataka.gov.in** ನಿಂದ ದಿನಾಂಕ: **18.02.2025** ರಿಂದ ಡೌನ್‌ಲೋಡ್ ಮಾಡಬಹುದು. **ರೂ.60,000/– ಗಳ** ಭದ್ರತಾ ಠೇವಣಿಯೊಂದಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **27.02.2025 ರಂದು ಸಂಜೆ 4.00 ರವರೆಗೆ.** ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ನಿಂದ ಮಾಹಿತಿ ಪಡೆಯಬಹುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಕಾರ್ಯಕ್ರಮ ಅನುಷ್ಠಾನ) ರಾಜೀವ್ ಗಾಂಧಿ ವಸತಿ ನಿಗಮ ನಿ.,

DIPR/CP/YC/5145/2024-25

ಸಾರಿಗೆ ಇಲಾಖೆ

ಸಾರಿಗೆ ಆಯುಕ್ತರ ಕಛೇರಿ, ಕರ್ನಾಟಕ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಬಿಎಂಟಿಸಿ ಸಂಕೀರ್ಣ, ಶಾಂತಿನಗರ, ಬೆಂಗಳೂರು.

ಸಂ: ಸಾಆ/ಪೀಕ–3/ಪಿಆರ್–44/2024–25 ದಿನಾಂಕ: 15.02.2025

ಇ–ಟೆಂಡರ್ ಪ್ರಕಟಣೆ

ವಿಜಯಪುರದಲ್ಲಿರುವ ಗಣಕೀಕೃತ ಚಾಲನಾ ಪರೀಕ್ಷಾ ಪಥದ ಕಾರ್ಯಾಚರಣೆ ಮತ್ತು ನಿರ್ವಹಣೆ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್ ವಿವರಗಳನ್ನು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ kppp.karnataka.gov.in ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯ ದೂರವಾಣಿ ಸಂಖ್ಯೆ: +91–8046010000/+91–8068948777 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **20–03–2025 ರ ಅಪರಾಹ್ನ 5.00 ಗಂಟೆ ಆಗಿರುತ್ತದೆ.** ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: 080–22235176 ಯನ್ನು ಸಂಪರ್ಕಿಸಬಹುದು.

Tender No. TD/2024-25/SE0071.

ಸಹಿ/– ಸಾರಿಗೆ ಆಯುಕ್ತರ ಪರವಾಗಿ, ಬೆಂಗಳೂರು

ವಾಸಾಸಂಇ/ವಾ.ಪ್ರ/5152/ಎಂಎಎ/24–25

ಕರ್ನಾಟಕ ಸರ್ಕಾರ

ಕರ್ನಾಟಕ ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಕರ್ನಾಟಕ ರವರ ಕಛೇರಿ ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ದೂ: 080–23346551

ಸಂಖ್ಯೆ: KFD/HOFF/B10(TND)/1/2025-ICT-KFD ದಿನಾಂಕ: 18.02.2025

ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಇಲಾಖೆಯ **ಕೇಂದ್ರ ಕಛೇರಿಯಾದ ಅರಣ್ಯ ಭವನದಲ್ಲಿರುವ ವಿವಿಧ ಕಛೇರಿಗಳಲ್ಲಿ / ಶಾಖೆಗಳಲ್ಲಿ / ಘಟಕಗಳಲ್ಲಿ ಇರುವ ಪ್ರಿಂಟರ್ಸ್/ ಕಾಪಿಯರ್ಸ್/ ಮಲ್ಟಿ ಫಂಕ್ಷನ್ ಪ್ರಿಂಟರ್ ಮುಂತಾದವುಗಳಿಗೆ ಅವಶ್ಯವಿರುವ ಟೋನರ್/ಕಾಟ್ರಿಡ್ಜ್/ ಡ್ರಮ್ ಕಿಟ್ ಮತ್ತು ಇತರೆ ಕಂಸ್ಯೂಮಬಲ್ಸ್ ಗಳನ್ನು ಸರಬರಾಜು ಮಾಡಲು** "ಇ–ಟೆಂಡರ್" ಅಧಿಸೂಚನೆ ಸಂಖ್ಯೆ: KFD/2024-25/IND0208 ರಲ್ಲಿ ದಿನಾಂಕ: 18–02–2025 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದ್ದು, ಆಸಕ್ತರಿಂದ ಬಿಡ್ಡುಗಳನ್ನು ಆಹ್ವಾನಿಸಲಾಗಿದೆ.

ಸದರಿ ಪೋರ್ಟಲ್‌ನ ವೆಬ್‌ಸೈಟ್ ಮುಖಾಂತರ ದಿನಾಂಕ: **18–02–2025 ರಿಂದ** ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **18–03–2025ರ ಸಂಜೆ 5.30 ಗಂಟೆಯವರೆಗೆ** ಅವಕಾಶವಿರುತ್ತದೆ. ತಾಂತ್ರಿಕ ಬಿಡ್ಡನ್ನು **20–03–2025ರ ಬೆಳಿಗ್ಗೆ 11.30 ಗಂಟೆಗೆ** ಈ ಕಛೇರಿಯಲ್ಲಿ ತೆರೆಯಲಾಗುವುದು ಮತ್ತು ಆರ್ಥಿಕ ಬಿಡ್ಡನ್ನು ದಿನಾಂಕ: **21.03.2025, ಬೆಳಿಗ್ಗೆ 11.30 ಗಂಟೆಗೆ** ಅಥವಾ ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನ ಪೂರ್ಣಗೊಂಡ ನಂತರ ತೆರೆಯಲಾಗುವುದು. ಟೆಂಡರ್ ಅಧಿಸೂಚನೆಯ ಪೂರ್ಣ ಮಾಹಿತಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in**ನಲ್ಲಿ ಪಡೆಯಬಹುದಾಗಿದೆ.

ಸಹಿ/– ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ)

DIPR/CP/YC/5149/2024-25

ಪುರಸಭಾ ಕಾರ್ಯಾಲಯ, ಹೊಳಲ್ಕೆರೆ–577526

ಚಿತ್ರದುರ್ಗ ಜಿಲ್ಲೆ, ಕರ್ನಾಟಕ ರಾಜ್ಯ, ಹೊಳಲ್ಕೆರೆ–577526
ದೂ. 08191–275151/275102, ಇ–ಮೇಲ್: tpholalkere@yahoo.com.

ಕ್ರಮಾಂಕ : ತಾ.ಶಾ/ಸಿಆರ್– 26/2024–25/08 ದಿನಾಂಕ: 15.02.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ–2000 ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಹೊಳಲ್ಕೆರೆ ಪಟ್ಟಣದ ವ್ಯಾಪ್ತಿಯಲ್ಲಿ ನೀರು ಸರಬರಾಜು ನಿರ್ವಹಣೆಗಾಗಿ ಮತ್ತು ಬೀದಿ ದೀಪಗಳ ಅಳವಡಿಕೆಗಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರಿಂದ/ಏಜೆನ್ಸಿಯವರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಬಿಡ್‌ದಾರರು ತಮ್ಮ ಟೆಂಡರ್ ಪ್ರಸ್ತಾವನೆಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ಮುಖಾಂತರ ಮುಖ್ಯಾಧಿಕಾರಿ, ಪುರಸಭೆ, ಹೊಳಲ್ಕೆರೆ ಇವರಿಗೆ ಸಲ್ಲಿಸಬಹುದಾಗಿರುತ್ತದೆ.

1) ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 01.03.2025 ಸಂಜೆ 05.00 ರವರೆಗೆ 2) ಟೆಂಡರ್‌ನ್ನು ತೆರೆಯುವ ದಿನಾಂಕ 03.03.2025 ಬೆಳಿಗ್ಗೆ 11.00 ರ ನಂತರ 3) ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ ನಿಯಮಾನುಸಾರ

ಕಾಮಗಾರಿಯ ಹೆಸರು:– (1) 2025–26ನೇ ಸಾಲಿಗೆ ಹೊಳಲ್ಕೆರೆ ಪುರಸಭೆಯ ವ್ಯಾಪ್ತಿಯಲ್ಲಿರುವ ಕೊಳವೆಬಾವಿಗಳಲ್ಲಿರುವ ಸಬ್–ಮರ್ಸಿಬಲ್ ಮೋಟಾರು ಪಂಪುಗಳ ಹಾಗೂ ಕೈ–ಪಂಪುಗಳ ವಾರ್ಷಿಕ ನಿರ್ವಹಣೆ. DMA/2023-24/WS/WORK_INDENT402/CALL-3 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):– 15.00 ಮುಂಗಡ ಠೇವಣಿ (ರೂ. ಗಳಲ್ಲಿ):– 37500.00

(2) 2025–26ನೇ ಸಾಲಿಗೆ ಹೊಳಲ್ಕೆರೆ ಪುರಸಭೆಯ ವ್ಯಾಪ್ತಿಯಲ್ಲಿ ನೀರು ಸರಬರಾಜು ವಾರ್ಷಿಕ ನಿರ್ವಹಣೆಗಾಗಿ ಬೇಕಾಗುವ ಸಾಮಾಗ್ರಿಗಳ ಖರೀದಿ. DMA/2023-24/IND0044/CALL-3 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):– 29.80 ಮುಂಗಡ ಠೇವಣಿ (ರೂ. ಗಳಲ್ಲಿ):– 75000.00

(3) ಹೊಳಲ್ಕೆರೆ ಪುರಸಭೆಯ ವ್ಯಾಪ್ತಿಯಲ್ಲಿರುವ ಬೀದಿ ದೀಪಗಳ ನಿರ್ವಹಣೆಗಾಗಿ ಹೊಸದಾಗಿ ಬೀದಿ ದೀಪಗಳನ್ನು ಖರೀದಿಸುವುದು. DMA/2024-25/EL/WORK_INDENT35589 ಅಂದಾಜು ಮೊತ್ತ:– (ರೂ. ಲಕ್ಷಗಳಲ್ಲಿ):–10.00 ಮುಂಗಡ ಠೇವಣಿ (ರೂ. ಗಳಲ್ಲಿ):– 25000.00

ಹೆಚ್ಚಿನ ವಿವರಗಳಿಗಾಗಿ ಹಾಗೂ ಷರತ್ತುಗಳಿಗಾಗಿ ಪುರಸಭೆ ಹೊಳಲ್ಕೆರೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥವಾ ಪುರಸಭೆ ಹೊಳಲ್ಕೆರೆಯ ಅಂತರ್ಜಾಲ ತಾಣ www.holalkeretown.mrc.gov.in ನಲ್ಲಿ Tender Notification ವಿಭಾಗದಲ್ಲಿ ಪಡೆಯಬಹುದಾಗಿದೆ.

DIPR/CTA/KSMCA/605-A/2024-25 ಸಹಿ/–ಮುಖ್ಯಾಧಿಕಾರಿಗಳು, ಪುರಸಭೆ, ಹೊಳಲ್ಕೆರೆ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ – ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸಮಂ/ತಾ.ಶಾ./ಸ.ಇ./ಟೆಂಡರ್–20/2025/468 ದಿ:17.02.2025

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದ ಉಡುಪಿ ಜಿಲ್ಲೆಗೆ ಸಂಬಂಧಿಸಿದ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಅರ್ಹ ಗುತ್ತಿಗೆದಾರರಿಂದ ದಿ: **27.02.2025ರ ಸಂಜೆ 4.00 ಗಂಟೆಯವರೆಗೆ** ಸ್ವೀಕರಿಸಲಾಗುವುದು. **ಟೆಂಡರ್‌ನ್ನು ಜಿ.ಎಸ್.ಟಿ. ಹೊರತುಪಡಿಸಿ ಆಹ್ವಾನಿಸಲಾಗಿದ್ದು, ಟೆಂಡರ್‌ದಾರರು ಜಿ.ಎಸ್.ಟಿ.ಯನ್ನು ಹೊರತುಪಡಿಸಿ ದರಗಳನ್ನು ನಮೂದಿಸತಕ್ಕದ್ದು.** ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (**ದೂರವಾಣಿ ಸಂ: 0824–2440720**)

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR/ADM/KSMCA/1421/24-25 dt.18.02.25

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆವಿಕಂ **ವಿಚಾರಣಾ ಸಂಖ್ಯೆ: ಅಇಂವಿ/ಆರ್‌ಎಂಜಿಸಿ/ಕಾನಿಇಂ(ಕ)/ಸಇಂ/24-25/ವಿ.ಸಂ. 301/ದಿನಾಂಕ: 20.02.2025** ರ ಅನ್ವಯ ರಾಮನಗರ ವೃತ್ತದ ವ್ಯಾಪ್ತಿಯ ವಿವಿಧ ಉಗ್ರಾಣಗಳು, ಉಪ–ವಿಭಾಗಗಳು, ವಿಭಾಗ ವೃತ್ತ ಕಛೇರಿಗಳಿಗೆ 51 ಸಂಖ್ಯೆಯ ಭದ್ರತಾ ಸಿಬ್ಬಂದಿಗಳನ್ನು (ಗನ್ ರಹಿತ) ಒಂದು ವರ್ಷದ ಅವಧಿಗೆ ಒದಗಿಸಲು ಕೆಪಿಪಿ ಪೋರ್ಟಲ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್‌ಗಿಟ್ಟ ಮೊತ್ತ: **ರೂ.147.57 ಲಕ್ಷಗಳು.**

ಬಿಡ್ ದಸ್ತಾವೇಜುಗಳು ದಿನಾಂಕ **20.02.2025** ರಿಂದ ಲಭ್ಯವಿರುತ್ತದೆ. ಬಿಡ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **06.03.2025, 16.00 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10.03.2025, 16.00 ಗಂಟೆಗೆ** ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ **ನಂತರ ತಿಳಿಸಲಾಗುವುದು.**

ಟೆಂಡರ್‌ನಲ್ಲಿ ಭಾಗವಹಿಸುವುದು ಕುರಿತಾದ ವಿವರಗಳನ್ನು ಕೆಪಿಪಿ ಪೋರ್ಟಲ್ ಮೂಲಕ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **06.03.2025** ರಂದು ಅಥವಾ ನಂತರ ಪಡೆದುಕೊಳ್ಳಬಹುದು. ಆಸಕ್ತ ಬಿಡ್ಡುದಾರರು ಕೆಪಿಪಿ ಪೋರ್ಟಲ್ ನಲ್ಲಿ ನೋಂದಾಯಿಸಿಕೊಳ್ಳತಕ್ಕದು.

ಟೆಂಡರ್ ವೆಚ್ಚ, ಇಎಂಡಿ ಇತ್ಯಾದಿ ಎಲ್ಲಾ ಪಾವತಿಗಳನ್ನು ಇ–ಪಾವತಿ ಮೂಲಕ ಮಾಡಲಾಗುತ್ತದೆ. ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ: **91-8046010000, 91-8068948777** ಸಹಾಯವಾಣಿಯನ್ನು ಸಂಪರ್ಕಿಸಿ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/– ಅಧೀಕ್ಷಕ ಇಂಜಿನಿಯರ್ (ವಿದ್ಯುತ್), ಆರ್‌ಎಂಜಿಸಿ, ಕೆಂಗೇರಿ, ಬೆವಿಕಂ.

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ

ನಂ. 17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು–560004.
ದೂ: 080–26610610 ಇಮೇಲ್: adca-act-ka@nic.in

ಸಂಖ್ಯೆ: ಲೆಕ್ಕ/ಎಸ್‌ಟಿಎನ್/ಹೊರಗುತ್ತಿಗೆ/56/2024–25 ದಿನಾಂಕ: 18.02.2025

ಇ–ಟೆಂಡರ್ ಪ್ರಕಟಣೆ

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಲ್ಲಿ **ಖಾಲಿ ಇರುವ ವಿವಿಧ ವೃಂದದಲ್ಲಿ ಮಾನವ ಸಂಪನ್ಮೂಲಗಳಿಂದ ಸಿಬ್ಬಂದಿ ಸೇವೆಯನ್ನು** ಬಾಹ್ಯಮೂಲಗಳಿಂದ ಅರ್ಹ ಏಜೆನ್ಸಿ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ಇ–ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

(1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡುವ ದಿನಾಂಕ: **18.02.2025 ರಿಂದ.** (2) ಪೂರ್ವ ಬಿಡ್ ಸಭೆಯ ದಿನಾಂಕ: **27.02.2025, ಬೆಳಿಗ್ಗೆ 11.00 ಗಂಟೆಗೆ.** (3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **19.03.2025ರ ಸಂಜೆ 4.00 ಗಂಟೆವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **21.03.2025, ಬೆಳಿಗ್ಗೆ 11.30 ಗಂಟೆಗೆ.** (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **26.03.2025, ಬೆಳಿಗ್ಗೆ 11.30 ಗಂಟೆಗೆ.**

ಸರಬರಾಜುದಾರರು ಎಲ್ಲಾ ಮೂಲ ದಾಖಲಾತಿಗಳನ್ನು ತಾಂತ್ರಿಕ ಬಿಡ್ ತೆರೆಯುವ ಸಮಯದಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೇಲೆ ತಿಳಿಸಿರುವ ವಿಳಾಸದಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸುವುದು ಹಾಗೂ ವೆಬ್‌ಸೈಟ್ : **https://sahakaradarpana.karnataka.gov.in** ನಲ್ಲಿ ಮಾಹಿತಿ ಪಡೆಯುವುದು. ಅರ್ಜಿಗಳನ್ನು **https://kppp.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿ ಪಡೆದುಕೊಳ್ಳುವುದು.

ಸಹಿ/– ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು (ಆಡಳಿತ ಮತ್ತು ಸಿಬ್ಬಂದಿ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ

DIPR/CP/YC/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ–591304, ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2024–25/3848 ದಿನಾಂಕ:15.02.2025

ಟೆಂಡರ್ ಅಧಿಸೂಚನೆ

(ಕೆ.ಪಿ.ಪಿ. ಪ್ರೋಟಲ್–ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲೂಡಿ ಕ್ಲಾಸ್–2 ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kpp-portal.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ ರೂ. 418.46 ಲಕ್ಷ ರೂ. 419.16ಲಕ್ಷ

1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:19.02.2025 ರ 10.30 ಬೆಳಿಗ್ಗೆ ರಿಂದ 01–03–2025 ರ ಸಾಯಂಕಾಲ 4.00 ಗಂಟೆ ವರೆಗೆ, 2:ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ:28–02–2025 ರ ಸಾಯಂಕಾಲ 4.00 ವರೆಗೆ, 3:ಪ್ರಿ ಬಿಡ್ ಮಿಟಿಂಗ್ ದಿನಾಂಕ:(ಕಾನಿ.ಇಂ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ):27–02–2025 ರ 11.00 ಬೆಳಿಗ್ಗೆ, 4:ಪೂರ್ಣವಾಗಿ ತುಂಬಿದ ಇ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 19.02.2025 ರ 10.30 ಬೆಳಿಗ್ಗೆ ರಿಂದ 01–03–2025 ರ ಸಾಯಂಕಾಲ 4.00 ಗಂಟೆ ವರೆಗೆ, 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ):04–03–2025 ರ ಬೆಳಿಗ್ಗೆ 11.00 ಗಂಟೆಗೆ, 6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:07–03–2025 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೋದನೆ ನಂತರ), 7:ಗುತ್ತಿಗೆದಾರರು ಮೂಲ ದಾಖಲೆಗಳನ್ನು ಇ.ಇ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ ಕಚೇರಿಯಲ್ಲಿ ಹಾಜರಪಡಿಸುವ ದಿನಾಂಕ:05–03–2025 ಬೆಳ್ಳಿಗ್ಗೆ 11.00 ಗಂಟೆಗೆ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp.karnataka. gov.in/kpp-portal/index. seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ ಎಚ್.ಬಿ.ಸಿ ವಿಭಾಗ, ಅಥಣಿ

DIPR/BGM/RO-NO-1710/KSMCA/2024-25

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080-22265383. Website: www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಎನ್‌ಟಿಡಿ–ಡಿಪಿಆರ್–03/1777/2024–25 ದಿನಾಂಕ:18.02.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ವಿವರವಾದ ಯೋಜನಾ ವರದಿ (ಡಿಪಿಆರ್)
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಆರ್ಥಿಕ ವಿಶ್ಲೇಷಣೆ, ಸಮೀಕ್ಷೆ, ಯೋಜನಾ ವಿನ್ಯಾಸ, ಸಮಾಲೋಚನೆ ಸೇವೆಗಳೊಂದಿಗೆ ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಸಲು ಬೆಂಗಳೂರಿನಲ್ಲಿ ಕಛೇರಿ ಹೊಂದಿರುವ ಹಾಗೂ ಇದೇ ರೀತಿಯ ಕೆಲಸದ ಅನುಭವ ಹೊಂದಿರುವ ಅರ್ಹ ಸಲಹೆಗಾರರು/ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ರಾಯಚೂರು ಜಿಲ್ಲೆಯ ರಾಯಚೂರು ತಾಲೂಕಿನ ಕೃಷ್ಣಾ ನದಿಯಿಂದ ರಾಯಚೂರು ಗ್ರೌತ್ ಏರಿಯಾ, ದೇವಸೂಗೂರು 2ನೇ ಹಂತದ ವಸತಿ ಬಡಾವಣೆ, ಯರಮಾರಸ್ ಹಾಗೂ ರಾಯಚೂರು ಕೈಗಾರಿಕಾ ಪ್ರದೇಶಕ್ಕೆ 31 ಎಂಎಲ್‌ಡಿ ಎಕ್ಸ್‌ಟರ್ನಲ್ ನೀರು ಸರಬರಾಜು ಯೋಜನೆಯ ಅನುಷ್ಠಾನಕ್ಕೆ ಮತ್ತು ಕಲಬುರಗಿ ಜಿಲ್ಲೆಯ ಭೀಮಾ ನದಿಯಿಂದ ನಂದೂರು ಕೈಗಾರಿಕಾ ಪ್ರದೇಶದ 1ನೇ ಹಂತ, 2ನೇ ಹಂತ, 3ನೇ ಹಂತದ ಪ್ರದೇಶ, ಕಪ್ನೂರ್ ಕೈಗಾರಿಕಾ ಪ್ರದೇಶ 1ನೇ ಹಂತ, 2ನೇ ಹಂತ ಮತ್ತು 3ನೇ ಹಂತದ ಪ್ರದೇಶಕ್ಕೆ 20 ಎಂಎಲ್‌ಡಿ ಎಕ್ಸ್‌ಟರ್ನಲ್ ನೀರು ಸರಬರಾಜು ಯೋಜನೆಯ ಅನುಷ್ಠಾನ ಕಾಮಗಾರಿಗೆ ವಿವರವಾದ ಯೋಜನಾ ವರದಿಯನ್ನು ಒದಗಿಸುವುದು **(2ನೇ ಕರೆ).**

ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **27.02.2025ರ ಸಂಜೆ 4.00 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಮುಖ್ಯ ಅಭಿಯಂತರರು–2

ವಾಸಾಸಂಇ/ವಾಪ್ರ/ಜಿಎ/5144/2024–25

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,

ಕಾರ್ಯದರ್ಶಿಗಳ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು–570010
ದೂರವಾಣಿ ಸಂಖ್ಯೆ :0821–2590027 ಇ–ಮೇಲ್: eochamunditemple@gmail.com

ಪತ್ರ ಸಂಖ್ಯೆ:ಎಸ್‌ಸಿಟಿ(5)ಸಿಆರ್:/2024–25 ದಿನಾಂಕ:14.02.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ದ್ವಿ ಲಕೋಟೆ)

ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕಛೇರಿಯಿಂದ ಸೂಚಿತ ಅವಧಿಗೆ ಈ ಕೆಳಕಂಡ ವಿವಿಧ ಬಾಬ್ತುಗಳಿಗೆ ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್ ನಮೂನೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ (https://kppp.karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್‌ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria)ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರು ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಕ್ರ. ಸಂ.	ಟೆಂಡರ್ ಹೆಸರು	ಅಂದಾಜು ಮೊತ್ತ (ರೂಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ಲಾಡು ಪ್ರಸಾದ, ತಯಾರಿಸಿ ಪ್ಯಾಕ್ ಮಾಡಿಕೊಡಲು ಒಂದು ಲಾಡು ಪ್ರಸಾದ ತಯಾರಿಕೆಗೆ ಮಜೂರಿಯ ಗುತ್ತಿಗೆ (ಒಂದು ವರ್ಷದಅವಧಿಗೆ)	50,00,000	1,00,000–00
2	ಲಾಡು ಪ್ರಸಾದ ಪ್ಯಾಕ್ ಮಾಡಲು ಆಯಿಲ್ ಪ್ರೂಫ್ ಪೇಪರ್ ಕವರ್‌ಗಳನ್ನು ಸರಬರಾಜು ಮಾಡುವ ಗುತ್ತಿಗೆ (ಒಂದು ವರ್ಷದ ಅವಧಿಗೆ)	20,00,000	40,000–00

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವುದು: 14.02.2025ರ ಸಂಜೆ 5.00 ಗಂಟೆಯ ನಂತರ. **2)** ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ: 01.03.2025ರ ಸಂಜೆ 5.00 ಗಂಟೆ ವರೆಗೆ. **2)** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿ: 03.03.2025ರ ಬೆಳಿಗ್ಗೆ 11.00 ಗಂಟೆ ನಂತರ. **3)** ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿ: 07.03.2025 ರ ಬೆಳಿಗ್ಗೆ 11.00 ಗಂಟೆ ನಂತರ.

ಸಹಿ/– ಕಾರ್ಯದರ್ಶಿ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಚಾಮುಂಡಿಬೆಟ್ಟ

DIPR/DDMYS/13/KSMCA/939/2024-25

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ

(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ ಸಂಖ್ಯೆ: 08472–278604, ಇಮೇಲ್ ವಿಳಾಸ: ka.kalaburagi.dudc@gmail.com

ಸಂ:ಜಿನಕೋ/ಅಮೃತ ನಗರೋತ್ಥಾನ(ಮುನಿಸಿಪಾಲಿಟಿ)–4/ಶಹಾಬಾದ/78/2022–23 ದಿ:17.02.2025

:: ಟೆಂಡರ್ ಅಧಿಸೂಚನೆ ::

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ ಜಿಲ್ಲೆ, ಕಲಬುರಗಿರವರು **ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4)**ಯಡಿ ತೆಗೆದುಕೊಂಡ ಈ ಕೆಳಕಂಡ ವಿವಿಧ ಕಾಮಗಾರಿಗಳ ಸಮರ್ಪಕ ಅನುಷ್ಠಾನಕ್ಕಾಗಿ ಕೆ.ಟಿ.ಪಿ.ಪಿ. ಕಾಯ್ದೆ 1999 ನಿಯಮ 2000ರನ್ವಯ ಕೆ.ಪಿ.ಪಿ ಪೋರ್ಟಲ್ ಮುಖಾಂತರ 2 ಕವರ್ ಸಿಸ್ಟಮ್ ಕೆ.ಡಬ್ಲ್ಯೂ–4ರ ದಾಖಲಾತಿಯಂತೆ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಪ್ರಥಮ ದರ್ಜೆ ಗುತ್ತಿಗೆದಾರರು ಭಾಗವಹಿಸಬಹುದಾಗಿದ್ದು, ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ : ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನದಡಿ ಕಲಬುರಗಿ ಜಿಲ್ಲೆಯ ಶಹಬಾದ ಪಟ್ಟಣ ವ್ಯಾಪ್ತಿಯಲ್ಲಿ ನಗರಸಭೆ ಕಛೇರಿ ಮತ್ತು ಡಾ. ಬಿ.ಆರ್ ಅಂಬೇಡ್ಕರ್ ಸಮುದಾಯ ಭವನ ಭೋವಿ, ಮಾದಿಗ ಮತ್ತು ಲಂಬಾಣಿ ಸಮಾಜ, ಕೊರವ ಮತ್ತು ಪರಿಶಿಷ್ಟ ಜಾತಿ ಸಮುದಾಯದ ಸ್ಮಶಾನ, ಸಾರ್ವಜನಿಕ ಶೌಚಾಲಯ, ಹೈಟೆಕ್ ಗಾರ್ಡನ್ ಬಂಜಾರಾ ಸಮಾಜ ಕುಡಿಯುವ ನೀರಿನ ಘಟಕ ಹಾಗೂ ಬೀದಿದೀಪ ಅಳವಡಿಸುವ ಕಾಮಗಾರಿಗಳು **TENDER NO:- DMA/2024-25/ OW/ WORK_INDENT 26512/CALL-2,** 2) ನಿಗದಿಪಡಿಸಿದ ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ) : **597.22,** 3) ಇ.ಎಂ.ಡಿ. ಮೊತ್ತ (ರೂ.ಲಕ್ಷಗಳಲ್ಲಿ) : **8.96,** 4) ಗುತ್ತೇದಾರರ ದರ್ಜೆ : Eligible PWD Contractor, 5) ಕಾಲಾವಕಾಶ : ಕಾರ್ಯಾದೇಶ ನೀಡಿದ ನಂತರದ 12 ತಿಂಗಳು.

ಗುತ್ತಿಗೆದಾರರು ಸದರಿ ಕಾಮಗಾರಿಯ ಕುರಿತು ಸಮಗ್ರ ಮಾಹಿತಿಯನ್ನು ದಿನಾಂಕ: **17.02.2025** ರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ಅಧಿಕೃತ ಅಂತರ್ಜಾಲ ತಾಣ **https://kppp.karnataka.gov.in/** ರ ಮುಖಾಂತರ ಪಡೆದುಕೊಂಡು ಇ.ಎಂ.ಡಿ. ಮತ್ತು ಟೆಂಡರ್‌ಗಾಗಿ ತಗಲುವ ವೆಚ್ಚವನ್ನು ಸಹ ವಿದ್ಯುನ್ಮಾನ ರೀತಿಯಲ್ಲಿ ಭರಿಸತಕ್ಕದ್ದು, ಟೆಂಡರ್‌ಗಾಗಿ ನಿಗಧಿಪಡಿಸಲಾದ ದಿನಾಂಕಗಳ ವಿವರ ಕೆಳಗಿನಂತಿದೆ.

1) Pree Bid Meeting: **28.02.2025 at 11.30 AM**, 2) Last date & Time for Tender Queries/ Clarifications: **18.03.2025 upto 5.30 PM**, 3) Last Date of bid Submission: **20.03.2025 upto 5.30 PM**, 4) Date of Opening of Tenders (Technical Bids): **24.03.2025 at 11.00 AM**, 5) Date of Opening of Financial Bids: **29.03.2025 at 11.00 AM**

ಈ ಮೇಲ್ಕಂಡ ನಿಗಧಿತ ದಿನಾಂಕದಲ್ಲಿ ವ್ಯತ್ಯಾಸವಾದಲ್ಲಿ ಅದು ಕೇವಲ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು. ಯಾವುದೇ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/977/ಕೆ.ಎಸ್.ಎಂ.ಸಿ.&ಎ/2024–25

ನಿರ್ಮಿತಿ ಕೇಂದ್ರ, ರಾಯಚೂರು

ಕಡಿಮೆ ವೆಚ್ಚದ ಸಾಮಾಗ್ರಿಗಳ ಹಾಗೂ ತಾಂತ್ರಿಕತೆಯ ವರ್ಗಾವಣೆ ಕೇಂದ್ರ
(ಕೇಂದ್ರ ಸರ್ಕಾರ ಹುಡ್ಕೊದ ಅನುದಾನತ್ವದಲ್ಲಿ ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಸಂಸ್ಥೆ)
Sy.No.809(A), Bolmandoddi Road, RAICHUR- 584103,
e-Mail ID:pmnkrcr@gmail.com Project Manager- 7899673580

ಸಂಖ್ಯೆಜಿನಿರಾ/ಸಿಬ್ಬಂದಿ/ನೇಮಕಾತಿ/ /2024–25 ದಿನಾಂಕ: 17–02–2025

ನೇಮಕಾತಿ ಪ್ರಕಟಣೆ

ರಾಯಚೂರು ನಿರ್ಮಿತಿ ಕೇಂದ್ರವು KSR Act 1960 ಅಡಿಯಲ್ಲಿ ನೋಂದಾಯಿತ ಸಂಸ್ಥೆಯಾಗಿರುತ್ತದೆ. ಕಿರಿಯ ಅಭಿಯಂತರರು 03 (Junior Engineers) ಮತ್ತು ಅಕೌಂಟೆಂಟ್ 01 (Accountant) ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಹೊರ ಗುತ್ತಿಗೆ (through outsource) ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕಿರಿಯ ಅಭಿಯಂತರರು (03) (Junior Engineers) , ಮತ್ತು ಅಕೌಂಟೆಂಟ್ (Accountant) 01 ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ನಿಗಧಿತ ಅರ್ಜಿ ನಮೂನೆಯನ್ನು ಜಿಲ್ಲಾಧಿಕಾರಿಗಳ ಕಛೇರಿಯ ಅಧಿಕೃತ website https://raichur.nic.in ರಲ್ಲಿ, ದಿನಾಂಕ 18–02–2025 ರಿಂದ ದಿನಾಂಕ 28–02–2025ರವರೆಗೆ Online ನಲ್ಲಿ Download ಮಾಡಿಕೊಂಡು, ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಸೂಕ್ತ ಎಲ್ಲಾ ದಾಖಲೆಗಳೊಂದಿಗೆ ಸಲ್ಲಿಸಬಹುದು.

01	ಹುದ್ದೆಯ ಹೆಸರು	ಕಿರಿಯ ಅಭಿಯಂತರರು (Junior Engineers)	ಹುದ್ದೆಯ ಸಂಖ್ಯೆ
02	ವಿದ್ಯಾರ್ಹತೆ	B.E (Civil With 3 Year Experience (Minimum)	03
03	ಅನುಭವ	ಕಾಮಗಾರಿ ಅನುಷ್ಠಾನ ಮತ್ತು ನಿರ್ವಹಣೆಯಲ್ಲಿ ಕನಿಷ್ಠ 3 ವರ್ಷಗಳ ಅನುಭವ ಹೊಂದಿರತಕ್ಕದ್ದು.	
04	ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 28–02–2025 ರ ಸಂಜೆ 5.30 ರೊಳಗೆ	
01	ಹುದ್ದೆಯ ಹೆಸರು	ಅಕೌಂಟೆಂಟ್ (Accountant)	ಹುದ್ದೆಯ ಸಂಖ್ಯೆ
02	ವಿದ್ಯಾರ್ಹತೆ	M.Com or MBA (Finance) with 1 Year Experience (Minimum) in Govt. Sector	01
03	ಅನುಭವ	Accounting of Tally (Erp9, Tally Prime). Filling of Income Tax TDS Challans & GST TDS Challans, Expert in MS Office & Excel, ಕನಿಷ್ಠ 1 ವರ್ಷ ಅನುಭವ ಹೊಂದಿರತಕ್ಕದ್ದು	
04	ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 28–02–2025ರ ಸಂಜೆ 5.30 ರೊಳಗೆ	

ಸಹಿ/– ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ, ರಾಯಚೂರು

DIP/RCR/744KSMCA/745/2024-25

ಐಸಿಸಿ ಚಾಂಪಿಯನ್ಸ್ ಟ್ರೋಫಿ 2025

ಫೆಬ್ರುವರಿ 19ರಿಂದ ಮಾರ್ಚ್ 9 (ಪಾಕಿಸ್ತಾನ–ದುಬೈ)

ಚಾಂಪಿಯನ್ಸ್ ಟ್ರೋಫಿ ಇಂದಿನಿಂದ | 29 ವರ್ಷಗಳ ನಂತರ ಪಾಕಿಸ್ತಾನ ನೆಲದಲ್ಲಿ ಐಸಿಸಿ ಟೂರ್ನಿ | ಎಂಟು ತಂಡಗಳು ಭಾಗಿ

ಚಾಂಪಿಯನ್ ಪಾಕ್‌ಗೆ ಕಿವೀಸ್ ಸವಾಲು



ಪಾಕಿಸ್ತಾನ ತಂಡದ ನಾಯಕ ಮೊಹಮ್ಮದ್ ರಿಜ್ವಾನ್ ಬ್ಯಾಟಿಂಗ್ ಅಭ್ಯಾಸ —ಎಎಫ್‌ಪಿ ಚಿತ್ರ

ದುಬೈ/ಕರಾಚಿ (ಪಿಟಿಐ): ಏಕದಿನ ಕ್ರಿಕೆಟ್ ಮಾದರಿಯ ಅಸ್ತಿತ್ವದ ಕುರಿತು ಚರ್ಚೆಗಳು ನಡೆಯುತ್ತಿರುವ ಸಂದರ್ಭ-ದಲ್ಲಿಯೇ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಅಂಕದ ಪರದೆ ಬುಧವಾರ ಮೇಲೇರಲಿದೆ. ಕರಾಚಿಯಲ್ಲಿ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳು ಉದ್ಘಾಟನಾ ಪಂದ್ಯದಲ್ಲಿ ಮುಖಾಮುಖಿ-ಯಾಗಲಿವೆ.

ಏಕದಿನ ಕ್ರಿಕೆಟ್ ಮಾದರಿಯ ಈ ಟೂರ್ನಿಯಲ್ಲಿ ಎಂಟು ತಂಡಗಳು ಸ್ಪರ್ಧಿಸಲಿವೆ. ವಿಶ್ವಕಪ್ ಟೂರ್ನಿಗಿಂತಲೂ ಇಲ್ಲಿ ಚಾಂಪಿಯನ್ ಆಗುವುದು ಕಠಿಣ ಎಂಬ ಮಾತು ಕ್ರಿಕೆಟ್ ವಲಯದಲ್ಲಿದೆ. ಅದೇನೇ ಇರಲಿ; ಆತಿಥೇಯ ಪಾಕಿಸ್ತಾನಕ್ಕೆ ಇದು ಐತಿಹಾಸಿಕ ಟೂರ್ನಿಯಾಗಿದೆ. 1996ರಲ್ಲಿ ಪಾಕಿಸ್ತಾನವು ಐಸಿಸಿ ವಿಶ್ವಕಪ್ ಟೂರ್ನಿಯ ಆತಿಥ್ಯ ವಹಿಸಿತ್ತು. ಅದಾದ ನಂತರ ಈಗಲೇ ಐಸಿಸಿ ಟೂರ್ನಿಯನ್ನು ಆಯೋಜಿಸುತ್ತಿದೆ.

ಈ ಟೂರ್ನಿಯನ್ನು ಆಯೋಜಿಸಲು ಐಸಿಸಿ ಕೂಡ ಹಲವು ಅಡೆತಡೆ-ಗಳನ್ನು ಮೀರಿ ನಿಂತಿದೆ. 2017ರಲ್ಲಿ ಕೊನೆಯ ಬಾರಿ ಚಾಂಪಿಯನ್ಸ್ ಟ್ರೋಫಿ ನಡೆದಿತ್ತು. ನಾಲ್ಕು ವರ್ಷಗಳಿ-ಗೊಮ್ಮೆ ನಡೆಯುವ ಈ ಟೂರ್ನಿಯು ಕೋವಿಡ್‌ನಿಂದಾಗಿ 2021ರಲ್ಲಿ ನಡೆಯಲಿಲ್ಲ. ಅಲ್ಲದೇ ಟಿ20 ಮಾದರಿಯ ಭರಾಟೆ ಮತ್ತು ಟೆಸ್ಟ್ ಕ್ರಿಕೆಟ್ ಉಳಿಸಬೇಕೆಂಬ ಪ್ರಯತ್ನಗಳ ನಡುವೆ ಏಕದಿನ ಮಾದರಿ ಸೊರಗುತ್ತಿದೆ ಎನ್ನಲಾಗಿತ್ತು.


ಭಾರತ ಮತ್ತು ಪಾಕಿಸ್ತಾನ ನಡುವಣ ರಾಜಕೀಯ ಬಿಕ್ಕಟ್ಟು ಕೂಡ ಐಸಿಸಿಯನ್ನು ಕಾಡಿತು. ಭಾರತ ತಂಡವು ಪಾಕಿಸ್ತಾನದ ನೆಲದಲ್ಲಿ ಆಡಲು ಒಪ್ಪದ ಕಾರಣ ಹಲವು ಸುತ್ತಿನ ಮಾತುಕತೆಗಳು ನಡೆದವು. ಅಂತಿಮವಾಗಿ ಟೂರ್ನಿಯನ್ನು ಹೈಬ್ರಿಡ್ ಮಾದರಿಯಲ್ಲಿ ಆಯೋಜಿಸಲು ನಿರ್ಧ-ರಿಸಲಾಯಿತು. ಅದರಿಂದಾಗಿ ಭಾರತ ತಂಡದ ಪಂದ್ಯಗಳನ್ನು ದುಬೈನಲ್ಲಿ ಆಡಿ-ಸಲಾಗುತ್ತಿದೆ.

2017ರ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಪಾಕಿಸ್ತಾನ ತಂಡವು ಭಾರತವನ್ನು ಸೋಲಿಸಿತ್ತು. ಐಸಿಸಿಯ ಟ್ರೋಫಿಗಳಲ್ಲಿ ಭಾರತಕ್ಕೆ ಪಾಕ್ ಎದುರು ಮೊದಲ ಸೋಲಾಗಿತ್ತು. ಅದರ ಸೇಡು ತೀರಿಸಿಕೊಳ್ಳಲು ಭಾರತ ಕೂಡ ತುದಿಗಾಲಿನಲ್ಲಿ ನಿಂತಿದೆ. ಅದರಿಂದಾಗಿಯೇ ಈ ಟೂರ್ನಿಯು ಬಹಳಷ್ಟು ಕುತೂಹಲ ಕೆರಳಿಸಿದೆ.

ಆತಿಥೇಯ ಪಾಕ್ ತನ್ನ ಅಭಿಯಾನವನ್ನು ನ್ಯೂಜಿಲೆಂಡ್ ಎದುರು ಆರಂಭಿಸಲಿದೆ. ಮೊಹಮ್ಮದ್ ರಿಜ್ವಾನ್ ನಾಯಕತ್ವದಲ್ಲಿ ಆತಿಥೇಯರು ಆಡಲಿದ್ದಾರೆ. ಹೋದ ಬಾರಿ ಪಾಕ್ ತಂಡವು ಚಾಂಪಿಯನ್ ಆಗಲು ಕಾರಣರಾಗಿದ್ದ ಫಕರ್ ಜಮಾನ್ ಕೂಡ ತಂಡದಲ್ಲಿದ್ದಾರೆ.

ಅನುಭವಿ ಬಾಬರ್ ಅಜಂ, ಬೌಲರ್ ಶಾಹೀನ್ ಆಫ್ರಿದಿ ಅವರು ತಂಡದ ಶಕ್ತಿ-ಯಾಗಿದ್ದಾರೆ.

ನ್ಯೂಜಿಲೆಂಡ್ ತಂಡವು ಕಳೆದ ಸುಮಾರು 20 ದಿನಗಳಿಂದ ಪಾಕಿ-ಸ್ತಾನದಲ್ಲಿದೆ. ತ್ರಿಕೋನ ಸರಣಿಯಲ್ಲಿ ಆಡಿದೆ. ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ ಕಿವೀಸ್ ಬಳಗವನ್ನು ಮುನ್ನಡೆಸಲಿದ್ದಾರೆ. ಈಚೆಗೆ ಪಾಕ್ ಎದುರಿನ ಪಂದ್ಯವೊಂ-ದರಲ್ಲಿ ರಚಿನ್ ರವೀಂದ್ರ ಅವರ ಹಣೆಗೆ ಚೆಂಡು ಬಡಿದು ಪೆಟ್ಟಾಗಿತ್ತು. ಅವರು ಪೂರ್ಣವಾಗಿ ಚೇತರಿಸಿಕೊಂಡಿದ್ದರೆ ಮಾತ್ರ ಕಣಕ್ಕಿಳಿಯುವರು. ಇಲ್ಲದಿದ್ದರೆ ವಿಲ್ ಯಂಗ್ ಅವರಿಗೆ ಅವಕಾಶ ಸಿಗಲಿದೆ. ಅನುಭವಿ ಕೇನ್ ವಿಲಿಯಮ್ಸನ್, ಡೆವೊನ್ ಕಾನ್ವೆ ಮತ್ತು ಟಾಮ್ ಲೇಥಮ್ ಅವರು ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಮ್ಯಾಟ್ ಹೆನ್ರಿ ಹಾಗೂ ಜೇಕಬ್ ಡಫಿ ಅವರು ತಮ್ಮ ನಾಯಕನೊಂದಿಗೆ ಬೌಲಿಂಗ್ ವಿಭಾಗವನ್ನು ನಿಭಾಯಿಸಲಿದ್ದಾರೆ.



ನ್ಯೂಜಿಲೆಂಡ್ ತಂಡದ ಮಿಚೆಲ್ ಸ್ಯಾಂಟ್ನರ್

ತವರಿಗೆ ಮರಳಿದ ಬೌಲಿಂಗ್ ಕೋಚ್ ಮಾರ್ಕೆಲ್



ದುಬೈ (ಪಿಟಿಐ): ಕುಟುಂಬ ತುರ್ತು ಕಾರಣ ಭಾರತ ತಂಡದ ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಅವರು ತವರು ದಕ್ಷಿಣ ಆಫ್ರಿಕಾಕ್ಕೆ ಮರಳಿದ್ದಾರೆ. ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡುವ ಭಾರತ ತಂಡದ ಜೊತೆಗೆ ಇಲ್ಲಿಗೆ ಬಂದಿದ್ದ ಅವರು ಮೊದಲ ನೆಟ್ ಪ್ರಾಕ್ಟೀಸ್ ವೇಳೆ ತಂಡದ ಜೊತೆಗಿದ್ದರು. 40 ವರ್ಷ ವಯಸ್ಸಿನ ಮಾರ್ಕೆಲ್ ಅವರು ತವರಿಗೆ ಮರಳಿದ ಕಾರಣ ತಂಡದ ಎರಡನೇ ತಾಲೀಮಿನ ವೇಳೆ ಹಾಜರಿರಲಿಲ್ಲ ಎಂದು ತಿಳಿದುಬಂದಿದೆ. ಅವರ ತಂದೆಯ ನಿಧನದ ಕಾರಣ ತವರಿಗೆ ಮರಳಿದ್ದಾರೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಚಾಂಪಿಯನ್ಸ್ ಟ್ರೋಫಿ ಬುಧವಾರ ಆರಂಭವಾಗಲಿದ್ದು, ಆತಿಥೇಯ ಪಾಕಿಸ್ತಾನ ಉದ್ಘಾಟನಾ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. ಭಾರತ ತನ್ನ ಮೊದಲ ಪಂದ್ಯವನ್ನು ಗುರುವಾರ ಬಾಂಗ್ಲಾದೇಶ ವಿರುದ್ಧ ಇಲ್ಲಿ ನಡೆಯಲಿದೆ.

ಜಸ್‌ಪ್ರೀತ್ ಬೂಮ್ರಾ ಬೆನ್ನುನೋವಿನಿಂದ ಈ ಟೂರ್ನಿಯಲ್ಲಿ ಆಡುತ್ತಿಲ್ಲ. ಮಾರ್ಕೆಲ್ ಹಠಾತ್ ತವರಿಗೆ ಮರಳಿರುವುದು ತಂಡಕ್ಕೆ ಹಿನ್ನಡೆಯಾಗಿದೆ.

ವೇಗದ ಬೌಲಿಂಗ್‌ನಲ್ಲಿ ಅರ್ಷದೀಪ್ ಸಿಂಗ್, ಹರ್ಷಿತ್ ರಾಣಾ, ಮೊಹಮ್ಮದ್ ಶಮಿ ಜೊತೆ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ತಂಡಕ್ಕೆ ನಾಲ್ಕನೇ ಆಯ್ಕೆ ಆಗಿದ್ದಾರೆ.

ಪಾಕ್ ಆತಿಥ್ಯ ವಹಿಸಿದ್ದರೂ, ಭಾರತ ತನ್ನೆಲ್ಲಾ ಪಂದ್ಯಗಳನ್ನು ದುಬೈನಲ್ಲಿ ಆಡಲಿದೆ. ಬಹು ನಿರೀಕ್ಷಿತ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯ ಭಾನುವಾರ ದುಬೈನಲ್ಲೇ ನಿಗದಿಯಾಗಿದೆ.

ದುಬೈನಲ್ಲಿ ವಿರಾಟ್ ಕೊಹ್ಲಿ ಮೇನಿಯಾ



ವಿರಾಟ್ ಕೊಹ್ಲಿ

ದುಬೈ (ಪಿಟಿಐ): ಭಾರತದ ಸೂಪರ್‌ಸ್ಟಾರ್ ಕ್ರಿಕೆಟಿಗರನ್ನು ಹತ್ತಿರದಿಂದ ನೋಡಲು ರಹಮಾನ್ ಮತ್ತು ಫಾತಿಮಾ ಅವರು ಒಮನ್‌ನಿಂದ ದುಬೈಗೆ ಬಂದಿದ್ದರು. ಅವರಿಗೆ ನಿರಾಶೆಯಾಗಲಿಲ್ಲ. ಹಲವು ದಿನಗಳ ಅವರ ಕನಸು ಈಡೇರಿತು. 17 ವರ್ಷದ ಫಾತಿಮಾ ಅವರು ಟೀಶರ್ಟ್ ಮೇಲೆ ಶ್ರೇಯಸ್ ಅಯ್ಯರ್ ಅವರ ಹಸ್ತಾಕ್ಷರ ಪಡೆದರು.

ಖ್ಯಾತನಾಮ ಕ್ರಿಕೆಟಿಗರು ಆಡುವುದನ್ನು ನೋಡಲು ಇಲ್ಲಿ ಹೆಚ್ಚು ಅವಕಾಶಗಳು ಸಿಗುವುದಿಲ್ಲ. ಇದೀಗ ಚಾಂಪಿಯನ್ಸ್ ಟ್ರೋಫಿ ಪಂದ್ಯಗಳಲ್ಲಿ ಆಡಲು ಭಾರತ ತಂಡವು ಇಲ್ಲಿ ಬಂದಿರುವುದರಿಂದ ಅಭಿಮಾನಿಗಳು ಪುಳಕಗೊಂಡಿದ್ದಾರೆ.

ಐಸಿಸಿ ಕ್ರಿಕೆಟ್ ಅಕಾಡೆಮಿ ಕ್ರೀಡಾಂಗಣಕ್ಕೆ ಭಾರತ, ನೇಪಾಳ, ಪಾಕಿಸ್ತಾನ, ಬಾಂಗ್ಲಾದೇಶ ಸೇರಿದಂತೆ ಬೇರೆ ಬೇರೆ ಕಡೆಯ ಅಭಿಮಾನಿಗಳು ಇಲ್ಲಿ ಬಂದು ಸೇರುತ್ತಿದ್ದಾರೆ.

ಸೋಮವಾರ ಸಂಜೆ ನಡೆದ ನೆಟ್ಸ್‌ನಲ್ಲಿ ಭಾರತದ ಆಟಗಾರರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವಿರಾಟ್ ಕೊಹ್ಲಿ ಅವರನ್ನು ನೋಡಲು ಜನರು ಮುಗಿಬಿದ್ದರು. 'ಶ್ರೇಯಸ್ ಹಸ್ತಾಕ್ಷರ ನೀಡಿದರು. ವಿರಾಟ್ ಕೊಹ್ಲಿ ಅವರನ್ನು ತುಂಬಾ ಹತ್ತಿರದಿಂದ ನೋಡುವ ಅವಕಾಶ ದೊರೆಯಿತು. ಆಟಗಾರರೊಂದಿಗೆ ಮಾತನಾಡಲು ಅವಕಾಶ ಕೊಟ್ಟ ಐಸಿಸಿಗೆ ಧನ್ಯವಾದಗಳು' ಎಂದು ಫಾತಿಮಾ ಸಂತಸ ವ್ಯಕ್ತಪಡಿಸಿದ್ದಾರೆ.

ಐಸಿಸಿ ಚಾಂಪಿಯನ್ಸ್ ಟ್ರೋಫಿ: ಭಾರತದ ಸಾಧನೆ

ವರ್ಷ	ಆತಿಥ್ಯ	ಒಟ್ಟು ತಂಡ	ವಿಜೇತರು	ರನ್ನರ್ ಅಪ್	ಭಾರತದ ಸಾಧನೆ
1998	ಬಾಂಗ್ಲಾದೇಶ	9	ದಕ್ಷಿಣ ಆಫ್ರಿಕಾ	ವೆಸ್ಟ್ ಇಂಡೀಸ್	ಸೆಮಿಫೈನಲ್
2000	ಕೆನ್ಯಾ	11	ನ್ಯೂಜಿಲೆಂಡ್	ಭಾರತ	ರನ್ನರ್ ಅಪ್
2002	ಶ್ರೀಲಂಕಾ	12	ಭಾರತ ಮತ್ತು ಶ್ರೀಲಂಕಾಗಳಿಗೆ ಜಂಟಿ ಪ್ರಶಸ್ತಿ		ಚಾಂಪಿಯನ್
2004	ಇಂಗ್ಲೆಂಡ್	12	ವೆಸ್ಟ್ ಇಂಡೀಸ್	ಇಂಗ್ಲೆಂಡ್	ಗುಂಪು ಹಂತ
2006	ಭಾರತ	10	ಆಸ್ಟ್ರೇಲಿಯಾ	ವೆಸ್ಟ್ ಇಂಡೀಸ್	ಗುಂಪು ಹಂತ
2009	ದ.ಆಫ್ರಿಕಾ	8	ಆಸ್ಟ್ರೇಲಿಯಾ	ನ್ಯೂಜಿಲೆಂಡ್	ಗುಂಪು ಹಂತ
2013	ಇಂಗ್ಲೆಂಡ್	8	ಭಾರತ	ಇಂಗ್ಲೆಂಡ್	ಚಾಂಪಿಯನ್
2017	ಇಂಗ್ಲೆಂಡ್	8	ಪಾಕಿಸ್ತಾನ	ಭಾರತ	ರನ್ನರ್ ಅಪ್

ಚಾಂಪಿಯನ್ಸ್ ಟ್ರೋಫಿ ವೇಳಾಪಟ್ಟಿ

ದಿನಾಂಕ	ತಂಡಗಳು	ಸಮಯ	ಸ್ಥಳ
ಫೆ. 19	ಪಾಕಿಸ್ತಾನ–ನ್ಯೂಜಿಲೆಂಡ್	ಮಧ್ಯಾಹ್ನ 2.30	ಕರಾಚಿ
ಫೆ. 20	ಭಾರತ–ಬಾಂಗ್ಲಾದೇಶ	ಮಧ್ಯಾಹ್ನ 2.30	ದುಬೈ
ಫೆ. 21	ಅಫ್ಗಾನಿಸ್ತಾನ–ದಕ್ಷಿಣ ಆಫ್ರಿಕಾ	ಮಧ್ಯಾಹ್ನ 2.30	ಕರಾಚಿ
ಫೆ. 22	ಆಸ್ಟ್ರೇಲಿಯಾ–ಇಂಗ್ಲೆಂಡ್	ಮಧ್ಯಾಹ್ನ 2.30	ಲಾಹೋರ್
ಫೆ. 23	ಭಾರತ– ಪಾಕಿಸ್ತಾನ	ಮಧ್ಯಾಹ್ನ 2.30	ದುಬೈ
ಫೆ. 24	ಬಾಂಗ್ಲಾದೇಶ–ನ್ಯೂಜಿಲೆಂಡ್	ಮಧ್ಯಾಹ್ನ 2.30	ರಾವಲ್ಪಿಂಡಿ
ಫೆ. 25	ಆಸ್ಟ್ರೇಲಿಯಾ–ದಕ್ಷಿಣ ಆಫ್ರಿಕಾ	ಮಧ್ಯಾಹ್ನ 2.30	ರಾವಲ್ಪಿಂಡಿ
ಫೆ. 26	ಅಫ್ಗಾನಿಸ್ತಾನ– ಇಂಗ್ಲೆಂಡ್	ಮಧ್ಯಾಹ್ನ 2.30	ಲಾಹೋರ್
ಫೆ. 27	ಪಾಕಿಸ್ತಾನ– ಬಾಂಗ್ಲಾದೇಶ	ಮಧ್ಯಾಹ್ನ 2.30	ರಾವಲ್ಪಿಂಡಿ
ಫೆ. 28	ಅಫ್ಗಾನಿಸ್ತಾನ– ಆಸ್ಟ್ರೇಲಿಯಾ	ಮಧ್ಯಾಹ್ನ 2.30	ಲಾಹೋರ್
ಮಾ. 1	ದಕ್ಷಿಣ ಆಫ್ರಿಕಾ–ಇಂಗ್ಲೆಂಡ್	ಮಧ್ಯಾಹ್ನ 2.30	ಕರಾಚಿ
ಮಾ. 2	ಭಾರತ–ನ್ಯೂಜಿಲೆಂಡ್	ಮಧ್ಯಾಹ್ನ 2.30	ದುಬೈ
ಮಾ. 4	ಮೊದಲ ಸೆಮಿಫೈನಲ್ ಎ1–ಬಿ2	ಮಧ್ಯಾಹ್ನ 2.30	ದುಬೈ
ಮಾ. 5	ಎರಡನೇ ಸೆಮಿಫೈನಲ್ ಬಿ1–ಎ2	ಮಧ್ಯಾಹ್ನ 2.30	ಲಾಹೋರ್
ಮಾ. 9	ಫೈನಲ್	ಮಧ್ಯಾಹ್ನ 2.30	

ತಂಡಗಳು

ಪಾಕಿಸ್ತಾನ: ಮೊಹಮ್ಮದ್ ರಿಜ್ವಾನ್ (ನಾಯಕ), ಫಕರ್ ಜಮಾನ್, ಬಾಬರ್ ಆಜಂ, ಕಮ್ರನ್ ಗುಲಾಮ್, ಸಾದ್ ಶಕೀಲ್, ಸಲ್ಮಾನ್ ಆಘಾ, ತಯ್ಯಬ್ ತಾಹೀರ್, ಖುಷ್ದಿಲ್ ಶಾ, ಶಾಹೀನ್ ಆಫ್ರಿದಿ, ನಸೀಂ ಶಾ, ಅಬ್ರಾರ್ ಅಹ್ಮದ್, ಹ್ಯಾರಿಸ್ ರವೂಫ್

ನ್ಯೂಜಿಲೆಂಡ್: ಮಿಚೆಲ್ ಸ್ಯಾಂಟನರ್ (ನಾಯಕ), ವಿಲ್ ಯಂಗ್/ರಚಿನ್ ರವೀಂದ್ರ, ಡೆವೊನ್ ಕಾನ್ವೆ, ಕೇನ್ ವಿಲಿಯಮ್ಸನ್, ಡ್ಯಾರಿಲ್ ಮಿಚೆಲ್, ಟಾಮ್ ಲೇಥಮ್, ಗ್ಲೆನ್ ಫಿಲಿಪ್ಸ್, ಮಿಚೆಲ್ ಬ್ರೇಸ್‌ವೆಲ್, ಮ್ಯಾಟ್ ಹೆನ್ರಿ, ನೇಥನ್ ಸ್ಮಿತ್, ಜೇಕಬ್ ಡಫಿ, ವಿಲ್ ಒ ರೂರ್ಕಿ.

ಪಂದ್ಯ ಆರಂಭ: ಮಧ್ಯಾಹ್ನ 2.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಡಬ್ಲ್ಯುಪಿಎಲ್: ಗುಜರಾತ್ ಜೈಂಟ್ಸ್ ತಂಡಕ್ಕೆ ಆಘಾತ

ಬ್ರಂಟ್ ಆಲ್‌ರೌಂಡ್ ಆಟ; ಮುಂಬೈಗೆ ಜಯ



ನ್ಯಾಟ್ ಶಿವರ್ ಬ್ರಂಟ್

ವಡೋದರಾ (ಪಿಟಿಐ): ನ್ಯಾಟ್ ಶಿವರ್ ಬ್ರಂಟ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಮಂಗಳವಾರ ಇಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಬ್ರಂಟ್ (26ಕ್ಕೆ2 ಹಾಗೂ 57) ಅವರ ಆಟದಿಂದ ಮುಂಬೈ ತಂಡವು 5 ವಿಕೆಟ್‌ಗಳಿಂದ ಗುಜರಾತ್ ಜೈಂಟ್ಸ್ ವಿರುದ್ಧ ಗೆದ್ದಿತು. ಟೂರ್ನಿಯಲ್ಲಿ ಮುಂಬೈ ತಂಡಕ್ಕೆ ಇದು ಮೊದಲ ಜಯ. ಮುಂಬೈ ತಂಡವು ತನ್ನ ಪ್ರಥಮ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಸೋತಿತ್ತು.

ಇಂದಿನ ಪಂದ್ಯ
ಡೆಲ್ಲಿ ಕ್ಯಾಪಿಟಲ್ಸ್ Vs ಯುಪಿ ವಾರಿಯರ್ಸ್
ರಾತ್ರಿ 7.30
ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್ ಸ್ಟಾರ್

ಮುಂಬೈ ಇಂಡಿಯನ್ಸ್ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ರಂಟ್, ಆಫ್‌ಸ್ಪಿನ್ನರ್ ಹೆಲಿ ಮ್ಯಾಥ್ಯೂಸ್ (16ಕ್ಕೆ3) ಹಾಗೂ ಅಮೆಲಿಯಾ ಕೆರ್ (22ಕ್ಕೆ2) ಅವರ ಬೌಲಿಂಗ್ ಮುಂದೆ ಗುಜರಾತ್ ತಂಡವು 20 ಓವರ್‌ಗಳಲ್ಲಿ 120 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಗುಜರಾತ್ ತಂಡದ ಆಟಗಾರ್ತಿಯರು ಆಕ್ರಮಣಶೈಲಿಯ ಆಟವಾಡುವತ್ತ ಗಮನ ನೀಡಿದರು. ಆದರೆ ಮುಂಬೈ ಇಂಡಿಯನ್ಸ್ ಬೌಲರ್‌ಗಳು ಇದಕ್ಕೆ ಅವಕಾಶ ನೀಡಲಿಲ್ಲ.

79 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡ ಗುಜರಾತ್ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿತ್ತು. ಆದರೆ ಹರ್ಲಿನ್ ಡಿಯೊಲ್ (32; 31ಎಸೆತ) ಹಾಗೂ ಕಶ್ವಿ ಗೌತಮ್ (20 ರನ್) ಅವರು ಒಂದಿಷ್ಟು ಹೋರಾಟ ಮಾಡಿದರು. ಅದರಿಂದಾಗಿ ತಂಡದ ಮೊತ್ತವು ಮೂರಂಕಿ ದಾಟಿತು.

ಗುರಿ ಬೆನ್ನಟ್ಟಿದ ಮುಂಬೈ ತಂಡಕ್ಕೆ ಗುಜರಾತ್ ತಂಡದ ಬೌಲರ್‌ಗಳಾದ ಪ್ರಿಯಾ ಮಿಶ್ರಾ ಮತ್ತು ಕಶ್ವಿ ಅವರು ಆರಂಭಿಕ ಪೆಟ್ಟು ನೀಡಿದರು. ಆದರೆ ಮುಂಬೈ ಆತಂಕವನ್ನು ಬ್ರಂಟ್ ದೂರ ಮಾಡಿದರು. 39 ಎಸೆತಗಳಲ್ಲಿ 57 ರನ್ ಗಳಿಸಿದರು. 11 ಬೌಂಡರಿ ಹೊಡೆದರು. ತಂಡವು 16.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 122 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಜೈಂಟ್ಸ್: 20 ಓವರ್‌ಗಳಲ್ಲಿ 120 (ಆ್ಯಷ್ಲೆ ಗಾರ್ಡನರ್ 10, ಹರ್ಲಿನ್ ಡಿಯೊಲ್ 32, ಕಶ್ವಿ ಗೌತಮ್ 20, ತನುಜಾ ಕನ್ವರ್ 13, ಸಯಾಲಿ ಸಾತಗರೆ ಔಟಾಗದೆ 13, ನ್ಯಾಟ್ ಶಿವರ್ ಬ್ರಂಟ್ 26ಕ್ಕೆ2, ಹೆಲಿ ಮ್ಯಾಥ್ಯೂಸ್ 16ಕ್ಕೆ3, ಅಮೆಲಿಯಾ ಕೆರ್ 22ಕ್ಕೆ2) ಮುಂಬೈ ಇಂಡಿಯನ್ಸ್: 16.1 ಓವರ್‌ಗಳಲ್ಲಿ 5ಕ್ಕೆ122 (ಹೆಲಿ ಮ್ಯಾಥ್ಯೂಸ್ 17, ನ್ಯಾಟ್ ಶಿವರ್ ಬ್ರಂಟ್ 57, ಅಮೆಲಿಯಾ ಕೇರ್ 19, ಪ್ರಿಯಾ ಮಿಶ್ರಾ 40ಕ್ಕೆ2, ಕಶ್ವಿ ಗೌತಮ್ 15ಕ್ಕೆ2) ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 5 ವಿಕೆಟ್ ಜಯ.

ಏಕದಿನ: ಕಡಿಮೆ ಮೊತ್ತ ರಕ್ಷಿಸಿದ ಅಮೆರಿಕ ದಾಖಲೆ

ಮಸ್ಕತ್ (ಪಿಟಿಐ): ಏಕದಿನ ಪಂದ್ಯಗಳಲ್ಲಿ ಅತಿ ಕಡಿಮೆ ಮೊತ್ತವನ್ನು ರಕ್ಷಿಸಿದ ವಿಶ್ವದಾಖಲೆಯನ್ನು ಅಮೆರಿಕದ ಸ್ಥಾಪಿಸಿತು. ಮಂಗಳವಾರ ನಡೆದ ಏಕದಿನ ಕ್ರಿಕೆಟ್ ವಿಶ್ವಕಪ್ ಲೀಗ್2 ಪಂದ್ಯದಲ್ಲಿ ಅಮೆರಿಕ 122 ರನ್‌ಗಳಿಗೆ ಆಲೌಟ್ ಆದರೂ, ಒಮಾನ್ ತಂಡವನ್ನು 65 ರನ್‌ಗಳಿಗೆ ಉರುಳಿಸಿ 57 ರನ್‌ಗಳ ಜಯ ಪಡೆಯಿತು. ಮಳೆಯಿಂದ ಗುರಿ ಪರಿಷ್ಕೃತಗೊಳಿಸಿದ ಪಂದ್ಯಗಳನ್ನು ಹೊರತುಪಡಿಸಿದರೆ, ತಂಡವೊಂದು ಅತಿ ಕಡಿಮೆ ಮೊತ್ತ ಡಿಫೆಂಡ್ ಮಾಡಿದ ದಾಖಲೆ ಮೇಲ್ಕಂಡ ಪಂದ್ಯದ್ದಾಯಿತು. 123 ರನ್‌ಗಳ ಬೆನ್ನತ್ತಿದ ಒಮಾನ್ ತಂಡವನ್ನು ನೊಸ್ತುಷ್ ಕೆಂಜಿಗೆ (7.3–1–11–5) ಕಾಡಿದರು. ಒಮಾನ್ ಪರ ಹಮ್ಮದ್ ಮಿರ್ಜಾ (29) ಬಿಟ್ಟರೆ ಉಳಿದವರಾರೂ ಎರಡಂಕಿ ಮೊತ್ತ ಗಳಿಸಲು ವಿಫಲರಾದರು.

ಪ್ರೊ ಲೀಗ್: ಜರ್ಮನಿಗೆ ಸುಲಭ ಜಯ

ಭುವನೇಶ್ವರ (ಪಿಟಿಐ): ಆಕ್ರಮಣಕಾರಿ ಆಟವಾಡಿದ ವಿಶ್ವ ಚಾಂಪಿಯನ್ ಜರ್ಮನಿ ತಂಡ ಮಂಗಳವಾರ ನಡೆದ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಭಾರತ ತಂಡವನ್ನು 4–1 ಗೋಲುಗಳಿಂದ ಸದೆಬಡಿಯಿತು.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡದ ರಕ್ಷಣೆಯಲ್ಲಿ ಲೋಪಗಳು ಕಂಡುಬಂದವು. ವಿಶೇಷವಾಗಿ ಅಂತಿಮ ಕ್ವಾರ್ಟರ್‌ನ-ಲ್ಲಿ ಜರ್ಮನಿಯ ಗುಣಮಟ್ಟದ ಆಟಕ್ಕೆ ಭಾರತ ಸಾಟಿಯಾಗಲಿಲ್ಲ. ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಭಾರತ ತಂಡಕ್ಕೆ ಈ ಬಾರಿಯ ಪ್ರೊ ಲೀಗ್‌ನ ಮೂರು ಪಂದ್ಯಗಳಲ್ಲಿ ಇದು ಎರಡನೇ ಸೋಲು.

ಫ್ಲೋರಿಯನ್ ಸ್ಪರ್ಲಿಂಗ್ ಏಳನೇ ನಿಮಿಷ ಜರ್ಮನಿಗೆ ಮುನ್ನಡೆ ಒದಗಿಸಿದರು. ಆದರೆ ಗುರ್ಜಂತ್ ಸಿಂಗ್ 13ನೇ ನಿಮಿಷ ಗೋಲು ಗಳಿಸಿ ಸ್ಕೋರ್ ಸಮ ಮಾಡಿದರು. ಥಿಯಸ್ ಪ್ರಿಂರ್ಝ್ ಅವರು ಮರು ನಿಮಿಷವೇ ಜರ್ಮನಿ ತಂಡಕ್ಕೆ ಮುನ್ನಡೆ ಒದಗಿಸಿದರು. ಮೊದಲ ಕ್ವಾರ್ಟರ್‌ನಲ್ಲಿ ಜರ್ಮನಿ 2–1 ಮುನ್ನಡೆ ಪಡೆಯಿತು.

ಎರಡು ಮತ್ತು ಮೂರನೇ ಕ್ವಾರ್ಟರ್‌ನಲ್ಲಿ ಗೋಲುಗಳು ಬರಲಿಲ್ಲ. ಒಲಿಂಪಿಕ್ ಬೆಳ್ಳಿ ಪದಕ ವಿಜೇತ ಜರ್ಮನಿ ಅಂತಿಮ ಕ್ವಾ-ರ್ಟರ್‌ನಲ್ಲಿ ಮತ್ತೆ ಎರಡು ಗೋಲು ಗಳಿಸಿ ಪ್ರಾಬಲ್ಯ ಮೆರೆಯಿತು.

ಮೈಕೆಲ್ ಸ್ಟ್ರುತೋಫ್ 48ನೇ ನಿಮಿಷ ಗೋಲು ಗಳಿಸಿ ಜರ್ಮನಿ ಮುನ್ನಡೆಯನ್ನು 3–1ಕ್ಕೆ ಏರಿಸಿದರು. ಏಳು ನಿಮಿಷಗಳ ನಂತರ ರಫೇಲ್ ಹಾರ್ಟ್‌ಕೊಫ್ ಅವರು ಗೋಲು ಗಳಿಸಿ ಜರ್ಮನಿ ಗೆಲುವಿನ ಅಂತರವನ್ನು 4–1ಕ್ಕೆ ಹೆಚ್ಚಿಸಿದರು.

ಹಿರಿಯ ಡಿಫೆಂಡರ್ ಅಮಿತ್ ರೋಹಿದಾಸ್ ತಂಡವನ್ನು ಮುನ್ನಡೆಸಿದರು. ತಂಡದ ಪೂರ್ಣಾವಧಿ ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಏಕೆ ಆಡಲಿಲ್ಲ ಎಂಬುದು ಸ್ಪಷ್ಟವಾಗಿಲ್ಲ. ಎರಡನೇ ಪಂದ್ಯದಲ್ಲೂ ಹರ್ಮನ್‌ಪ್ರೀತ್ ವಿಶ್ರಾಂತಿ ಪಡೆದಿದ್ದರು.

ಸ್ಪೇನ್‌ಗೆ ಮಣಿದ ಭಾರತ

ಭುವನೇಶ್ವರ (ಪಿಟಿಐ): ಭಾರತ ಮಹಿಳಾ ತಂಡ ಎಫ್‌ಐಎಚ್ ಪ್ರೊ ಲೀಗ್ ಹಾಕಿಯ ರೋಚಕ ಪಂದ್ಯದಲ್ಲಿ ಮಂಗಳವಾರ ಸ್ಪೇನ್ ಎದುರು 3–4 ಗೋಲುಗಳ ಅಂತರದಿಂದ ಸೋಲನುಭವಿಸಿತು.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡದ ಪರ ಬಲಜೀತ್ ಕೌರ್ (19ನೆ ನಿಮಿಷ), ಸಾಕ್ಷಿ ರಾಣಾ (38ನೇ ನಿಮಿಷ), ಖುತುಜಾ ದಾದಾಸೊ ಪಿಸಾಳ್ (45ನೇ ನಿಮಿಷ) ಗೋಲು ಗಳಿಸಿದರು.

ಸ್ಪೇನ್ ತಂಡದ ಪರ ಸೋಫಿಯಾ ರೊಗೊಸ್ಕಿ (21ನೇ ನಿಮಿಷ), ಎಸ್ಟೆಲ್ ಪೆಚಾಮೆ (25 ಮತ್ತು 49ನೇ ನಿಮಿಷ), ಲೂಸಿಯಾ ಜಿಮೆನೆಝ್ (52ನೇ ನಿಮಿಷ) ಗೋಲು ಗಳಿಸಿದರು.

ಭಾರತ ಕೊನೆಯ ಕ್ವಾರ್ಟರ್‌ನಲ್ಲಿ ಗೋಲು ಗಳಿಸಲು ವಿಫಲವಾಯಿತು. ಆದರೆ ಸ್ಪೇನ್ ಎರಡು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲಾಗಿ ಪರಿವರ್ತಿಸಿದ್ದು ನಿರ್ಣಾಯಕವಾಯಿತು.

ಸಾಕ್ಷಿ ರಾಣಾ ಮತ್ತು ಜ್ಯೋತಿ ಸಿಂಗ್ ಈ ಪಂದ್ಯದ ಮೂಲಕ ಸೀನಿಯರ್ ತಂಡಕ್ಕೆ ಪದಾರ್ಪಣೆ ಮಾಡಿದರು.

ಜಸ್ಪಾಲ್ ನನ್ನ ಕೋಚ್: ಮನು ಭಾಕರ್

ನವದೆಹಲಿ (ಪಿಟಿಐ): ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆಯು ಅಂತರರಾಷ್ಟ್ರೀಯ ಶೂಟರ್ ಜಸ್ಪಾಲ್ ರಾಣಾ ಅವರನ್ನು ಹೈ ಪರ್ಫಾರ್ಮೆನ್ಸ್ ಟ್ರೇನರ್ ಆಗಿ ನೇಮಕ ಮಾಡಿದ್ದರೂ ಅವರು ತಮ್ಮ ಕೋಚ್ ಆಗಿ ಮುಂದುವರಿಯಲಿದ್ದಾರೆ ಎಂದು ಒಲಿಂಪಿಕ್ಸ್‌ನಲ್ಲಿ ಅವಳಿ ಪದಕ ಗೆದ್ದಿರುವ ಶೂಟರ್ ಮನು ಭಾಕರ್ ತಿಳಿಸಿದ್ದಾರೆ

ಮನು ಮುಂಬರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ಗುರಿ ಹೊಂದಿದ್ದಾರೆ. ಟೋಕಿಯೊ ಒಲಿಂಪಿಕ್ಸ್ ನಂತರ ಮನು ಮತ್ತು ಜಸ್ಪಾಲ್ ಅವರ ನಡುವಣ ವೈಮನಸ್ಸು ತಲೆದೋರಿತ್ತು. ಆದರೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಮೊದಲು ಇದನ್ನು ಸರಿಪಡಿಸಿಕೊಂಡಿದ್ದರು. 'ಪ್ರಾಮಾಣಿಕವಾಗಿ ಹೇಳುವುದಾದರೆ ಅವರು ನನ್ನ ಕೋಚ್. ಅವರು ತಮ್ಮ ಕೆಲಸದಲ್ಲಿ ಅತ್ಯುತ್ತಮ ಆಗಿದ್ದಾರೆ' ಎಂದು ಅವರು ಹೇಳಿದರು.

ರಣಜಿ ಟ್ರೋಫಿ ಸೆಮಿಫೈನಲ್: ಎರಡನೇ ದಿನದಾಟದಲ್ಲಿ ವಿದರ್ಭ ಮೇಲುಗೈ

ಪಾರ್ಥ ರೇಖಡೆ ದಾಳಿಗೆ ಮುಂಬೈ ತಬ್ಬಿಬ್ಬು



ಪಾರ್ಥ ರೇಖಡೆ ಅವರನ್ನು ಅಭಿನಂದಿಸಿದ ಸಹ ಆಟಗಾರರು. ಪಿಟಿಐ ಚಿತ್ರ

ನಾಗ್ಪುರ (ಪಿಟಿಐ): ಎಡಗೈ ಸ್ಪಿನ್ನರ್ ಪಾರ್ಥ ರೇಖಡೆ (16–6–16–3) ಒಂದೇ ಓವರಿನಲ್ಲಿ ಮೂರು ವಿಕೆಟ್ ಪಡೆದು ರಣಜಿ ಟ್ರೋಫಿ ಕ್ರಿಕೆಟ್ ಸೆಮಿಫೈನಲ್ ಪಂದ್ಯದ ಎರಡನೇ ದಿನವಾದ ಮಂಗಳವಾರ ವಿದರ್ಭ ತಂಡಕ್ಕೆ ಸ್ಪಷ್ಟ ಮೇಲುಗೈ ಒದಗಿಸಿಕೊಟ್ಟರು. ಆತಿಥೇಯ ತಂಡದ 383 ರನ್‌ಗಳಿಗೆ ಉತ್ತರವಾಗಿ ಮುಂಬೈ ದಿನದಾಟ ಮುಗಿದಾಗ 7 ವಿಕೆಟ್‌ಗೆ 188 ರನ್ ಗಳಿಸಿ ಇಕ್ಕಟ್ಟಿಗೆ ಸಿಲುಕಿದೆ.

ಆರಂಭ ಆಟಗಾರ ಆಕಾಶ್ ಆನಂದ್ ಅಜೇಯ 67 ರನ್ (171ಎ, 4x6) ಗಳಿಸಿದರೆ, ಕೊನೆಯ ಪರಿಣತ ಬ್ಯಾಟರ್ ತನುಷ್ ಕೋಟ್ಯಾನ್ ಅಜೇಯ 5 ರನ್ ಗಳಿಸಿ ಆಟ ಮುಂದುವರಿಸಲಿದ್ದಾರೆ. ತವರು ವಿಸಿಎ ಕ್ರೀಡಾಗಣದಲ್ಲಿ ವಿದರ್ಭದ ಬೌಲರ್‌ಗಳು ಶಿಸ್ತುಬದ್ಧ ಬೌಲಿಂಗ್ ಮೂಲಕ ಹಾಲಿ ಚಾಂಪಿಯನ್ ತಂಡವನ್ನು ಕಾಡಿದರು. ಮುಂಬೈ ಎದುರಾಳಿ ಮೊತ್ತಕ್ಕಿಂತ 195 ರನ್ ಹಿಂದಿದೆ. ಒಂದು ಹಂತದಲ್ಲಿ 2 ವಿಕೆಟ್‌ಗೆ 113 ರನ್ ಗಳಿಸಿ ಹೋರಾಟ ತೋರುತ್ತಿದ್ದ ಮುಂಬೈ ತಂಡಕ್ಕೆ ರೇಖಡೆ ತಲೆನೋವಾದರು. ಮೊದಲ ದರ್ಜೆ ಕ್ರಿಕೆಟ್‌ನಲ್ಲಿ ಕೇವಲ ಎರಡನೇ ಪಂದ್ಯ ಆಡುತ್ತಿರುವ ಅವರು ಘಟಾನುಘ-ಟಿಗಳಾದ ಅಜಿಂಕ್ಯ ರಹಾನೆ (18), ಸೂರ್ಯಕುಮಾರ್ ಯಾದವ್ ಮತ್ತು ಶಿವಂ ದುಬೆ ಅವರ ವಿಕೆಟ್‌ಗಳನ್ನು ಒಂದೇ ಓವರಿನಲ್ಲಿ ಪಡೆದರು. ಆಕಾಶ್ ಮತ್ತು ಶಾರ್ದೂಲ್ ನಂತರ ಆರನೇ ವಿಕೆಟ್‌ಗೆ 60 ರನ್ ಸೇರಿಸಿದ್ದರಿಂದ ಮುಂಬೈ ಕುಸಿತ ತಪ್ಪಿತು. ಸೋಮವಾರ 5 ವಿಕೆಟ್‌ಗೆ 308 ರನ್ ಗಳಿಸಿದ್ದ ವಿದರ್ಭ ಆ ಮೊತ್ತಕ್ಕೆ 75 ರನ್ ಸೇರಿಸಲು ಶಕ್ತವಾಯಿತು. ಶಿವಂ ದುಬೆ ಐದು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 107.5 ಓವರುಗಳಲ್ಲಿ 383 (ಯಶ್ ರಾಥೋಡ್ 54, ಅಕ್ಷಯ್ ವಾಡಕರ್ 34; ಶಿವಂ ದುಬೆ 49ಕ್ಕೆ5); ಮುಂಬೈ: 59 ಓವರುಗಳಲ್ಲಿ 7 ವಿಕೆಟ್‌ಗೆ 188 (ಆಕಾಶ್ ಆನಂದ್ ಔಟಾಗದೇ 67, ಶಾರ್ದೂಲ್ ಠಾಕೂರ್ 37; ಯಶ್ ಠಾಕೂರ್ 56ಕ್ಕೆ2, ಪಾರ್ಥ ರೇಖಡೆ 16ಕ್ಕೆ3).

ಮೊದಲ ಇನಿಂಗ್ಸ್: ಕೇರಳ: 177 ಓವರುಗಳಲ್ಲಿ 7 ವಿಕೆಟ್‌ಗೆ 418 (ಅಜರುದ್ದೀನ್ ಔಟಾ ಗದೇ 149, ಸಲ್ಮಾನ್ ನಿಝಾರ್ 52, ಇಮ್ರಾನ್ 24; ಅರ್ಝಾನ್ ನಾಗ್ವಾಸ್ವಲ್ಲಾ 64ಕ್ಕೆ3).

ಅಜರ್ ಅಜೇಯ ಶತಕ

ಅಹಮದಾಬಾದ್ (ಪಿಟಿಐ): ಮೊಹಮ್ಮದ್ ಅಜರುದ್ದೀನ್ ಅವರ ಸಂಯಮದ ಶತಕದ (ಔಟಾಗದೇ 149, 303ಎ, 4x17) ನೆರವಿನಿಂದ ಕೇರಳ ತಂಡ ರಣಜಿ ಟ್ರೋಫಿಯ ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಗುಜರಾತ್ ಮೇಲಿನ ಒತ್ತಡ ಹೆಚ್ಚಿಸಿತು. ಸಹನೆಯ ಆಟ ಮುಂದುವರಿದ ಕೇರಳ ಎರಡನೇ ದಿನದಾಟ ಮುಗಿದಾಗ 7 ವಿಕೆಟ್‌ಗೆ 418 ರನ್ (177 ಓವರ್) ಗಳಿಸಿದೆ.

ಸೋಮವಾರ 69 ರನ್‌ಗಳೊಡನೆ ಅಜೇಯರಾಗಿದ್ದ ನಾಯಕ ಸಚಿನ್ ಬೇಬಿ ದಿನದ ಎರಡನೇ ಎಸೆತದಲ್ಲಿ ಎಡಗೈ ವೇಗಿ ನಾಗ್ವಾಸ್ವಲ್ಲಾ ಅವರಿಗೆ ವಿಕೆಟ್ ಒಪ್ಪಿಸಿದರು. ಆದರೆ ಅಜರುದ್ದೀನ್ (ಸೋಮವಾರ ಅಜೇಯ 30) ಅವರು ಒಂದೆಡೆ ಬಂಡೆಗಲ್ಲಿನಂತೆ ನಿಂತರು. ಅವರಿಗೆ ಸಲ್ಮಾನ್ (52, 202ಎ) ಬೆಂಬಲ ನೀಡಿದರು.

ರಾಜೀನಾಮೆ ಕೊಟ್ಟಿಲ್ಲ: ಮೇರಿ ಕೋಮ್

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆ ಅಥ್ಲೀಟುಗಳ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಬಂದಿರುವ ವರದಿಗಳನ್ನು ಬಾಕ್ಸಿಂಗ್ ದಿಗ್ಗಜರಾದ ಮೇರಿ ಕೋಮ್ ಅವರು ನಿರಾಕರಿಸಿದ್ದಾರೆ. ತಮ್ಮ ಅವಧಿಯನ್ನು ಪೂರ್ಣಗೊಳಿಸುವುದಾಗಿಯೂ ಅವರು ಹೇಳಿದ್ದಾರೆ.

ಉತ್ತರಾಖಂಡದ ಹಲ್ದ್ವಾನಿಯ-ಲ್ಲಿ ಕಳೆದ ವಾರ ನಡೆದ ರಾಷ್ಟ್ರೀಯ ಕ್ರೀಡೆಗಳ ಸಮಾರೋಪ ಸಮಾರಂಭದ ವೇಳೆ ತಮ್ಮನ್ನು 'ಕೆಳ ದರ್ಜೆಯ' ಹೋಟೆಲ್‌ನಲ್ಲಿ ಉಳಿಸಿಕೊಳ್ಳಲಾಗಿತ್ತು ಎಂದು 42 ವರ್ಷ ವಯಸ್ಸಿನ ಮೇರಿ ಕೋಮ್ ಅತೃಪ್ತಿ ತೋಡಿಕೊಂಡಿದ್ದರು.

'ಖಾಸಗಿ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ತಮ್ಮ ಅಸಮಾಧಾನವನ್ನು ತಪ್ಪಾಗಿ ಅರ್ಥೈಸಲಾಗಿದ್ದು, ತಾವು ರಾಜೀನಾಮೆ ನೀಡಿರುವುದಾಗಿ ಮಾಧ್ಯಮಗಳಿಗೆ ವರದಿ ಸೋರಿಕೆ ಮಾಡಲಾಯಿತು. ಆದರೆ ನಾನು ರಾಜೀನಾಮೆ ನೀಡಿಲ್ಲ. ನಾನು ಅವಧಿ ಪೂರೈಸುತ್ತೇನೆ' ಎಂದು 2012ರ ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಹೇಳಿದ್ದಾರೆ. 2026ರಲ್ಲಿ ಅವರ ಅಧ್ಯಕ್ಷ ಸ್ಥಾನದ ಅವಧಿ ಮುಗಿಯಲಿದೆ. 'ಇದೇ ರೀತಿ ನಮ್ಮನ್ನು ಕಡೆಗಣಿಸಿದರೆ ನಾನು ರಾಜೀನಾಮೆ ಬಗ್ಗೆ ಯೋಚಿಸಬೇಕಾಗುತ್ತದೆ ಎಂದಷ್ಟೇ ನನ್ನ ಜೊತೆಯಿದ್ದವರಿಗೆ (ಅಥ್ಲೀಟುಗಳ ಆಯೋಗ) ತಿಳಿಸಿದ್ದೆ.' ಎಂದರು.

ಮೆರಿ ಗೊ ರೌಂಡ್ ಕ್ಲಬ್‌ಗೆ ಸುವರ್ಣ ಮಹೋತ್ಸವ

21ರಿಂದ ಅಖಿಲ ಭಾರತ ಬಾಲ್‌ಬ್ಯಾಡ್ಮಿಂಟನ್



ಬೆಂಗಳೂರಿನ ಮೆರಿ ಗೊ ರೌಂಡ್ ಬ್ಯಾಡ್ಮಿಂಟನ್ ಕ್ಲಬ್ ಸುವರ್ಣ ಮಹೋತ್ಸವದ ಅಂಗವಾಗಿ ನಡೆಸಲಾಗುವ ಅಖಿಲ ಭಾರತ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯ ಆಟಗಾರರ ಜೆರ್ಸಿ ಮತ್ತು ಕ್ಯಾಪ್‌ಗಳನ್ನು ಮಂಗಳವಾರ ಅನಾವರಣ ಮಾಡಲಾಯಿತು. ಕ್ಲಬ್ ಪದಾಧಿಕಾರಿಗಳಾದ ಅರಸಪ್ಪ, ಎನ್. ಮುಂಜುನಾಥ್, ವೆಂಕಟೇಶ್ ಶೆಟ್ಟಿ, ಎಂ.ಉದಯಸಿಂಹ, ಜಗದೀಶ್, ಸುಂದರ್ ರಾಜ್, ಶ್ರೀನಿವಾಸ್, ನಾಗೇಶ್ ಬಾಬು ಹಾಜರಿದ್ದರು

ಬೆಂಗಳೂರು: ರಾಷ್ಟ್ರಕ್ಕೆ ಹಲವು ಖ್ಯಾತನಾಮ ಬಾಲ್ ಬ್ಯಾಡ್ಮಿಂಟನ್ ಆಟಗಾರರನ್ನು ಕೊಡುಗೆ ನೀಡಿದ ಮೆರಿ ಗೊ ರೌಂಡ್ ಬ್ಯಾಡ್ಮಿಂಟನ್ ಕ್ಲಬ್‌ಗೆ ಈಗ ಸುವರ್ಣ ಸಂಭ್ರಮ.

1968–69ರಲ್ಲಿ ಈ ಕ್ಲಬ್ ಆರಂಭವಾದಾಗ ಬಾಲ್ ಬ್ಯಾಡ್ಮಿಂಟನ್ ಅತ್ಯಂತ ಜನಪ್ರಿಯ ಆಟವಾಗಿತ್ತು. ಗಲ್ಲಿಗಲ್ಲಿಗಳಲ್ಲಿ ಮಕ್ಕಳು, ಯುವಜನತೆಯ ಅಚ್ಚುಮೆಚ್ಚಿನ ಹವ್ಯಾ-ಸವಾಗಿತ್ತು. ಹಲವಾರು ಕ್ಲಬ್‌ಗಳು ಮತ್ತು ಶಾಲೆಗಳಲ್ಲಿ ತಂಡಗಳು ಇದ್ದವು. ಆದರೆ ಕ್ರಮೇಣ ಈ ಕ್ರೀಡೆಯ ಜನಪ್ರಿಯತೆ ಕುಂಠಿತವಾಗಿದೆ. ಅದಕ್ಕೆ ಹಲವು ಕಾರಣಗಳಿವೆ. ಇದೀಗ ಮೆರಿ ಗೊ ರೌಂಡ್ ಕ್ಲಬ್ ಬಳಗವು ಬಾಲ್ ಬ್ಯಾಡ್ಮಿಂಟನ್ ಕ್ರೀಡೆಯ ಚಿನ್ನದ ದಿನಗಳನ್ನು ಮರಳಿ ತರುವ ಗುರಿಯೊಂದಿಗೆ ಸುವರ್ಣ ಸಂಭ್ರಮ ಆಚರಿಸುವತ್ತ ಹೆಜ್ಜೆ ಇಟ್ಟಿದೆ.

ಅದಕ್ಕಾಗಿ ಇದೇ 21 ರಿಂದ 23ರವರೆಗೆ ಅಖಿಲ ಭಾರತ ಗೋಲ್ಡ್ ಮೆಡಲ್ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯನ್ನು ಹಮ್ಮಿಕೊಂಡಿದೆ. ಬೇರೆ ಬೇರೆ ರಾಜ್ಯಗಳ ತಂಡಗಳು ಸ್ಪರ್ಧಿಸಲಿವೆ.

'ಸುವರ್ಣ ಮಹೋತ್ಸವ-ವನ್ನು ಕೋವಿಡ್ ಕಾರಣದಿಂದ ಮುಂದೂ ಡಲಾಗಿತ್ತು. ಇದೀಗ ಚಿನ್ನದ ಮಹೋತ್ಸವದ ಅಂಗವಾಗಿ ಟೂರ್ನಿಯನ್ನೂ ಆಯೋಜಿಸುತ್ತಿ-ದ್ದೇವೆ. ಇದರಲ್ಲಿ ಪುರುಷರ 20 ಮತ್ತು ಮಹಿಳೆಯರ 9 ತಂಡಗಳು ಭಾಗವಹಿಸಲಿವೆ. ಇದರೊಂದಿಗೆ ನಶಿಸಿ ಹೋಗುತ್ತಿರುವ ಬಾಲ್ ಬ್ಯಾಡ್ಮಿಂಟನ್ ಕ್ರೀಡೆಗೆ ಮರುಜೀವ ತುಂಬಲು ಚಾಲನೆ ನೀಡಲಾಗುತ್ತಿದೆ' ಎಂದು ಕ್ಲಬ್ ಅಧ್ಯಕ್ಷ ಕೆ.ಬಿ. ಅರಸಪ್ಪ ಅವರು ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಈ ಕ್ರೀಡೆಗೆ 168 ವರ್ಷಗಳ ಇತಿಹಾಸವಿದೆ. ಭಾರತದಲ್ಲಿಯೂ ಇದು ಗ್ರಾಮೀಣ ಮಟ್ಟದಿಂದ ನಗರದವರೆಗೂ ಅಪಾರ ಜನಪ್ರಿಯ ಆಟವಾಗಿತ್ತು. ಬ್ಯಾಡ್ಮಿಂಟನ್ ಆಟಗಾರರಿಗೆ ಕ್ರೀಡಾ ಕೋಟಾದಲ್ಲಿ ಸರ್ಕಾರಿ ಉದ್ಯೋಗಗಳು ಲಭಿಸುತ್ತಿದ್ದವು. ಈಗ ಉದ್ಯೋಗದಾತರು ಕಡಿಮೆಯಾಗಿದ್ದಾರೆ.

ಕೆನರಾ ಬ್ಯಾಂಕಿನಲ್ಲಿ ಸದ್ಯ ಒಂದು ತಂಡವಿದೆ. ರೈಲ್ವೆ ಇಲಾಖೆಯಲ್ಲಿ ಉದ್ಯೋಗ ದೊರೆಯುತ್ತಿವೆ. ಬಿಟ್ಟರೆ ಬೇರೆ ಕಡೆ ಪ್ರೋತ್ಸಾಹವಿಲ್ಲ. ಇದು ಬಾಲ್ ಬ್ಯಾಡ್ಮಿಂಟನ್ ಸೊರಗಲು ಪ್ರಮುಖ ಕಾರಣ. ಅಲ್ಲದೇ ಕ್ರಿಕೆಟ್ ಆಕರ್ಷಣೆಯೂ ಹೆಚ್ಚಾಗಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರ-ಗಳಿಂದಲೂ ಯಾವುದೇ ಸಹಾಯ ಲಭಿಸುತ್ತಿಲ್ಲ' ಎಂದು ಸಂಘಟನಾ ಕಾರ್ಯದರ್ಶಿ ಜಿ. ಶ್ರೀನಿವಾಸ್ ಈ ಸಂದರ್ಭದಲ್ಲಿ ಹೇಳಿದರು.

ಜೆ.ಪಿ ನಗರ 7ನೇ ಹಂತದ ಆರ್. ಬಿ.ಐ.ಬಡಾವಣೆ ಕ್ರೀಡಾಂಗಣದಲ್ಲಿ ಟೂರ್ನಿ ನಡೆಯಲಿದೆ. ಕರ್ನಾಟಕ, ತಮಿಳುನಾಡು ತೆಲಂಗಾಣ, ಮಹಾರಾಷ್ಟ್ರ ಸೇರಿದಂತೆ ಬೇರೆ ಬೇರೆ ರಾಜ್ಯಗಳ ತಂಡಗಳು ಇಲ್ಲಿ ಸ್ಪರ್ಧಿಸಲಿವೆ.

'ಇದೇ ಮೊದಲ ಬಾರಿಗೆ ಮೊದಲ ನಾಲ್ಕು ಸ್ಥಾನಗಳಿಗೂ ಚಿನ್ನದ ಪದಕಗಳನ್ನು ನೀಡಲಾಗುವುದು. ತಂಡಗಳನ್ನು 4 ಗುಂಪುಗಳಲ್ಲಿ ವಿಂ-ಗಡಿಸಲಾಗುವುದು. ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ ಟೂರ್ನಿ ನಡೆಯಲಿದೆ. ಫ್ಲಡ್‌ಲೈಟ್ ವ್ಯವಸ್ಥೆ ಮಾಡಲಾಗಿದೆ' ಎಂದು ಕಾರ್ಯದರ್ಶಿ ಎನ್. ಮಂಜುನಾಥ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕ್ಲಬ್ ಉಪಾಧ್ಯಕ್ಷ ವೆಂಕಟೇಶ್ ಶೆಟ್ಟಿ, ಎಂ.ಉದಯಸಿಂಹ, ಜಗದೀಶ್, ಸುಂದರ್ ರಾಜ್ ಹಾಗೂ ನಾಗೇಶ್ ಬಾಬು ಉಪಸ್ಥಿತರಿದ್ದರು.